ಅಮರಸಿಂಹನ
ನಾಮಲಿಂಗಾನುಶಾಸನ
ಅಥವಾ
ಅಮರಕೋಶ

ವಿದ್ವಾನ್
ಎನ್. ರಂಗನಾಥಶರ್ಮಾ

ಕಾವ್ಯಾಲಯ : ಪ್ರಕಾಶಕರು : ಜಯನಗರ
ಮೈಸೂರು - 570 014

ಅಮರಸಿಂಹನ
ನಾಮಲಿಂಗಾನುಶಾಸನ
ಅಥವಾ
ಅಮರಕೋಶ

ಕಾವ್ಯಾಲಯ : : ಪ್ರಕಾಶಕರು : : ಜಯನಗರ
ಮೈಸೂರು - 570 014

ಕನ್ನಡ ಕಾವ್ಯಮಾಲೆ

ಅಮರಸಿಂಹನ ನಾಮಲಿಂಗಾನುಶಾಸನ

ಅಥವಾ

ಅಮರಕೋಶ

ಉಣಾದಿಸಂಗ್ರಹ ಮತ್ತು ಗಣರತ್ನಸಂಗ್ರಹ

ಕನ್ನಡ ಟೀಕಾ ಸಹಿತ

ವಿದ್ವಾನ್

ಎನ್. ರಂಗನಾಥಶರ್ಮಾ

ಕಾವ್ಯಾಲಯ : : ಪ್ರಕಾಶಕರು : : ಜಯನಗರ

ಮೈಸೂರು - 570 014

AMARASIMHANA NAMALINGANUSHASANA known as Amarakosha (Kannada)—NAMALINGANUSHASANA OF AMARASIMHA, a popular glossary of Sanskrit with Unadi Sangraha and Ganaratna Sangraha, and with a Commentary in Kannada by Vidwan N. Ranganatha Sharma. Published by Chidambaram Kudli Krishnamurthy & Smt. C. K. Prabha, Kavyalaya Publishers, Jayanagar, Mysore - 570 014.
Tel. - 2567042

Reprint : 2005
New Edition : 2008

©All Rights Reserved by Kavyalaya Publishers, Jayangar, Mysore-14

ಬೆಲೆ : ರೂ. 210-00 (ಎರಡು ನೂರ ಹತ್ತು ರೂಪಾಯಿಗಳು)

ಡಿಟಿಪಿ ಮತ್ತು ಮುದ್ರಣ :
ಹರ್ಷ ಪ್ರಿಂಟರ್ಸ್, ೧೫ನೆ ತಿರುವು, ಬಸವೇಶ್ವರ ರಸ್ತೆ, ಮೈಸೂರು ೫೭೦ ೦೧೪ ✆ ೨೩೩೨೧೭೭

ಪ್ರಸ್ತಾವನೆ

ಶಬ್ದಾರ್ಥಕೋಶಕ್ಕೆ ನಿಘಂಟು ಎಂಬ ಹೆಸರಿದೆ. ಸಂಸ್ಕೃತದಲ್ಲಿ ಈ ಬಗೆಯ ಕೋಶಗಳ ಮೂಲ ವೈದಿಕ ನಿಘಂಟು. ಇಲ್ಲಿರುವ ಶಬ್ದಗಳಿಗೆ ನಿರ್ವಚನ ಪೂರ್ವಕವಾಗಿ ಅರ್ಥವನ್ನು ವಿವರಿಸಿರುವ ಯಾಸ್ಕರ ನಿರುಕ್ತ ಪ್ರಸಿದ್ಧವಾದುದು. ಮುಖ್ಯವಾಗಿ ಇದು ವೈದಿಕಶಬ್ದಗಳ ಕೋಶವಾದರೂ ಲೋಕದಲ್ಲಿಯೂ ಪ್ರಸಿದ್ಧವಾದ ಕರ್ಣ, ಕವಚ, ಗೋ, ಭೂಮಿ ಮುಂತಾದ ಶಬ್ದಗಳ ಸಂಗ್ರಹ ಇದರಲ್ಲಿದೆ. ಪಾಣಿನಿಯ ಅಷ್ಟಾಧ್ಯಾಯಿಗೆ ಸಂಬಂಧಿಸಿದ ಗಣಪಾಠ, ಲಿಂಗಾನುಸಾಸನಗಳೂ ಒಂದು ಬಗೆಯಲ್ಲಿ ಶಬ್ದಕೋಶಗಳಾಗಿವೆ. ಪಾಣಿನೀಯ ಧಾತುಪಾಠ ವನ್ನು ಧಾತುಕೋಶವೆನ್ನಬಹುದು.

ಅಮರಕೋಶ ಎಂದು ಪ್ರಸಿದ್ಧವಾಗಿರುವ ಅಮರಸಿಂಹನ ನಾಮಲಿಂಗಾನುಶಾಸನ ಲೌಕಿಕ ಶಬ್ದಕೋಶಗಳಲ್ಲಿ ಪ್ರಮುಖವಾಗಿದೆ. ಅಮರಸಿಂಹನಿಗೂ ಹಿಂದೆ ಹಲವು ಕೋಶಕರರಿದ್ದಿರ ಬೇಕು. ಕೇಶವನು ತನ್ನ ಕಲ್ಪದ್ರುಮದಲ್ಲಿ—

> ಕಾತ್ಯವಾಚಸ್ಪತಿವ್ಯಾಡಿ ಭಾಗುರ್ಯಮರ ಮಂಗಲಾಃ (ಮಂಖಕಾಃ ?)
> ಸಾಹಸಾಂಕಮಹೇಶಾದ್ಯಾ ವಿಜಯಂತೇ ಜಿನಾಂತಿಮಾಃ ||

ಎಂದು ಹೇಳಿದ್ದಾನೆ. ಜೀವಿತಕಾಲಾನುಗುಣವಾಗಿ ಇವರ ಹೆಸರನ್ನು ಹೇಳಿದ್ದಾನೆಂದಾದರೆ, ಕಾತ್ಯ ವಾಚಸ್ಪತಿ ವ್ಯಾಡಿ ಭಾಗುರಿಗಳು ಅಮರ ಸಿಂಹನಿಗಿಂತ ಪ್ರಾಚೀನರಾಗಿರಬೇಕು. ಇವರಲ್ಲಿ ಕಾತ್ಯ, ವಾಚಸ್ಪತಿ, ವ್ಯಾಡಿಗಳ ಗ್ರಂಥಗಳು ಕ್ರಮವಾಗಿ ನಾಮಮಾಲಾ, ಶಬ್ದಾರ್ಣವ, ಉತ್ಪಲಿನೀ. ಭಾಗುರಿಯ ಗ್ರಂಥದ ಹೆಸರು ತಿಳಿಯದು.

ಅಮರಸಿಂಹನ ಕಾಲ—ಶ್ರೀಭಂಡಾರಕರ್ ಅವರ ಅಭಿಪ್ರಾಯದಲ್ಲಿ ಅಮರಸಿಂಹನ ಕಾಲ ಕ್ರಿ. ಶ. ೬ನೇ ಶತಮಾನ. ವಿಂಟರ್‌ನಿಟ್ಸ್ ಅವರು ಕ್ರಿ. ಶ. ೬-೮ರ ಕಾಲಾವಧಿಯನ್ನು ಸೂಚಿಸುತ್ತಾರೆ. ಕ್ರಿ. ಶ. ೬ನೆಯ ಶತಕದಲ್ಲಿ ಅಮರಕೋಶವು ಚೀನೀಭಾಷೆಗೆ ಪರಿವರ್ತಿತ ವಾಗಿರುವುದರಿಂದಲೂ ಅನುಗುಣವಾದ ಇತರ ಆಧಾರಗಳಿಂದಲೂ ಅಮರಸಿಂಹನು ಕ್ರಿ. ಶ. ೪ನೆಯ ಶತಮಾನದಲ್ಲಿದ್ದಿರಬೇಕೆಂದು ಇತರ ಇತಿಹಾಸಜ್ಞರು ನಿರ್ಣಯಿಸಿದ್ದಾರೆ.

ಮತ—ಅಮರಸಿಂಹನು ಮಹಾಯಾನ ಬೌದ್ಧಮತಕ್ಕೆ ಸೇರಿದವನೆಂದು ಶ್ರೀ ಭಂಡಾರಕರು ಹೇಳಿದ್ದಾರೆ. ಅವರ ಅಭಿಪ್ರಾಯವೇ ಇತಿಹಾಸಜ್ಞರಿಗೆ ಸಂಮತವಾಗಿ ಕಂಡಿದೆ. ಅಮರಕೋಶದ ಆದಿಯಲ್ಲಿರುವ 'ಯಸ್ಯ ಜ್ಞಾನ ದಯಾಸಿಂಧೋ...' ಎಂಬ ಮಂಗಳ ಶ್ಲೋಕಕ್ಕೆ ಕ್ಷೀರಸ್ವಾಮಿಯು ಬುದ್ಧನ ಪರವಾಗಿ ಅರ್ಥವನ್ನು ಬರೆದಿರುವುದೊಂದು ಇದಕ್ಕೆ

ಆಧಾರ. ಅಲ್ಲದೆ ವೈದಿಕ ದೇವತೆಗಳಾದ ಬ್ರಹ್ಮ, ವಿಷ್ಣು ಮುಂತಾದವರಿಗೂ ಮೊದಲು 'ಸರ್ವಜ್ಞಃ ಸುಗತೋ ಬುದ್ಧಃ ... ' ಎಂದು ಬುದ್ಧನ ಪರ್ಯಾಯ ನಾಮಗಳನ್ನು ಹೇಳಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿಯನ್ನೀಯುತ್ತದೆ. ಆದರೆ ಇವನು ಬುದ್ಧನಲ್ಲವೆಂಬುದಕ್ಕೆ ಈ ವಾದಗಳನ್ನು ಮುಂದಿಡಬಹುದು.

೧. ಮಂಗಳ ಶ್ಲೋಕದಲ್ಲಿ ಯಾವ ವಿಶಿಷ್ಟ ದೇವತೆಯ ಹೆಸರೂ ಇಲ್ಲ. ಈ ಶ್ಲೋಕಕ್ಕೆ ತನ್ನ ಗುರುವಿನ ಪರವಾಗಿಯೋ ಅಥವಾ ಯಾವುದಾದರೊಂದು ಇಷ್ಟದೇವತೆಯ ಪರವಾಗಿಯೋ ಸರಳವಾದ ಅರ್ಥವನ್ನು ಹೇಳಬಹುದು.

೨. ಕ್ಷೀರಸ್ವಾಮಿಯು 'ಜಿನಮನುಸ್ಮೃತ್ಯ'ಎಂದು ಬರೆದು, ಶ್ಲೋಕವು ಜಿನಪರ ಎಂದು ಹೇಳಿದ್ದಾನೆ. ಜಿನ ಎಂದರೆ ಜೈನರ ತೀರ್ಥಂಕರನೊ ಬುದ್ಧನೊ ? ಅಮರಕೋಶದಲ್ಲಿಯೇ ಜಿನ ಶಬ್ದವನ್ನು ಬುದ್ಧಪರ್ಯಾಯಗಳಲ್ಲಿ ಹೇಳಿದ್ದರೂ, ಅವೆಲ್ಲವನ್ನೂ ತೀರ್ಥಂಕರನ ಪರವಾಗಿಯೂ ಅನ್ವಯಿಸಬಹುದು. ಅವೂ ಜೈನರಲ್ಲಿ ಪ್ರಸಿದ್ಧ ಶಬ್ದಗಳೇ.

೩. ಭಾನುಜೀದೀಕ್ಷಿತನು ಅಮರಸುಧಾವ್ಯಾಖ್ಯಾನದಲ್ಲಿ ಕ್ಷೀರಸ್ವಾಮಿಯ ಹೇಳಿಕೆಯನ್ನು ಒಪ್ಪದೆ, 'ಅಮರಕರ್ತುರ್ಜೈನತ್ವೇ ಪ್ರಮಾಣಾಭಾವಾತ್—ಅಮರಕಾರನು ಜೈನನೆಂಬುದಕ್ಕೆ ಪ್ರಮಾಣವಿಲ್ಲ' ಎಂದು ಬರೆದಿದ್ದಾನೆ.

೪. ಬ್ರಹ್ಮಾದಿದೇವತಾಪರ್ಯಾಯಗಳಿಗೂ ಮೊದಲು ಬುದ್ಧನ ಹೆಸರನ್ನು ಹೇಳಿರುವುದು, ಗ್ರಂಥಕಾರನು ಬೌದ್ಧನೆಂಬುದಕ್ಕೆ ಸರಿಯಾದ ಪ್ರಮಾಣವಲ್ಲ. ಬುದ್ಧನಿಗೆ ಪ್ರಾಶಸ್ತ್ಯವನ್ನಿತ್ತಿರುವುದರಿಂದ ಬೌದ್ಧನಾಗಿರಬೇಕೆಂದು ಬೌದ್ಧವಾದಿಗಳ ಆಶಯ. ದೈತ್ಯರ ಹೆಸರಾದ ಮೇಲೆ ಬುದ್ಧನ ಪರ್ಯಾಯ ಬಂದಿದೆ. ವೇದವಿರೋಧಿಗಳಾದ ದೈತ್ಯರ ಗುಂಪಿನಲ್ಲಿ ಬುದ್ಧನನ್ನು ಸೇರಿಸಬಹುದೆಂದು ನಿಷ್ಠುರವಾದಿಗಳು ಉತ್ತರ ಹೇಳಬಹುದು.

೫. ಬೌದ್ಧಮತಸ್ಥಾಪಕನನ್ನು ಅಮರಸಿಂಹನು 'ಶಾಕ್ಯಮುನಿ, ಶೌದ್ಧೋದನಿ' ಎಂದು ಕರೆದು ಸರ್ವಜ್ಞನಾದ ಬುದ್ಧನಿಗಿಂತ ಬೇರೆಯವನೆಂದು ಗಣಿಸಿದ್ದಾನೆ. ಬೌದ್ಧಮತೀಯನು ಹೀಗೆ ಮಾಡುವುದು ಸಂಭವವಲ್ಲ. ಶಾಕ್ಯಮುನಿಯು ಬುದ್ಧನ ಅವತಾರವೆಂದೂ ವ್ಯಕ್ತಿಭೇದವಾದ್ದರಿಂದ ಅಮರ ಸಿಂಹನು ಅವನನ್ನು ಬೇರೆಯಾಗಿ ಗಣಿಸಿದ್ದಾನೆಂದೂ ಹೇಳುವುದು ಸಮಂಜಸವಾಗದು. ಆತನೇ ವಿಷ್ಣು ಪರ್ಯಾಯದಲ್ಲಿ ವಿಷ್ಣುವಿನ ಅವತಾರವಾದ ಕೃಷ್ಣನ 'ದೇವಕೀನಂದನ, ಶೌರಿ, ವನಮಾಲಿ, ಕಂಸಾರಾತಿ' ಎಂಬ ಶಬ್ದಗಳನ್ನು ಸೇರಿಸಿದ್ದಾನೆ.

೬. ಅಮರಕೋಶದಲ್ಲಿ ವೈದಿಕಮತಾನುಸಾರವಾಗಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಗಗಳನ್ನು ವಿಂಗಡಿಸಿ ಜಾತ್ಯನುಗುಣವಾದ ವೃತ್ತಿಗಳನ್ನೂ ಆಯಾವೃತ್ತಿಗೆ ಸಂಬಂಧಿಸಿದ

ಪದಾರ್ಥಗಳನ್ನೂ ವಿವರಿಸಲಾಗಿದೆ. ಯಜ್ಞಕ್ಕೆ ಸಂಬಂಧಿಸಿದ ವಸ್ತುಗಳನ್ನು ವಿಸ್ತರವಾಗಿ ತಿಳಿಸಿದೆ. ಆದರೆ ಬೌದ್ಧಮತದಲ್ಲಿ ಪ್ರಸಿದ್ಧವಾದ ಶಬ್ದಗಳೆಲ್ಲವನ್ನೂ ಕೈಬಿಡಲಾಗಿದೆ. ಸ್ಕಂಧ, ಶೂನ್ಯ, ಆಲಯ—ಮುಂತಾದ ಕೆಲವು ಶಬ್ದಗಳನ್ನು ಹೇಳಿದ್ದರೂ ಬೌದ್ಧಮತ ಪ್ರಸಿದ್ಧವಾದ ಅರ್ಥವನ್ನು ಅವುಗಳಿಗೆ ಹೇಳದಿರುವುದು ಗಮನಾರ್ಹ.

ಅನ್ಯನಿಘಂಟುಗಳು—ಅಮರಕೋಶಕ್ಕೆ ಪೂರ್ವದಲ್ಲಿ ಮತ್ತು ಅನಂತರದಲ್ಲಿ ಅನೇಕ ನಿಘಂಟುಗಳು ರಚಿತವಾಗಿವೆ. ಕಾತ್ಯ, ವಾಚಸ್ಪತಿ, ವ್ಯಾಡಿ, ಭಾಗುರಿಗಳೆಂಬುವರು ಅಮರಸಿಂಹನಿಗಿಂತ ಪ್ರಾಚೀನರಾಗಿರಬೇಕು. ಅವನ ಅನಂತರ ರಚಿತವಾದ ನಿಘಂಟುಗಳಲ್ಲಿ ಪ್ರಧಾನವಾಗಿ ಮುಂದಿನವುಗಳನ್ನು ಉದಾಹರಿಸಬಹುದು.

೧. ಶಾಶ್ವತನ ಅನೇಕಾರ್ಥಸಮುಚ್ಚಯ (ಕ್ರಿ. ಶ. ೬ನೆಯ ಶತಮಾನ)
೨. ಹಲಾಯುಧನ ಅಭಿಧಾನರತ್ನ ಮಾಲಾ (ಕ್ರಿ. ಶ. ೧೦ ನೆಯ ಶತಮಾನ)
೩. ಯಾದವಪ್ರಕಾಶನ ವೈಜಯಂತೀ (ಕ್ರಿ. ಶ. ೧೧ ನೆಯ ಶತಮಾನ)
೪. ಧನಂಜಯನ ನಾಮಮಾಲಾ (ಕ್ರಿ. ಶ. ೧೨ನೆಯ ಶತಮಾನ)
೫. ಮಹೇಶ್ವರನ ವಿಶ್ವಪ್ರಕಾಶ (ಕ್ರಿ. ಶ. ೧೨ನೆಯ ಶತಮಾನ)
೬. ಮಂಖನ ಅನೇಕಾರ್ಥಕೋಶ-ಸ್ವೋಪಜ್ಞವ್ಯಾಖ್ಯಾಸಹಿತ (ಕ್ರಿ. ಶ. ೧೨ನೆಯ ಶತಮಾನ)
೭. ಹೇಮಚಂದ್ರನ i ಅಭಿಧಾನಚಿಂತಾಮಣಿ, ii ನಿಘಂಟುಶೇಷ, iii ಅನೇಕಾರ್ಥಸಂಗ್ರಹ (ಕ್ರಿ. ಶ. ೧೨ನೆಯ ಶತಮಾನ)
೮. —ಮೇದಿನೀ—(ನಾನಾರ್ಥಶಬ್ದಕೋಶ) (ಕ್ರಿ. ಶ. ೧೪ನೆಯ ಶತಮಾನ)

ಶ್ರೀಹರ್ಷ, ದುರ್ಗ, ಭೋಜ, ರುದ್ರ, ವಿಕ್ರಮಾದಿತ್ಯ—ಎಂಬವರೂ ನಿಘಂಟುಗಳನ್ನು ರಚಿಸಿದ್ದಾರೆ. ಅಮರಕೋಶಕ್ಕಿಂತ ಪೂರ್ವದಲ್ಲಿ ಅಮರಮಾಲಾ ಎಂಬ ಇನ್ನೊಂದು ಗ್ರಂಥವು ಇದ್ದಿತೆಂದು ತಿಳಿದುಬಂದಿದೆ.

ಈ ಎಲ್ಲ ಕೋಶಗಳೂ ಶ್ಲೋಕರೂಪದಲ್ಲಿವೆ. ಕಂಠಪಾಠ ಮಾಡಿ ನೆನಪಿನಲ್ಲಿಟ್ಟು ಕೊಳ್ಳಲು ಶ್ಲೋಕಗಳು ಉಪಯುಕ್ತವಾಗುತ್ತವೆ. ಈ ಗ್ರಂಥಗಳಲ್ಲಿ ಶಬ್ದ ಸಂಯೋಜನೆ ಕೆಲವು ವೇಳೆ ವಿಷಯಾನುಗುಣವಾಗಿಯೂ ಆದಿವ್ಯಂಜನಗಳಿಗೆ ಅನುಸಾರವಾಗಿಯೂ ಇರುತ್ತದೆ. ಶಬ್ದಗಳ ವರ್ಣಸಂಖ್ಯೆ ಮತ್ತು ಲಿಂಗಗಳನ್ನನುಸರಿಸಿಯೂ ಇರುವುದುಂಟು. ವರ್ಣಮಾಲಾ ಕ್ರಮದಿಂದ ಶಬ್ದಗಳನ್ನು ಯೋಜಿಸುವುದು ಆಧುನಿಕಪದ್ಧತಿ. ಈ ಪದ್ಧತಿಯಿಂದ ರಚಿತ

ವಾದವುಗಳಲ್ಲಿ ಶಬ್ದಕಲ್ಪದ್ರುಮ ಮತ್ತು ವಾಚಸ್ಪತ್ಯಗಳು ಮುಖ್ಯವಾದವು. ಶ್ರೀ ವಿ. ಎಸ್. ಆಪ್ಟೆ ಮತ್ತು ಮಾನಿಯರ್ ವಿಲಿಯಮ್ಸ್‌ರವರ ಸಂಸ್ಕೃತ ಇಂಗ್ಲಿಷ್ ನಿಘಂಟುಗಳು ಪ್ರಸಿದ್ಧವಾಗಿವೆ. ಕನ್ನಡದಲ್ಲಿ ಅರ್ಥವನ್ನು ವಿವರಿಸಿರುವ ಪಂ. ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯರ ಶಬ್ದಾರ್ಥಕೌಸ್ತುಭ ಒಂದು ಬೃಹದ್ಗ್ರಂಥ ('ಅ-ನ' ವರೆಗೆ ಮೂರು ಸಂಪುಟಗಳು ಮಾತ್ರ ಈಗ ಪ್ರಕಟವಾಗಿವೆ)

ಅಮರಕೋಶ

ಇದರಲ್ಲಿ ಮೂರು 'ಕಾಂಡ'ಗಳಿದ್ದು ಒಂದೊಂದು ಕಾಂಡವೂ ಅನೇಕ 'ವರ್ಗ'ಗಳಾಗಿ ವಿಭಜಿಸಲ್ಪಟ್ಟಿದೆ. ವಿಷಯಾನುಗುಣವಾಗಿ ಶಬ್ದಗಳನ್ನು ವರ್ಗೀಕರಿಸಲಾಗಿದೆ. ನಾನಾರ್ಥವರ್ಗದಲ್ಲಿ ವಿಷಯ ವಿಭಾಗವು ಅವಶ್ಯವಾದ್ದರಿಂದ ಅಂತ್ಯವ್ಯಂಜನಾನುಗುಣವಾಗಿ ಶಬ್ದ ಸಂಯೋಜನೆಯನ್ನು ಮಾಡಲಾಗಿದೆ. ಅರ್ಥದ ಜೊತೆಗೆ ಆಯಾ ಶಬ್ದದ ಲಿಂಗವನ್ನು ಅಮರಸಿಂಹನು ತಿಳಿಸಿರುವುದರಿಂದ ಈ ಗ್ರಂಥವು ಅತ್ಯಂತ ಉಪಯುಕ್ತವಾದದ್ದು. ಲಿಂಗಜ್ಞಾನವು ಸಂಸ್ಕೃತದಲ್ಲಿ ಅತ್ಯಾವಶ್ಯಕ.

ಅಮರಸಿಂಹನು ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ಇತರ ನಿಘಂಟುಗಳನ್ನೂ ಶಾಸ್ತ್ರಾಂತರಗಳನ್ನೂ ಪರಿಶೀಲಿಸಿ ಈ ಗ್ರಂಥವನ್ನು ರಚಿಸಿದ್ದಾನೆ—'ಸಮಾಹೃತ್ಯಾನ್ಯತಂತ್ರಾಣಿ.' ವ್ಯಾಕರಣ ಶಾಸ್ತ್ರದಲ್ಲಿ ಈತನಿಗೆ ವಿಶೇಷವಾದ ಪಾಂಡಿತ್ಯ ಉಂಟು. ಈತನು ಅನುಸರಿಸಿರುವುದು ಪಾಣಿನಿಯ ಅಷ್ಟಾಧ್ಯಾಯಿಯನ್ನು. ಸೂತ್ರ, ವಾರ್ತಿಕ, ಭಾಷ್ಯಗಳನ್ನು ಚೆನ್ನಾಗಿ ಪರಿಶೀಲಿಸಿ ಶಬ್ದಗಳನ್ನು ತನ್ನ ಕೋಶದಲ್ಲಿ ಅಳವಡಿಸಿದ್ದಾನೆ. ಆದ್ದರಿಂದಲೇ ಪಂಡಿತ ಗೋಷ್ಠಿಯಲ್ಲಿ ಈ ವ್ಯಾಜಸ್ತುತಿ ಪ್ರಚಲಿತವಾಗಿದೆ :

ಅಮರಸಿಂಹೋ ಹಿ ಪಾಪೀಯಾನ್ ಸರ್ವಂ ಭಾಷ್ಯಮಚೂಚುರತ್ ॥

'ಅಮರಸಿಂಹನು ಪಾಪಿ, ಅವನು (ವ್ಯಾಕರಣ) ಭಾಷ್ಯವೆಲ್ಲವನ್ನು ಕದ್ದು ಬಿಟ್ಟಿದ್ದಾನೆ !'

ಸಂಸ್ಕೃತಭಾಷೆಯ ಸಾಂಪ್ರದಾಯಿಕವಾದ ಅಧ್ಯಯನಕ್ರಮದಲ್ಲಿ ಅಮರಕೋಶದ ಕಂಠಪಾಠವು ಕಡ್ಡಾಯವಾಗಿ ಬಂದಿದೆ. ಭಾಷೆಯ ಮೇಲೆ ಪ್ರಭುತ್ವ ಬರಬೇಕಾದರೆ ವ್ಯಾಕರಣಶಾಸ್ತ್ರ ಮತ್ತು ಅಮರಕೋಶಗಳ ಅಧ್ಯಯನ ಅನಿವಾರ್ಯ.

'ಅಷ್ಟಾಧ್ಯಾಯೀ ಜಗನ್ಮಾತಾಽಮರಕೋಶೋ ಜಗತ್ಪಿತಾ'

ಎನ್ನುವುದು ಸತ್ಯ. ಅಮರಸಿಂಹನು ಎಂದಿಗೂ ಅಮರನೇ.

ಅಮರಕೋಶಕ್ಕೆ ೫೦ ವ್ಯಾಖ್ಯಾನಗಳಿರುವುದು ಇದುವರೆಗೆ ತಿಳಿದುಬಂದಿದೆ. ಇದರಿಂದ ಈ ಗ್ರಂಥದ ಉಪಯುಕ್ತತೆಯೂ ಜನಪ್ರಿಯತೆಯೂ ಸ್ಪಷ್ಟವಾಗುತ್ತದೆ. ಇವುಗಳಲ್ಲಿ ಕ್ಷೀರಸ್ವಾಮಿಯ ಅಮರಕೋಶೋದ್ಘಾಟನ ಮತ್ತು ಭಾನುಜಿದೀಕ್ಷಿತನ ವ್ಯಾಖ್ಯಾಸುಧಾ—ಎಂಬವು ವಿಶೇಷವಾಗಿ ಪ್ರಚಲಿತವಾಗಿವೆ. ಈಗ ದೊರಕಿರುವ ವ್ಯಾಖ್ಯಾನಗಳಲ್ಲಿ ಕ್ಷೀರಸ್ವಾಮಿಯದೇ ಪ್ರಾಚೀನವಾದದ್ದು. ಆತನು ಉಪಾಧ್ಯಾಯ, ಗೌಡ, ಭೋಜ ಎಂಬ ವ್ಯಾಖ್ಯಾಕಾರರನ್ನು ಹೆಸರಿಸಿದ್ದಾನೆ. ಭೋಜನ ಹೆಸರನಲು ಹೇಳಿರುವುದರಿಂದ ಕ್ಷೀರಸ್ವಾಮಿಯ ಕಾಲ ಕ್ರಿ. ಶ. ಸುಮಾರು ೧೧ನೆಯ ಶತಕವಿರಬಹುದೆಂದು ಇತಿಹಾಸಜ್ಞರ ಊಹೆ. ಈತನು ದೊಡ್ಡ ವಿದ್ವಾಂಸನೆಂಬುದು ನಿಶ್ಚಿತ. ಕ್ಷೀರಸ್ವಾಮಿಯ ಟೀಕೆಯಲ್ಲಿರುವ ಕುತೂಹಲಕರವಾದ ಕೆಲವು ಅಂಶಗಳನ್ನು ಇಲ್ಲಿ ಉಲ್ಲೇಖಿಸಬಹುದು—

೧. 'ಬೃಹತೀ ತು ನಿದಿಗ್ಧಿಕಾ ಇತಿ ಭಾಗುರಿವಾಕ್ಯಾತ್ ಗ್ರಂಥಕೃತ್ ಭ್ರಾಂತಃ' ಯತೋಽನಯೋರ್ಮಹಾನ್ ಭೇದಃ' (ಶ್ಲೋ. ೪೪೮ರ ವ್ಯಾಖ್ಯಾನ)

ಬೃಹತೀ—ನಿದಿಗ್ಧಿಕೆಗಳು ಪರ್ಯಾಯವೆಂದಿರುವುದು ತಪ್ಪು, ಇವುಗಳಿಗೆ ಭೇದವಿದೆ, ಧನ್ವಂತರಿ ನಿಘಂಟುವಿಗೆ ವಿರೋದವಾಗಿರುವುದರಿಂದ.

೨. 'ಬಾಲಪತ್ರೋ ಯವಾಸಃ ಖದಿರ' ಶ್ಚೇತಿ ದ್ವ್ಯರ್ಥೇಷು ಧನ್ವಂತರಿಪಾಠದ ಮದೃಷ್ಟ್ವಾ ಬಾಲಪುತ್ರಭ್ರಾಂತ್ಯಾ ಗ್ರಂಥಕೃತ್ ಬಾಲತನಯಮಾಹ' (ಶ್ಲೋ. ೪೦೪)

ಕಗ್ಗಲಿಮರಕ್ಕೆ ಬಾಲಪತ್ರ ಎಂದು ಹೆಸರು. ಧನ್ವಂತರಿಕೋಶದಲ್ಲಿ ಹಾಗೆಯೇ ಇದೆ. ಅಮರಸಿಂಹನು 'ಬಾಲಪುತ್ರ' ಎಂಬ ಅಪಪಾಠವನ್ನು ಸರಿಯೆಂದು ಭ್ರಮಿಸಿ, 'ಪುತ್ರ' ಎಂಬುದರ ಪರ್ಯಾಯವು 'ತನಯ'ವಾದ್ದರಿಂದ 'ಬಾಲತನಯ' ಎಂಬ ಶಬ್ದವನ್ನು ಕಲ್ಪಿಸಿದ್ದಾನೆ.

೩. 'ಏತಚ್ಚ ದ್ರಪ್ಸಂ ಶರಮಿತಿ ಭಾಗುರಿಪಾಠೇ ಸರಮಿತಿ ಬುದ್ಧ್ವಾ ಮಾಲಾಕಾರೋ ಭ್ರಾಂತಃ ।... ಇತ್ಥಂ ತು ಸಮರ್ಥ್ಯಂ, ತರತ್ ಉಪರಿಪ್ಲವಮಾನಂ ಘನಂ ದಧಿ ದ್ರಪ್ಸಮ್' (ಶ್ಲೋ. ೯೩೭)

"ದ್ರಪ್ಸ = ಗಟ್ಟಿಯಲ್ಲದ ಮೊಸರು-ಎಂದು ಅಮರಸಿಂಹನು ಹೇಳಿದ್ದಾನೆ. ಭ್ರಾಂತನಾದ ಮಾಲಾಕಾರನ ಮಾತನ್ನು ನಂಬಿ ಇವನೂ ಭ್ರಮಿಸಿದ್ದಾನೆ. ದ್ರಪ್ಸವೆಂದರೆ ಕೆನೆಮೊಸರು. ಅಮರಸಿಂಹನ ನುಡಿಯನ್ನು ಸಮರ್ಥಿಸುವುದಾದರೆ ತರತ್=ಮೇಲೆ ತೇಲುವ, ಘನಂ ದಧಿ=ಗಟ್ಟಿಯಾದ ಮೊಸರು ಎಂದು ವ್ಯಾಖ್ಯಾನಮಾಡಬೇಕು" ಇಲ್ಲಿ ತರತ್ ಘನೇ ದಧ್ನಿ

ದ್ರಪ್ಸಂ' ಎಂದು ಕ್ಷೀರಸ್ವಾಮಿಯು ವ್ಯಾಖ್ಯಾನ ಮಾಡುವಂತೆ ಕಾಣುತ್ತದೆ.

೪. ದ್ವ್ಯರ್ಥೇ—ಉಪಚಿತ್ರಾ ದಂತೀ ಪೃಶ್ನಿಪರ್ಣೀ ಚೇತಿ, ದಂತ್ಯಾಂ ದ್ರವಂತೀ ಭ್ರಾಂತ್ಯಾ ಗ್ರಂಥಕೃದುಪಚಿತ್ರಾಮಾಹ' (ಶ್ಲೋ. ೨೪೪)

ಉಪಚಿತ್ರಾಶಬ್ದಕ್ಕೆ ದಂತೀ (ಕರಿಯ ಉಮ್ಮತ್ತಿ, ಶ್ಲೋ. ೪೯೯), ಪೃಶ್ನಿಪರ್ಣೀ (ನರಿ ಹೊನ್ನೆಗಿಡ, ಶ್ಲೋ. ೪೪೭) ಎಂದು ಎರಡು ಅರ್ಥಗಳಿವೆ. ದಂತೀ ಶಬ್ದವು ದ್ರವಂತೀ ಎಂದು ಭ್ರಮಿಸಿ ಗ್ರಂಥಕಾರನು ಉಪಚಿತ್ರಾಶಬ್ದಕ್ಕೆ ದ್ರವಂತೀ (ಎಲಿಯಾಲ) ಎಂದು ಅರ್ಥ ಹೇಳಿದ್ದಾನೆ.

ಹೀಗೆಯೇ ಪದ್ಮಪತ್ರವು (ಶ್ಲೋ. ೫೦೧) ಪದ್ಮವರ್ಣ ಎಂದಿರಬೇಕು. ಶೀತಲ, ವಾತಕ (ಶ್ಲೋ. ೫೦೪) ಎಂದು ಅಮರನು ವಿಭಿನ್ನ ಶಬ್ದಗಳನ್ನು ಹೇಳಿದ್ದರೂ, ಶೀತಲವಾತಕ ಎಂಬುದು ಒಂದೇ ಶಬ್ದ ಇತ್ಯಾದಿ.

ಪ್ರಕೃತ ಗ್ರಂಥ

ಅಮರಕೋಶದ ಹಲವಾರು ಟೀಕೆಗಳನ್ನು ಪರಿಶೀಲಿಸಿದಾಗ ಮೂಲದಲ್ಲಿ ಕೆಲವು ಶ್ಲೋಕಗಳು ಪ್ರಕ್ಷಿಪ್ತವಾಗಿವೆಯೆಂದು ಗೊತ್ತಾಗುತ್ತದೆ. ವಿಭಿನ್ನ ಪಾಠಗಳು ದೊರೆಯುವುದರಿಂದ ಪ್ರಕ್ಷಿಪ್ತವಾದ್ದನ್ನು ನಿರ್ಧರಿಸುವುದು ಸುಲಭವಲ್ಲ. ಈ ದಿಶೆಯಲ್ಲಿ ಇದು ಶೋಧಿತ ಆವೃತ್ತಿಯಲ್ಲ. ಶಬ್ದಪರಿಚಯವೇ ಮುಖ್ಯ ಉದ್ದೇಶವಾದ್ದರಿಂದ, ಯಾವುದು ಪ್ರಕ್ಷಿಪ್ತವೆಂದು ನಿರ್ದೇಶಿಸದೆ, ಅಮರಕೋಶಸ್ಥವೆಂದು ಮುದ್ರಿತವಾದವನ್ನು ಇದರಲ್ಲಿ ಸೇರಿಸಲಾಗಿದೆ.

ಅಮರಸಿಂಹನು ಕೋಶರಚನೆಯಲ್ಲಿ ತಾನು ಅನುಸರಿಸಿದ ನಿಯಮಗಳನ್ನು ಆದಿಯಲ್ಲಿ ತಿಳಿಸಿದ್ದರೂ ಅವನ್ನು ಅನ್ವಯಿಸಿ ಅರ್ಥಮಾಡಿಕೊಳ್ಳುವುದು ಎಲ್ಲೆಡೆಯೂ ಸುಲಭವಲ್ಲ. ಅಲ್ಲದೆ ಪ್ರಾತಿಪದಿಕದ ಸ್ವರೂಪವನ್ನರಿಯಲು ಇದರಿಂದಾಗದು. ಸುಬಂತರೂಪಗಳನ್ನೂ ತತ್ಸಮವಾದ ಕನ್ನಡಶಬ್ದಗಳನ್ನೂ ಉಪಯೋಗಿಸಲು ಪ್ರಾತಿಪದಿಕಸ್ವರೂಪದ ಜ್ಞಾನ ಆವಶ್ಯಕ. ಶ್ಲೋಕಗಳಲ್ಲಿ ಪದವಿಭಾಗವೂ ಅಭ್ಯಾಸಿಗಳಿಗೆ ಕಠಿಣವೇ. ಈ ಸಂದರ್ಭದಲ್ಲಿ ತೆಲುಗಿನ ಒಂದು ಚಾಟುಪದ್ಯವು ಸ್ಮರಣೆಗೆ ಬರುತ್ತದೆ. ಸ್ವತಃ ಪದವಿಭಾಗದಿಂದ ಶಬ್ದಸಂಗ್ರಹ ಮಾಡಿಕೊಂಡವನೊಬ್ಬನು ಈ ಪದ್ಯವನ್ನು ರಚಿಸಿದನಂತೆ !

ಕೋನಂಗಡೇಯಂಗ
ಇತ್ಯಪುಡು ಕೂಯಂಗ
ಅಷ್ಯೇಕದಂತುಡು ನಾಟ್ಯಮುನಾಡೆನ್ ॥

ಕೋನಂಗ = ಮನ್ಮಥ. 'ಕಂದರ್ಪೋ ದರ್ಪಕೋನಂಗಃ' ಎಂದು ಅಮರಕೋಶದಲ್ಲಿದೆಯಲ್ಲ !

ಇತ್ಯಪಿ = ಕೋಗಿಲೆ. 'ಕೋಕಿಲಃ ಪಿಕ ಇತ್ಯಪಿ'

ಅಪ್ಯೇಕದಂತ = ಗಣೇಶ. 'ಅಪ್ಯೇಕದಂತ ಹೇರಂಬಲಂಬೋದರ ಗಜಾನನಾಃ'

ಈ ಗ್ರಂಥದಲ್ಲಿ ಪ್ರಾತಿಪದಿಕಸ್ವರೂಪವನ್ನು ಸ್ಪಷ್ಟವಾಗಿ ತೋರಿಸಿ ಅವುಗಳ ಲಿಂಗವನ್ನು ಕಂಸದಲ್ಲಿ ಬರೆದಿದೆ. ಲಿಂಗವು ಹಿಂದಿನ ಎಲ್ಲ ಶಬ್ದಗಳಿಗೆ ಅನ್ವಯಿಸುತ್ತದೆ. ಪುಲ್ಲಿಂಗ ನಪುಂಸಕಲಿಂಗಗಳಲ್ಲಿ ಪ್ರಾತಿಪದಿಕದ ರೂಪ ಒಂದೇ. ಸ್ತ್ರೀಲಿಂಗದಲ್ಲಿ ಸಾಮಾನ್ಯವಾಗಿ ಭೇದ ಉಂಟು. ಅದನ್ನು ಅಮರಸಿಂಹನು ತೋರಿಸಿಲ್ಲ. ರೂಪಭೇದವಿರುವುದನ್ನು ಇಲ್ಲಿ ತೋರಿಸಲಾಗಿದೆ. ಸಂಸ್ಕೃತದಲ್ಲಿ ಯಾವ ಶಬ್ದವೂ ಹ್ರಸ್ವ 'ಅ' ಕಾರಾಂತವಾಗಿ ಸ್ತ್ರೀಲಿಂಗದಲ್ಲಿ ಇರುವುದಿಲ್ಲ. ಎಲ್ಲಿ ರೂಪಭೇದವನ್ನು ಬರೆದಿಲ್ಲವೋ ಅಲ್ಲಿ ಅಕಾರಾಂತವೆಲ್ಲವೂ ಸ್ತ್ರೀಲಿಂಗದಲ್ಲಿ 'ಆ'ಕಾರಾಂತವೆಂದು ತಿಳಿಯಬೇಕು. ಹಾಗಲ್ಲದೆ ರೂಪಾಂತರವಿದ್ದಲ್ಲಿ ತಿಳಿಸಿದೆ.

ವ್ಯಂಜನಾಂತಶಬ್ದವು ಸಾಮಾನ್ಯವಾಗಿ ಸ್ತ್ರೀಲಿಂಗದಲ್ಲಿ ರೂಪಭೇದವನ್ನು ಪಡೆಯುವುದಿಲ್ಲ. ರೂಪಭೇದವಿದ್ದಲ್ಲಿ ಅದನ್ನು ಬರೆದಿದೆ. ಮುಂದೆ ಶಬ್ದಾನುಕ್ರಮಣಿಕೆಯಲ್ಲಿ ಎಲ್ಲ ಶಬ್ದಗಳನ್ನೂ ಪ್ರಥಮಾ ವಿಭಕ್ತ್ಯಂತವಾಗಿ ಬರೆದಿದೆ. ಇದರಿಂದ ಸುಬಂತರೂಪಗಳನ್ನೂ ಲಿಂಗವನ್ನೂ ತಿಳಿಯಲು ನೆರವಾಗುವುದೆಂದು ನಂಬಿದ್ದೇನೆ.

ಕೆಲವೆಡೆ ಶಬ್ದಸ್ವರೂಪವನ್ನು ನಿರ್ಣಯಿಸಲು ಸಾಧ್ಯವಾಗಿಲ್ಲ. ವ್ಯಾಖ್ಯಾನಕಾರರಿಗೂ ಸಂದೇಹವೇ. ಉದಾಹರಣೆಗೆ, ಧತ್ತೂರಃ ಕನಕಾಹ್ವಯಃ (೫೩೨), ಚಿತ್ರಕೋವಹ್ನಿಸಂಜ್ಞಕಃ (೪೩೫), ರಥಾಂಗಾಹ್ವಯನಾಮಕಃ (೫೪೮). ಇಲ್ಲಿ ಕನಕ, ವಹ್ನಿ ಎಂಬಿವು ಪರ್ಯಾಯಗಳೆ ? ಅಥವಾ ಕನಕಾಹ್ವಯ, ವಹ್ನಿಸಂಜ್ಞಕ ಮುಂತಾದವೆ ? '...ಕೇಶಾಂಬುನಾಮ ಚ (೪೭೭) ಎಂದರೇನು ? ಇದು ಮುಡಿವಾಳದ ಹೆಸರು. ಕೇಶಾಂಬು ಎಂಬುದು ಶಬ್ದರೂಪವೆ ? ಕೇಶ ಮತ್ತು ಜಲದ ಪರ್ಯಾಯಗಳೆ ? ಶುಕ್ಲಾ ಹೈಮವತೀ (೪೫೮) ಎಂಬಲ್ಲಿ ಶುಕ್ಲಾ ಎಂಬುದು ಪರ್ಯಾಯ ಶಬ್ದವೆ ? ಅಥವಾ ಬರಿಯ ವಿಶೇಷಣವೆ ? ನಿರ್ಣಯಿಸುವುದು ಕಷ್ಟ.

ವನೌಷಧಿವರ್ಗದಲ್ಲಿ ಅಪರಿಚಿತವಾದ ಗಿಡಮೂಲಿಕೆಗಳ ಕನ್ನಡದ ಹೆಸರು ಹೇಳುವುದು ಕಠಿಣ. ಸಾಧ್ಯವಾದಷ್ಟು ಶ್ರಮಿಸಿ ಅರ್ಥವನ್ನು ಹುಡುಕಿ ಬರೆದಿದ್ದೇನೆ. ಈ ವಿಷಯದಲ್ಲಿ ನನಗೆ ಇನ್ನೂ ಸಂದೇಹ ಉಂಟು. ಈ ನ್ಯೂನತೆಗಳನ್ನು ವಿದ್ವಾಂಸರು ಮನ್ನಿಸಬೇಕೆಂದು ಪ್ರಾರ್ಥನೆ.

ನಾನು ಬರೆದಿದ್ದ ಉಣಾದಿಕೋಶ, ಗಣರತ್ನ ಸಂಗ್ರಹವೆಂಬಿವೆರಡು ಮುದ್ರಣವನ್ನು

ಕಾಣದೆ ಉಳಿದಿದ್ದವು. ಈಗ ಅಮರಕೋಶದಲ್ಲಿ ಬಂದಿರುವ ಶಬ್ದಗಳನ್ನು ಬಿಟ್ಟು, ಉಳಿದ ಗ್ರಂಥಭಾಗವನ್ನು ಪರಿಶಿಷ್ಟಗಳಲ್ಲಿ ಸೇರಿಸಲಾಗಿದೆ.

ಈ ಗ್ರಂಥದ ರಚನೆಗೆ ಉಯೋಗಿಸಿಕೊಂಡಿರುವ ಗ್ರಂಥಗಳನ್ನು ಮುಂದೆ ಕೊಡಲಾಗಿವೆ. ಈ ಗ್ರಂಥಗಳ ಕರ್ತೃಗಳೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ಈ ಬಗೆಯಲ್ಲಿ ಅಮರಕೋಶವನ್ನು ಕನ್ನಡಿಸಬೇಕೆಂದು ನನ್ನನ್ನು ಪ್ರೋತ್ಸಾಹಿಸಿ ಆಶೀರ್ವದಿಸಿದವರು ಶ್ರೀ ಡಾ. ಡಿ. ವಿ. ಗುಂಡಪ್ಪನವರು. ಈ ಸಂದರ್ಭದಲ್ಲಿ ಅವರನ್ನು ಆದರದಿಂದ ಸ್ಮರಿಸಿಕೊಳ್ಳುತ್ತಿದ್ದೇನೆ.

ಗ್ರಂಥಪ್ರಕಾಶನವೇ ಒಂದು ಸಾಹಸವಾಗಿರುವ ಈ ಕಷ್ಟ ಕಾಲದಲ್ಲಿಯೂ ಶ್ರೀ ಕೊಡಲಿ ಚಿದಂಬರಂ ಅವರು ಅಭಿಮಾನವಿಟ್ಟು ಇದನ್ನು ಪ್ರಕಾಶಿಸಲು ಮುಂದೆ ಬಂದಿದ್ದಾರೆ. ಅವರಿಗೂ ಶ್ರಮವಹಿಸಿ ಮುದ್ರಿಸಿಕೊಟ್ಟಿರುವ ವೆಸ್ಲಿಪ್ರೆಸ್ ಮಾಲಿಕರಿಗೂ ನನ್ನ ಕೃತಜ್ಞತೆ ಸಲ್ಲುತ್ತದೆ.

ಸಂಸ್ಕೃತಭಾಷೆಯ ಅಭ್ಯಾಸಿಗಳಿಗೂ ತತ್ಸಮರೂಪಗಳನ್ನು ಕನ್ನಡದಲ್ಲಿ ಬಳಸತಕ್ಕವರಿಗೂ ಈ ಪುಸ್ತಕದಿಂದ ಉಪಯೋಗವಾಗುತ್ತದೆಯೆಂದು ನನ್ನ ನಂಬಿಕೆ.

ಬೆಂಗಳೂರು
ತಾ. ೧-೬-೭೫

—ಎಸ್. ರಂಗನಾಥಶರ್ಮಾ

ಪ್ರಕಾಶಕರ ಮಾತು

ಶ್ರೀ ವಿದ್ವಾನ್ ಎನ್. ರಂಗನಾಥ ಶರ್ಮ ಅವರು ಅನೇಕ ಉತ್ತಮ ಗ್ರಂಥಗಳನ್ನು ಬರೆದು ಅಪಾರ ಜನಪ್ರಿಯತೆ ಗಳಿಸಿದ್ದಾರೆ. ಅವರು ಸಂಸ್ಕೃತ ಪಂಡಿತರು ವಿದ್ವಾಂಸರು. ಈ ಪುಸ್ತಕವು ಜನರ ಮನಸ್ಸನ್ನು ಗೆದ್ದು ಬಹಳ ಜನಪ್ರಿಯತೆ ಗಳಿಸಿದೆ. ಜನರ ಅಪಾರ ಬೇಡಿಕೆಯಿಂದ ಈಗ ನಾಲ್ಕನೆಯ ಮುದ್ರಣವನ್ನು ಪ್ರಕಟಿಸಿದ್ದೇನೆ. ಈ ಪುಸ್ತಕವನ್ನು ಎಂದಿನಂತೆ ವಿಶ್ವಾಸವಿಟ್ಟು ಶ್ರೀ ವಿದ್ವಾನ್ ಎನ್. ರಂಗನಾಥಶರ್ಮ ಅವರು ನಮ್ಮ ಕನ್ನಡ ಕಾವ್ಯಮಾಲೆಯಲ್ಲಿ ಕಾವ್ಯಾಲಯದಿಂದ ಪ್ರಕಟಿಸಲು ಅನುಮತಿ ಕೊಟ್ಟಿದ್ದಕ್ಕೆ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಅನೇಕ ತೊಂದರೆ ತೊಂದರೆಗಳನ್ನು ಕೊಟ್ಟರು ತಾಳ್ಮೆಯಿಂದ ಸಹಕರಿಸಿದ ಹರ್ಷ ಪ್ರಿಂಟರ್ಸ್‌ನ ಶ್ರೀ ಚಿನ್ನಸ್ವಾಮಿ ಅವರಿಗೂ ನನ್ನ ಅನಂತ ವಂದನೆಗಳು.

ಮುಖಪುಟದ ಹೊದಿಕೆಯನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ರಮೇಶ್, ವೈಭವಿ ಗ್ರಾಫಿಕ್ಸ್, ಬೆಂಗಳೂರು ಇವರಿಗೂ ಅನೇಕ ಕೃತಜ್ಞತೆಗಳು.

1-9-2000 ಕೂಡಲಿ ಚಿದಂಬರಂ ಕೃಷ್ಣಮೂರ್ತಿ

ಆಧಾರ ಗ್ರಂಥಗಳು

೧. ಕ್ಷೀರಸ್ವಾಮಿಯ ಅಮರಕೋಶದ ಟೀಕೆ (ಡಾ॥ ಹರದತ್ತಶರ್ಮ ಪ[illegible]
ಡಾ॥ ಎನ್. ಜಿ. ಸರದೇಸಾಯಿಯವರ ಉಪೋದ್ಘಾತಸಹಿತ).

೨. ಭಾನುಜಿದೀಕ್ಷಿತನ ಅಮರಸುಧಾ (ಪಂ॥ ಶಿವದತ್ತಶರ್ಮರ ಟಿಪ್ಪಣೀ ಸಹಿತ).

೩. ಗುರುಬಾಲಪ್ರಬೋಧಿಕೆ.

೪. ಶ್ರೀ ವಿ. ಎಸ್. ಅಪ್ಟೆಯವರ ಸಂಸ್ಕೃತ-ಇಂಗ್ಲಿಷ್ ಡಿಕ್ಶನರಿ.

೫. ಶ್ರೀ ಮುಮ್ಮಡಿಕೃಷ್ಣರಾಜಒಡೆಯರ ಶ್ರೀಚಾಮುಂಡಾಲಘು ನಿಘಂಟು

೬. ಪಂ॥ ಚಕ್ರವರ್ತಿ ಶ್ರೀನಿವಾಸ ಗೋಪಾಲಾಚಾರ್ಯರ ಶಬ್ದಾರ್ಥ ಕೌಸ್ತುಭ

೭. ಲೂಯಿರೈಸ್ ಅವರು ಟೀಕಾ ಸಹಿತವಾಗಿ ಪ್ರಕಟಿಸಿದ ಅಮರಕೋಶ.

ವಿಷಯಸೂಚಿಕೆ

		ಪುಟ
ಪ್ರಸ್ತಾವನೆ	...	

ಪ್ರಥಮ ಕಾಂಡಮ್

	ಪೀಠಿಕಾಶ್ಲೋಕಗಳು	...	೧
೧.	ಸ್ವರ್ಗವರ್ಗಃ	...	೪
೨.	ವ್ಯೋಮವರ್ಗಃ	...	೧೬
೩.	ದಿಗ್ವರ್ಗಃ	...	೧೭
೪.	ಕಾಲವರ್ಗಃ	...	೨೪
೫.	ಧೀವರ್ಗಃ	...	೩೦
೬.	ವಾಗ್ವರ್ಗಃ	...	೩೪
೭.	ಶಬ್ದಾದಿವರ್ಗಃ	...	೩೮
೮.	ನಾಟ್ಯವರ್ಗಃ	...	೩೯
೯.	ಪಾತಾಳ ಭೋಗಿವರ್ಗಃ	...	೪೮
೧೦.	ನರಕವರ್ಗಃ	...	೫೦
೧೧.	ವಾರಿವರ್ಗಃ	...	೫೧

ದ್ವಿತೀಯ ಕಾಂಡಮ್

೧.	ಭೂಮಿವರ್ಗಃ	...	೬೦
೨.	ಪುರವರ್ಗಃ	...	೬೪
೩.	ಶೈಲವರ್ಗಃ	...	೬೮
೪.	ವನೌಷಧಿವರ್ಗಃ	...	೭೦
೫.	ಸಿಂಹಾದಿವರ್ಗಃ	...	೧೦೧
೬.	ಮನುಷ್ಯವರ್ಗಃ	...	೧೧೦
೭.	ಬ್ರಹ್ಮವರ್ಗಃ	...	೧೩೯
೮.	ಕ್ಷತ್ರಿಯವರ್ಗಃ	...	೧೫೧

೯. ವೈಶ್ಯವರ್ಗಃ ... ೧೩೫
೧೦. ಶೂದ್ರವರ್ಗಃ ... ೧೯೮

ತೃತೀಯ ಕಾಂಡಮ್

೧. ವಿಶೇಷ್ಯ ನಿಘ್ನವರ್ಗಃ ... ೨೦೮
೨. ಸಂಕೀರ್ಣವರ್ಗಃ ... ೨೩೧
೩. ನಾನಾರ್ಥವರ್ಗಃ ... ೨೪೧
೪. ನಾನಾರ್ಥಾವ್ಯಯವರ್ಗಃ ... ೨೯೦
೫. ಅವ್ಯಯವರ್ಗಃ ... ೨೯೪
೬. ಲಿಂಗಾದಿ ಸಂಗ್ರಹವರ್ಗಃ ... ೨೯೯
ಶಬ್ದಾನುಕ್ರಮಣಿಕೆ ... ೩೧೮
ಪರಿಶಿಷ್ಟ—I : ಉಣಾದಿ ಸಂಗ್ರಹ ... ೪೫೭
ಪರಿಶಿಷ್ಟ —II : ಗಣರತ್ನ ಸಂಗ್ರಹ ... ೪೬೬
ಪರಿಶಿಷ್ಟ—III : ಕಾಲಸಂಬಂಧಿಯಾದ ವಿವರ ... ೪೬೮
ಪರಿಶಿಷ್ಟ—IV ... ೪೭೧

ಶ್ರೀಃ

ಅಮರಕೋಶಃ

ಪ್ರಥಮಕಾಂಡಮ್

ಪೀಠಿಕಾಶ್ಲೋಕಾಃ

ಯಸ್ಯ ಜ್ಞಾನದಯಾಸಿಂಧೋರಗಾಧಸ್ಯಾನಘಾ ಗುಣಾಃ ।
ಸೇವ್ಯತಾಮಕ್ಷಯೋ ಧೀರಾಸ್ಸ ಶ್ರಿಯೈ ಚಾಮೃತಾಯ ಚ ॥ ೧
ಸಮಾಹೃತ್ಯಾನ್ಯತಂತ್ರಾಣಿ ಸಂಕ್ಷಿಪ್ತೈಃ ಪ್ರತಿಸಂಸ್ಕೃತೈಃ ।
ಸಂಪೂರ್ಣಮುಚ್ಯತೇ ವರ್ಗೈರ್ನಾಮಲಿಂಗಾನುಶಾಸನಮ್ ॥ ೨
ಪ್ರಾಯಶೋ ರೂಪಭೇದೇನ ಸಾಹಚರ್ಯಾಚ್ಚ ಕುತ್ರಚಿತ್ ।
ಸ್ತ್ರೀಪುಂನಪುಂಸಕಂ ಜ್ಞೇಯಂ ತದ್ವಿಶೇಷವಿಧೇಃ ಕ್ವಚಿತ್ ॥ ೩

---

೧. ಎಲೈ ಧೀರರೆ, ಜ್ಞಾನ ಮತ್ತು ದಯೆಗಳಿಗೆ ಸಮುದ್ರದಂತೆ ಆಕರನಾದ ಯಾರ ಸರ್ವಶಕ್ತತ್ವಾದಿ ಗುಣಗಳು ಪಾಪನಿವರ್ತಕವಾಗಿ ಮಂಗಳಕರವಾಗಿವೆಯೋ, ಅಂಥ ಶಾಶ್ವತ ನಾದ ಭಗವಂತನು ಧರ್ಮಾರ್ಥಕಾಮಗಳ ಸಮೃದ್ಧಿಗಾಗಿಯೂ ಮೋಕ್ಷಕ್ಕಾಗಿಯೂ ಸೇವಿಸಲ್ಪಡಲಿ.

೨. ನಾಮಲಿಂಗಾನುಶಾಸನವೆಂಬ ಶಬ್ದಕೋಶವನ್ನು ನಾನು ರಚಿಸುತ್ತಿದ್ದೇನೆ. ಇದರಲ್ಲಿ ಶಾಸ್ತ್ರಾಂತರಗಳನ್ನು ಪರ್ಯಾಲೋಚಿಸಿ ಸಂಗ್ರಹಿಸಿರುವ ಶಬ್ದರಾಶಿಗಳನ್ನು ವರ್ಗಗಳಾಗಿ ವಿಂಗಡಿಸಲಾಗಿದೆ. ಇವು ವ್ಯಾಕರಣ ಸಂಸ್ಕಾರವನ್ನು ಪಡೆದಿರುವ ಪರಿಶುದ್ಧವಾದ ಶಬ್ದಗಳು.

೩. ಈ ಗ್ರಂಥದಲ್ಲಿ ವಿಶೇಷವಾಗಿ ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗಗಳನ್ನು ಶಬ್ದಗಳ ರೂಪಭೇದದಿಂದಲೇ ತಿಳಿಯಬಹುದಾಗಿದೆ. (ಉದಾ : ಸಂವತ್ಸರೋವತ್ಸರೋಽಬ್ದಃ=ಇಲ್ಲಿ ಸಂವತ್ಸರಾದಿ ಶಬ್ದಗಳು ಪುಲ್ಲಿಂಗಗಳೆಂದು ಪ್ರಥಮಾವಿಭಕ್ತಿಯ ರೂಪಗಳಿಂದ ತಿಳಿಯುತ್ತದೆ. ಕಾದಂಬಿನೀ, ಮೇಘಮಾಲಾ=ಇವು ಸ್ತ್ರೀಲಿಂಗಗಳೆಂದು ಊಹಿಸಬಹುದು. ಗಗನಮನಂತಂ ಸುರವರ್ತ್ಮಖಮ್=ಇವು ನಪುಂಸಕಲಿಂಗಗಳೆಂದು ತಿಳಿಯಬಹುದಾಗಿದೆ). ಕೆಲವೆಡೆ ಶಬ್ದಾಂತರಗಳ ಸಾಹಚರ್ಯದಿಂದ ಲಿಂಗಗಳನ್ನು ಗೊತ್ತುಮಾಡಬಹುದು (ಉದಾ: ಭಾನುಃಕರಃ=ಕರಶಬ್ದವು ಪುಲ್ಲಿಂಗವಾದ್ದರಿಂದ ಅದರೊಡನಿರುವ ಭಾನುಶಬ್ದವೂ ಪುಲ್ಲಿಂಗ.

ಭೇದಾಖ್ಯಾನಾಯ ನ ದ್ವಂದ್ವೋ ನೈಕಶೇಷೋ ನ ಸಂಕರಃ ।
ಕೃತೋಽತ್ರ ಭಿನ್ನಲಿಂಗಾನಾಮನುಕ್ತಾನಾಂ ಕ್ರಮಾದೃತೆ ॥ ೪
ತ್ರಿಲಿಂಗ್ಯಾಂ ತ್ರಿಷ್ವಿತಿ ಪದಂ ಮಿಥುನೇ ತು ದ್ವಯೋರಿತಿ ।
ನಿಷಿದ್ಧಲಿಂಗಂ ಶೇಷಾರ್ಥಂ ತ್ವಂತಾಥಾದಿ ನ ಪೂರ್ವಭಾಕ್ ॥ ೫

ಅಶ್ವಯುಗಶ್ವಿನೀ=ಅಶ್ವಯುಕ್ ಸ್ತ್ರೀಲಿಂಗ. ವಿಯದ್ವಿಷ್ಣುಪದಂ=ವಿಯತ್ ನಪುಂಸಕಲಿಂಗ). ಕೆಲವೆಡೆ ಸ್ಪಷ್ಟವಾಗಿ ಲಿಂಗನಿರ್ದೇಶವನ್ನು ಮಾಡಿದ್ದರಿಂದ ಲಿಂಗವನ್ನು ತಿಳಿಯಬೇಕು (ಉದಾ: ದುಂದುಭಿಃ ಪುಮಾನ್ ; ದೀಧಿತಿಃ ಸ್ತ್ರಿಯಾಮ್ ; ರೋಚಿಃ ಶೋಚಿರುಭೇ ಕ್ಲೀಬೇ).

೪. ವಿಭಿನ್ನಲಿಂಗದ ಶಬ್ದಗಳಿಗೆ ಲಿಂಗಭೇದವು ಸರಿಯಾಗಿ ಗೊತ್ತಾಗಲೆಂಬ ಉದ್ದೇಶದಿಂದ, ಅವುಗಳಿಗೆ ದ್ವಂದ್ವಸಮಾಸವನ್ನಾಗಲಿ-ಏಕಶೇಷವನ್ನಾಗಲಿ-ಸಂಕರವನ್ನಾಗಲಿ ಮಾಡಿಲ್ಲ (ಉದಾ: ದೇವತಾ, ದೈವತ, ಅಮರ=ಇವು ವಿಭಿನ್ನಲಿಂಗಗಳು. ಇಲ್ಲಿ ದೇವತಾ ದೈವತಾಮರಾಃ ಎಂದು ದ್ವಂದ್ವಸಮಾಸವನ್ನು ಮಾಡಿಲ್ಲ. ಮಾಡಿದ್ದರೆ ಎಲ್ಲವೂ ಒಂದೇ ಲಿಂಗದವುಗಳೆಂದು ಭ್ರಮೆಯಾಗುತ್ತಿತ್ತು. ಖಂ ನಭಃ ಶ್ರಾವಣೋ ನಭಾಃ=ಇಲ್ಲಿ ಖಶ್ರಾವಣೌ ತು ನಭಸೀ ಎಂದು ಏಕಶೇಷ ಮಾಡಿಲ್ಲ. ಮಾಡಿದ್ದರೆ, ನಭಃ ಶಬ್ದವು ಪುಲ್ಲಿಂಗದಲ್ಲಿಯೂ ಇದೆಯೆಂದು ತಿಳಿಯುತ್ತಿರಲಿಲ್ಲ. ಸ್ತವಃ ಸ್ತೋತ್ರಂ ಸ್ತುತಿರ್ನುತಿಃ=ಇಲ್ಲಿ 'ಸ್ತುತಿಃ ಸ್ತೋತ್ರಂ ಸ್ತವೋ ನುತಿ' ಎಂದು ಸಾಂಕರ್ಯವನ್ನು ಮಾಡಿಲ್ಲ. ಮಾಡಿದ್ದರೆ, ಸ್ತುತಿಶಬ್ದದ ಲಿಂಗವು ತಿಳಿಯುತ್ತಿರಲಿಲ್ಲ. ಮತ್ತು ನುತಿಶಬ್ದವು ಪುಲ್ಲಿಂಗವೆಂದು ಭ್ರಮೆಯುಂಟಾಗುತ್ತಿತ್ತು. ಆದರೆ, ಕ್ರಮ ಎಂದರೆ ವ್ಯವಸ್ಥೆಯಿಲ್ಲದೆ ಸಾಂಕರ್ಯವನ್ನು ಮಾಡಿಲ್ಲ. ಒಂದು ವ್ಯವಸ್ಥೆ ಇದ್ದಾಗ ಸಾಂಕರ್ಯವಿರಬಹುದು. ಹೇಗೆಂದರೆ, ಸ್ತವಃ ಸ್ತೋತ್ರಂ ಸ್ತುತಿರ್ನುತಿಃ=ಇಲ್ಲಿ ಸಾಂಕರ್ಯ ಉಂಟು. ಲಿಂಗಜ್ಞಾನಕ್ಕೆ ಇಲ್ಲಿ ಒಂದು ವ್ಯವಸ್ಥೆ ಇದೆ. ಸ್ತವ, ಸ್ತೋತ್ರಗಳ ಲಿಂಗವು ರೂಪಭೇದದಿಂದ ತಿಳಿಯುತ್ತದೆ. ಸ್ತುತಿನುತಿಗಳು ನಪುಂಸಕವಲ್ಲವೆಂದು ರೂಪದಿಂದಲೇ ತಿಳಿಯುತ್ತದೆ. ಪುಲ್ಲಿಂಗವಾಗಿದ್ದರೆ ಸ್ತವಶಬ್ದದೊಡನೆ ಸೇರಿಸಬೇಕಾಗಿತ್ತು. ಆದ್ದರಿಂದ ಅವು ಸ್ತ್ರೀಲಿಂಗಗಳೆಂದು ಊಹಿಸಬಹುದು).

೫. ಮೂರು ಲಿಂಗಗಳೂ ಇವೆಯೆಂದು ಸೂಚಿಸಲು 'ತ್ರಿಷು' ಎಂಬ ಪದವನ್ನೂ ಸ್ತ್ರೀಲಿಂಗ ಪುಲ್ಲಿಂಗಗಳೆರಡೂ ಇವೆಯೆನ್ನಲು 'ದ್ವಯೋಃ' ಎಂಬ ಪದವನ್ನೂ ಬಳಸಲಾಗಿದೆ. (ಉದಾ: ತ್ರಿಷು ಸ್ಫುಲಿಂಗೋಽಗ್ನಿಕಣಃ=ಇಲ್ಲಿ ಸ್ಫುಲಿಂಗ ಶಬ್ದವು ಮೂರು ಲಿಂಗಗಳಲ್ಲಿಯೂ ಇದೆಯೆಂದು ತಿಳಿಯಬೇಕು. ವಹ್ನೇರ್ದ್ವಯೋರ್ಜ್ವಾಲಕೀಲೌ=ಇಲ್ಲಿ ಜ್ವಾಲ ಕೀಲ ಶಬ್ದಗಳು

ಸ್ತ್ರೀಲಿಂಗ ಮತ್ತು ಪುಲ್ಲಿಂಗಗಳಲ್ಲಿವೆಯೆಂದು ಅರ್ಥ). ಹಾಗೆಯೇ ಒಂದು ಲಿಂಗವನ್ನು ನಿಷೇಧಿಸಿದರೆ ಉಳಿದ ಲಿಂಗಗಳಿವೆಯೆಂದು ತಿಳಿಯಬೇಕು. (ಉದಾ: ವ್ಯೋಮಯಾನಂ ವಿಮಾನೋಽಸ್ತ್ರೀ=ಸ್ತ್ರೀಲಿಂಗವಿಲ್ಲ ಎಂದು ನಿಷೇಧಿಸಿದ್ದರಿಂದ ವಿಮಾನಶಬ್ದಕ್ಕೆ ಪುಲ್ಲಿಂಗ ನಪುಂಸಕಲಿಂಗಗಳಿವೆಯೆಂದು ತಿಳಿಯಬೇಕು) ಯಾವ ಶಬ್ದದ ಮುಂದೆ 'ತು' ಎಂಬ ಪದ ವಿದೆಯೋ ಆ ಶಬ್ದವು ಹಿಂದಿನ ಪದಗಳೊಡನೆ ಅನ್ವಿತವಾಗುವುದಿಲ್ಲ (ಉದಾ: ಪುಲೋಮಜಾ ಶಚೀಂದ್ರಾಣೀ ನಗರೀತ್ವಮರಾವತೀ=ಇಲ್ಲಿ ನಗರೀ ಶಬ್ದವು ಹಿಂದಿನ ಇಂದ್ರಾಣಿಯೊಡನೆ ಅನ್ವಿತವಲ್ಲ. ಅದು ಅಮರಾವತಿಯೊಡನೆ ಅನ್ವಿತ). ಯಾವ ಶಬ್ದದ ಹಿಂದೆ 'ಅಥ' ಎಂಬ ಪದವಿದೆಯೋ ಆ ಶಬ್ದವೂ ಹಿಂದಿನ ಪದಗಳೊಡನೆ ಅನ್ವಿತವಾಗುವುದಿಲ್ಲ (ಉದಾ : ವಿಸ್ಮಯೋಽದ್ಭುತಮಾಶ್ಚರ್ಯಂ ಚಿತ್ರಮಪ್ಯಥ ಭೈರವಮ್=ಇಲ್ಲಿ ಭೈರವಶಬ್ದವು ಹಿಂದಿನ ಚಿತ್ರಶಬ್ದದೊಡನೆ ಅನ್ವಿತವಲ್ಲ. 'ದಾರುಣಂ ಭೀಷಣಂ ಭೀಷ್ಮಂ' ಎಂಬುದರೊಡನೆ ಅನ್ವಿತ).

ಟಿಪ್ಪಣಿ : ದ್ವಿಹೀನ, ದ್ವಯಹೀನ ಎಂದರೆ ಸ್ತ್ರೀ ಪುಂಸಗಳೆರಡೂ ಇಲ್ಲ—ನಪುಂಸಕಲಿಂಗ ಎಂದು ತಿಳಿಯತಕ್ಕದ್ದು. ನಾ ಎಂದರೆ ಪುಲ್ಲಿಂಗ. ಕ್ಲೀಬ ಎಂದರೆ ನಪುಂಸಕ. 'ಅಥ' ಶಬ್ದ ದಂತೆಯೇ 'ಅಥೋ' ಶಬ್ದವನ್ನು ಉಪಯೋಗಿಸಿದರೂ ಪೂರ್ವಾನ್ವಯವಿಲ್ಲ. ಶಬ್ದದ ಕಡೆಯಲ್ಲಿ 'ತಿ' ಎಂಬ ಪ್ರತ್ಯಯವಿದ್ದು ಭಾವನಾಮವಾಗಿದ್ದರೆ, ಅದು ಸ್ತ್ರೀಲಿಂಗ. ಉದಾ: ಮತಿ, ರತಿ, ನತಿ ಇತ್ಯಾದಿ.

೧. ಸ್ವರ್ಗವರ್ಗಃ

ಸ್ವರವ್ಯಯಂ ಸ್ವರ್ಗನಾಕತ್ರಿದಿವತ್ರಿದಶಾಲಯಾಃ ।
ಸುರಲೋಕೋ ದ್ಯೋದಿವೌ ದ್ವೇ ಸ್ತ್ರಿಯಾಂ ಕ್ಲೀಬೇ ತ್ರಿವಿಷ್ಟಪಮ್ ॥ ೬
ಅಮರಾ ನಿರ್ಜರಾ ದೇವಾಸ್ತ್ರಿದಶಾ ವಿಬುಧಾಸ್ಸುರಾಃ ।
ಸುಪರ್ವಾಣಸ್ಸುಮನಸಸ್ತ್ರಿದಿವೇಶಾ ದಿವೌಕಸಃ ॥ ೭
ಆದಿತೇಯಾ ದಿವಿಷದೋ ಲೇಖಾ ಅದಿತಿನಂದನಾಃ ।
ಆದಿತ್ಯಾ ಋಭವೋಽಸ್ವಪ್ನಾ ಅಮರ್ತ್ಯಾ ಅಮೃತಾಂಧಸಃ ॥ ೮
ಬರ್ಹಿರ್ಮುಖಾಃ ಕ್ರತುಭುಜೋ ಗೀರ್ವಾಣಾ ದಾನವಾರಯಃ ।
ವೃಂದಾರಕಾ ದೈವತಾನಿ ಪುಂಸಿ ವಾ ದೇವತಾಃ ಸ್ತ್ರಿಯಾಮ್ ॥ ೯
ಆದಿತ್ಯವಿಶ್ವವಸವಸ್ತುಷಿತಾಭಾಸ್ವರಾನಿಲಾಃ ।
ಮಹಾರಾಜಿಕಸಾಧ್ಯಾಶ್ಚ ರುದ್ರಾಶ್ಚ ಗಣದೇವತಾಃ ॥ ೧೦

ಸ್ವರ್ಗವರ್ಗ

೬. ಸ್ವರ್ (ಅವ್ಯಯ), ಸ್ವರ್ಗ, ನಾಕ, ತ್ರಿದಿವ, ತ್ರಿದಶಾಲಯ, ಸುರಲೋಕ (ಪು), ದ್ಯೋ, ದಿವ್ (ಸ್ತ್ರೀ), ತ್ರಿವಿಷ್ಟಪ (ನ)=ಸ್ವರ್ಗ. ೭-೯. ಅಮರ, ನಿರ್ಜರ, ದೇವ, ತ್ರಿದಶ, ವಿಬುಧ, ಸುರ, ಸುಪರ್ವನ್, ಸುಮನಸ್, ತ್ರಿದಿವೇಶ, ದಿವೌಕಸ್,[1] ಆದಿತೇಯ, ದಿವಿಷದ್, ಲೇಖ, ಅದಿತಿನಂದನ, ಆದಿತ್ಯ, ಋಭು, ಅಸ್ವಪ್ನ, ಅಮರ್ತ್ಯ, ಅಮೃತಾಂಧಸ್, ಬರ್ಹಿರ್ಮುಖ, ಕ್ರತುಭುಜ್, ಗೀರ್ವಾಣ, ದಾನವಾರಿ, ವೃಂದಾರಕ (ಪು), ದೈವತ (ಪು. ನ), ದೇವತಾ (ಸ್ತ್ರೀ)=ದೇವತೆಗಳು.

೧೦. ಆದಿತ್ಯ[2], ವಿಶ್ವ, ವಸು, ತುಷಿತ, ಆಭಾಸ್ವರ, ಅನಿಲ, ಮಹಾರಾಜಿಕ, ಸಾಧ್ಯ, ರುದ್ರ (ಪು)=ಗಣದೇವತೆಗಳು.

---

[1] ದಿವೋಕಸ್ ಎಂಬ ರೂಪಭೇದ ಉಂಟು. [2] ಆದಿತ್ಯರು : ೧೨ ಮಂದಿ, ವಿಶ್ವ (ಈ ಶಬ್ದವು ಸರ್ವನಾಮ) : ೧೦, ವಸು : ೮, ತುಷಿತ : ೩೬, ಆಭಾಸ್ವರ : ೬೪, ಅನಿಲ (ವಾಯು) : ೪೯, ಮಹಾರಾಜಿಕ : ೨೨೦, ಸಾಧ್ಯ : ೧೨, ರುದ್ರ : ೧೧.

ವಿದ್ಯಾಧರೋಽಪ್ಸರೋ ಯಕ್ಷರಕ್ಷೋಗಂಧರ್ವಕಿನ್ನರಾಃ ।
ಪಿಶಾಚೋ ಗುಹ್ಯಕಸ್ಸಿದ್ಧೋ ಭೂತೋಽಮೀ ದೇವಯೋನಯಃ ॥ ೧೧
ಅಸುರಾ ದೈತ್ಯದೈತೇಯದನುಜೇಂದ್ರಾರಿದಾನವಾಃ ।
ಶುಕ್ರಶಿಷ್ಯಾ ದಿತಿಸುತಾಃ ಪೂರ್ವದೇವಾಸ್ಸುರದ್ವಿಷಃ ॥ ೧೨
ಸರ್ವಜ್ಞಸ್ಸುಗತೋ ಬುದ್ಧೋ ಧರ್ಮರಾಜಸ್ತಥಾಗತಃ ।
ಸಮಂತಭದ್ರೋ ಭಗವಾನ್ಮಾರಜಿಲ್ಲೋಕಜಿಜ್ಜಿನಃ ॥ ೧೩
ಷಡಭಿಜ್ಞೋ ದಶಬಲೋಽದ್ವಯವಾದೀ ವಿನಾಯಕಃ ।
ಮುನೀಂದ್ರಃ ಶ್ರೀಘನಶ್ಶಾಸ್ತಾ ಮುನಿಶ್ಶಾಕ್ಯಮುನಿಸ್ತು ಯಃ ॥ ೧೪
ಸ ಶಾಕ್ಯಸಿಂಹಸ್ಸರ್ವಾರ್ಥಸಿದ್ಧಶ್ಶೌದ್ಧೋದನಿಶ್ಚ ಸಃ ।
ಗೌತಮಶ್ಚಾರ್ಕಬಂಧುಶ್ಚ ಮಾಯಾದೇವೀಸುತಶ್ಚ ಸಃ ॥ ೧೫
ಬ್ರಹ್ಮಾಽಽತ್ಮಭೂಸ್ಸುರಜ್ಯೇಷ್ಠಃ ಪರಮೇಷ್ಠೀ ಪಿತಾಮಹಃ ।
ಹಿರಣ್ಯಗರ್ಭೋ ಲೋಕೇಶಃ ಸ್ವಯಂಭೂಶ್ಚತುರಾನನಃ ॥ ೧೬

---

೧೧. ವಿದ್ಯಾಧರ, ಅಪ್ಸರಸ್, ಯಕ್ಷ, ರಕ್ಷಸ್, ಗಂಧರ್ವ, ಕಿನ್ನರ, ಪಿಶಾಚ, ಗುಹ್ಯಕ, ಸಿದ್ಧ, ಭೂತ[1]=ದೇವಯೋನಿಗಳು-ದೇವಾಂಶದವರು. ೧೨. ಅಸುರ, ದೈತ್ಯ, ದೈತೇಯ, ದನುಜ, ಇಂದ್ರಾರಿ, ದಾನವ, ಶುಕ್ರಶಿಷ್ಯ, ದಿತಿಸುತ, ಪೂರ್ವದೇವ, ಸುರದ್ವಿಷ್ (ಪು)=ದೈತ್ಯರು, ರಾಕ್ಷಸರು. ೧೩-೧೫. ಸರ್ವಜ್ಞ, ಸುಗತ, ಬುದ್ಧ, ಧರ್ಮರಾಜ, ತಥಾಗತ, ಸಮಂತಭದ್ರ, ಭಗವತ್, ಮಾರಜಿತ್, ಲೋಕಜಿತ್, ಜಿನ, ಷಡಭಿಜ್ಞ, ದಶಬಲ, ಅದ್ವಯವಾದಿನ್, ವಿನಾಯಕ, ಮುನೀಂದ್ರ, ಶ್ರೀಘನ, ಶಾಸ್ತೃ, ಮುನಿ (ಪು)=ಬುದ್ಧ. ಶಾಕ್ಯ ಮುನಿ, ಶಾಕ್ಯಸಿಂಹ, ಸರ್ವಾರ್ಥಸಿದ್ಧ, ಶೌದ್ಧೋದನಿ, ಗೌತಮ, ಅರ್ಕಬಂಧು, ಮಾಯಾದೇವೀಸುತ (ಪು)=ಶುದ್ಧೋದನನ ಮಗನಾಗಿ ಅವತರಿಸಿದ ಬುದ್ಧ. ೧೬-೧೮. ಬ್ರಹ್ಮನ್, ಆತ್ಮಭೂ, ಸುರಜ್ಯೇಷ್ಠ, ಪರಮೇಷ್ಠಿನ್, ಪಿತಾಮಹ, ಹಿರಣ್ಯಗರ್ಭ, ಲೋಕೇಶ, ಸ್ವಯಂಭೂ, ಚತುರಾನನ, ಧಾತೃ, ಅಬ್ಜಯೋನಿ, ದ್ರುಹಿಣ, ವಿರಿಂಚಿ, ಕಮಲಾಸನ, ಸ್ರಷ್ಟೃ, ಪ್ರಜಾಪತಿ, ವೇಧಸ್, ವಿಧಾತೃ, ವಿಶ್ವಸೃಜ್, ವಿಧಿ (ಪು), ಶತಾನಂದ,

---

[1] ಈ ಶಬ್ದಗಳಲ್ಲಿ ಅಪ್ಸರಸ್ (ಸ್ತ್ರೀ), ರಕ್ಷಸ್ (ನ), ಭೂತ (ಪು. ನ). ಉಳಿದವು ಪುಲ್ಲಿಂಗಗಳು. ಇವರ ಸ್ತ್ರೀಯರನ್ನು ಹೇಳುವಾಗ ವಿದ್ಯಾಧರೀ, ಯಕ್ಷೀ ಮುಂತಾದ ಸ್ತ್ರೀಲಿಂಗದ ರೂಪಗಳೂ ಉಂಟು. ರಕ್ಷಸ್ ಶಬ್ದಕ್ಕೆ ರಾಕ್ಷಸ ಎಂಬ ಪುಲ್ಲಿಂಗದ ರೂಪವಿದೆ. ಒಂದೇ ಸ್ವಭಾವದವರಾದ್ದರಿಂದ ದೈತ್ಯರನ್ನು ರಾಕ್ಷಸರೆಂದು ವ್ಯವಹರಿಸುತ್ತಾರೆ.

ಧಾತಾಽಬ್ಜಯೋನಿರ್ದ್ರುಹಿಣೋ ವಿರಿಂಚಿಃ ಕಮಲಾಸನಃ ।
ಸ್ರಷ್ಟಾ ಪ್ರಜಾಪತಿರ್ವೇಧಾ ವಿಧಾತಾ ವಿಶ್ವಸೃಡ್ವಿಧಿಃ ॥ ೧೭
ಶತಾನಂದಶ್ಶತಧೃತಿರ್ವಿರಿಂಚೋಽಜೋ ವಿರಿಂಚನಃ ।
ವಿಷ್ಣುರ್ನಾರಾಯಣಃ ಕೃಷ್ಣೋ ವೈಕುಂಠೋ ವಿಷ್ಟರಶ್ರವಾಃ ॥ ೧೮
ದಾಮೋದರೋ ಹೃಷೀಕೇಶಃ ಕೇಶವೋ ಮಾಧವಃ ಸ್ವಭೂಃ ।
ದೈತ್ಯಾರಿಃ ಪುಂಡರೀಕಾಕ್ಷೋ ಗೋವಿಂದೋ ಗರುಡಧ್ವಜಃ ॥ ೧೯
ಪೀತಾಂಬರೋಽಚ್ಯುತಶ್ಶಾರ್ಙ್ಗೀ ವಿಷ್ವಕ್ಸೇನೋ ಜನಾರ್ದನಃ ।
ಉಪೇಂದ್ರ ಇಂದ್ರಾವರಜಶ್ಚಕ್ರಪಾಣಿಶ್ಚತುರ್ಭುಜಃ ॥ ೨೦
ಪದ್ಮನಾಭೋ ಮಧುರಿಪುರ್ವಾಸುದೇವಸ್ತ್ರಿವಿಕ್ರಮಃ ।
ದೇವಕೀನಂದನಶ್ಶೌರಿಃ ಶ್ರೀಪತಿಃ ಪುರುಷೋತ್ತಮಃ ॥ ೨೧
ವನಮಾಲೀ ಬಲಿಧ್ವಂಸೀ ಕಂಸಾರಾತಿರಧೋಕ್ಷಜಃ ।
ವಿಶ್ವಂಭರಃ ಕೈಟಭಜಿದ್ವಿಧುಃ ಶ್ರೀವತ್ಸಲಾಂಛನಃ ॥ ೨೨
ಗದಾಗ್ರಜೋ ಮುಂಜಿಕೇಶೋ ದಾಶಾರ್ಹೋ ದಶರೂಪಭೃತ್ ।
ವಸುದೇವೋಽಸ್ಯ ಜನಕಸ್ಸ ಏವಾನಕದುಂದುಭಿಃ ॥ ೨೩

ಶತಧೃತಿ, ವಿರಿಂಚ,[1] ಅಜ, ವಿರಿಂಚನ (ಪು)=ಬ್ರಹ್ಮ. ೧೮-೨೩. ವಿಷ್ಣು, ನಾರಾಯಣ, ಕೃಷ್ಣ, ವೈಕುಂಠ, ವಿಷ್ಟರಶ್ರವಸ್, ದಾಮೋದರ, ಹೃಷೀಕೇಶ, ಕೇಶವ, ಮಾಧವ, ಸ್ವಭೂ, ದೈತ್ಯಾರಿ, ಪುಂಡರೀಕಾಕ್ಷ, ಗೋವಿಂದ, ಗರುಡಧ್ವಜ, ಪೀತಾಂಬರ, ಅಚ್ಯುತ, ಶಾರ್ಙ್ಗಿನ್, ವಿಷ್ವಕ್ಸೇನ, ಜನಾರ್ದನ, ಉಪೇಂದ್ರ, ಇಂದ್ರಾವರಜ, ಚಕ್ರಪಾಣಿ, ಚತುರ್ಭುಜ, ಪದ್ಮನಾಭ, ಮಧುರಿಪು, ವಾಸುದೇವ, ತ್ರಿವಿಕ್ರಮ, ದೇವಕೀನಂದನ, ಶೌರಿ, ಶ್ರೀಪತಿ, ಪುರುಷೋತ್ತಮ, ವನಮಾಲಿನ್, ಬಲಿಧ್ವಂಸಿನ್, ಕಂಸಾರಾತಿ, ಅಧೋಕ್ಷಜ, ವಿಶ್ವಂಭರ, ಕೈಟಭಜಿತ್, ವಿಧು, ಶ್ರೀವತ್ಸಲಾಂಛನ, ಗದಾಗ್ರಜ, ಮುಂಜಿಕೇಶ, ದಾಶಾರ್ಹ, ದಶರೂಪಭೃತ್ (ಪು)=ವಿಷ್ಣು.

ವಸುದೇವ, ಆನಕದುಂದುಭಿ=ಶ್ರೀಕೃಷ್ಣನ ತಂದೆ.

---

[1] ವಿರಂಚಿ, ವಿರಂಚ ಎಂಬ ರೂಪಾಂತರಗಳೂ ಉಂಟು.

ಬಲಭದ್ರಃ ಪ್ರಲಂಬಘ್ನೋ ಬಲದೇವೋಽಚ್ಯುತಾಗ್ರಜಃ ।
ರೇವತೀರಮಣೋ ರಾಮಃ ಕಾಮಪಾಲೋ ಹಲಾಯುಧಃ ॥ ೨೪
ನೀಲಾಂಬರೋ ರೌಹಿಣೇಯಸ್ತಾಲಾಂಕೋ ಮುಸಲೀ ಹಲೀ ।
ಸಂಕರ್ಷಣಸ್ಸೀರಪಾಣಿಃ ಕಾಲಿಂದೀಭೇದನೋ ಬಲಃ ॥ ೨೫
ಮದನೋ ಮನ್ಮಥೋ ಮಾರಃ ಪ್ರದ್ಯುಮ್ನೋ ಮೀನಕೇತನಃ ।
ಕಂದರ್ಪೋ ದರ್ಪಕೋಽನಂಗಃ ಕಾಮಃ ಪಂಚಶರಸ್ಸ್ಮರಃ ॥ ೨೬
ಶಂಬರಾರಿರ್ಮನಸಿಜಃ ಕುಸುಮೇಷುರನನ್ಯಜಃ ।
ಪುಷ್ಪಧನ್ವಾ ರತಿಪತಿರ್ಮಕರಧ್ವಜ ಆತ್ಮಭೂಃ ॥ ೨೭
ಶೃಂಗಾರಯೋನಿಃ ಶ್ರೀಪುತ್ರಶ್ಶೂರ್ಪಕಾರಾತಿರಿತ್ಯಪಿ ।
ಅರವಿಂದಮಶೋಕಂ ಚ ಚೂತಂ ಚ ನವಮಲ್ಲಿಕಾ ॥ ೨೮
ನೀಲೋತ್ಪಲಂ ಚ ಪಂಚೈತೇ ಪಂಚಬಾಣಸ್ಯ ಸಾಯಕಾಃ ।
ಬ್ರಹ್ಮಸೂರ್ವಿಶ್ವಕೇತುಸ್ಸ್ಯಾದನಿರುದ್ಧ ಉಷಾಪತಿಃ ॥ ೨೯
ಲಕ್ಷ್ಮೀಃ ಪದ್ಮಾಲಯಾ ಪದ್ಮಾ ಕಮಲಾ ಶ್ರೀರ್ಹರಿಪ್ರಿಯಾ ।
ಇಂದಿರಾ ಲೋಕಮಾತಾ ಮಾ ರಮಾ ಮಂಗಲದೇವತಾ ॥ ೩೦

೨೪-೨೫. ಬಲಭದ್ರ, ಪ್ರಲಂಬಘ್ನ, ಬಲದೇವ, ಅಚ್ಯುತಾಗ್ರಜ, ರೇವತೀರಮಣ, ರಾಮ, ಕಾಮಪಾಲ, ಹಲಾಯುಧ, ನೀಲಾಂಬರ, ರೌಹಿಣೇಯ, ತಾಲಾಂಕ, ಮುಸಲಿನ್, ಹಲಿನ್, ಸಂಕರ್ಷಣ, ಸೀರಪಾಣಿ, ಕಾಲಿಂದೀಭೇದನ, ಬಲ (ಪು)=ಬಲರಾಮ. ೨೬-೨೮. ಮದನ, ಮನ್ಮಥ, ಮಾರ, ಪ್ರದ್ಯುಮ್ನ, ಮೀನಕೇತನ, ಕಂದರ್ಪ, ದರ್ಪಕ, ಅನಂಗ. ಕಾಮ, ಪಂಚಶರ, ಸ್ಮರ, ಶಂಬರಾರಿ, ಮನಸಿಜ, ಕುಸುಮೇಷು, ಅನನ್ಯಜ, ಪುಷ್ಪಧನ್ವನ್, ರತಿಪತಿ, ಮಕರಧ್ವಜ, ಆತ್ಮಭೂ, ಶೃಂಗಾರಯೋನಿ, ಶ್ರೀಪುತ್ರ, ಶೂರ್ಪಕಾರಾತಿ (ಪು)=ಮನ್ಮಥ. ೨೮-೨೯. ಅರವಿಂದ, ಅಶೋಕ, ಚೂತ(ನ), ನವಮಲ್ಲಿಕಾ (ಸ್ತ್ರೀ), ನೀಲೋತ್ಪಲ(ನ)=ಇವು ಐದು ಮನ್ಮಥನ ಬಾಣಗಳು. ಬ್ರಹ್ಮಸೂ, ವಿಶ್ವಕೇತು, ಅನಿರುದ್ಧ, ಉಷಾಪತಿ (ಪು)=ಅನಿರುದ್ಧ. ಇವುಗಳಲ್ಲಿ ಬ್ರಹ್ಮಸೂ, ವಿಶ್ವಕೇತು—ಇವೆರಡು ಮನ್ಮಥನ ಹೆಸರುಗಳೆಂದು ಕೆಲವರು ಹೇಳುತ್ತಾರೆ. ೩೦-೩೧. ಲಕ್ಷ್ಮೀ, ಪದ್ಮಾಲಯಾ, ಪದ್ಮಾ, ಕಮಲಾ, ಶ್ರೀ, ಹರಿಪ್ರಿಯಾ, ಇಂದಿರಾ, ಲೋಕಮಾತೃ, ಮಾ, ರಮಾ, ಮಂಗಲದೇವತಾ, ಭಾರ್ಗವೀ, ಲೋಕಜನನೀ, ಕ್ಷೀರಸಾಗರಕನ್ಯಕಾ (ಸ್ತ್ರೀ)=ಲಕ್ಷ್ಮೀದೇವಿ. ೩೧-೩೨. ಪಾಂಚಜನ್ಯ

ಭಾರ್ಗವೀ ಲೋಕಜನನೀ ಕ್ಷೀರಸಾಗರಕನ್ಯಕಾ ।
ಶಂಖೋ ಲಕ್ಷ್ಮೀಪತೇಃ ಪಾಂಚಜನ್ಯಶ್ಚಕ್ರಂ ಸುದರ್ಶನಃ ॥ ೩೧
ಕೌಮೋದಕೀ ಗದಾ ಖಡ್ಗೋ ನಂದಕಃ ಕೌಸ್ತುಭೋ ಮಣಿಃ ।
ಚಾಪಶ್ಶಾರ್ಙ್ಗಂ ಮುರಾರೇಸ್ತು ಶ್ರೀವತ್ಸೋ ಲಾಂಛನಂ ಸ್ಮೃತಮ್ ॥ ೩೨
ಗರುತ್ಮಾನ್ ಗರುಡಸ್ತಾರ್ಕ್ಷ್ಯೋ ವೈನತೇಯಃ ಖಗೇಶ್ವರಃ ।
ನಾಗಾಂತಕೋ ವಿಷ್ಣುರಥಸ್ಸುಪರ್ಣಃ ಪನ್ನಗಾಶನಃ ॥ ೩೩
ಶಂಭುರೀಶಃ ಪಶುಪತಿಶ್ಶಿವಶ್ಶೂಲೀ ಮಹೇಶ್ವರಃ ।
ಈಶ್ವರಶ್ಶರ್ವ ಈಶಾನಶ್ಶಂಕರಶ್ಚಂದ್ರಶೇಖರಃ ॥ ೩೪
ಭೂತೇಶಃ ಖಂಡಪರಶುರ್ಗಿರೀಶೋ ಗಿರಿಶೋ ಮೃಡಃ ।
ಮೃತ್ಯುಂಜಯಃ ಕೃತ್ತಿವಾಸಾಃ ಪಿನಾಕೀ ಪ್ರಮಥಾಧಿಪಃ ॥ ೩೫
ಉಗ್ರಃ ಕಪರ್ದೀ ಶ್ರೀಕಂಠಶ್ಶಿತಿಕಂಠಃ ಕಪಾಲಭೃತ್ ।
ವಾಮದೇವೋ ಮಹಾದೇವೋ ವಿರೂಪಾಕ್ಷಸ್ತ್ರಿಲೋಚನಃ ॥ ೩೬

(ಪು)=ವಿಷ್ಣುವಿನ ಶಂಖ. ಸುದರ್ಶನ[1] (ಪು)=ವಿಷ್ಣುವಿನ ಚಕ್ರ. ಕೌಮೋದಕೀ (ಸ್ತ್ರೀ), ನಂದಕ (ಪು), ಕೌಸ್ತುಭ (ಪು)=ಇವು ಕ್ರಮವಾಗಿ ವಿಷ್ಣುವಿನ ಗದೆ, ಕತ್ತಿ ಮತ್ತು ಮಣಿಗಳು. ಶಾರ್ಙ್ಗ (ನ)=ವಿಷ್ಣುವಿನ ಧನುಸ್ಸು. ಶ್ರೀವತ್ಸ (ಪು)=ವಿಷ್ಣುವಿನ ಎದೆಯಲ್ಲಿರುವ ಒಂದು ಚಿಹ್ನೆ. ೩೩. ಗರುತ್ಮತ್, ಗರುಡ, ತಾರ್ಕ್ಷ್ಯ, ವೈನತೇಯ, ಖಗೇಶ್ವರ, ನಾಗಾಂತಕ, ವಿಷ್ಣುರಥ, ಸುಪರ್ಣ, ಪನ್ನಗಾಶನ (ಪು)=ಗರುಡ. ೩೪-೩೯. ಶಂಭು, ಈಶ, ಪಶುಪತಿ, ಶಿವ, ಶೂಲಿನ್, ಮಹೇಶ್ವರ, ಈಶ್ವರ, ಶರ್ವ, ಈಶಾನ, ಶಂಕರ, ಚಂದ್ರಶೇಖರ, ಭೂತೇಶ, ಖಂಡಪರಶು, ಗಿರೀಶ, ಗಿರಿಶ, ಮೃಡ, ಮೃತ್ಯುಂಜಯ, ಕೃತ್ತಿವಾಸಸ್, ಪಿನಾಕಿನ್, ಪ್ರಮಥಾಧಿಪ, ಉಗ್ರ, ಕಪರ್ದಿನ್, ಶ್ರೀಕಂಠ, ಶಿತಿಕಂಠ, ಕಪಾಲಭೃತ್, ವಾಮದೇವ, ವಿರೂಪಾಕ್ಷ, ತ್ರಿಲೋಚನ, ಕೃಶಾನುರೇತಸ್, ಸರ್ವಜ್ಞ, ಧೂರ್ಜಟಿ, ನೀಲಲೋಹಿತ, ಹರ, ಸ್ಮರಹರ, ಭರ್ಗ, ತ್ರ್ಯಂಬಕ, ತ್ರಿಪುರಾಂತಕ, ಗಂಗಾಧರ, ಅಂಧಕರಿಪು, ಕ್ರತುಧ್ವಂಸಿನ್, ವೃಷಧ್ವಜ, ವ್ಯೋಮಕೇಶ, ಭವ, ಭೀಮ, ಸ್ಥಾಣು, ರುದ್ರ, ಉಮಾಪತಿ, ಅಷ್ಟಮೂರ್ತಿ, ಅಹಿರ್ಬುಧ್ನ, ಮಹಾಕಾಲ, ಮಹಾನಟ (ಪು)=ಶಿವ. ೩೯. ಕಪರ್ದ (ಪು)=ಶಿವನ ಜಟೆ. ಪಿನಾಕ (ಪು),

---

[1] ಇದಕ್ಕೆ ನಪುಂಸಕಲಿಂಗವೂ ಉಂಟು.

ಕೃಶಾನುರೇತಾಸ್ಸರ್ವಜ್ಞೋ ಧೂರ್ಜಟಿರ್ನೀಲಲೋಹಿತಃ ।
ಹರಃ ಸ್ಮರಹರೋ ಭರ್ಗಸ್ತ್ರ್ಯಂಬಕಸ್ತ್ರಿಪುರಾಂತಕಃ ॥ ೩೭
ಗಂಗಾಧರೋಽಂಧಕರಿಪುಃ ಕ್ರತುಧ್ವಂಸೀ ವೃಷಧ್ವಜಃ ।
ವ್ಯೋಮಕೇಶೋ ಭವೋ ಭೀಮಃ ಸ್ಥಾಣೂ ರುದ್ರ ಉಮಾಪತಿಃ ॥ ೩೮
ಅಷ್ಟಮೂರ್ತಿರಹಿರ್ಬುಧ್ನ್ಯೋ ಮಹಾಕಾಲೋ ಮಹಾನಟಃ ।
ಕಪರ್ದೋಽಸ್ಯ ಜಟಾಜೂಟಃ ಪಿನಾಕೋಽಜಗವಂ ಧನುಃ ॥ ೩೯
ಪ್ರಮಥಾಸ್ಸ್ಯುಃ ಪಾರಿಷದಾ ಬ್ರಾಹ್ಮೀತ್ಯಾದ್ಯಾಸ್ತು ಮಾತರಃ ।
ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ ॥ ೪೦
ವಾರಾಹೀ ಚೈವ ಚೇಂದ್ರಾಣೀ ಚಾಮುಂಡಾ ಸಪ್ತಮಾತರಃ ।
ವಿಭೂತಿರ್ಭೂತಿರೈಶ್ವರ್ಯಮಣಿಮಾದಿಕಮಷ್ಟಧಾ ॥ ೪೧
ಅಣಿಮಾ ಮಹಿಮಾ ಚೈವ ಗರಿಮಾ ಲಘಿಮಾ ತಥಾ ।
ಪ್ರಾಪ್ತಿಃ ಪ್ರಾಕಾಮ್ಯಮೀಶಿತ್ವಂ ವಶಿತ್ವಂ ಚಾಷ್ಟಭೂತಯಃ ॥ ೪೨
ಉಮಾ ಕಾತ್ಯಾಯನೀ ಗೌರೀ ಕಾಲೀ ಹೈಮವತೀಶ್ವರೀ ।
ಶಿವಾ ಭವಾನೀ ರುದ್ರಾಣೀ ಶರ್ವಾಣೀ ಸರ್ವಮಂಗಲಾ ॥ ೪೩
ಅಪರ್ಣಾ ಪಾರ್ವತೀ ದುರ್ಗಾ ಮೃಡಾನೀ ಚಂಡಿಕಾಂಬಿಕಾ ।
ಆರ್ಯಾ ದಾಕ್ಷಾಯಣೀ ಚೈವ ಗಿರಿಜಾ ಮೇನಕಾತ್ಮಜಾ ॥ ೪೪

ಅಜಗವ (ನ)=ಶಿವನ ಧನುಸ್ಸು. ೪೦-೪೨. ಪ್ರಮಥ, ಪಾರಿಷದ[1] (ಪು)=ಶಿವನ ಅನುಚರ. ಬ್ರಾಹ್ಮೀ (ಸ್ತ್ರೀ) ಮೊದಲಾದವರು ಮಾತೃದೇವತೆಗಳು. ಅವರು ಯಾರೆಂದರೆ : ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ, ಚಾಮುಂಡಾ (ಸ್ತ್ರೀ)=ಈ ಏಳು ದೇವತೆಗಳು. ವಿಭೂತಿ, ಭೂತಿ (ಸ್ತ್ರೀ), ಐಶ್ವರ್ಯ (ನ)=ಸಿದ್ಧಿ, ಪ್ರಭಾವ. ಇದು ಎಂಟು ವಿಧ : ಅಣಿಮನ್, ಮಹಿಮನ್, ಗರಿಮನ್, ಲಘಿಮನ್ (ಪು), ಪ್ರಾಪ್ತಿ (ಸ್ತ್ರೀ), ಪ್ರಾಕಾಮ್ಯ, ಈಶಿತ್ವ, ವಶಿತ್ವ (ನ).

೪೩-೪೪. ಉಮಾ, ಕಾತ್ಯಾಯನೀ, ಗೌರೀ, ಕಾಲೀ, ಹೈಮವತೀ, ಈಶ್ವರೀ,[2] ಶಿವಾ, ಭವಾನೀ, ರುದ್ರಾಣೀ, ಶರ್ವಾಣೀ, ಸರ್ವಮಂಗಲಾ, ಅಪರ್ಣಾ, ಪಾರ್ವತೀ, ದುರ್ಗಾ, ಮೃಡಾನೀ, ಚಂಡಿಕಾ, ಅಂಬಿಕಾ, ಆರ್ಯಾ, ದಾಕ್ಷಾಯಣೀ, ಗಿರಿಜಾ, ಮೇನಕಾತ್ಮಜಾ= ಪಾರ್ವತೀದೇವಿ.

---

[1] ಪಾರ್ಷದ, ಪಾರ್ಷದ್ಯ, ಪಾರಿಷದ್ಯ ಎಂಬ ರೂಪಾಂತರಗಳೂ ಉಂಟು.

[2] ಈಶ್ವರಾ ಎಂಬ ಆಕಾರಾಂತವೂ ಉಂಟು.

ವಿನಾಯಕೋ ವಿಘ್ನರಾಜ ದ್ವೈ ಮಾತುರಗಣಾಧಿಪಾಃ ।
ಅಪ್ಯೇಕದಂತಹೇರಂಬಲಂಬೋದರಗಜಾನನಾಃ ॥ ೪೫
ಕಾರ್ತ್ತಿಕೇಯೋ ಮಹಾಸೇನಶ್ಶರಜನ್ಮಾ ಷಡಾನನಃ ।
ಪಾರ್ವತೀನಂದನಃ ಸ್ಕಂದಸ್ಸೇನಾನೀರಗ್ನಿಭೂರ್ಗುಹಃ ॥ ೪೬
ಬಾಹುಲೇಯಸ್ತಾರಕಜಿದ್ವಿಶಾಖಶ್ಶಿಖಿವಾಹನಃ ।
ಷಾಣ್ಮಾತುರಃ ಶಕ್ತ್ತಿಧರಃ ಕುಮಾರಃ ಕ್ರೌಂಚದಾರಣಃ ॥ ೪೭
ಭೃಂಗೀ ಭೃಂಗಿರಿಟಸ್ತಂಡುನಂದಿನೌ ನಂದಿಕೇಶ್ವರೇ ।
ಕರ್ಣಮೋಟೀ ತು ಚಾಮುಂಡಾ ಚರ್ಮಮುಂಡಾ ತು ಚರ್ಚಿಕಾ ॥ ೪೮
ಇಂದ್ರೋ ಮರುತ್ವಾನ್ಮಘವಾ ಬಿಡೌಜಾಃ ಪಾಕಶಾಸನಃ ।
ವೃದ್ಧಶ್ರವಾಶ್ಶುನಾಸೀರಃ ಪುರುಹೂತಃ ಪುರಂದರಃ ॥ ೪೯
ಜಿಷ್ಣುರ್ಲೇಖರ್ಷಭಶ್ಶಕ್ರಃ ಶತಮನ್ಯುರ್ದಿವಸ್ಪತಿಃ ।
ಸುತ್ರಾಮಾ ಗೋತ್ರಭಿದ್ವಜ್ರೀ ವಾಸವೋ ವೃತ್ರಹಾ ವೃಷಾ ॥ ೫೦
ವಾಸ್ತೋಷ್ಪತಿಸ್ಸುರಪತಿರ್ಬಲಾರಾತಿಶ್ಶಚೀಪತಿಃ ।
ಜಂಭಭೇದೀ ಹರಿಹಯಃ ಸ್ವಾರಾಣ್ನಮುಚಿಸೂದನಃ ॥ ೫೧

---

೪೫. ವಿನಾಯಕ, ವಿಘ್ನರಾಜ, ದ್ವೈಮಾತುರ, ಗಣಾಧಿಪ, ಏಕದಂತ, ಹೇರಂಬ, ಲಂಬೋದರ, ಗಜಾನನ, (ಪು)=ಗಣಪತಿ. ೪೬-೪೭. ಕಾರ್ತಿಕೇಯ, ಮಹಾಸೇನ, ಶರಜನ್ಮನ್, ಷಡಾನನ, ಪಾರ್ವತೀನಂದನ, ಸ್ಕಂದ, ಸೇನಾನೀ, ಅಗ್ನಿಭೂ, ಗುಹ, ಬಾಹುಲೇಯ, ತಾರಕಜಿತ್, ವಿಶಾಖ, ಶಿಖಿವಾಹನ, ಷಾಣ್ಮಾತುರ, ಶಕ್ತಿಧರ, ಕುಮಾರ, ಕ್ರೌಂಚದಾರಣ (ಪು)=ಷಣ್ಮುಖ. ೪೮. ಭೃಂಗಿನ್, ಭೃಂಗಿರಿಟ[1] (ಪು)=ಪ್ರಮಥಗಣಗಳಲ್ಲೊಬ್ಬನು. ತಂಡು, ನಂದಿನ್ (ಪು)=ನಂದಿಕೇಶ್ವರ (ತಂಡು=ನಂದಿಕೇಶ್ವರನಲ್ಲದೆ ಇನ್ನೊಬ್ಬ ಪ್ರಮಥನೆಂದೂ ಹೇಳುತ್ತಾರೆ.). ಕರ್ಣಮೋಟೀ, ಚಾಮುಂಡಾ (ಸ್ತ್ರೀ)=(ಒಬ್ಬ) ಶಕ್ತಿದೇವತೆ. ಚರ್ಮಮುಂಡಾ, ಚರ್ಚಿಕಾ (ಸ್ತ್ರೀ)=(ಇನ್ನೊಬ್ಬ) ಶಕ್ತಿದೇವತೆ ೪೯-೫೩.

---

[1] ಶೃಂಗಿನ್, ಭೃಂಗಿ, ರಿಟಿ, ರಿಟ, ಭೃಂಗಿರಿಟಿ ಎಂಬ ಶಬ್ದಾಂತರಗಳೂ ಉಂಟು. ಇವು ಬೇರೆ ಬೇರೆ ಪ್ರಮಥರ ಹೆಸರೆಂದೂ ನಂದಿಕೇಶ್ವರನ ಹೆಸರೆಂದೂ ಹೇಳುತ್ತಾರೆ.

ಸಂಕ್ರಂದನೋ ದುಶ್ಚ್ಯವನಸ್ತುರಾಷಾಣ್ಮೇಘವಾಹನಃ ।
ಪ್ರಾಚೀನಬರ್ಹಿರಹಿಹಾ ಪೃತನಾಷಾಟ್ಪುಲೋಮಜಿತ್ ॥ ೫೨
ಆಖಂಡಲಸ್ಸಹಸ್ರಾಕ್ಷಃ ಋಭುಕ್ಷಾಸ್ತಸ್ಯ ತು ಪ್ರಿಯಾ ।
ಪುಲೋಮಜಾ ಶಚೀಂದ್ರಾಣೀ ನಗರೀ ತ್ವಮರಾವತೀ ॥ ೫೩
ಹಯ ಉಚ್ಚೈಃಶ್ರವಾಸ್ಸೂತೋ ಮಾತಲಿರ್ನಂದನಂ ವನಮ್ ।
ಸ್ಯಾತ್ಪ್ರಾಸಾದೋ ವೈಜಯಂತೋ ಜಯಂತಃ ಪಾಕಶಾಸನಿಃ ॥ ೫೪
ಐರಾವತೋಽಭ್ರಮಾತಂಗೈರಾವಣಾಭ್ರಮುವಲ್ಲಭಾಃ ।
ಹ್ರಾದಿನೀ ವಜ್ರಮಸ್ತ್ರೀ ಸ್ಯಾತ್ಕುಲಿಶಂ ಭಿದುರಂ ಪವಿಃ ॥ ೫೫
ಶತಕೋಟಿಸ್ಸ್ವರುಶ್ಶಂಬೋ ದಂಭೋಲಿರಶನಿರ್ದ್ವಯೋಃ ।
ವ್ಯೋಮಯಾನಂ ವಿಮಾನೋಽಸ್ತ್ರೀ ನಾರದಾದ್ಯಾಸ್ಸುರರ್ಷಯಃ ॥ ೫೬
ಸ್ಯಾತ್ಸುಧರ್ಮಾ ದೇವಸಭಾ ಪೀಯೂಷಮಮೃತಂ ಸುಧಾ ।
ಮಂದಾಕಿನೀ ವಿಯದ್ಗಂಗಾ ಸ್ವರ್ಣದೀ ಸುರದೀರ್ಘಿಕಾ ॥ ೫೭

ಇಂದ್ರ, ಮರುತ್ವತ್, ಮಘವನ್[1], ಬಿಡೌಜಸ್, ಪಾಕಶಾಸನ, ವೃದ್ಧಶ್ರವಸ್, ಶುನಾಸೀರ (ಸುನಾಸೀರ), ಪುರುಹೂತ, ಪುರಂದರ, ಜಿಷ್ಣು, ಲೇಖರ್ಷಭ, ಶಕ್ರ, ಶತಮನ್ಯು, ದಿವಸ್ಪತಿ, ಸುತ್ರಾಮನ್, ಗೋತ್ರಭಿದ್, ವಜ್ರಿನ್, ವಾಸವ, ವೃತ್ರಹನ್, ವೃಷನ್, ವಾಸ್ತೋಷ್ಪತಿ, ಸುರಪತಿ, ಬಲಾರಾತಿ, ಶಚೀಪತಿ, ಜಂಭಭೇದಿನ್, ಹರಿಹಯ, ಸ್ವಾರಾಜ್, ನಮುಚಿಸೂದನ, ಸಂಕ್ರಂದನ, ದುಶ್ಚ್ಯವನ, ತುರಾಷಾಹ್, ಮೇಘವಾಹನ, ಪ್ರಾಚೀನ ಬರ್ಹಿಸ್, ಅಹಿಹನ್, ಪೃತನಾಷಾಹ್, ಪುಲೋಮಜಿತ್, ಆಖಂಡಲ, ಸಹಸ್ರಾಕ್ಷ, ಋಭುಕ್ಷಿನ್ (ಪು)=ದೇವೇಂದ್ರ. ೫೩-೫೪. ಪುಲೋಮಜಾ, ಶಚೀ, ಇಂದ್ರಾಣೀ (ಸ್ತ್ರೀ)= ದೇವೇಂದ್ರನ ಪತ್ನಿ. ಅಮರಾವತೀ (ಸ್ತ್ರೀ)=ಇಂದ್ರನ ಪಟ್ಟಣ. ಉಚ್ಚೈಃಶ್ರವಸ್ (ಪು)=ಇಂದ್ರನ ಅಶ್ವ. ಮಾತಲಿ (ಪು)=ಅವನ ಸಾರಥಿ. ನಂದನ (ನ)=ಅವನ ಉದ್ಯಾನವನ. ವೈಜಯಂತ (ಪು)=ಅವನ ಅರಮನೆ. ಜಯಂತ, ಪಾಕಶಾಸನಿ (ಪು)=ಇಂದ್ರನ ಮಗ. ೫೫-೫೬. ಐರಾವತ, ಅಭ್ರಮಾತಂಗ, ಐರಾವಣ, ಅಭ್ರಮುವಲ್ಲಭ (ಪು)=ಇಂದ್ರನ ಆನೆ. ಹ್ರಾದಿನೀ (ಸ್ತ್ರೀ), ವಜ್ರ (ಪು. ನ), ಕುಲಿಶ[2], ಭಿದುರ (ನ), ಪವಿ, ಶತಕೋಟಿ, ಸ್ವರು, ಶಂಬ, ದಂಭೋಲಿ

---

[1] ಮಘವತ್ ಎಂಬ ತಕಾರಾಂತವೂ ಇದೆ.

[2] ಇದಕ್ಕೆ ಪುಲ್ಲಿಂಗವೂ ಉಂಟು

ಮೇರುಸ್ಸುಮೇರುರ್ಹೇಮಾದ್ರೀ ರತ್ನಸಾನುಸ್ಸುರಾಲಯಃ ।
ಪಂಚೈತೇ ದೇವತರವೋ ಮಂದಾರಃ ಪಾರಿಜಾತಕಃ ॥ ೫೮
ಸಂತಾನಃ ಕಲ್ಪವೃಕ್ಷಶ್ಚ ಪುಂಸಿ ವಾ ಹರಿಚಂದನಮ್ ।
ಸನತ್ಕುಮಾರೋ ವೈಧಾತ್ರಃ ಸ್ವರ್ವೈದ್ಯಾವಶ್ವಿನೀಸುತೌ ॥ ೫೯
ನಾಸತ್ಯಾವಶ್ವಿನೌ ದಸ್ರಾವಾಶ್ವಿನೇಯೌ ಚ ತಾವುಭೌ ।
ಸ್ತ್ರಿಯಾಂ ಬಹುಷ್ವಪ್ಸರಸಃ ಸ್ವರ್ವೇಶ್ಯಾ ಉರ್ವಶೀಮುಖಾಃ ॥ ೬೦
ಉರ್ವಶೀ ಮೇನಕಾ ರಂಭಾ ಘೃತಾಚೀ ಚ ತಿಲೋತ್ತಮಾ ।
ಸುಕೇಶೀ ಮಂಜುಘೋಷಾದ್ಯಾಃ ಕಥ್ಯಂತೇಽಪ್ಸರಸೋ ಬುಧೈಃ ॥ ೬೧

(ಪು), ಅಶನಿ (ಪು. ಸ್ತ್ರೀ)=ವಜ್ರಾಯುಧ. ವ್ಯೋಮಯಾನ (ನ), ವಿಮಾನ (ಪು. ನ)=ವಿಮಾನ. ನಾರದ ಮೊದಲಾದವರು—ನಾರದ, ತುಂಬುರು, ಭರತ, ಪರ್ವತ, ದೇವಲ ಮೊದಲಾದವರು=ದೇವರ್ಷಿಗಳು. ೫೭. ಸುಧರ್ಮನ್, ಸುಧರ್ಮಾ (ಸ್ತ್ರೀ)=ದೇವಸಭೆ. ಪಿಯೂಷ, ಅಮೃತ (ನ), ಸುಧಾ (ಸ್ತ್ರೀ)=ಅಮೃತ. ಮಂದಾಕಿನೀ, ವಿಯದ್ಗಂಗಾ, ಸ್ವರ್ಣದೀ, ಸುರದೀರ್ಘಿಕಾ (ಸ್ತ್ರೀ)=ಗಂಗಾನದಿ. ೫೮-೫೯. ಮೇರು, ಸುಮೇರು, ಹೇಮಾದ್ರಿ, ರತ್ನಸಾನು, ಸುರಾಲಯ (ಪು)=ಮೇರುಪರ್ವತ. ಮಂದಾರ, ಪಾರಿಜಾತಕ, ಸಂತಾನ, ಕಲ್ಪವೃಕ್ಷ (ಪು), ಹರಿಚಂದನ (ಪು. ನ)=ಇವು ಐದು ಬೇರೆ ಬೇರೆ ದೇವವೃಕ್ಷಗಳು. ೫೯-೬೧. ಸನತ್ಕುಮಾರ, (ಪು)=ಬ್ರಹ್ಮಪುತ್ರನಾದ ಸನತ್ಕುಮಾರ. ಸ್ವರ್ವೈದ್ಯ, ಅಶ್ವಿನೀಸುತ, ವೈಧಾತ್ರ, ನಾಸತ್ಯ, ಅಶ್ವಿನ್, ದಸ್ರ, ಆಶ್ವಿನೇಯ[1] (ಪು)=ದೇವವೈದ್ಯರಾದ ಅಶ್ವಿನೀದೇವತೆಗಳು. ಅಪ್ಸರಸ್, (ಸ್ತ್ರೀ. ನಿತ್ಯ ಬಹುವಚನಾಂತ. ಏಕವಚನದಲ್ಲಿ ಪ್ರಯೋಗವೂ ಉಂಟು) ಸ್ವರ್ಗದಲ್ಲಿರುವ ಉರ್ವಶೀ ಮೊದಲಾದ ವೇಶ್ಯೆಯರು. ಉರ್ವಶೀ, ಮೇನಕಾ, ರಂಭಾ, ಘೃತಾಚೀ, ತಿಲೋತ್ತಮಾ, ಸುಕೇಶೀ, ಮಂಜುಘೋಷಾ (ಸ್ತ್ರೀ)=ಇವರು ಅಪ್ಸರೆಯರು.

---

[1] ಈ ಶಬ್ದಗಳು ಸಾಮಾನ್ಯವಾಗಿ ದ್ವಿವಚನದಲ್ಲಿರುತ್ತವೆ. ನಾಸತ್ಯ, ದಸ್ರ ಎಂಬ ಇವರಿಬ್ಬರು ಅಣ್ಣತಮ್ಮಂದಿರು. ಇಬ್ಬರನ್ನೂ ಬೋಧಿಸುವುದಕ್ಕಾಗಿ ನಾಸತ್ಯೌ, ದಸ್ರೌ ಎಂದು ದ್ವಿವಚನಾಂತವಾಗಿ ಪ್ರಯೋಗಿಸುವುದು ಗೌಣ.

ಹಾಹಾ ಹೂಹೂಶ್ಚೈವಮಾದ್ಯಾ ಗಂಧರ್ವಾಸ್ತ್ರಿದಿವೌಕಸಾಮ್ ।
ಅಗ್ನಿರ್ವೈಶ್ವಾನರೋ ವಹ್ನಿರ್ವೀತಿಹೋತ್ರೋ ಧನಂಜಯಃ ॥ ೬೨
ಕೃಪೀಟಯೋನಿರ್ಜ್ವಲನೋ ಜಾತವೇದಾಸ್ತನೂನಪಾತ್ ।
ಬರ್ಹಿಃಶುಷ್ಮಾ ಕೃಷ್ಣವರ್ತ್ಮಾ ಶೋಚಿಷ್ಕೇಶ ಉಷರ್ಬುಧಃ ॥ ೬೩
ಆಶ್ರಯಾಶೋ ಬೃಹದ್ಭಾನುಃ ಕೃಶಾನುಃ ಪಾವಕೋಽನಲಃ ।
ರೋಹಿತಾಶ್ವೋ ವಾಯುಸಖಶ್ಶಿಖಾವಾನಾಶುಶುಕ್ಷಣಿಃ ॥ ೬೪
ಹಿರಣ್ಯರೇತಾ ಹುತಭುಗ್ದಹನೋ ಹವ್ಯವಾಹನಃ ।
ಸಪ್ತಾರ್ಚಿರ್ದಮುನಾಶ್ಶುಕ್ರಶ್ಚಿತ್ರಭಾನುರ್ವಿಭಾವಸುಃ ॥ ೬೫
ಶುಚಿರಪ್ಪಿತ್ತಮೌರ್ವಸ್ತು ವಾಡವೋ ವಡವಾನಲಃ ।
ವಹ್ನೇರ್ದ್ವಯೋರ್ಜ್ವಾಲಕೀಲಾವರ್ಚಿರ್ಹೇತಿಶ್ಶಿಖಾ ಸ್ತ್ರಿಯಾಮ್ ॥ ೬೬
ತ್ರಿಷು ಸ್ಫುಲಿಂಗೋಽಗ್ನಿಕಣಸ್ಸಂತಾಪಸ್ಸಂಜ್ವರಸ್ಸಮೌ ।
ಉಲ್ಕಾ ಸ್ಯಾನ್ನಿರ್ಗತಜ್ವಾಲಾ ಭೂತಿರ್ಭಸಿತಭಸ್ಮನೀ ॥ ೬೭
ಕ್ಷಾರೋ ರಕ್ಷಾ ಚ ದಾವಸ್ತು ದವೋ ವನಹುತಾಶನಃ ।
ಧರ್ಮರಾಜಃ ಪಿತೃಪತಿಃ ಸಮವರ್ತೀ ಪರೇತರಾಟ್ ॥ ೬೮

೬೨-೬೬. ಹಾಹಾ, ಹೂಹೂ (ಪು)=ದೇವಲೋಕದ ಗಾಯಕರು. ಅಗ್ನಿ, ವೈಶ್ವಾನರ, ವಹ್ನಿ, ವೀತಿಹೋತ್ರ, ಧನಂಜಯ, ಕೃಪೀಟಯೋನಿ, ಜ್ವಲನ, ಜಾತವೇದಸ್, ತನೂನಪಾತ್, ಬರ್ಹಿಸ್, ಶುಷ್ಮನ್, ಕೃಷ್ಣವರ್ತ್ಮನ್, ಶೋಚಿಷ್ಕೇಶ, ಉಷರ್ಬುಧ, ಆಶ್ರಯಾಶ, ಬೃಹದ್ಭಾನು, ಕೃಶಾನು, ಪಾವಕ, ಅನಲ, ರೋಹಿತಾಶ್ವ, ವಾಯುಸಖ, ಶಿಖಾವತ್, ಆಶುಶುಕ್ಷಣಿ, ಹಿರಣ್ಯರೇತಸ್, ಹುತಭುಜ್, ದಹನ, ಹವ್ಯವಾಹನ, ಸಪ್ತಾರ್ಚಿಸ್, ದಮುನಸ್, ಶುಕ್ರ, ಚಿತ್ರಭಾನು, ವಿಭಾವಸು, ಶುಚಿ (ಪು), ಅಪ್ಪಿತ್ತ (ನ)=ಅಗ್ನಿ. ೬೬ ಔರ್ವ, ವಾಡವ, ವಡವಾನಲ (ಪು)=ಬಡಬಾಗ್ನಿ. ಜ್ವಾಲ, ಕೀಲ (ಪು. ಸ್ತ್ರೀ. ಸ್ತ್ರೀಲಿಂಗದಲ್ಲಿ ಜ್ವಾಲಾ, ಕೀಲಾ), ಅರ್ಚಿಸ್[1], ಹೇತಿ, ಶಿಖಾ (ಸ್ತ್ರೀ)=ಬೆಂಕಿಯ ಜ್ವಾಲೆ. ೬೭-೬೮. ಸ್ಫುಲಿಂಗ (ಪು. ನ. ಸ್ತ್ರೀ. ಸ್ತ್ರೀಲಿಂಗದಲ್ಲಿ ಸ್ಫುಲಿಂಗಾ), ಅಗ್ನಿಕಣ (ಪು)=ಬೆಂಕಿಯ ಕಿಡಿ, ಸಂತಾಪ, ಸಂಜ್ವರ (ಪು)=ಬಿಸಿ, ಔಷ್ಣ್ಯ. ಉಲ್ಕಾ (ಸ್ತ್ರೀ)=ಸಿಡಿದುಬಂದ ಜ್ವಾಲೆ. ಭೂತಿ (ಸ್ತ್ರೀ), ಭಸಿತ, ಭಸ್ಮನ್ (ನ), ಕ್ಷಾರ (ಪು), ರಕ್ಷಾ (ಸ್ತ್ರೀ)=ಬೂದಿ. ದಾವ, ದವ (ಪು)=ಕಾಳ್ಗಿಚ್ಚು. ಧರ್ಮರಾಜ,

---

[1] ಅರ್ಚಿಸ್ ಶಬ್ದಕ್ಕೆ ನಪುಂಸಕಲಿಂಗವೂ ಉಂಟು.

ಕೃತಾಂತೋ ಯಮುನಾಭ್ರಾತಾ ಶಮನೋ ಯಮರಾಡ್ಯಮಃ ।
ಕಾಲೋ ದಂಡಧರಃ ಶ್ರಾದ್ಧದೇವೋ ವೈವಸ್ವತೋಽಂತಕಃ ॥ ೬೯
ರಾಕ್ಷಸಃ ಕೌಣಪಃ ಕ್ರವ್ಯಾತ್ಕ್ರವ್ಯಾದೋಽಸ್ರಪ ಆಶರಃ ।
ರಾತ್ರಿಂಚರೋ ರಾತ್ರಿಚರಃ ಕರ್ವುರೋ ನಿಕಷಾತ್ಮಜಃ ॥ ೨೦
ಯಾತುಧಾನಃ ಪುಣ್ಯಜನೋ ನೈರ್ಋತೋ ಯಾತುರಕ್ಷಸೀ ।
ಪ್ರಚೇತಾ ವರುಣಃ ಪಾಶೀ ಯಾದಸಾಂಪತಿರಪ್ಪತಿಃ ॥ ೨೧
ಶ್ವಸನಃ ಸ್ಪರ್ಶನೋ ವಾಯುರ್ಮಾತರಿಶ್ವಾ ಸದಾಗತಿಃ ।
ಪೃಷದಶ್ವೋ ಗಂಧವಹೋ ಗಂಧವಾಹಾನಿಲಾಶುಗಾಃ ॥ ೨೨
ಸಮೀರಮಾರುತಮರುಜ್ಜಗತ್ಪ್ರಾಣಸಮೀರಣಾಃ ।
ನಭಸ್ವದ್ವಾತಪವನಪವಮಾನಪ್ರಭಂಜನಾಃ ॥ ೨೩
ಪ್ರಕಂಪನಶ್ಚಾತಿಬಲೋ ಜಂಝಾವಾತಸ್ಸವೃಷ್ಟಿಕಃ ।
ಪ್ರಾಣೋಽಪಾನಸ್ಸಮಾನಶ್ಚೋದಾನವ್ಯಾನೌ ಚ ವಾಯವಃ ॥ ೨೪
ಹೃದಿ ಪ್ರಾಣೋ ಗುದೇಽಪಾನಃ ಸಮಾನೋ ನಾಭಿಸಂಸ್ಥಿತಃ ।
ಉದಾನಃ ಕಂಠದೇಶಸ್ಥೋ ವ್ಯಾನಸ್ಸರ್ವಶರೀರಗಃ ॥ ೨೫

ಪಿತೃಪತಿ, ಸಮವರ್ತಿನ್, ಪರೇತರಾಜ್, ಕೃತಾಂತ, ಯಮುನಾಭ್ರಾತೃ, ಶಮನ, ಯಮರಾಜ್, ಯಮ, ಕಾಲ, ದಂಡಧರ, ಶ್ರಾದ್ಧದೇವ, ವೈವಸ್ವತ, ಅಂತಕ (ಪು)=ಯಮ. ೨೦-೨೧. ರಾಕ್ಷಸ, ಕೌಣಪ, ಕ್ರವ್ಯಾದ್, ಕ್ರವ್ಯಾದ, ಅಸ್ರಪ, ಆಶರ, ರಾತ್ರಿಂಚರ, ರಾತ್ರಿಚರ, ಕರ್ವುರ, ನಿಕಷಾತ್ಮಜ, ಯಾತುಧಾನ, ಪುಣ್ಯಜನ, ನೈರ್ಋತ (ಪು), ಯಾತು, ರಕ್ಷಸ್ (ನ)=ರಾಕ್ಷಸ, ನಿರ್ಋತಿ, ಪ್ರಚೇತಸ್, ವರುಣ, ಪಾಶಿನ್, ಯಾದಸಾಂಪತಿ, ಅಪ್ಪತಿ (ಪು)=ವರುಣ.

೨೨-೨೫. ಶ್ವಸನ, ಸ್ಪರ್ಶನ, ವಾಯು, ಮಾತರಿಶ್ವನ್, ಸದಾಗತಿ, ಪೃಷದಶ್ವ, ಗಂಧವಹ, ಗಂಧವಾಹ, ಅನಿಲ, ಆಶುಗ, ಸಮೀರ, ಮಾರುತ, ಮರುತ್[1] ಜಗತ್ಪ್ರಾಣ, ಸಮೀರಣ, ನಭಸ್ವತ್, ವಾತ, ಪವನ, ಪವಮಾನ, ಪ್ರಭಂಜನ, ಪ್ರಕಂಪನ, ಅತಿಬಲ (ಪು)=ವಾಯು. ಜಂಝಾವಾತ (ಪು)=ಮಳೆಯಿಂದ ಕೂಡಿದ ಗಾಳಿ. ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ (ಪು)=ಇವು ದೇಹದಲ್ಲಿರುವ ಪಂಚವಾಯುಗಳು. ಹೃದಯದಲ್ಲಿರುವ ವಾಯು ಪ್ರಾಣ, ಗುದಸ್ಥಾನದಲ್ಲಿರುವುದು ಅಪಾನ, ನಾಭಿಯಲ್ಲಿ ಸಮಾನ, ಕಂಠದೇಶದಲ್ಲಿ ಉದಾನ,

---

[1] ಮರುತ ಎಂಬ ಅಕಾರಾಂತವೂ ಉಂಟು.

ನಾಗಶ್ಚ ಕೂರ್ಮಃ ಕೃಕರೋ ದೇವದತ್ತೋ ಧನಂಜಯಃ ।
ವಾಗ್ದ್ವಾರೇ ನಾಗ ಆಖ್ಯಾತಃ ಕೂರ್ಮ ಉನ್ಮೀಲನೇ ಸ್ಮೃತಃ ॥ ೭೬
ಕೃಕರಾಚ್ಚ ಕ್ಷುತಂ ಜ್ಞೇಯಂ ದೇವದತ್ತಾದ್ವಿಜೃಂಭಣಮ್ ।
ನ ಜಹಾತಿ ಮೃತಂ ವಾಪಿ ಸರ್ವವ್ಯಾಪೀ ಧನಂಜಯಃ ॥ ೭೭
ಶರೀರಸ್ಥಾ ಇಮೇ ರಂಹಸ್ತರಸೀ ತು ರಯಃ ಸ್ಯದಃ ।
ಜವೋಽಥ ಶೀಘ್ರಂ ತ್ವರಿತಂ ಲಘು ಕ್ಷಿಪ್ರಮರಂ ದ್ರುತಮ್ ॥ ೭೮
ಸತ್ವರಂ ಚಪಲಂ ತೂರ್ಣಮವಿಲಂಬಿತಮಾಶು ಚ ।
ಸತತಾನಾರತಾಶ್ರಾಂತಸಂತತಾವಿರತಾನಿಶಮ್ ॥ ೭೯
ನಿತ್ಯಾನವರತಾಜಸ್ರಮಪ್ಯಥಾತಿಶಯೋ ಭರಃ ।
ಅತಿವೇಲಭೃಶಾತ್ಯರ್ಥಾತಿಮಾತ್ರೋದ್ಗಾಢನಿರ್ಭರಮ್ ॥ ೮೦
ತೀವ್ರೈಕಾಂತನಿತಾಂತಾನಿ ಗಾಢಬಾಢದೃಢಾನಿ ಚ ।
ಕ್ಲೀಬೇ ಶೀಘ್ರಾದ್ಯಸತ್ತ್ವೇ ಸ್ಯಾತ್ತ್ರಿಷ್ವೇಷಾಂ ಭೇದ್ಯಗಾಮಿ ಯತ್ ॥ ೮೧
ಕುಬೇರಸ್ತ್ರ್ಯಂಬಕಸಖೋ ಯಕ್ಷರಾಡ್ಗುಹ್ಯಕೇಶ್ವರಃ ।
ಮನುಷ್ಯಧರ್ಮಾ ಧನದೋ ರಾಜರಾಜೋ ಧನಾಧಿಪಃ ॥ ೮೨

ಸರ್ವಶರೀರವ್ಯಾಪಿಯಾದದ್ದು ವ್ಯಾನ. ೭೬-೭೭. ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ=ಇವು ಪಂಚ ಉಪವಾಯುಗಳು, ಬಾಯಲ್ಲಿರುವ ವಾಯು ನಾಗ, ರೆಪ್ಪೆಯನ್ನು ಹೊಡೆಯಿಸುವುದು ಕೂರ್ಮ, ಸೀನುವಂತೆ ಮಾಡುವ ವಾಯು ಕೃಕರ, ಆಕಳಿಸುವಂತೆ ಮಾಡುವುದು ದೇವದತ್ತ, ಮನುಷ್ಯನು ಮೃತನಾದರೂ ದೇಹವನ್ನು ವ್ಯಾಪಿಸಿ ಇರತಕ್ಕದ್ದು ಧನಂಜಯ.

೭೮-೮೧. ರಂಹಸ್, ತರಸ್ (ನ), ರಯ, ಸ್ಯದ, ಜವ (ಪು)=ವೇಗ (Speed, Velocity). ಶೀಘ್ರ, ತ್ವರಿತ, ಲಘು, ಕ್ಷಿಪ್ರ, ಅರ, ದ್ರುತ, ಸತ್ವರ, ಚಪಲ, ತೂರ್ಣ, ಅವಿಲಂಬಿತ, ಆಶು (ನ)=ವೇಗವುಳ್ಳದ್ದು (Quick, Speedy); ಬೇಗನೆ (Quickly, Speedily) (ಕ್ರಿ. ವಿ.) ಸತತ, ಅನಾರತ, ಅಶ್ರಾಂತ, ಸಂತತ, ಅವಿರತ, ಅನಿಶ, ನಿತ್ಯ, ಅನವರತ, ಅಜಸ್ರ (ನ)=ನಿತ್ಯ, ನಿರಂತರ, ಎಡಬಿಡದ ; ನಿತ್ಯವಾಗಿ ಎಡಬಿಡದೆ. ಅತಿಶಯ, ಭರ (ಪು), ಅತಿವೇಲ, ಭೃಶ, ಅತ್ಯರ್ಥ, ಅತಿಮಾತ್ರ, ಉದ್ಗಾಢ, ನಿರ್ಭರ, ತೀವ್ರ, ಏಕಾಂತ, ನಿತಾಂತ, ಗಾಢ, ಬಾಢ, ದೃಢ (ನ)=ಅತಿಶಯ, ಹೆಚ್ಚು. ಮೇಲ್ಕಂಡವುಗಳಲ್ಲಿ ಶೀಘ್ರ ಶಬ್ದದಿಂದ ದೃಢ ಶಬ್ದದವರೆಗಿರುವವುಗಳು ದ್ರವ್ಯವಾಚಿಗಳಲ್ಲದಿದ್ದರೆ-ತಿಜಂತ ವಿಶೇಷಣಗಳಾಗಿದ್ದರೆ, ನಪುಂಸಕಗಳು:—ಶೀಘ್ರಂ ಗಚ್ಛತಿ, ಸತತಂ ಪಠತಿ. ದ್ರವ್ಯವಾಚಿಗಳಾಗಿದ್ದರೆ-

ಕಿನ್ನರೇಶೋ ವೈಶ್ರವಣಃ ಪೌಲಸ್ತ್ಯೋ ನರವಾಹನಃ ।
ಯಕ್ಷೈಕಪಿಂಗೈಲವಿಲಶ್ರೀದಪುಣ್ಯಜನೇಶ್ವರಾಃ ॥ ೮೩
ಅಸ್ಯೋದ್ಯಾನಂ ಚೈತ್ರರಥಂ ಪುತ್ರಸ್ತು ನಲಕೂಬರಃ ।
ಕೈಲಾಸಸ್ಥಾನಮಲಕಾ ಪೂರ್ವಿಮಾನಂ ತು ಪುಷ್ಪಕಮ್ ॥ ೮೪
ಸ್ಯಾತ್ಕಿನ್ನರಃ ಕಿಂಪುರುಷಸ್ತುರಂಗವದನೋ ಮಯುಃ ।
ನಿಧಿರ್ನಾ ಶೇವಧಿರ್ಭೇದಾಃ ಪದ್ಮಶಂಖಾದಯೋ ನಿಧೇಃ ॥ ೮೫
ಮಹಾಪದ್ಮಶ್ಚ ಪದ್ಮಶ್ಚ ಶಂಖೋ ಮಕರಕಚ್ಛಪೌ ।
ಮುಕುಂದಕುಂದನೀಲಾಶ್ಚ ಖರ್ವಶ್ಚ ನಿಧಯೋ ನವ ॥ ೮೬

ಇತಿ ಸ್ವರ್ಗವರ್ಗಃ

೨. ವ್ಯೋಮವರ್ಗಃ

ದ್ಯೋದಿವೌ ದ್ವೇ ಸ್ತ್ರಿಯಾಮಭ್ರಂ ವ್ಯೋಮ ಪುಷ್ಕರಮಂಬರಮ್ ।
ನಭೋಽಂತರಿಕ್ಷಂ ಗಗನಮನಂತಂ ಸುರವರ್ತ್ಮ ಖಮ್ ॥ ೮೭

ನಾಮ ವಿಶೇಷಣಗಳಾಗಿದ್ದರೆ, ವಿಶೇಷ್ಯ ನಿಘ್ನಗಳು :—ಶೀಘ್ರಾ ಜರಾ, ಸತತಃ ಸಂಸಾರಃ. (ಅತಿಶಯ, ಭರ ಶಬ್ದಗಳು ವಿಶೇಷ್ಯವಾಗಿಯೂ ಪ್ರಯೋಗಿಸಲ್ಪಡುತ್ತವೆ :-ವರ್ಣಾನಾತಿಶಯರಃ, ಸಂತೋಷಭರಃ). ೮೨-೮೩. ಕುಬೇರ, ತ್ರ್ಯಂಬಕಸಖ, ಯಕ್ಷರಾಜ್, ಗುಹ್ಯಕೇಶ್ವರ, ಮನುಷ್ಯಧರ್ಮನ್, ಧನದ, ರಾಜರಾಜ, ಧನಾಧಿಪ, ಕಿನ್ನರೇಶ, ವೈಶ್ರವಣ, ಪೌಲಸ್ತ್ಯ, ನರವಾಹನ, ಯಕ್ಷ, ಏಕಪಿಂಗ, ಐಲವಿಲ, ಶ್ರೀದ, ಪುಣ್ಯಜನೇಶ್ವರ (ಪು)=ಕುಬೇರ. ೮೪. ಚೈತ್ರರಥ (ನ)=ಕುಬೇರನ ಉದ್ಯಾನ. ನಲಕೂಬರ (ಪು)=ಅವನ ಮಗ. ಕೈಲಾಸ (ಪು)=ಅವನ ವಾಸಪ್ರದೇಶ. ಅಲಕಾ (ಸ್ತ್ರೀ)=ಅವನ ಪಟ್ಟಣ. ಪುಷ್ಪಕ (ನ)=ಕುಬೇರನ ವಿಮಾನ. ೮೫-೮೬. ಕಿನ್ನರ, ಕಿಂಪುರುಷ, ತುರಂಗವದನ, ಮಯು (ಪು)=ಕಿನ್ನರ. ನಿಧಿ, ಶೇವಧಿ (ಪು)=ನಿಧಿ. ಪದ್ಮ, ಶಂಖ ಮೊದಲಾದವು ನಿಧಿವಿಶೇಷಗಳು. ಮಹಾಪದ್ಮ, ಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ, ನೀಲ, ಖರ್ವ (ಪು)=ಒಂಬತ್ತು ನಿಧಿವಿಶೇಷಗಳು.

ವ್ಯೋಮವರ್ಗ

೮೭-೮೯. ದ್ಯೋ, ದಿವ್ (ಸ್ತ್ರೀ), ಅಭ್ರ, ವ್ಯೋಮನ್, ಪುಷ್ಕರ, ಅಂಬರ, ನಭಸ್, ಅಂತರಿಕ್ಷ, ಗಗನ, ಅನಂತ, ಸುರವರ್ತ್ಮನ್, ಖ, ವಿಯತ್, ವಿಷ್ಣುಪದ (ನ), ಆಕಾಶ,

ವಿಯದ್ವಿಷ್ಣುಪದಂ ವಾ ತು ಪುಂಸ್ಯಾಕಾಶವಿಹಾಯಸೀ ।
ವಿಹಾಯಸೋऽಪಿ ನಾಕೋऽಪಿ ದ್ಯುರಪಿ ಸ್ಯಾತ್ತದವ್ಯಯಮ್ ॥ ೮೮
ತಾರಾಪಥಶ್ಶಬ್ದಗುಣೋ ಮೇಘದ್ವಾರಂ ಮಹಾಬಿಲಮ್ ।

ಇತಿ ವ್ಯೋಮವರ್ಗಃ

೩. ದಿಗ್ವರ್ಗಃ

ದಿಶಸ್ತು ಕಕುಭಃ ಕಾಷ್ಠಾ ಆಶಾಶ್ಚ ಹರಿತಶ್ಚ ತಾಃ ॥ ೮೯
ಪ್ರಾಚ್ಯವಾಚೀಪ್ರತೀಚ್ಯಸ್ತಾಃ ಪೂರ್ವದಕ್ಷಿಣಪಶ್ಚಿಮಾಃ ।
ಉತ್ತರಾ ದಿಗುದೀಚೀ ಸ್ಯಾದ್ದಿಶ್ಯಂ ತು ತ್ರಿಷು ದಿಗ್ಭವೇ ॥ ೯೦
ಅವಾಗ್ಭವಮವಾಚೀನಮುದೀಚೀನಮುದಗ್ಭವಮ್ ।
ಪ್ರತ್ಯಗ್ಭವಂ ಪ್ರತೀಚೀನಂ ಪ್ರಾಚೀನಂ ಪ್ರಾಗ್ಭವಂ ತ್ರಿಷು ॥ ೯೧

ವಿಹಾಯಸ್ (ಪು. ನ.) ವಿಹಾಯಸ, ನಾಕ (ಪು), ದ್ಯುಸ್ (ಅವ್ಯಯ), ತಾರಾಪಥ, ಶಬ್ದಗುಣ (ಪು), ಮೇಘದ್ವಾರ, ಮಹಾಬಿಲ (ನ)=ಆಕಾಶ.

ದಿಗ್ವರ್ಗ

೮೯-೯೧. ದಿಶ್, ಕಕುಭ್, ಕಾಷ್ಠಾ, ಆಶಾ, ಹರಿತ್=ದಿಕ್ಕು. ಪ್ರಾಚೀ, ಅವಾಚೀ[1], ಪ್ರತೀಚೀ (ಸ್ತ್ರೀ)=ಇವು ಕ್ರಮವಾಗಿ ಪೂರ್ವ, ದಕ್ಷಿಣ, ಪಶ್ಚಿಮ ದಿಕ್ಕುಗಳು. ಪೂರ್ವಾ, ದಕ್ಷಿಣಾ, ಪಶ್ಚಿಮಾ (ಸ್ತ್ರೀ) ಎಂದೂ ಕ್ರಮವಾಗಿ ಇವುಗಳ ಹೆಸರು. ಉತ್ತರಾ, ಉದೀಚೀ (ಸ್ತ್ರೀ)=ಉತ್ತರದಿಕ್ಕು. ದಿಶ್ಯ (ಪು. ಸ್ತ್ರೀ. ನ—ವಿಶೇಷ್ಯನಿಘ್ನ)=ದಿಕ್ಕಿನಲ್ಲಿ ಹುಟ್ಟಿದುದು, ದಿಕ್ಕಿನಲ್ಲಿ ಇರತಕ್ಕದ್ದು. ಅವಾಚೀನ=ದಕ್ಷಿಣ ದಿಕ್ಕಿನಲ್ಲಿ ಇರತಕ್ಕದ್ದು, ಉದೀಚೀನ=ಉತ್ತರ ದಲ್ಲಿ ಇರತಕ್ಕದ್ದು, ಪ್ರತೀಚೀನ=ಪಶ್ಚಿಮದಲ್ಲಿ ಇರತಕ್ಕದ್ದು, ಪ್ರಾಚೀನ=ಪೂರ್ವದಿಕ್ಕಿನಲ್ಲಿ ಇರತಕ್ಕದ್ದು. ಅವಾಚೀನ ಮೊದಲಾದ ನಾಲ್ಕು ಶಬ್ದಗಳು. ತ್ರಿಲಿಂಗಗಳು-ವಿಶೇಷ್ಯನಿಘ್ನ. ಸ್ತ್ರೀ—ಅವಾಚೀನಾ ಇತ್ಯಾದಿ.

---

[1] ಇದು ಅಪಪಾಠವೆಂದೂ ಅಪಾಚೀ ಎಂಬುದೇ ಸರಿಯೆಂದೂ ಅಮರಸುಧಾವ್ಯಾಖ್ಯಾನದಲ್ಲಿ ಹೇಳಿದೆ.

ಇಂದ್ರೋ ವಹ್ನಿಃ ಪಿತೃಪತಿರ್ನೈರ್ಋತೋ ವರುಣೋ ಮರುತ್ ।
ಕುಬೇರ ಈಶಃ ಪತಯಃ ಪೂರ್ವಾದೀನಾಂ ದಿಶಾಂ ಕ್ರಮಾತ್ ॥ ೯೨
ಐರಾವತಃ ಪುಂಡರೀಕೋ ವಾಮನಃ ಕುಮುದೋಽಂಜನಃ ।
ಪುಷ್ಪದಂತಸ್ಸಾರ್ವಭೌಮಸ್ಸುಪ್ರತೀಕಶ್ಚ ದಿಗ್ಗಜಾಃ ॥ ೯೩
ಕರಿಣ್ಯೋಽಭ್ರಮುಕಪಿಲಾಪಿಂಗಲಾನುಪಮಾಃ ಕ್ರಮಾತ್ ।
ತಾಮ್ರಕರ್ಣೀ ಶುಭ್ರದಂತೀ ಚಾಂಗನಾ ಚಾಂಜನಾವತೀ ॥ ೯೪
ಕ್ಲೀಬಾವ್ಯಯಂ ತ್ವಪದಿಶಂ ದಿಶೋರ್ಮಧ್ಯೇ ವಿದಿಕ್ ಸ್ತ್ರಿಯಾಮ್ ।
ಅಭ್ಯಂತರಂ ತ್ವಂತರಾಲಂ ಚಕ್ರವಾಲಂ ತು ಮಂಡಲಮ್ ॥ ೯೫
ಅಭ್ರಂ ಮೇಘೋ ವಾರಿವಾಹಃ ಸ್ತನಯಿತ್ನುರ್ಬಲಾಹಕಃ ।
ಧಾರಾಧರೋ ಜಲಧರಸ್ತಟಿತ್ವಾನ್ವಾರಿದೋಽಂಬುಭೃತ್ ॥ ೯೬
ಘನಜೀಮೂತಮುದಿರಜಲಮುಗ್ಧೂಮಯೋನಯಃ ।
ಕಾದಂಬಿನೀ ಮೇಘಮಾಲಾ ತ್ರಿಷು ಮೇಘಭವೇಽಭ್ರಿಯಮ್ ॥ ೯೭

---

೯೨. ಇಂದ್ರ, ವಹ್ನಿ, ಯಮ, ನೈರ್ಋತ, ವರುಣ, ವಾಯು, ಕುಬೇರ, ಈಶಾನ (ಪು)=ಇವರು ಪೂರ್ವಾದಿ ಅಷ್ಟದಿಕ್ಕುಗಳಿಗೆ ಕ್ರಮವಾಗಿ ಅಧಿಪತಿಗಳು. ೯೩. ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ (ಪು)=ಇವು ಪೂರ್ವಾದಿ ಅಷ್ಟದಿಕ್ಕುಗಳಲ್ಲಿ ಕ್ರಮವಾಗಿ ಇರುವ ದಿಗ್ಗಜಗಳು. ೯೪. ಅಭ್ರಮು, ಕಪಿಲಾ, ಪಿಂಗಲಾ, ಅನುಪಮಾ, ತಾಮ್ರಕರ್ಣೀ, ಶುಭ್ರದಂತೀ, ಅಂಗನಾ, ಅಂಜನಾವತೀ (ಸ್ತ್ರೀ)=ಇವು ಕ್ರಮವಾಗಿ ಅಷ್ಟದಿಗ್ಗಜಗಳ ಹೆಣ್ಣಾನೆಗಳು. ೯೫. ಅಪದಿಶ (ನ. ಅವ್ಯಯ), ವಿದಿಶ್ (ಸ್ತ್ರೀ)=ಎರಡು ದಿಕ್ಕುಗಳ ಮಧ್ಯಭಾಗ, ನಡುವಿನ ದಿಕ್ಕು, ಆಗ್ನೇಯಾದಿ ಕೋಣ, ಮೂಲೆ. ಅಭ್ಯಂತರ, ಅಂತರಾಲ (ನ)=ಮಧ್ಯ. ಚಕ್ರವಾಲ, ಮಂಡಲ (ನ)=ಗುಂಡಾದ ಆಕೃತಿ = ವಸ್ತು (globe, ring). ೯೬-೯೭. ಅಭ್ರ (ನ), ಮೇಘ, ವಾರಿವಾಹ, ಸ್ತನಯಿತ್ನು, ಬಲಾಹಕ, ಧಾರಾಧರ, ಜಲಧರ, ತಟಿತ್ವತ್, ವಾರಿದ, ಅಂಬುಭೃತ್, ಘನ, ಜೀಮೂತ, ಮುದಿರ, ಜಲಮುಚ್, ಧೂಮಯೋನಿ (ಪು)=ಮೋಡ. ಕಾದಂಬಿನೀ, ಮೇಘಮಾಲಾ (ಸ್ತ್ರೀ)=ಮೋಡಗಳ ಸಾಲು. ಅಭ್ರಿಯ (ತ್ರಿ-ವಿಶೇಷ್ಯನಿಘ್ನ)=ಮೋಡದಲ್ಲಿ ಉಂಟಾದದ್ದು.

ಸ್ತನಿತಂ ಗರ್ಜಿತಂ ಮೇಘನಿರ್ಘೋಷೋ ರಸಿತಾದಿ ಚ ।
ಶಂಪಾ ಶತಹ್ರದಾ ಹ್ರಾದಿನ್ಯೈರಾವತ್ಯಃ ಕ್ಷಣಪ್ರಭಾ ॥ ೯೮
ತಡಿತ್ಸೌದಾಮನೀ ವಿದ್ಯುಚ್ಚಂಚಲಾ ಚಪಲಾ ಅಪಿ ।
ಸ್ಫೂರ್ಜಥುರ್ವಜ್ರನಿರ್ಘೋಷೇ ಮೇಘಜ್ಯೋತಿರಿರಮ್ಮದಃ ॥ ೯೯
ಇಂದ್ರಾಯುಧಂ ಶಕ್ರಧನುಃ ತದೇವ ಋಜು ರೋಹಿತಮ್ ।
ವೃಷ್ಟಿರ್ವರ್ಷಂ ತದ್ವಿಘಾತೇಽವಗ್ರಾಹಾವಗ್ರಹೌ ಸಮೌ ॥ ೧೦೦
ಧಾರಾಸಂಪಾತ ಆಸಾರಶ್ಶೀಕರೋಽಂಬುಕಣಸ್ಸ್ಮೃತಃ ।
ವರ್ಷೋಪಲಸ್ತು ಕರಕೋ ಮೇಘಚ್ಛನ್ನೇಽಹ್ನಿ ದುರ್ದಿನಮ್ ॥ ೧೦೧
ಅಂತರ್ಧಾ ವ್ಯವಧಾ ಪುಂಸಿ ತ್ವಂತರ್ಧಿರಪವಾರಣಮ್ ।
ಅಪಿಧಾನತಿರೋಧಾನಪಿಧಾನಾಚ್ಛಾದನಾನಿ ಚ ॥ ೧೦೨
ಹಿಮಾಂಶುಶ್ಚಂದ್ರಮಾಶ್ಚಂದ್ರ ಇಂದುಃ ಕುಮುದಬಾಂಧವಃ ।
ವಿಧುಸ್ಸುಧಾಂಶುಶ್ಶುಭ್ರಾಂಶುರೋಷಧೀಶೋ ನಿಶಾಪತಿಃ ॥ ೧೦೩

೯೮-೯೯. ಸ್ತನಿತ, ಗರ್ಜಿತ, ಮೇಘನಿರ್ಘೋಷ, ರಸಿತ (ನ)=ಗುಡುಗು. ಶಂಪಾ, ಶತಹ್ರದಾ, ಹ್ರಾದಿನೀ, ಐರಾವತೀ, ಕ್ಷಣಪ್ರಭಾ ತಡಿ[1]ತ್, ಸೌದಾಮನೀ, ವಿದ್ಯುತ್, ಚಂಚಲಾ, ಚಪಲಾ (ಸ್ತ್ರೀ)=ಮಿಂಚು. ಸ್ಫೂರ್ಜಥು, ವಜ್ರನಿರ್ಘೋಷ (ಪು)=ಸಿಡಿಲಿನ ಶಬ್ದ. ಮೇಘಜ್ಯೋತಿಸ್ (ನ), ಇರಂಮದ (ಪು)=ಸಿಡಿಲಿನಿಂದ ಹೊರಟ ಬೆಂಕಿ. ೧೦೦. ಇಂದ್ರಾಯುಧ, ಶಕ್ರಧನುಸ್ (ನ)=ಕಾಮನಬಿಲ್ಲು. ರೋಹಿತ (ನ)=ನೆಟ್ಟಗಿರುವ ಕಾಮನ ಬಿಲ್ಲು. ವೃಷ್ಟಿ (ಸ್ತ್ರೀ), ವರ್ಷ[2] (ನ)=ಮಳೆ. ಅವಗ್ರಾಹ, ಅವಗ್ರಹ (ಪು)=ಬರಗಾಲ, ಅನಾವೃಷ್ಟಿ, ಮಳೆ ಬರದಿರುವುದು. ೧೦೧. ಧಾರಾಸಂಪಾತ, ಆಸಾರ (ಪು)=ಧಾರಾಕಾರವಾದ ಮಳೆ, ಜಡಿಮಳೆ. ಶೀಕರ (ಸೀಕರ), ಅಂಬುಕಣ (ಪು)=ನೀರಿನ ಹನಿ. ಹರ್ಷೋಪಲ, ಕರಕ (ಪು)=ಆಲಿಕಲ್ಲು. ದುರ್ದಿನ (ನ)=ಮೋಡಮುಚ್ಚಿದ ದಿನ. ೧೦೨. ಅಂತರ್ಧಾ, ವ್ಯವಧಾ (ಸ್ತ್ರೀ), ಅಂತರ್ಧಿ (ಪು.) ಅಪವಾರಣ, ಅಪಿಧಾನ, ತಿರೋಧಾನ, ಪಿಧಾನ, ಆಚ್ಛಾದನ (ನ)=ಮುಚ್ಚುವಿಕೆ, ಮರೆ. ೧೦೩-೧೦೪. ಹಿಮಾಂಶು, ಚಂದ್ರಮಸ್, ಚಂದ್ರ, ಇಂದು, ಕುಮುದಬಾಂಧವ, ವಿಧು, ಸುಧಾಂಶು, ಶುಭ್ರಾಂಶು, ಓಷಧೀಶ, ನಿಶಾಪತಿ, ಅಬ್ಜ,

---

[1] ತಟಿತ್ ಎಂಬ ರೂಪವೂ ಉಂಟು. [2] ಇದಕ್ಕೆ ಪುಲ್ಲಿಂಗವೂ ಉಂಟು.

ಅಬ್ಜೋ ಜೈವಾತೃಕಸ್ಸೋಮೋ ಗ್ಲೌರ್ಮೃಗಾಂಕಃ ಕಲಾನಿಧಿಃ ।
ದ್ವಿಜರಾಜಶ್ಶಶಧರೋ ನಕ್ಷತ್ರೇಶಃ ಕ್ಷಪಾಕರಃ ॥ ೧೦೪
ಕಲಾ ತು ಷೋಡಶೋ ಭಾಗೋ ಬಿಂಬೋಽಸ್ತ್ರೀ ಮಂಡಲಂ ತ್ರಿಷು ।
ಭಿತ್ತಂ ಶಕಲಖಂಡೇ ವಾ ಪುಂಸ್ಯರ್ಧೋಽರ್ಧಂ ಸಮೇಂಽಶಕೇ ॥ ೧೦೫
ಚಂದ್ರಿಕಾ ಕೌಮುದೀ ಜ್ಯೋತ್ಸ್ನಾ ಪ್ರಸಾದಸ್ತು ಪ್ರಸನ್ನತಾ ।
ಕಲಂಕಾಂಕೌ ಲಾಂಛನಂ ಚ ಚಿಹ್ನಂ ಲಕ್ಷ್ಮ ಚ ಲಕ್ಷಣಮ್ ॥ ೧೦೬
ಪಾಲಿಃ ಕೇತುರ್ಧ್ವಜೋ ಲಿಂಗಂ ನಿಮಿತ್ತಂ ವ್ಯಂಜನಂ ಪದಮ್ ।
ಪ್ರಜ್ಞಾನಂ ಚಾಪ್ಯಭಿಜ್ಞಾನಂ ಲಲಾಮಂ ಚ ಲಲಾಮ ಚ ॥ ೧೦೭
ಸುಷಮಾ ಪರಮಾ ಶೋಭಾ ಶೋಭಾ ಕಾಂತಿರ್ದ್ಯುತಿಶ್ಛವಿಃ ।
ಅವಶ್ಯಾಯಸ್ತು ನೀಹಾರಸ್ತುಷಾರಸ್ತುಹಿನಂ ಹಿಮಮ್ ॥ ೧೦೮
ಪ್ರಾಲೇಯಂ ಮಿಹಿಕಾ ಚಾಥ ಹಿಮಾನೀ ಹಿಮಸಂಹತಿಃ ।
ಶೀತಂ ಗುಣೇ ತದ್ವದರ್ಥಾಸ್ಸುಷೀಮಶ್ಶಿಶಿರೋ ಜಡಃ ॥ ೧೦೯
ತುಷಾರಶ್ಶೀತಲಶ್ಶೀತೋ ಹಿಮಸ್ಸಪ್ತಾನ್ಯಲಿಂಗಕಾಃ ।
ಧ್ರುವ ಔತ್ತಾನಪಾದಿಃ ಸ್ಯಾದಗಸ್ತ್ಯಃ ಕುಂಭಸಂಭವಃ ॥ ೧೧೦

ಜೈವಾತೃಕ, ಸೋಮ, ಗ್ಲೌ, ಮೃಗಾಂಕ, ಕಲಾನಿಧಿ, ದ್ವಿಜರಾಜ, ಶಶಧರ, ನಕ್ಷತ್ರೇಶ, ಕ್ಷಪಾಕರ (ಪು)=ಚಂದ್ರ. ೧೦೫. ಕಲಾ (ಸ್ತ್ರೀ)=ಚಂದ್ರಮಂಡಲದ ಹದಿನಾರನೆಯ ಒಂದು ಭಾಗ, ಏಕಾಂಶ. ಬಿಂಬ (ಪು. ನ), ಮಂಡಲ (ತ್ರಿ)=ಸೂರ್ಯ ಚಂದ್ರರ ಮಂಡಲ (Disc). ಭಿತ್ತ (ನ), ಶಕಲ, ಖಂಡ, ಅರ್ಧ (ಪು.ನ)=ತುಂಡು, ಚೂರು. ಅರ್ಧ (ನ)=ಸಮಭಾಗ, ಸರಿಯಾದ ಅರ್ಧ. ೧೦೬-೧೦೭. ಚಂದ್ರಿಕಾ, ಕೌಮುದೀ, ಜ್ಯೋತ್ಸ್ನಾ (ಸ್ತ್ರೀ)=ಬೆಳದಿಂಗಳು. ಪ್ರಸಾದ (ಪು), ಪ್ರಸನ್ನತಾ (ಸ್ತ್ರೀ)=ನೈರ್ಮಲ್ಯ, ಶುದ್ಧತೆ. ಕಲಂಕ, ಅಂಕ (ಪು), ಲಾಂಛನ, ಚಿಹ್ನ, ಲಕ್ಷ್ಮನ್, ಲಕ್ಷಣ (ನ), ಪಾಲಿ, ಕೇತು, ಧ್ವಜ (ಪು), ಲಿಂಗ, ನಿಮಿತ್ತ, ವ್ಯಂಜನ, ಪದ, ಪ್ರಜ್ಞಾನ, ಅಭಿಜ್ಞಾನ, ಲಲಾಮ, ಲಲಾಮನ್ (ನ)=ಚಿಹ್ನೆ, ಗುರುತು. ೧೦೮-೧೦೯. ಸುಷಮಾ (ಸ್ತ್ರೀ)=ಉತ್ಕೃಷ್ಟವಾದ ಕಾಂತಿ. ಶೋಭಾ, ಕಾಂತಿ, ದ್ಯುತಿ, ಛವಿ (ಸ್ತ್ರೀ)=ಕಾಂತಿ. ಅವಶ್ಯಾಯ, ನೀಹಾರ, ತುಷಾರ (ಪು), ತುಹಿನ, ಹಿಮ, ಪ್ರಾಲೇಯ (ನ), ಮಿಹಿಕಾ (ಸ್ತ್ರೀ)=ಹಿಮ, ಮಂಜು. ಹಿಮಾನೀ, ಹಿಮಸಂಹತಿ (ಸ್ತ್ರೀ)=ಮಂಜಿನ ರಾಶಿ. ೧೦೯-೧೧೧. ಶೀತ (ನ)=ಶೈತ್ಯ, ತಂಪು. ಸುಷೀಮ, ಶಿಶಿರ, ಜಡ, ತುಷಾರ, ಶೀತಲ,

ಮೈತ್ರಾವರುಣಿರಸ್ಯೈವ ಲೋಪಾಮುದ್ರಾ ಸಧರ್ಮಿಣೀ ।
ನಕ್ಷತ್ರಮೃಕ್ಷಂ ಭಂ ತಾರಾ ತಾರಕಾ ಽಪ್ಯುಡು ವಾ ಸ್ತ್ರಿಯಾಮ್ ॥ ೧೧೧
ದಾಕ್ಷಾಯಣ್ಯೋಽಶ್ವಿನೀತ್ಯಾದಿ ತಾರಾ ಅಶ್ವಯುಗಶ್ವಿನೀ ।
ರಾಧಾ ವಿಶಾಖಾ ಪುಷ್ಯೇ ತು ಸಿದ್ಧ್ಯತಿಷ್ಯೌ ಶ್ರವಿಷ್ಠಯಾ ॥ ೧೧೨
ಸಮಾ ಧನಿಷ್ಠಾ ಸ್ಯುಃ ಪ್ರೋಷ್ಠಪದಾ ಭಾದ್ರಪದಾಃ ಸ್ತ್ರಿಯಃ ।
ಮೃಗಶೀರ್ಷೇ ಮೃಗಶಿರಸ್ತಸ್ಮಿನ್ನೇವಾಗ್ರಹಾಯಣೀ ॥ ೧೧೩
ಇಲ್ವಲಾಸ್ತಚ್ಛಿರೋದೇಶೇ ತಾರಕಾ ನಿವಸಂತಿ ಯಾಃ ।
ಬೃಹಸ್ಪತಿಸ್ಸುರಾಚಾರ್ಯೋ ಗೀಷ್ಪತಿರ್ಧಿಷಣೋ ಗುರುಃ ॥ ೧೧೪
ಜೀವ ಆಂಗಿರಸೋ ವಾಚಸ್ಪತಿಶ್ಚಿತ್ರಶಿಖಂಡಿಜಃ ।
ಶುಕ್ರೋ ದೈತ್ಯಗುರುಃ ಕಾವ್ಯ ಉಶನಾ ಭಾರ್ಗವಃ ಕವಿಃ ॥ ೧೧೫

ಶೀತ, ಹಿಮ (ವಿ. ನಿಘ್ನ. ಸ್ತ್ರೀಲಿಂಗದಲ್ಲಿ ಸುಷೀಮಾ ಇತ್ಯಾದಿ)=ತಣ್ಣನೆಯದು, ಶೀತಗುಣವುಳ್ಳದ್ದು. ಧ್ರುವ, ಔತ್ತಾನಪಾದಿ (ಪು)=ಉತ್ತಾನಪಾದನ ಮಗ, ಧ್ರುವ. ಅಗಸ್ತ್ಯ, ಕುಂಭಸಂಭವ, ಮೈತ್ರಾವರುಣಿ (ಪು)=ಅಗಸ್ತ್ಯಮುನಿ. ಲೋಪಾಮುದ್ರಾ (ಸ್ತ್ರೀ)=ಅಗಸ್ತ್ಯನ ಪತ್ನಿ. ನಕ್ಷತ್ರ, ಋಕ್ಷ, ಭ (ನ), ತಾರಾ (ಸ್ತ್ರೀ), ತಾರಕಾ, ಉಡು (ಸ್ತ್ರೀ.ನ) ತಾರಕ (ನ)=ನಕ್ಷತ್ರ. ೧೧೨-೧೧೩. ದಾಕ್ಷಾಯಣೀ (ಸ್ತ್ರೀ)=ಅಶ್ವಿನ್ಯಾದಿಯಾದ ಇಪ್ಪತ್ತೇಳು ನಕ್ಷತ್ರಗಳಲ್ಲೊಂದು[1] ಅಶ್ವಯುಜ್, ಅಶ್ವಿನೀ (ಸ್ತ್ರೀ)=ಅಶ್ವಿನೀ ನಕ್ಷತ್ರ. ರಾಧಾ, ವಿಶಾಖಾ (ಸ್ತ್ರೀ)=ವಿಶಾಖಾನಕ್ಷತ್ರ. ಪುಷ್ಯ, ಸಿಧ್ಯ, ತಿಷ್ಯ (ಪು)=ಪುಷ್ಯನಕ್ಷತ್ರ. ಶ್ರವಿಷ್ಠಾ, ಧನಿಷ್ಠಾ (ಸ್ತ್ರೀ)=ಧನಿಷ್ಠಾನಕ್ಷತ್ರ. ಪ್ರೋಷ್ಠಪದಾ, ಭಾದ್ರಪದಾ (ಸ್ತ್ರೀ)=ಭಾದ್ರಪದಾ ನಕ್ಷತ್ರ. ಮೃಗಶೀರ್ಷ, ಮೃಗಶಿರಸ್ (ನ), ಆಗ್ರಹಾಯಣೀ (ಸ್ತ್ರೀ)=ಮೃಗಶೀರ್ಷ ನಕ್ಷತ್ರ. ೧೧೪-೧೧೫. ಇಲ್ವಲಾ (ಸ್ತ್ರೀ)—ಇನ್ವಲಾ ಎಂಬ ಪಾಠಾಂತರ =ಮೃಗಶೀರ್ಷ ನಕ್ಷತ್ರದ ಮೇಲ್ಭಾಗದಲ್ಲಿರುವ ಐದು ಚಿಕ್ಕ ತಾರೆಗಳು. ಬೃಹಸ್ಪತಿ, ಸುರಾಚಾರ್ಯ, ಗೀಷ್ಪತಿ, ಧಿಷಣ, ಗುರು, ಜೀವ, ಆಂಗಿರಸ, ವಾಚಸ್ಪತಿ, ಚಿತ್ರಶಿಖಂಡಿಜ (ಪು)=ಬೃಹಸ್ಪತಿ. ಶುಕ್ರ, ದೈತ್ಯಗುರು, ಕಾವ್ಯ, ಉಶನಸ್, ಭಾರ್ಗವ, ಕವಿ (ಪು)=ಶುಕ್ರ.

---

[1] ಅಶ್ವಿನ್ಯಾದಿ ನಕ್ಷತ್ರಗಳ ಲಿಂಗ ವಚನಗಳ ವಿಶೇಷವನ್ನು ಪರಿಶಿಷ್ಟದಲ್ಲಿ ನೋಡಿ.

ಅಂಗಾರಕಃ ಕುಜೋ ಭೌಮೋ ಲೋಹಿತಾಂಗೋ ಮಹೀಸುತಃ ।
ರೌಹಿಣೇಯೋ ಬುಧಸ್ಸೌಮ್ಯಸ್ಸಮೌ ಸೌರಿಶನೈಶ್ಚರೌ ॥ ೧೧೬
ಶನಿಮಂದೌ ಪಂಗುಕಾಲೌ ಛಾಯಾಪುತ್ರೋಽಸಿತೋಽರ್ಕಜಃ ।
ತಮಸ್ತು ರಾಹುಃ ಸ್ವರ್ಭಾನುಸ್ಸೈಂಹಿಕೇಯೋ ವಿಧುಂತುದಃ ॥ ೧೧೭
ಸಪ್ತರ್ಷಯೋ ಮರೀಚ್ಯತ್ರಿಮುಖಾಶ್ಚಿತ್ರಶಿಖಂಡಿನಃ ।
ರಾಶೀನಾಮುದಯೋ ಲಗ್ನಂ ತೇ ತು ಮೇಷವೃಷಾದಯಃ ॥ ೧೧೮
ಸೂರಸೂರ್ಯಾರ್ಯಮಾದಿತ್ಯ ದ್ವಾದಶಾತ್ಮದಿವಾಕರಾಃ ।
ಭಾಸ್ಕರಾಹಸ್ಕರಬ್ರಧ್ನ ಪ್ರಭಾಕರವಿಭಾಕರಾಃ ॥ ೧೧೯
ಭಾಸ್ವದ್ವಿವಸ್ವತ್ಸಪ್ತಾಶ್ವಹರಿದಶ್ವೋಷ್ಣರಶ್ಮಯಃ ।
ವಿಕರ್ತನಾರ್ಕಮಾರ್ತಂಡಮಿಹಿರಾರುಣಪೂಷಣಃ ॥ ೧೨೦

೧೧೬-೧೧೭. ಅಂಗಾರಕ, ಕುಜ, ಭೌಮ, ಲೋಹಿತಾಂಗ, ಮಹೀಸುತ (ಪು)=ಕುಜ, ಮಂಗಳಗ್ರಹ. ರೌಹಿಣೇಯ, ಬುಧ, ಸೌಮ್ಯ, (ಪು)=ಬುಧ. ಸೌರಿ, ಶನೈಶ್ಚರ, ಶನಿ, ಮಂದ, ಪಂಗು, ಕಾಲ, ಛಾಯಾಪುತ್ರ, ಅಸಿತ, ಅರ್ಕಜ (ಪು)=ಶನಿ. ತಮಸ್ (ನ), ರಾಹು, ಸ್ವರ್ಭಾನು, ಸೈಂಹಿಕೇಯ, ವಿಧುಂತುದ (ಪು)=ರಾಹು. ೧೧೮. ಚಿತ್ರಶಿಖಂಡಿನ್ (ಪು)=ಮರೀಚಿ ಮೊದಲಾದ ಸಪ್ತರ್ಷಿಗಳು.[1] ಲಗ್ನ[2] (ನ)=ಮೇಷಾದಿರಾಶಿಗಳ ಉದಯ. ಮೇಷ, ವೃಷಭ (ಪು), ಮಿಥುನ (ನ), ಕರ್ಕಾಟಕ, ಸಿಂಹ (ಪು), ಕನ್ಯಾ, ತುಲಾ (ಸ್ತ್ರೀ), ವೃಶ್ಚಿಕ (ಪು), ಧನುಸ್ (ನ), ಮಕರ, ಕುಂಭ, ಮೀನ (ಪು)=ಇವು ದ್ವಾದಶ ರಾಶಿಗಳು. ೧೧೯-೧೨೩. ಸೂರ, ಸೂರ್ಯ, ಅರ್ಯಮನ್, ಆದಿತ್ಯ, ದ್ವಾದಶಾತ್ಮನ್, ದಿವಾಕರ, ಭಾಸ್ಕರ, ಅಹಸ್ಕರ, ಬ್ರಧ್ನ, ಪ್ರಭಾಕರ, ವಿಭಾಕರ, ಭಾಸ್ವತ್, ವಿವಸ್ವತ್, ಸಪ್ತಾಶ್ವ, ಹರಿದಶ್ವ, ಉಷ್ಣರಶ್ಮಿ, ವಿಕರ್ತನ, ಅರ್ಕ, ಮಾರ್ತಂಡ (ಮಾರ್ತಾಂಡವೂ ಉಂಟು) ಮಿಹಿರ, ಅರುಣ, ಪೂಷನ್, ದ್ಯುಮಣಿ, ತರಣಿ, ಮಿತ್ರ, ಚಿತ್ರಭಾನು, ವಿರೋಚನ, ವಿಭಾವಸು, ಗ್ರಹಪತಿ, ತ್ವಿಷಾಂಪತಿ, ಅಹರ್ಪತಿ,[3] ಭಾನು, ಹಂಸ, ಸಹಸ್ರಾಂಶು, ತಪನ, ಸವಿತೃ, ರವಿ, ಕರ್ಮಸಾಕ್ಷಿನ್, ಜಗಚ್ಚಕ್ಷುಸ್, ಅಂಶುಮಾಲಿನ್, ತ್ರಯೀತನು, ಪ್ರದ್ಯೋತನ, ದಿನಮಣಿ, ಖದ್ಯೋತ,

---

[1] ಮರೀಚಿರಂಗಿರಾ ಅತ್ರಿಃ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠಶ್ಚೇತಿ ಸಪ್ತೈತೇ ಜ್ಞೇಯಾಶ್ಚಿತ್ರಶಿಖಂಡಿನಃ ॥

[2] ಇದಕ್ಕೆ ಪುಲ್ಲಿಂಗವೂ ಉಂಟು. [3] ಅಹಃಪತಿ ಎಂಬ ರೂಪವೂ ಉಂಟು.

ದ್ಯುಮಣಿಸ್ತರಣಿರ್ಮಿತ್ರಶ್ಚಿತ್ರಭಾನುರ್ವಿರೋಚನಃ ।
ವಿಭಾವಸುರ್ಗ್ರಹಪತಿಸ್ತ್ವಿಷಾಂಪತಿರಹರ್ಪತಿಃ ॥ ೧೨೧
ಭಾನುರ್ಹಂಸಸ್ಸಹಸ್ರಾಂಶುಸ್ತಪನಸ್ಸವಿತಾ ರವಿಃ ।
ಕರ್ಮಸಾಕ್ಷೀ ಜಗಚ್ಚಕ್ಷುರಂಶುಮಾಲೀ ತ್ರಯೀತನುಃ ॥ ೧೨೨
ಪ್ರದ್ಯೋತನೋ ದಿನಮಣಿಃ ಖದ್ಯೋತೋ ಲೋಕಬಾಂಧವಃ ।
ಸುರೋತ್ತಮೋ ಧಾಮನಿಧಿಃ ಪದ್ಮಿನೀವಲ್ಲಭೋ ಹರಿಃ ॥ ೧೨೩
ಮಾಠರಃ ಪಿಂಗಲೋ ದಂಡಶ್ಚಂಡಾಂಶೋಃ ಪಾರಿಪಾರ್ಶ್ವಿಕಾಃ ।
ಸೂರಸೂತೋಽರುಣೋಽನೂರುಃ ಕಾಶ್ಯಪಿರ್ಗರುಡಾಗ್ರಜಃ ॥ ೧೨೪
ಪರಿವೇಷಸ್ತು ಪರಿಧಿರುಪಸೂರ್ಯಕಮಂಡಲೇ ।
ಕಿರಣೋಽಸ್ರಮಯೂಖಾಂಶುಗಭಸ್ತಿಘೃಣಿಘೃಷ್ಟಯಃ ॥ ೧೨೫
ಭಾನುಃ ಕರೋ ಮರೀಚಿಃ ಸ್ತ್ರೀಪುಂಸಯೋರ್ದೀಧಿತಿಃ ಸ್ತ್ರಿಯಾಮ್ ।
ದ್ವಯೋಸ್ತು ಗೌರ್ನಪುಂಸ್ಯರ್ಚಿಸ್ತೇಜೋ ಧಾಮ ಮಹೋ ವಿಭಾ ॥ ೧೨೬

ಲೋಕಬಾಂಧವ, ಸುರೋತ್ತಮ, ಧಾಮನಿಧಿ, ಪದ್ಮಿನೀವಲ್ಲಭ, ಹರಿ (ಪು)=ಸೂರ್ಯ. ೧೨೪. ಮಾಠರ, ಪಿಂಗಲ, ದಂಡ (ಪು)=ಸೂರ್ಯನ ಪಾರ್ಶ್ವದಲ್ಲಿರುವ ಮೂವರು ಪರಿಚಾರಕರು.[1] ಸೂರಸೂತ, ಅರುಣ, ಅನೂರು, ಕಾಶ್ಯಪಿ, ಗರುಡಾಗ್ರಜ (ಪು)=ಸೂರ್ಯನ ಸಾರಥಿ. ೧೨೫-೧೨೬. ಪರಿವೇಷ (ಪರಿವೇಶ), ಪರಿಧಿ (ಪು), ಉಪಸೂರ್ಯಕ, ಮಂಡಲ (ನ)=ಸೂರ್ಯನ ಸುತ್ತಲೂ ಕುಂಡಲಾಕಾರವಾಗಿ ಕಾಣುವ ತೇಜೋವಿಶೇಷ (The halo round the sun). ಕಿರಣ, ಉಸ್ರ, ಮಯೂಖ, ಅಂಶು, ಗಭಸ್ತಿ, ಘೃಣಿ, ಘೃಷ್ಟಿ (ಪೃಶ್ನಿ, ವೃಷ್ಣಿ), ಭಾನು, ಕರ (ಪು), ಮರೀಚಿ (ಪು. ಸ್ತ್ರೀ), ದೀಧಿತಿ (ಸ್ತ್ರೀ), ಗೋ (ಪು. ಸ್ತ್ರೀ), ಅರ್ಚಿಸ್ (ಸ್ತ್ರೀ. ನ), ತೇಜಸ್, ಧಾಮನ್, ಮಹಸ್ (ನ), ವಿಭಾ, ಪ್ರಭಾ, ರುಚ್, ರುಚಿ, ತ್ವಿಷ್, ಭಾ, ಭಾಸ್, ಛವಿ, ದ್ಯುತಿ, ದೀಪ್ತಿ (ಸ್ತ್ರೀ), ರೋಚಿಸ್, ಶೋಚಿಸ್ (ನ)=ಪ್ರಭೆ, ಕಾಂತಿ, ಪ್ರಕಾಶ, ದ್ಯೋತ, ಆತಪ (ಪು)=ಸೂರ್ಯಪ್ರಭೆ, ಬಿಸಿಲು.

---

[1] ಒಟ್ಟು ಹದಿನೆಂಟು ಮಂದಿ ಸೂರ್ಯನ ಪರಿಚಾರಕರೆಂದೂ ಮುಖ್ಯರಾದ್ದರಿಂದ ಮೂವರ ಹೆಸರನ್ನು ಹೇಳಿದೆಯೆಂದೂ ಕೆಲವರ ಅಭಿಪ್ರಾಯ.

ಸ್ಯುಃ ಪ್ರಭಾರುಗ್ರುಚಿಸ್ತ್ವಿಡ್ಭಾಭಾಶ್ಛವಿದ್ಯುತಿದೀಪ್ತಯಃ ।
ರೋಚಿಶ್ಶೋಚಿರುಭೇ ಕ್ಲೀಬೇ ಪ್ರಕಾಶೋ ದ್ಯೋತ ಆತಪಃ ॥ ೧೨೭
ಕೋಷ್ಣಂ ಕವೋಷ್ಣಂ ಮಂದೋಷ್ಣಂ ಕದುಷ್ಣಂ ತ್ರಿಷು ತದ್ವತಿ ।
ತಿಗ್ಮಂ ತೀಕ್ಷ್ಣಂ ಖರಂ ತದ್ವನ್ಮೃಗತೃಷ್ಣಾ ಮರೀಚಿಕಾ ॥ ೧೨೮

ಇತಿ ದಿಗ್ವರ್ಗಃ

೪. ಕಾಲವರ್ಗಃ

ಕಾಲೋ ದಿಷ್ಟೋಽಪ್ಯನೇಹಾಪಿ ಸಮಯೋಽಪ್ಯಥ ಪಕ್ಷತಿಃ ।
ಪ್ರತಿಪದ್ದ್ವೇ ಇಮೇ ಸ್ತ್ರೀತ್ವೇ ತದಾದ್ಯಾಸ್ತಿಥಯೋ ದ್ವಯೋಃ ॥ ೧೨೯
ಘಸ್ರೋ ದಿನಾಹನೀ ವಾ ತು ಕ್ಲೀಬೇ ದಿವಸವಾಸರೌ ।
ಪ್ರತ್ಯೂಷೋಽಹರ್ಮುಖಂ ಕಲ್ಯಮುಷಃಪ್ರತ್ಯುಷಸೀ ಅಪಿ ॥ ೧೩೦
ಪ್ರಭಾತಂ ಚ ದಿನಾಂತೇ ತು ಸಾಯಃ ಸಂಧ್ಯಾ ಪಿತೃಪ್ರಸೂಃ ।
ಪ್ರಾಹ್ಣಾಪರಾಹ್ಣಮಧ್ಯಾಹ್ನಾಸ್ತ್ರಿಸಂಧ್ಯಮಥ ಶರ್ವರೀ ॥ ೧೩೧

---

೧೨೮. ಕೋಷ್ಣ, ಕವೋಷ್ಣ, ಮಂದೋಷ್ಣ, ಕದುಷ್ಣ (ವಿ. ನಿಘ್ನ)= ಸ್ವಲ್ಪ ಬಿಸಿಯಾದದ್ದು, ಉಗುರುಬೆಚ್ಚಗಿರತಕ್ಕದ್ದು (Tepid). ತಿಗ್ಮ, ತೀಕ್ಷ್ಣ, ಖರ (ವಿ. ನಿಘ್ನ)= ಅತ್ಯುಷ್ಣವಾದದ್ದು. ಮೃಗತೃಷ್ಣಾ, ಮರೀಚಿಕಾ (ಸ್ತ್ರೀ)=ಬಿಸಿಲ್ಗುದುರೆ (Mirage).

ಕಾಲವರ್ಗ

೧೨೯. ಕಾಲ, ದಿಷ್ಟ, ಅನೇಹಸ್, ಸಮಯ (ಪು)=ಕಾಲ (Time). ಪಕ್ಷತಿ, ಪ್ರತಿಪದ್ (ಸ್ತ್ರೀ)=ಪಾಡ್ಯ. ತಿಥಿ (ಪು.ಸ್ತ್ರೀ)=ಪಾಡ್ಯ ಮೊದಲಾದ ತಿಥಿ. ೧೩೦-೧೩೧. ಘಸ್ರ (ಪು), ದಿನ, ಅಹನ್ (ನ), ದಿವಸ, ವಾಸರ (ಪು.ನ)=ದಿನ (Day). ಪ್ರತ್ಯೂಷ (ಪು), ಅಹರ್ಮುಖ, ಕಲ್ಯ, ಉಷಸ್, ಪ್ರತ್ಯುಷಸ್, ಪ್ರಭಾತ (ನ)=ಪ್ರಾತಃಕಾಲ. ಸಾಯ[1] (ಪು)=ಸಾಯಂಕಾಲ. ಸಂಧ್ಯಾ, ಪಿತೃಪ್ರಸೂ (ಸ್ತ್ರೀ)=ಸಂಧ್ಯಾಕಾಲ. ೧೩೧-೧೩೨. ಪ್ರಾಹ್ಣ, ಅಪರಾಹ್ಣ, ಮಧ್ಯಾಹ್ನ (ಪು)=ಇವು ಕ್ರಮವಾಗಿ ಪ್ರಾತಃಕಾಲ, ಸಾಯಂಕಾಲ, ಮಧ್ಯಾಹ್ನಗಳ ಹೆಸರುಗಳು. ಇವು ಮೂರಕ್ಕೂ ತ್ರಿಸಂಧ್ಯ (ನ) ಎಂದೂ ಹೆಸರು. ಶರ್ವರೀ, ನಿಶಾ, ನಿಶೀಥಿನೀ, ರಾತ್ರಿ,

---

[1] ಸಾಯಮ್ ಎಂಬ ಅವ್ಯಯವೂ ಉಂಟು.

ನಿಶಾ ನಿಶೀಥಿನೀ ರಾತ್ರಿಸ್ತ್ರಿಯಾಮಾ ಕ್ಷಣದಾ ಕ್ಷಪಾ ।
ವಿಭಾವರೀತಮಸ್ವಿನ್ಯೌ ರಜನೀ ಯಾಮಿನೀ ತಮೀ ॥ ೧೩೨
ತಮಿಸ್ರಾ ತಾಮಸೀ ರಾತ್ರಿರ್ಜ್ಯೌತ್ಸ್ನೀ ಚಂದ್ರಿಕಯಾನ್ವಿತಾ ।
ಆಗಾಮಿವರ್ತಮಾನಾಹರ್ಯುಕ್ತಾಯಾಂ ನಿಶಿ ಪಕ್ಷಿಣೀ ॥ ೧೩೩
ಗಣರಾತ್ರಂ ನಿಶಾ ಬಹ್ವ್ಯಃ ಪ್ರದೋಷೋ ರಜನೀಮುಖಮ್ ।
ಅರ್ಧರಾತ್ರನಿಶೀಥೌ ದ್ವೌ ದ್ವೌ ಯಾಮಪ್ರಹರೌ ಸಮೌ ॥ ೧೩೪
ಸ ಪರ್ವಸಂಧಿಃ ಪ್ರತಿಪತ್ಪಂಚದಶ್ಯೋರ್ಯದಂತರಮ್ ।
ಪಕ್ಷಾಂತೌ ಪಂಚದಶ್ಯೌ ದ್ವೇ ಪೌರ್ಣಮಾಸೀ ತು ಪೂರ್ಣಿಮಾ ॥ ೧೩೫
ಕಲಾಹೀನೇ ಸಾನುಮತಿಃ ಪೂರ್ಣೇ ರಾಕಾ ನಿಶಾಕರೇ ।
ಅಮಾವಾಸ್ಯಾ ತ್ವಮಾವಸ್ಯಾ ದರ್ಶಃಸೂರ್ಯೇಂದುಸಂಗಮಃ ॥ ೧೩೬
ಸಾ ದೃಷ್ಟೇಂದುಸ್ಸಿನೀವಾಲೀ ಸಾ ನಷ್ಟೇಂದುಕಲಾ ಕುಹೂಃ ।
ಉಪರಾಗೋ ಗ್ರಹೋ ರಾಹುಗ್ರಸ್ತೇ ತ್ವಿಂದೌ ಚ ಪೂಷ್ಣಿ ಚ ॥ ೧೩೭

ತ್ರಿಯಾಮಾ, ಕ್ಷಣದಾ, ಕ್ಷಪಾ, ವಿಭಾವರೀ, ತಮಸ್ವಿನೀ, ರಜನೀ, ಯಾಮಿನೀ, ತಮೀ (ಸ್ತ್ರೀ)=ರಾತ್ರಿ. ೧೩೩. ತಮಿಸ್ರಾ, ತಾಮಸೀ (ಸ್ತ್ರೀ)=ಬಹಳ ಕತ್ತಲಿರುವ ರಾತ್ರಿ. ಜ್ಯೌತ್ಸ್ನೀ=ಬೆಳದಿಂಗಳಿನ ರಾತ್ರಿ.ಪಕ್ಷಿಣೀ (ಸ್ತ್ರೀ)=ಇಂದಿನ ಹಗಲು ಮತ್ತು ನಾಳೆಯ ಹಗಲು ಸೇರಿದ ನಡುವಿನ ರಾತ್ರಿ. ೧೩೪. ಗಣರಾತ್ರ (ನ)=ರಾತ್ರಿ ಸಮುದಾಯ. ಪ್ರದೋಷ (ಪು), ರಜನೀಮುಖ (ನ)=ರಾತ್ರಿಯ ಆರಂಭಕಾಲ. ಅರ್ಧರಾತ್ರ, ನಿಶೀಥ (ಪು)=ರಾತ್ರಿಯ ಮಧ್ಯಕಾಲ. ಯಾಮ, ಪ್ರಹರ (ಪು)=ಜಾವ, ಮೂರು ಘಂಟೆಗಳ ಕಾಲ. ೧೩೫. ಪರ್ವನ್ (ನ), ಸಂಧಿ (ಪು) ಅಥವಾ ಪರ್ವಸಂಧಿ (ಪು)=ಹುಣ್ಣಿಮೆ ಅಮಾವಾಸ್ಯೆಗಳೂ ಪಾಡ್ಯವೂ ಸಂಧಿಸುವ ಕಾಲ. ಪಕ್ಷಾಂತ (ಪು), ಪಂಚದಶೀ (ಸ್ತ್ರೀ)=ಹದಿನೈದನೆಯ ತಿಥಿ, ಹುಣ್ಣಿಮೆ ಅಥವಾ ಅಮಾವಾಸ್ಯೆ. ಪೌರ್ಣಮಾಸೀ, ಪೂರ್ಣಿಮಾ (ಸ್ತ್ರೀ)=ಹುಣ್ಣಿಮೆ. ೧೩೬. ಅನುಮತಿ (ಸ್ತ್ರೀ)=ಒಂದು ಕಲೆ ನ್ಯೂನವಾದ ಚಂದ್ರನುಳ್ಳ ಹುಣ್ಣಿಮೆ. ಚಂದ್ರೋದಯ ಕಾಲಕ್ಕೆ ಚತುರ್ದಶಿಯೋ ಪಾಡ್ಯವೋ ಕೂಡಿದ ಹುಣ್ಣಿಮೆ. ರಾಕಾ (ಸ್ತ್ರೀ)=ಪೂರ್ಣಚಂದ್ರನಿರುವ ಹುಣ್ಣಿಮೆ. ಅಮಾವಾಸ್ಯಾ, ಅಮಾವಸ್ಯಾ (ಸ್ತ್ರೀ) ದರ್ಶ, ಸೂರ್ಯೇಂದುಸಂಗಮ (ಪು)=ಅಮಾವಾಸ್ಯೆ. ೧೩೭-೧೩೮. ಸಿನೀವಾಲೀ (ಸ್ತ್ರೀ)=ಚಂದ್ರಕಲೆಯು ಕಾಣಿಸುವ ಅಮಾವಾಸ್ಯೆ. ಕುಹೂ (ಸ್ತ್ರೀ)=ಚಂದ್ರಕಲೆಯು ಕಾಣಿಸದ ಅಮಾವಾಸ್ಯೆ. ಉಪರಾಗ, ಗ್ರಹ

ಸೋಪಪ್ಲವೋಪರಕ್ತೌ ದ್ವಾವಗ್ನ್ಯುತ್ಪಾತ ಉಪಾಹಿತಃ ।
ಏಕಯೋಕ್ತ್ಯಾ ಪುಷ್ಪವಂತೌ ದಿವಾಕರನಿಶಾಕರೌ ॥ ೧೩೮
ಅಷ್ಟಾದಶನಿಮೇಷಾಸ್ತು ಕಾಷ್ಠಾ ತ್ರಿಂಶತ್ತು ತಾಃ ಕಲಾ ।
ತಾಸ್ತು ತ್ರಿಂಶತ್ ಕ್ಷಣಸ್ತೇ ತು ಮುಹೂರ್ತೋ ದ್ವಾದಶಾಸ್ತ್ರಿಯಾಮ್॥ ೧೩೯
ತೇ ತು ತ್ರಿಂಶದಹೋರಾತ್ರಃ ಪಕ್ಷಸ್ತೇ ದಶ ಪಂಚ ಚ ।
ಪಕ್ಷೌ ಪೂರ್ವಾಪರೌ ಶುಕ್ಲಕೃಷ್ಣೌ ಮಾಸಸ್ತು ತಾವುಭೌ ॥ ೧೪೦
ದ್ವೌ ದ್ವೌ ಮಾರ್ಗಾದಿಮಾಸೌ ಸ್ಯಾದೃತುಸ್ತೈರಯನಂ ತ್ರಿಭಿಃ ।
ಅಯನೇ ದ್ವೇ ಗತಿರುದಗ್ದಕ್ಷಿಣಾರ್ಕಸ್ಯ ವತ್ಸರಃ ॥ ೧೪೧

(ಪು)=ಗ್ರಹಣ. ಸೋಪಪ್ಲವ, ಉಪರಕ್ತ (ಪು)=ರಾಹುಗ್ರಸ್ತನಾದ ಚಂದ್ರ ಅಥವಾ ಸೂರ್ಯ. ಅಗ್ನ್ಯುತ್ಪಾತ, ಉಪಾಹಿತ (ಪು)=ದುಶ್ಶಕುನರೂಪವಾಗಿ ಉಂಟಾದ ಅಗ್ನಿವಿಕಾರ, ಧೂಮಕೇತು ದರ್ಶನ ಇತ್ಯಾದಿ. ಪುಷ್ಪವತ್ (ಪು. ನಿತ್ಯದ್ವಿವಚನ)=ಸೂರ್ಯ ಚಂದ್ರರು. ೧೩೯. ಕಾಷ್ಠಾ (ಸ್ತ್ರೀ)[1]=ಹದಿನೆಂಟು ನಿಮೇಷಗಳು. ಕಲಾ (ಸ್ತ್ರೀ)=ಮೂವತ್ತು ಕಾಷ್ಠಗಳು. ಕ್ಷಣ (ಪು)=ಮೂವತ್ತು ಕಲೆಗಳು. ಮುಹೂರ್ತ (ಪು)=ಹನ್ನೆರಡು ಕ್ಷಣಗಳು. ೧೪೦. ಅಹೋರಾತ್ರ (ಪು)=ಮೂವತ್ತು ಮುಹೂರ್ತಗಳು, ೨೪ ಘಂಟೆಗಳ ಒಂದು ದಿನ. ಪಕ್ಷ (ಪು)=ಹದಿನೈದು ದಿನಗಳು. ಶುಕ್ಲಪಕ್ಷ (ಪು)=ತಿಂಗಳಿನ ಮೊದಲನೆಯ ಪಕ್ಷ. ಕೃಷ್ಣಪಕ್ಷ (ಪು)=ತಿಂಗಳಿನ ಎರಡನೆಯ ಪಕ್ಷ. ಮಾಸ (ಪು)=ಎರಡು ಪಕ್ಷಗಳೂ ಸೇರಿದ ಒಂದು ತಿಂಗಳು. ೧೪೧. ಋತು (ಪು)=(ಮಾರ್ಗಶೀರ್ಷದಿಂದ) ಎರಡೆರಡು ತಿಂಗಳಕಾಲ. ಅಯನ (ನ)=ಮೂರು ಋತುಗಳು, ಆರು ತಿಂಗಳು. ಉದಗಯನ (ನ)=ಸೂರ್ಯನ ಉತ್ತರಗತಿ. ವತ್ಸರ (ಪು)=ಎರಡು ಅಯನಗಳು, ಒಂದು ವರ್ಷ. ದಕ್ಷಿಣಾಯನ (ನ)=ಸೂರ್ಯನ ದಕ್ಷಿಣಗತಿ.

---

[1] ನಿಮೇಷ = 2/135 ಸೆಕೆಂಡ್, ಕಾಷ್ಠಾ= 4/15 ಸೆಕೆಂಡ್, ಕಲಾ =8ಸೆಕೆಂಡ್, ಕ್ಷಣ=240 ಸೆಕೆಂಡ್ ಅಥವಾ 4 ನಿಮಿಷ (minutes), ಮುಹೂರ್ತ=48ನಿಮಿಷ (minutes). ಅಹೋರಾತ್ರ=24 ಘಂಟೆಗಳ ಒಂದು ದಿನ.

ಸಮರಾತ್ರಿಂದಿವೇ ಕಾಲೇ ವಿಷುವದ್ವಿಷುವಂ ಚ ತತ್ ।
ಪುಷ್ಯಯುಕ್ತಾ ಪೌರ್ಣಮಾಸೀ ಪೌಷೀ ಮಾಸೇ ತು ಯತ್ರ ಸಾ ॥ ೧೪೨
ನಾಮ್ನಾ ಸ ಪೌಷೋ ಮಾಖಾದ್ಯಾಶ್ಚೈವಮೇಕಾದಶಾಪರೇ ।
ಮಾರ್ಗಶೀರ್ಷೇ ಸಹಾ ಮಾರ್ಗ ಆಗ್ರಹಾಯಣಿಕಶ್ಚ ಸಃ ॥ ೧೪೩
ಪೌಷೇ ತೈಷಸಹಸ್ಯೌ ದ್ವೌ ತಪಾ ಮಾಘೇಽಥ ಫಾಲ್ಗುನೇ ।
ಸ್ಯಾತ್ತಪಸ್ಯಃ ಫಾಲ್ಗುನಿಕಸ್ಸ್ಯಾಚ್ಚೈತ್ರೇ ಚೈತ್ರಿಕೋ ಮಧುಃ ॥ ೧೪೪
ವೈಶಾಖೇ ಮಾಧವೋ ರಾಧೋ ಜ್ಯೇಷ್ಠೇ ಶುಕ್ರಶ್ಶುಚಿಸ್ತ್ವಯಮ್ ।
ಆಷಾಢೇ ಶ್ರಾವಣೇ ತು ಸ್ಯಾನ್ನಭಾಃ ಶ್ರಾವಣಿಕಶ್ಚ ಸಃ ॥ ೧೪೫
ಸ್ಯುರ್ನಭಸ್ಯಃ ಪ್ರೌಷ್ಠಪದಭಾದ್ರ ಭಾದ್ರಪದಾಸ್ಸಮಾಃ ।
ಸ್ಯಾದಾಶ್ವಿನ ಇಷೋಽಪ್ಯಾಶ್ವಯುಜೋಽಪಿ ಸ್ಯಾತ್ತು ಕಾರ್ತಿಕೇ ॥ ೧೪೬
ಬಾಹುಲೋರ್ಜೌ ಕಾರ್ತಿಕಿಕೋ ಹೇಮಂತಶ್ಶಿಶಿರೋಽಸ್ತ್ರಿಯಾಮ್ ।
ವಸಂತೇ ಪುಷ್ಪಸಮಯಸ್ಸುರಭಿರ್ಗ್ರೀಷ್ಮ ಊಷ್ಮಕಃ ॥ ೧೪೭

೧೪೨-೧೪೩. ವಿಷುವತ್, ವಿಷುವ (ನ)=ಹಗಲು ರಾತ್ರಿಗಳು ಸಮಪ್ರಮಾಣದಲ್ಲಿರುವ ಕಾಲ (The equinox), ಪೌಷೀ (ಸ್ತ್ರೀ)=ಪುಷ್ಯಯುಕ್ತವಾದ ಹುಣ್ಣಿಮೆ. ಪೌಷ (ಪು)=ಪುಷ್ಯಯುಕ್ತವಾದ ಹುಣ್ಣಿಮೆಯಿರುವ ಮಾಸ. ಇದೇ ರೀತಿಯಲ್ಲಿ ಮಾಖ (ಮಾಘ) ಮೊದಲಾದ ಇತರ ಹನ್ನೊಂದು ತಿಂಗಳು. ಮಾಖೀ (ಮಾಘೀ)=ಹುಣ್ಣಿಮೆ, ಅದು ಇರುವ ತಿಂಗಳು ಮಾಖ (ಮಾಘ) ಇತ್ಯಾದಿ. ಮಾರ್ಗಶೀರ್ಷ, ಸಹಸ್, ಮಾರ್ಗ, ಆಗ್ರಹಾಯಣಿಕ (ಪು)=ಮಾರ್ಗಶೀರ್ಷಮಾಸ. ೧೪೪. ತೈಷ, ಸಹಸ್ಯ (ಪು)=ಪೌಷಮಾಸ. ತಪಸ್, ಮಾಘ (ಪು)=ಮಾಘಮಾಸ. ಫಾಲ್ಗುನ, ತಪಸ್ಯ, ಫಾಲ್ಗುನಿಕ (ಪು)=ಫಾಲ್ಗುನಮಾಸ. ಚೈತ್ರ, ಚೈತ್ರಿಕ, ಮಧು (ಪು)=ಚೈತ್ರ. ೧೪೫. ವೈಶಾಖ, ಮಾಧವ, ರಾಧ (ಪು)=ವೈಶಾಖ. ಜ್ಯೇಷ್ಠ, ಶುಕ್ರ=ಜ್ಯೇಷ್ಠ. ಶುಚಿ, ಆಷಾಢ (ಪು)=ಆಷಾಢ. ಶ್ರಾವಣ, ನಭಸ್, ಶ್ರಾವಣಿಕ (ಪು)=ಶ್ರಾವಣ. ೧೪೬-೧೪೭. ನಭಸ್ಯ, ಪ್ರೌಷ್ಠಪದ, ಭಾದ್ರ, ಭಾದ್ರಪದ (ಪು)=ಭಾದ್ರಪದ. ಆಶ್ವಿನ, ಇಷ, ಆಶ್ವಯುಜ (ಪು)=ಆಶ್ವಿನ. ಕಾರ್ತಿಕ, ಬಾಹುಲ, ಊರ್ಜ, ಕಾರ್ತಿಕಿಕ (ಪು)=ಕಾರ್ತಿಕ. ಹೇಮಂತ (ಪು)=ಮಾರ್ಗಶೀರ್ಷ ಪೌಷಮಾಸಗಳು ಸೇರಿದ ಋತು. ಶಿಶಿರ (ಪು. ನ)=ಮಾಘ ಫಾಲ್ಗುನಗಳು ಸೇರಿದ ಋತು.

೧೪೭-೧೪೮. ವಸಂತ, ಪುಷ್ಪಸಮಯ, ಸುರಭಿ (ಪು)=ಚೈತ್ರ ವೈಶಾಖಗಳು ಸೇರಿದ

ನಿದಾಘ ಉಷ್ಣೋಪಗಮ ಉಷ್ಣ ಊಷ್ಮಾಗಮಸ್ತಪಃ ।
ಸ್ತ್ರಿಯಾಂ ಪ್ರಾವೃಟ್ ಸ್ತ್ರಿಯಾಂ ಭೂಮ್ನಿ ವರ್ಷಾ ಅಥ ಶರತ್
ಸ್ತ್ರಿಯಾಮ್ ॥ ೧೪೮
ಷಡಮೀ ಋತವಃ ಪುಂಸಿ ಮಾರ್ಗಾದೀನಾಂ ಯುಗ್ಮೈಃ ಕ್ರಮಾತ್ ।
ಸಂವತ್ಸರೋ ವತ್ಸರೋಽಬ್ದೋ ಹಾಯನೋಽಸ್ತ್ರೀ ಶರತ್ಸಮಾಃ ॥ ೧೪೯
ಮಾಸೇನ ಸ್ಯಾದಹೋರಾತ್ರಃ ಪೈತ್ರೋ ವರ್ಷೇಣ ದೈವತಃ ।
ದಿವ್ಯೈರ್ವರ್ಷಸಹಸ್ರೈರ್ದ್ವಾದಶಭಿರ್ದೈವತಂ ಯುಗಮ್ ॥ ೧೫೦
ದೈವೇ ಯುಗಸಹಸ್ರೇ ದ್ವೇ ಬ್ರಾಹ್ಮಃ ಕಲ್ಪೌ ತು ತೌ ನೃಣಾಮ್ ।
ಮನ್ವಂತರಂ ತು ದಿವ್ಯಾನಾಂ ಯುಗಾನಾಮೇಕಸಪ್ತತಿಃ ॥ ೧೫೧
ಸಂವರ್ತಃ ಪ್ರಲಯಃ ಕಲ್ಪಃ ಕ್ಷಯಃ ಕಲ್ಪಾಂತ ಇತ್ಯಪಿ ।
ಅಸ್ತ್ರೀ ಪಂಕಂ ಪುಮಾನ್ ಪಾಪ್ಮಾ ಪಾಪಂ ಕಿಲ್ಬಿಷಕಲ್ಮಷಮ್ ॥ ೧೫೨
ಕಲುಷಂ ವೃಜಿನೈನೋಽಘ ಮಂಹೋದುರಿತದುಷ್ಕೃತಮ್ ।
ಸ್ಯಾದ್ಧರ್ಮಮಸ್ತ್ರಿಯಾಂ ಪುಣ್ಯಶ್ರೇಯಸೀ ಸುಕೃತಂ ವೃಷಃ ॥ ೧೫೩

ಋತು. ಗ್ರೀಷ್ಮ, ಊಷ್ಮಕ, ನಿದಾಘ, ಉಷ್ಣೋಪಗಮ, ಉಷ್ಣ, ಊಷ್ಮಾಗಮ, ತಪ (ಪು)=ಜ್ಯೇಷ್ಠ ಆಷಾಢಗಳು ಸೇರಿದ ಋತು. ಪ್ರಾವೃಷ್ (ಸ್ತ್ರೀ), ವರ್ಷಾ (ಸ್ತ್ರೀ. ನಿತ್ಯ ಬಹುವಚನ)=ಶ್ರಾವಣ ಭಾದ್ರಪದಗಳು ಸೇರಿದ ಋತು, ಮಳೆಗಾಲ. ಶರದ್ (ಸ್ತ್ರೀ)=ಆಶ್ವಿನ ಕಾರ್ತಿಕಗಳು ಸೇರಿದ ಋತು. ೧೪೯. ಹೀಗೆ ಹೇಮಂತಾದಿ ಋತುಗಳು ಮಾರ್ಗಶೀರ್ಷಾದಿ ಮಾಸದ್ವಯಗಳಿಗೆ ಒಂದೊಂದರಂತೆ ಆರು ಆಗುತ್ತವೆ. ಸಂವತ್ಸರ, ವತ್ಸರ, ಅಬ್ದ (ಪು), ಹಾಯನ (ಪು. ನ) ಶರದ್, ಸಮಾ (ಸ್ತ್ರೀ)=ಸಂವತ್ಸರ. ೧೫೦. ಮನುಷ್ಯ ಮಾನದಿಂದ ಒಂದು ತಿಂಗಳಿಗೆ ಪಿತೃಗಳ ಒಂದು ದಿನ. ಇದು ಪೈತ್ರ. (ಇದರಲ್ಲಿ ಶುಕ್ಲಪಕ್ಷ ಹಗಲು, ಕೃಷ್ಣಪಕ್ಷ ರಾತ್ರಿ). ಮನುಷ್ಯರ ಒಂದು ವರ್ಷಕ್ಕೆ ದೇವತೆಗಳ ಒಂದು ದಿನ. ಇದು ದೈವತ (ಇದರಲ್ಲಿ ಉತ್ತರಾಯಣ ಹಗಲು, ದಕ್ಷಿಣಾಯನ ರಾತ್ರಿ). ೧೫೧. ದೇವತೆಗಳ ಎರಡು ಸಾವಿರ ಯುಗಗಳಿಗೆ ಬ್ರಹ್ಮನ ಒಂದು ಅಹೋರಾತ್ರ. ಇದು ಬ್ರಾಹ್ಮ (ಒಂದು ಸಾವಿರ ಯುಗ ಹಗಲು, ಒಂದು ಸಾವಿರ ಯುಗ ರಾತ್ರಿ). ಇದು ಮನುಷ್ಯರಿಗೆ ಒಂದು ಕಲ್ಪ (ಪು). ಬ್ರಹ್ಮನ ಹಗಲು ಸ್ಥಿತಿಕಾಲ, ಬ್ರಹ್ಮನ ರಾತ್ರಿ ಪ್ರಳಯಕಾಲ. ಎಪ್ಪತ್ತೊಂದು ದಿವ್ಯಯುಗಗಳಿಗೆ ಒಂದು ಮನ್ವಂತರ[1] (ನ). ೧೫೨-೧೫೩. ಸಂವರ್ತ, ಪ್ರಲಯ, ಕಲ್ಪ, ಕ್ಷಯ, ಕಲ್ಪಾಂತ (ಪು)=ಪ್ರಳಯ.

[1] ಪರಿಶಿಷ್ಟವನ್ನು ನೋಡಿ.

ಮುತ್ಪ್ರೀತಿಃ ಪ್ರಮದೋ ಹರ್ಷಃ ಪ್ರಮೋದಾಮೋದಸಮ್ಮದಾಃ ।
ಸ್ಯಾದಾನಂದಥುರಾನಂದಶ್ಶರ್ಮಶಾ ಸಾತಸುಖಾನಿ ಚ ॥ ೧೫೪
ಶ್ವಃಶ್ರೇಯಸಂ ಶಿವಂ ಭದ್ರಂ ಕಲ್ಯಾಣಂ ಮಂಗಲಂ ಶುಭಮ್ ।
ಭಾವುಕಂ ಭವಿಕಂ ಭವ್ಯಂ ಕುಶಲಂ ಕ್ಷೇಮಮಸ್ತ್ರಿಯಾಮ್ ॥ ೧೫೫
ಶಸ್ತಂ ಚಾಥ ತ್ರಿಷು ದ್ರವ್ಯೇ ಪಾಪಂ ಪುಣ್ಯಂ ಸುಖಾದಿ ಚ ।
ಮತಲ್ಲಿಕಾ ಮಚರ್ಚಿಕಾ ಪ್ರಕಾಂಡಮುದ್ಘತಲ್ಲಜೌ ॥ ೧೫೬
ಪ್ರಶಸ್ತವಾಚಕಾನ್ಯಮೂನ್ಯಯಶ್ಶುಭಾವಹೋ ವಿಧಿಃ ।
ದೈವಂ ದಿಷ್ಟಂ ಭಾಗಧೇಯಂ ಭಾಗ್ಯಂ ಸ್ತ್ರೀ ನಿಯತಿರ್ವಿಧಿಃ ॥ ೧೫೭
ಹೇತುರ್ನಾ ಕಾರಣಂ ಬೀಜಂ ನಿದಾನಂ ತ್ವಾದಿಕಾರಣಮ್ ।
ಕ್ಷೇತ್ರಜ್ಞಆತ್ಮಾ ಪುರುಷಃ ಪ್ರಧಾನಂ ಪ್ರಕೃತಿಃ ಸ್ತ್ರಿಯಾಮ್ ॥ ೧೫೮

ಪಂಕ, (ಪು.ನ), ಪಾಪ್ಮನ್ (ಪು), ಪಾಪ, ಕಿಲ್ಬಿಷ, ಕಲ್ಮಷ, ಕಲುಷ, ವೃಜಿನ, ಏನಸ್, ಏನೋನ್ಫ್=ಏನನ್ ಅಘನ್, ತಾಪ ಓಘ, ಅಂಹಸ್, ದುರಿತ, ದುಷ್ಕೃತ (ನ)=ಪಾಪ. ಧರ್ಮ (ಪು.ನ), ಪುಣ್ಯ, ಶ್ರೇಯಸ್, ಸುಕೃತ (ನ), ವೃಷ (ಪು)=ಧರ್ಮ, ಪುಣ್ಯ. ೧೫೪. ಮುದ್, ಪ್ರೀತಿ (ಸ್ತ್ರೀ), ಪ್ರಮದ, ಹರ್ಷ, ಪ್ರಮೋದ, ಆಮೋದ, ಸಂಮದ, ಆನಂದಥು, ಆನಂದ (ಪು), ಶರ್ಮನ್, ಸಾತ (ಶಾತ), ಸುಖ, (ನ)=ಸುಖ. ೧೫೫-೧೫೬. ಶ್ವಃಶ್ರೇಯಸ, ಶಿವ, ಭದ್ರ, ಕಲ್ಯಾಣ, ಮಂಗಲ, ಶುಭ, ಭಾವುಕ, ಭವಿಕ, ಭವ್ಯ, ಕುಶಲ (ನ), ಕ್ಷೇಮ (ಪು.ನ), ಶಸ್ತ (ನ)=ಶುಭ. ಪಾಪ, ಪುಣ್ಯ ಮತ್ತು ಸುಖದಿಂದ ಹಿಡಿದು ಶಸ್ತ ಶಬ್ದದವರೆಗೆ ಇರುವ ಶಬ್ದಗಳು ವಿಶೇಷಣವಾದಾಗ ವಿಶೇಷ್ಯನಿಘ್ನಗಳಾಗುತ್ತವೆ. ಉದಾ: ಪಾಪಃ ಪುರುಷ, ಪಾಪಾ ಸ್ತ್ರೀ, ಪಾಪಂ ಕುಲಮ್. ಸ್ತ್ರೀಲಿಂಗದಲ್ಲಿ ಕಲ್ಯಾಣಶಬ್ದವು ಕಲ್ಯಾಣೀ ಎಂದಾಗುತ್ತದೆ. ಉಳಿದವು ಆಕಾರಾಂತವಾಗುತ್ತವೆ. ಉದಾ: ಶಿವಾ, ಮಂಗಲಾ ಇತ್ಯಾದಿ. ೧೫೬-೧೫೭. ಮತಲ್ಲಿಕಾ, ಮಚರ್ಚಿಕಾ (ಸ್ತ್ರೀ), ಪ್ರಕಾಂಡ (ನ), ಉದ್ಘ, ತಲ್ಲಜ (ಪು)=ಇವು ಪ್ರಶಂಸಾ ಸೂಚಕಪದಗಳಾಗಿ ಶಬ್ದದ ಕಡೆಯಲ್ಲಿ ಬರುತ್ತವೆ. ನಿತ್ಯಸಮಾಸ. ಸ್ವತಂತ್ರವಾಗಿ ಇವುಗಳಿಗೆ ಪ್ರಯೋಗವಿಲ್ಲ. ಉದಾ:—ಪ್ರಶಸ್ತಃ ಪುರುಷಃ=ಪುರುಷಮತಲ್ಲಿಕಾ, ಪ್ರಶಸ್ತಾ ಗೌಃ=ಗೋಪ್ರಕಾಂಡಮ್. ಪ್ರಶಸ್ತಃ ಪಂಡಿತಃ=ಪಂಡಿತಪ್ರಕಾಂಡಮ್—ಪ್ರಕಾಂಡಶಬ್ದವು ಪುಲ್ಲಿಂಗದಲ್ಲಿಯೂ ಉಂಟು. ಅಯ (ಪು)=ಶುಭವನ್ನುಂಟುಮಾಡುವ ಕರ್ಮ. ದೈವ, ದಿಷ್ಟ, ಭಾಗಧೇಯ, ಭಾಗ್ಯ (ನ), ನಿಯತಿ (ಸ್ತ್ರೀ), ವಿಧಿಃ (ಪು)=ದೈವ, ಪ್ರಾಕ್ತನ ಶುಭಾಶುಭ ಕರ್ಮ. ೧೫೮. ಹೇತು (ಪು), ಕಾರಣ, ಬೀಜ (ನ)=ಕಾರಣ. ನಿದಾನ (ನ)=ಮುಖ್ಯ ಕಾರಣ. ಕ್ಷೇತ್ರಜ್ಞ,

ವಿಶೇಷಃ ಕಾಲಿಕೋಽವಸ್ಥಾ ಗುಣಾಸ್ಸತ್ತ್ವಂ ರಜಸ್ತಮಃ ।
ಜನುರ್ಜನನಜನ್ಮಾನಿ ಜನಿರುತ್ಪತ್ತಿರುದ್ಭವಃ ॥ ೧೫೯
ಪ್ರಾಣೀ ತು ಚೇತನೋ ಜನ್ಮೀ ಜಂತುಜನ್ಯುಶರೀರಿಣಃ ।
ಜಾತಿರ್ಜಾತಂ ಚ ಸಾಮಾನ್ಯಂ ವ್ಯಕ್ತಿಸ್ತು ಪೃಥಗಾತ್ಮತಾ ॥ ೧೬೦

ಇತಿ ಕಾಲವರ್ಗಃ

೫. ಧೀವರ್ಗಃ

ಚಿತ್ತಂ ತು ಚೇತೋ ಹೃದಯಂ ಸ್ವಾಂತಂ ಹೃನ್ಮಾನಸಂ ಮನಃ ।
ಬುದ್ಧಿರ್ಮನೀಷಾ ಧಿಷಣಾ ಧೀಃ ಪ್ರಜ್ಞಾ ಶೇಮುಷೀ ಮತಿಃ ॥ ೧೬೧
ಪ್ರೇಕ್ಷೋಪಲಬ್ಧಿಶ್ಚಿತ್ಸಂವಿತ್ಪ್ರತಿಪಜ್ಜ್ಞಪ್ತಿಚೇತನಾಃ ।
ಧೀರ್ಧಾರಣಾವತೀ ಮೇಧಾ ಸಂಕಲ್ಪಃ ಕರ್ಮ ಮಾನಸಮ್ ॥ ೧೬೨

ಆತ್ಮನ್, ಪುರುಷ (ಪು)=ಆತ್ಮ. ಪ್ರಧಾನ (ನ), ಪ್ರಕೃತಿ (ಸ್ತ್ರೀ)=ಸಾಂಖ್ಯರ ಪ್ರಕೃತಿ, ಗುಣ ಸಾಮ್ಯಾವಸ್ಥೆ, ಮಾಯೆ. ೧೫೯. ಅವಸ್ಥಾ (ಸ್ತ್ರೀ)=ಕಾಲದಿಂದ ಸಂಭವಿಸುವ ಯೌವನಾದ್ಯವಸ್ಥೆ. ಸತ್ತ್ವ, ರಜಸ್, ತಮಸ್, (ನ)=ಕ್ರಮವಾಗಿ ಮೂರು ಗುಣಗಳು. ಜನುಸ್, ಜನನ, ಜನ್ಮನ್ (ನ), ಜನಿ, ಉತ್ಪತ್ತಿ (ಸ್ತ್ರೀ), ಉದ್ಭವ (ಪು)=ಜನ್ಮ, ಉತ್ಪತ್ತಿ. ೧೬೦. ಪ್ರಾಣಿನ್, ಚೇತನ, ಜನ್ಮಿನ್, ಜಂತು, ಜನ್ಯು, ಶರೀರಿನ್ (ಪು)=ಪ್ರಾಣಿ. ಜಾತಿ (ಸ್ತ್ರೀ), ಜಾತ, ಸಾಮಾನ್ಯ (ನ)=ಜಾತಿ (Kind, Genus). ವ್ಯಕ್ತಿ (ಸ್ತ್ರೀ)=ವ್ಯಕ್ತಿ, ದ್ರವ್ಯ (Individual).

ಧೀವರ್ಗಃ

೧೬೧-೧೬೨. ಚಿತ್ತ, ಚೇತಸ್, ಹೃದಯ, ಸ್ವಾಂತ, ಹೃದ್, ಮಾನಸ, ಮನಸ್ (ನ)=ಮನಸ್ಸು. ಬುದ್ಧಿ, ಮನೀಷಾ, ಧಿಷಣಾ, ಧೀ, ಪ್ರಜ್ಞಾ, ಶೇಮುಷೀಮತಿ, ಪ್ರೇಕ್ಷಾ, ಉಪಲಬ್ಧಿ, ಚಿತ್, ಸಂವಿದ್, ಪ್ರತಿಪದ್, ಜ್ಞಪ್ತಿ, ಚೇತನಾ (ಸ್ತ್ರೀ)=ಬುದ್ಧಿ, ಜ್ಞಾನ. ಮೇಧಾ (ಸ್ತ್ರೀ)=ಸ್ಮರಣಶಕ್ತಿಯುಳ್ಳ ಬುದ್ಧಿ (Retentive faculty). ಸಂಕಲ್ಪ (ಪು)=ಮನೋವ್ಯಾಪಾರ

ಚಿತ್ತಾಭೋಗೋ ಮನಸ್ಕಾರಶ್ಚರ್ಚಾ ಸಂಖ್ಯಾ ವಿಚಾರಣಾ ।
ಅಧ್ಯಾಹಾರಸ್ತರ್ಕ ಊಹೋ ವಿಚಿಕಿತ್ಸಾ ತು ಸಂಶಯಃ ॥ ೧೬೩
ಸಂದೇಹದ್ವಾಪರೌ ಚಾಥ ಸಮೌ ನಿರ್ಣಯನಿಶ್ಚಯೌ ।
ಮಿಥ್ಯಾದೃಷ್ಟಿರ್ನಾಸ್ತಿಕತಾ ವ್ಯಾಪಾದೋ ದ್ರೋಹಚಿಂತನಮ್ ॥ ೧೬೪
ಸಮೌ ಸಿದ್ಧಾಂತರಾದ್ಧಾಂತೌ ಭ್ರಾಂತಿರ್ಮಿಥ್ಯಾಮತಿರ್ಭ್ರಮಃ ।
ಸಮೌ ಸಂಕೇತಸಮಯೌ ಪ್ರತಿಪತ್ತಿರ್ವಿಹಸ್ತತಾ ॥ ೧೬೫
ಸಂವಿದಾಗೂಃ ಪ್ರತಿಜ್ಞಾನಂ ನಿಯಮಾಶ್ರವಸಂಶ್ರವಾಃ ।
ಅಂಗೀಕಾರಾಭ್ಯುಪಗಮ ಪ್ರತಿಶ್ರವಸಮಾಧಯಃ ॥ ೧೬೬
ಮೋಕ್ಷೇ ಧೀರ್ಜ್ಞಾನಮನ್ಯತ್ರ ವಿಜ್ಞಾನಂ ಶಿಲ್ಪಶಾಸ್ತ್ರಯೋಃ ।
ಮುಕ್ತಿಃ ಕೈವಲ್ಯನಿರ್ವಾಣಶ್ರೇಯೋನಿಃಶ್ರೇಯಸಾಮೃತಮ್ ॥ ೧೬೭
ಮೋಕ್ಷೋಽಪವರ್ಗೋಽಥಾಜ್ಞಾನಮವಿದ್ಯಾಹಂಮತಿಃ ಸ್ತ್ರಿಯಾಮ್ ।
ರೂಪಂ ಶಬ್ದೋ ಗಂಧರಸಸ್ಪರ್ಶಾಶ್ಚ ವಿಷಯಾ ಅಮೀ ॥ ೧೬೮

(Intention). ೧೬೩-೧೬೪. ಚಿತ್ತಾಭೋಗ, ಮನಸ್ಕಾರ (ಪು)=ಮನಸ್ಸಿನ ತತ್ಪರತೆ (Attention of the mind to its own feelings). ಚರ್ಚಾ, ಸಂಖ್ಯಾ, ವಿಚಾರಣಾ (ಸ್ತ್ರೀ)=ಮನಸ್ಸಿನಿಂದ ವಿಷಯ ಪರೀಕ್ಷಣೆ (Investigation ; Perusal), ಅಧ್ಯಾಹಾರ, ತರ್ಕ, ಊಹ (ಪು)=ಊಹೆ (Conjecture). ವಿಚಿಕಿತ್ಸಾ (ಸ್ತ್ರೀ), ಸಂಶಯ, ಸಂದೇಹ, ದ್ವಾಪರ (ಪು)=ಸಂಶಯ. ನಿರ್ಣಯ, ನಿಶ್ಚಯ (ಪು)=ನಿಶ್ಚಯ. ಮಿಥ್ಯಾದೃಷ್ಟಿ, ನಾಸ್ತಿಕತಾ (ಸ್ತ್ರೀ)=ಪರಲೋಕವಿಲ್ಲವೆಂಬ ಬುದ್ಧಿ (Atheism). ವ್ಯಾಪಾದ (ಪು), ದ್ರೋಹಚಿಂತನ (ನ)=ದ್ರೋಹಮಾಡಬೇಕೆಂಬ ದುರುದ್ದೇಶ (Malice). ೧೬೫. ಸಿದ್ಧಾಂತ, ರಾದ್ಧಾಂತ=ಸಾಧಿಸಿದ ನಿರ್ಣಯ. ಭ್ರಾಂತಿ, ಮಿಥ್ಯಾಮತಿ (ಸ್ತ್ರೀ), ಭ್ರಮ (ಪು)=ತಪ್ಪು ತಿಳಿವಳಿಕೆ. ಸಂಕೇತ, ಸಮಯ (ಪು)=ಶಾಸ್ತ್ರೀಯವಾದ ಸಂಕೇತ, ನಿಲುವು. ಪ್ರತಿಪತ್ತಿ (ಸ್ತ್ರೀ)=ವಿಶ್ವಾಸ, ನಂಬಿಕೆ. ವಿಹಸ್ತತಾ (ಸ್ತ್ರೀ)=ಕಂಗೆಡುವುದು, ದಿಕ್ಕು ತೋಚದಿರುವುದು. ೧೬೬. ಸಂವಿದ್, ಆಗೂ (ಸ್ತ್ರೀ), ಪ್ರತಿಜ್ಞಾನ (ನ), ನಿಯಮ, ಆಶ್ರವ, ಸಂಶ್ರವ, ಅಂಗೀಕಾರ, ಅಭ್ಯುಪಗಮ, ಪ್ರತಿಶ್ರವ, ಸಮಾಧಿ (ಪು)=ಅಂಗೀಕಾರ, ಒಪ್ಪಿಗೆ. ೧೬೭-೧೬೮. ಜ್ಞಾನ (ನ)=ಮೋಕ್ಷೋಪಯುಕ್ತವಾದ ತಿಳಿವು. ವಿಜ್ಞಾನ (ನ)=ಮೋಕ್ಷೋಪ ಯುಕ್ತವಲ್ಲದ ಶಿಲ್ಪ ಶಾಸ್ತ್ರಗಳ ತಿಳಿವು. ಮುಕ್ತಿ (ಸ್ತ್ರೀ), ಕೈವಲ್ಯ, ನಿರ್ವಾಣ, ಶ್ರೇಯಸ್, ನಿಃಶ್ರೇಯಸ, ಅಮೃತ

ಗೋಚರಾ ಇಂದ್ರಿಯಾರ್ಥಾಶ್ಚ ಹೃಷೀಕಂ ವಿಷಯೀಂದ್ರಿಯಮ್ ।
ಕರ್ಮೇಂದ್ರಿಯಂ ತು ಪಾಯ್ವಾದಿ ಮನೋನೇತ್ರಾದಿ ಧೀಂದ್ರಿಯಮ್ ॥ ೧೬೯
ತುವರಸ್ತು ಕಷಾಯೋಽಸ್ತ್ರೀ ಮಧುರೋ ಲವಣಃ ಕಟುಃ ।
ತಿಕ್ತೋಽಮ್ಲಶ್ಚ ರಸಾಃ ಪುಂಸಿ ತದ್ವತ್ಸು ಷಡಮೀ ತ್ರಿಷು ॥ ೧೭೦
ವಿಮರ್ದೋತ್ಥೇ ಪರಿಮಲೋ ಗಂಧೇ ಜನಮನೋಹರೇ ।
ಆಮೋದಸ್ಸೋಽತಿನಿರ್ಹಾರೀ ವಾಚ್ಯಲಿಂಗತ್ವಮಾಗುಣಾತ್ ॥ ೧೭೧
ಸಮಾಕರ್ಷೀ ತು ನಿರ್ಹಾರೀ ಸುರಭಿರ್ಘ್ರಾಣತರ್ಪಣಃ ।
ಇಷ್ಟಗಂಧಸ್ಸುಗಂಧಿಃ ಸ್ಯಾದಾಮೋದೀ ಮುಖವಾಸನಃ ॥ ೧೭೨

(ನ), ಮೋಕ್ಷ, ಅಪವರ್ಗ (ಪು)=ಮುಕ್ತಿ. ಅಜ್ಞಾನ (ನ), ಅವಿದ್ಯಾ, ಅಹಂಮತಿ (ಸ್ತ್ರೀ)=ಅಜ್ಞಾನ. ೧೬೮-೧೬೯. ರೂಪ (ನ), ಶಬ್ದ, ಗಂಧ, ರಸ, ಸ್ಪರ್ಶ (ಪು)=ಇವು ಐದು ಜ್ಞಾನೇಂದ್ರಿಯಗಳಿಂದ ತಿಳಿಯಬಹುದಾದ ವಿಷಯಗಳು. ಇವುಗಳಿಗೆ ವಿಷಯಗೋಚರ, ಇಂದ್ರಿಯಾರ್ಥ (ಪು) ಎಂದು ಹೆಸರು. ಹೃಷೀಕ, ವಿಷಯಿನ್, ಇಂದ್ರಿಯ (ನ)=ಇಂದ್ರಿಯ (Organ of Sense). ಕರ್ಮೇಂದ್ರಿಯ (ನ)=ಗುದ ಮೊದಲಾದ ಇಂದ್ರಿಯ[1]. ಧೀಂದ್ರಿಯ (ನ) ಮನಸ್ಸು, ನೇತ್ರ ಮೊದಲಾದ ಜ್ಞಾನೇಂದ್ರಿಯ.[2] ೧೭೦. ತುವರ, ಕಷಾಯ (ಪು)=ಒಗರು. ಮಧುರ (ಪು)=ಸಿಹಿ. ಲವಣ (ಪು)=ಉಪ್ಪು. ಕಟು (ಪು)=ಕಾರ. ತಿಕ್ತ (ಪು) = ಕಹಿ. ಅಮ್ಲ (ಪು)=ಹುಳಿ. ಇವು ಷಡ್ರಸಗಳು. ಇವು ವಿಶೇಷ್ಯನಿಘ್ನವಾದಾಗ ಮೂರು ಲಿಂಗಗಳಲ್ಲಿಯೂ ಇರುತ್ತವೆ : ಮಧುರಂ ಜಲಂ, ಮಧುರಾ ಶರ್ಕರಾ, ಮಧುರಃ ಇಕ್ಷುಃ. ಕಟು ಶಬ್ದವು ಸ್ತ್ರೀಲಿಂಗದಲ್ಲಿ ಕಟುಃ ಕಟ್ವೀ ಎಂದು ಎರಡು ರೂಪಗಳನ್ನು ಪಡೆಯುತ್ತದೆ. ೧೭೧. ಪರಿಮಲ (ಪು)=ಘರ್ಷಣದಿಂದ ಉದ್ಭವಿಸುವ ಚಂದನಾದಿ ಗಂಧ. ಆಮೋದ (ಪು)=ಅತ್ಯಂತ ಸುಗಂಧ. ಇಲ್ಲಿಂದ ಮುಂದೆ 'ಗುಣೇ ಶುಕ್ಲಾದಯಃ' ಎಂಬ ಶ್ಲೋಕದವರೆಗೆ—ಧೀವರ್ಗವು ಮುಗಿಯುವವರೆಗೆ ಇರುವ ಶಬ್ದಗಳು ವಿಶೇಷ್ಯನಿಘ್ನಗಳು. ೧೭೨. ಸಮಾಕರ್ಷಿನ್, ನಿರ್ಹಾರಿನ್ (ಪು. ಸ್ತ್ರೀ. ನ)=ದೂರ ವ್ಯಾಪಿಸುವ ಸುವಾಸನೆಯುಳ್ಳ ದ್ರವ್ಯ (ಸ್ತ್ರೀ. ಸಮಾಕರ್ಷಿಣೀ, ನಿರ್ಹಾರಿಣೀ), ಸುರಭಿ, ಘ್ರಾಣತರ್ಪಣ, ಇಷ್ಟಗಂಧ, ಸುಗಂಧಿ (ಪು. ಸ್ತ್ರೀ. ನ)=ಪ್ರಿಯವಾದ ಗಂಧವುಳ್ಳ ದ್ರವ್ಯ (ಸ್ತ್ರೀ. ಘ್ರಾಣತರ್ಪಣಾ, ಇಷ್ಟಗಂಧಾ).

---

1 ಕರ್ಮೇಂದ್ರಿಯ=ವಾಕ್, ಪಾಣಿ, ಪಾದ, ಗುಹ್ಯ, ಗುದ.

2 ಜ್ಞಾನೇಂದ್ರಿಯ=ಮನಸ್ಸು, ಶ್ರೋತ್ರ, ತ್ವಕ್, ನೇತ್ರ, ಜಿಹ್ವಾ, ನಾಸಿಕಾ.

ಪೂತಿಗಂಧಿಸ್ತು ದುರ್ಗಂಧೋ ವಿಸ್ರಂ ಸ್ಯಾದಾಮಗಂಧಿ ಯತ್ ।
ಶುಕ್ಲ ಶುಭ್ರಶುಚಿಶ್ವೇತವಿಶದಶ್ಯೇತಪಾಂಡರಾಃ ॥ ೧೭೩
ಅವದಾತಸ್ಸಿತೋ ಗೌರೋ ವಲಕ್ಷೋ ಧವಲೋಽರ್ಜುನಃ ।
ಹರಿಣಃ ಪಾಂಡುರಃ ಪಾಂಡುರೀಷತ್ಪಾಂಡುಸ್ತು ಧೂಸರಃ ॥ ೧೭೪
ಕೃಷ್ಣೇ ನೀಲಾಸಿತಶ್ಯಾಮಕಾಲಶ್ಯಾಮಲಮೇಚಕಾಃ ।
ಪೀತೋ ಗೌರೋ ಹರಿದ್ರಾಭಃ ಪಾಲಾಶೋ ಹರಿತೋ ಹರಿತ್ ॥ ೧೭೫
ಲೋಹಿತೋ ರೋಹಿತೋ ರಕ್ತಃ ಶೋಣಃ ಕೋಕನದಚ್ಛವಿಃ ।
ಅವ್ಯಕ್ತರಾಗಸ್ತ್ವರುಣಃ ಶ್ವೇತರಕ್ತಸ್ತು ಪಾಟಲಃ ॥ ೧೭೬
ಶ್ಯಾವಃಸ್ಯಾತ್ಕಪಿಶೋ ಧೂಮ್ರಧೂಮಲೌ ಕೃಷ್ಣಲೋಹಿತೇ ।
ಕಡಾರಃ ಕಪಿಲಃ ಪಿಂಗಪಿಶಂಗೌ ಕದ್ರುಪಿಂಗಲೌ ॥ ೧೭೭

ಆಮೋದಿನ್, ಮುಖವಾಸನ (ಪು. ಸ್ತ್ರೀ. ನ)=ಬಾಯನ್ನು ಸುಗಂಧಗೊಳಿಸುವ ತಾಂಬೂಲಾದಿ (ಸ್ತ್ರೀ. ಆಮೋದಿನೀ, ಮುಖವಾಸನಾ). ೧೭೩-೧೭೪. ಪೂತಿಗಂಧಿ, ದುರ್ಗಂಧ (ಪು. ಸ್ತ್ರೀ. ನ)=ದುರ್ವಾಸನೆಯುಳ್ಳ ವಸ್ತು (ಸ್ತ್ರೀ. ದುರ್ಗಂಧಾ). ವಿಸ್ರ, ಆಮಗಂಧಿ (ಪು. ಸ್ತ್ರೀ. ನ)=ಅಪಕ್ವವಾಗಿ ಕೆಟ್ಟ ವಾಸನೆಯುಳ್ಳ ವಸ್ತು (ಸ್ತ್ರೀ. ವಿಸ್ರಾ). ಶುಕ್ಲ, ಶುಭ್ರ, ಶುಚಿ, ಶ್ವೇತ, ವಿಶದ, ಶ್ಯೇತ, ಪಾಂಡರ, ಅವದಾತ, ಸಿತ, ಗೌರ, ವಲಕ್ಷ, ಧವಲ, ಅರ್ಜುನ (ಪು)=ಬಿಳಿಯ ಬಣ್ಣ, ಶುಭ್ರವರ್ಣ. ಹರಿಣ, ಪಾಂಡುರ, ಪಾಂಡು (ಪು)=ಕೊಂಚ ಹಳದಿ ಮಿಶ್ರವಾದ ಬಿಳುಪು. ಧೂಸರ (ಪು)=ಕೊಂಚ ಬಿಳುಪು (Grey) . ೧೭೫. ಕೃಷ್ಣ, ನೀಲ, ಅಸಿತ, ಶ್ಯಾಮ, ಕಾಲ, ಶ್ಯಾಮಲ, ಮೇಚಕ (ಪು)=ಕಪ್ಪು. ಪೀತ, ಗೌರ, ಹರಿದ್ರಾಭ (ಪು)=ಹಳದಿ. ಪಾಲಾಶ, ಹರಿತ, ಹರಿತ್ (ಪು)=ಹಸಿರು. ೧೭೬. ರೋಹಿತ, ಲೋಹಿತ, ರಕ್ತ (ಪು)=ಕೆಂಪು. ಶೋಣ, ಕೋಕನದಚ್ಛವಿ (ಪು)=ಕೆಂದಾವರೆಯ ಬಣ್ಣ (Crimson). ಅವ್ಯಕ್ತರಾಗ, ಅರುಣ (ಪು)=ಎಳೆಗೆಂಪು (Reddish brown). ಶ್ವೇತರಕ್ತ, ಪಾಟಲ (ಪು)=ಕೆಂಪು ಬಿಳುಪು ಬೆರೆತಿರುವ ಬಣ್ಣ (Pale red). ೧೭೭. ಶ್ಯಾವ, ಕಪಿಶ (ಪು)= ಕಪ್ಪು ಹಳದಿ ಮಿಶ್ರವಾದ ಬಣ್ಣ (Brown). ಧೂಮ್ರ, ಧೂಮಲ, ಕೃಷ್ಣಲೋಹಿತ (ಪು)=ಕಪ್ಪು ಕೆಂಪು ಮಿಶ್ರವಾದ ಬಣ್ಣ (Dark red, Purple). ಕಡಾರ, ಕಪಿಲ, ಪಿಂಗ, ಪಿಶಂಗ, ಕದ್ರು, ಪಿಂಗಲ (ಪು)=ಪಿಂಗಳ ವರ್ಣ, ಗೋರೋಚನದ ಬಣ್ಣ (Tawny). ೧೭೮. ಚಿತ್ರ, ಕಿರ್ಮೀರ, ಕಲ್ಮಾಷ, ಶಬಲ, ಕರ್ಬುರ (ಪು)= ಚಿತ್ರವರ್ಣ. ಶುಕ್ಲಾದಿ ಶಬ್ದಗಳು ವರ್ಣವಾಚಕವಾದಾಗ ಪುಲ್ಲಿಂಗಗಳು.

ಚಿತ್ರಂ ಕಿರ್ಮೀರಕಲ್ಮಾಷಶಬಲೈತಾಶ್ಚ ಕರ್ಬುರೇ ।
ಗುಣೇ ಶುಕ್ಲಾದಯಃ ಪುಂಸಿ ಗುಣಿಲಿಂಗಾಸ್ತು ತದ್ವತಿ ॥ ೧೭೮

ಇತಿ ಧೀವರ್ಗಃ

೬. ವಾಗ್ವರ್ಗಃ

ಬ್ರಾಹ್ಮೀ ತು ಭಾರತೀ ಭಾಷಾ ಗೀರ್ವಾಗ್ವಾಣೀ ಸರಸ್ವತೀ ।
ವ್ಯಾಹಾರ ಉಕ್ತಿರ್ಲಪಿತಂ ಭಾಷಿತಂ ವಚನಂ ವಚಃ ॥ ೧೭೯
ಅಪಭ್ರಂಶೋಽಪಶಬ್ದಃ ಸ್ಯಾಚ್ಛಾಸ್ತ್ರೇ ಶಬ್ದಸ್ತು ವಾಚಕಃ ।
ತಿಙ್ಸುಬಂತಚಯೋ ವಾಕ್ಯಂ ಕ್ರಿಯಾ ವಾ ಕಾರಕಾನ್ವಿತಾ ॥ ೧೮೦
ಶ್ರುತಿಃ ಸ್ತ್ರೀ ವೇದ ಆಮ್ನಾಯಸ್ತ್ರಯೀ ಧರ್ಮಸ್ತು ತದ್ವಿಧಿಃ ।
ಸ್ತ್ರಿಯಾಮೃಕ್ಸಾಮಯಜುಷೀ ಇತಿ ವೇದಾಸ್ತ್ರಯಸ್ತ್ರಯೀ ॥ ೧೮೧

ವಿಶೇಷಣಗಳಾದಾಗ ತ್ರಿಲಿಂಗಗಳು. (ಸ್ತ್ರೀಲಿಂಗದಲ್ಲಿ ರೂಪವಿಶೇಷ:—ಶ್ಯೇತ=ಶ್ಯೇನೀ—ಶ್ಯೇತಾ, ಗೌರ=ಗೌರೀ, ಹರಿಣ=ಹರಿಣೀ, ಪಾಂಡು=ಪಾಂಡುಃ—ಪಾಂಡ್ವೀ, ಕಾಲ =ಕಾಲೀ, ರೋಹಿತ=ರೋಹಿತಾ—ರೋಹಿಣೀ, ಪಿಶಂಗ=ಪಿಶಂಗಾ—ಪಿಶಂಗೀ, ಕಲ್ಮಾಷ=ಕಲ್ಮಾಷೀ, ಏತ=ಏತಾ—ಏನೀ).

ವಾಗ್ವರ್ಗ

೧೭೯. ಬ್ರಾಹ್ಮೀ, ಭಾರತೀ, ಭಾಷಾ, ಗಿರ್, ವಾಚ್, ವಾಣೀ, ಸರಸ್ವತೀ (ಸ್ತ್ರೀ)=ವಾಗ್ದೇವತೆ ; ವಚನ, ಮಾತು. ವ್ಯಾಹಾರ (ಪು), ಉಕ್ತಿ (ಸ್ತ್ರೀ), ಲಪಿತ, ಭಾಷಿತ, ವಚನ, ವಚಸ್ (ನ)=ವಚನ, ಮಾತು. ೧೮೦. ಅಪಭ್ರಂಶ, ಅಪಶಬ್ದ (ಪು)=ವ್ಯಾಕರಣ ವಿರುದ್ಧವಾದ ಅಸಾಧು ಶಬ್ದ. ಶಬ್ದ=ಸಾಧುಶಬ್ದ. ವಾಕ್ಯ (ನ)= ಪೂರ್ಣಾರ್ಥವನ್ನು ಕೊಡುವ ತಿಙಂತ ಅಥವಾ ಸುಬಂತಗಳ ಸಮುದಾಯ. ಉದಾ :— 'ಪಚತಿ ಭವತಿ' (ಪಾಕೋಭವ ತೀತ್ಯರ್ಥಃ), 'ಪ್ರಕೃತಿಸಿದ್ಧಮಿದಂ ಹಿ ಮಹಾತ್ಮನಾಮ್' ಅಥವಾ ಕಾರಕಾನ್ವಿತವಾದ ಕ್ರಿಯೆ ವಾಕ್ಯವೆನಿಸುವುದು. ಉದಾ:— ದೇವದತ್ತ ದಂಡಂ ಸ್ಪೃಶ ಹಸ್ತೇನ. ೧೮೧. ಶ್ರುತಿ (ಸ್ತ್ರೀ), ವೇದ, ಆಮ್ನಾಯ (ಪು), ತ್ರಯೀ (ಸ್ತ್ರೀ)=ವೇದ. ಧರ್ಮ=ವೇದವಿಹಿತವಾದ ಕರ್ಮ. ಋಚ್ (ಸ್ತ್ರೀ), ಸಾಮನ್, ಯಜುಸ್ (ನ)=ಇವು ಮೂರು ವೇದಗಳ ಬೇರೆ ಬೇರೆ

ಶಿಕ್ಷೇತ್ಯಾದಿ ಶ್ರುತೇರಂಗಮೋಂಕಾರಪ್ರಣವೌ ಸಮೌ ।
ಶಿಕ್ಷಾ ವ್ಯಾಕರಣಂ ಛಂದೋ ನಿರುಕ್ತಂ ಜ್ಯೌತಿಷಂ ತಥಾ ॥ ೧೮೨
ಕಲ್ಪಶ್ಚೇತಿ ಷಡಂಗಾನಿ ವೇದಸ್ಯಾಹುರ್ಮನೀಷಿಣಃ ।
ಇತಿಹಾಸಃ ಪುರಾವೃತ್ತಮುದಾತ್ತಾದ್ಯಾಸ್ತ್ರಯಃ ಸ್ವರಾಃ ॥ ೧೮೩
ಆನ್ವೀಕ್ಷಿಕೀ ದಂಡನೀತಿಸ್ತರ್ಕವಿದ್ಯಾರ್ಥಶಾಸ್ತ್ರಯೋಃ ।
ಆಖ್ಯಾಯಿಕೋಪಲಬ್ಧಾರ್ಥಾ ಪುರಾಣಂ ಪಂಚಲಕ್ಷಣಮ್ ॥ ೧೮೪
ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೇತಿ ಲಕ್ಷಣಾನಾಂ ತು ಪಂಚಕಮ್ ॥ ೧೮೫
ಪ್ರಬಂಧಃಕಲ್ಪನಾ ಕಥಾ ಪ್ರವಹ್ಲಿಕಾ ಪ್ರಹೇಲಿಕಾ ।
ಸ್ಮೃತಿಸ್ತು ಧರ್ಮಸಂಹಿತಾ ಸಮಾಹೃತಿಸ್ತು ಸಂಗ್ರಹಃ ॥ ೧೮೬
ಸಮಸ್ಯಾ ತು ಸಮಾಸಾರ್ಥಾ ಕಿಂವದಂತೀ ಜನಶ್ರುತಿಃ ।
ವಾರ್ತಾ ಪ್ರವೃತ್ತಿರ್ವೃತ್ತಾಂತ ಉದಂತಃ ಸ್ಯಾದಥಾಹ್ವಯಃ ॥ ೧೮೭
ಆಖ್ಯಾಹ್ವೇ ಅಭಿಧಾನಂ ಚ ನಾಮಧೇಯಂ ಚ ನಾಮ ಚ ।
ಹೂತಿರಾಕಾರಣಾಹ್ವಾನಂ ಸಂಹೂತಿರ್ಬಹುಭಿಃ ಕೃತಾ ॥ ೧೮೮

ಹೆಸರುಗಳು. ತ್ರಯೀ (ಸ್ತ್ರೀ)=ಈ ಮೂರು ವೇದಗಳು. ೧೮೨-೧೮೩. ಶಿಕ್ಷಾ ಮೊದಲಾದುದು ವೇದಾಂಗ. ಓಂಕಾರ, ಪ್ರಣವ (ಪು)=ಓಂಕಾರದ ಹೆಸರು. ವೇದಾಂಗಗಳು ಯಾವುವೆಂದರೇ : ಶಿಕ್ಷಾ (ಸ್ತ್ರೀ), ವ್ಯಾಕರಣ, ಛಂದಸ್, ನಿರುಕ್ತ, ಜ್ಯಾತಿಷ (ನ),ಕಲ್ಪ (ಪು) ಇವು ಆರು. ಇತಿಹಾಸ (ಪು), ಪುರಾವೃತ್ತ (ನ)=ಹಿಂದೆ ನಡೆದುದನ್ನು ತಿಳಿಸುವ ಭಾರತಾದಿ ಗ್ರಂಥ. ಉದಾತ್ತ, ಅನುದಾತ್ತ, ಸ್ವರಿತ (ಪು) ಇವು ಮೂರು ಸ್ವರಗಳು. ೧೮೪. ಆನ್ವೀಕ್ಷಿಕೀ (ಸ್ತ್ರೀ)=ತರ್ಕವಿದ್ಯೆ. ದಂಡನೀತಿ (ಸ್ತ್ರೀ)=ಅರ್ಥಶಾಸ್ತ್ರ. ಆಖ್ಯಾಯಿಕಾ (ಸ್ತ್ರೀ)= ತಿಳಿದಿರುವ ಸಂಗತಿಯನ್ನು ವಿವರಿಸುವ ಗ್ರಂಥವಿಶೇಷ. ಪುರಾಣ (ನ)= ಐದು ಲಕ್ಷಣಗಳಿರುವ ಗ್ರಂಥವಿಶೇಷ. ೧೮೫. ಸರ್ಗ, ಪ್ರತಿಸರ್ಗ, ವಂಶ,. ಮನ್ವಂತರಗಳು, ವಂಶ ಚರಿತೆ ಇವು ಪುರಾಣದ ಐದು ಲಕ್ಷಣ ಗಳು. ೧೮೬. ಕಥಾ=ಚರಿತೆಯಂತೆ ಕಲ್ಪಿಸಿದ ಪ್ರಬಂಧ. ಪ್ರವಹ್ಲಿಕಾ, ಪ್ರಹೇಲಿಕಾ (ಸ್ತ್ರೀ)= ಒಗಟು. ಸ್ಮೃತಿ, ಧರ್ಮಸಂಹಿತಾ (ಸ್ತ್ರೀ)=ಧರ್ಮಶಾಸ್ತ್ರ. ಸಮಾಹೃತಿ (ಸ್ತ್ರೀ) ಸಂಗ್ರಹ (ಪು)=ಸಂಗ್ರಹ. ೧೮೭-೧೮೮. ಸಮಸ್ಯಾ (ಸ್ತ್ರೀ)=ಕವಿಶಕ್ತಿ ಪರೀಕ್ಷಾರ್ಥವಾಗಿ ಶ್ಲೋಕವನ್ನು ಪೂರ್ಣಮಾಡಬೇಕೆಂದು ಕೊಡುವ ಶ್ಲೋಕ ಭಾಗ. ಕಿಂವದಂತೀ, ಜನಶ್ರುತಿ (ಸ್ತ್ರೀ)=ಕರ್ಣಾ ಕರ್ಣಿಕೆಯಾದ ಹೇಳಿಕೆ. ವಾರ್ತಾ, ಪ್ರವೃತ್ತಿ (ಸ್ತ್ರೀ), ವೃತ್ತಾಂತ, ಉದಂತ (ಪು)=ವಾರ್ತೆ,

ವಿವಾದೋ ವ್ಯವಹಾರಃ ಸ್ಯಾದುಪನ್ಯಾಸಸ್ತು ವಾಙ್ಮುಖಮ್ ।
ಉಪೋದ್ಘಾತ ಉದಾಹಾರಃ ಶಪನಂ ಶಪಥಃ ಪುಮಾನ್ ॥ ೧೮೯
ಪ್ರಶ್ನೋಽನುಯೋಗಃ ಪೃಚ್ಛಾ ಚ ಪ್ರತಿವಾಕ್ಯೋತ್ತರೇ ಸಮೇ ।
ಮಿಥ್ಯಾಭಿಯೋಗೋಽಭ್ಯಾಖ್ಯಾನಮಥ ಮಿಥ್ಯಾಭಿಶಂಸನಮ್ ॥ ೧೯೦
ಅಭಿಶಾಪಃ ಪ್ರಣಾದಸ್ತು ಶಬ್ದಃ ಸ್ಯಾದನುರಾಗಜಃ ।
ಯಶಃ ಕೀರ್ತಿಸ್ಸಮಜ್ಞಾ ಚ ಸ್ತವಃ ಸ್ತೋತ್ರಂ ಸ್ತುತಿರ್ನುತಿಃ ॥ ೧೯೧
ಆಮ್ರೇಡಿತಂ ದ್ವಿಸ್ತ್ರಿರುಕ್ತಮುಚ್ಚೈರ್ಘುಷ್ಟಂ ತು ಘೋಷಣಾ ।
ಕಾಕುಃ ಸ್ತ್ರಿಯಾಂ ವಿಕಾರೋ ಯಃ ಶೋಕಭೀತ್ಯಾದಿಭಿರ್ಧ್ವನೇಃ ॥ ೧೯೨
ಅವರ್ಣಾಕ್ಷೇಪನಿರ್ವಾದಪರಿವಾದಾಪವಾದವತ್ ।
ಉಪಕ್ರೋಶೋ ಜುಗುಪ್ಸಾ ಚ ಕುತ್ಸಾ ನಿಂದಾ ಚ ಗರ್ಹಣೇ ॥ ೧೯೩

ಸುದ್ದಿ. ಆಹ್ವಯ (ಪು), ಆಖ್ಯಾ, ಆಹ್ವಾ (ಸ್ತ್ರೀ), ಅಭಿಧಾನ, ನಾಮಧೇಯ, ನಾಮನ್ (ನ)=ಹೆಸರು. ಹೂತಿ, ಆಕಾರಣಾ (ಸ್ತ್ರೀ), ಆಹ್ವಾನ (ನ)=ಆಹ್ವಾನ, ಕರೆ. ಸಂಹೂತಿ (ಸ್ತ್ರೀ)=ಬಹುಜನಗಳಿಂದ ಬಂದ ಆಹ್ವಾನ. ೧೮೯. ವಿವಾದ, ವ್ಯವಹಾರ (ಪು)=ವಿವಾದ (Lawsuit). ಉಪನ್ಯಾಸ, ವಾಙ್ಮುಖ (ನ)=ಹೇಳಿಕೆ, ಭಾಷಣ. ಉಪೋದ್ಘಾತ, ಉದಾಹಾರ (ಪು)=ಪ್ರಕೃತೋಪಯುಕ್ತವಾದ ವಾಕ್ಯ. ಶಪನ (ನ), ಶಪಥ (ಪು)=ಶಪಥ, ಆಣೆ. ೧೯೦-೧೯೧. ಪ್ರಶ್ನ, ಅನುಯೋಗ (ಪು), ಪೃಚ್ಛಾ (ಸ್ತ್ರೀ)=ಪ್ರಶ್ನೆ. ಪ್ರತಿವಾಕ್ಯ, ಉತ್ತರ (ನ)=ಉತ್ತರ. ಮಿಥ್ಯಾಭಿಯೋಗ (ಪು), ಅಭ್ಯಾಖ್ಯಾನ (ನ)=ಸುಳ್ಳು ಆಪಾದನೆ (False Charge). ಮಿಥ್ಯಾಭಿಶಂಸನ (ನ), ಅಭಿಶಾಪ (ಪು)=ಅಪಪ್ರಚಾರ, ಸುಳ್ಳು ಸುದ್ದಿ ಹರಡುವುದು (False Slander). ಪ್ರಣಾದ (ಪು)=ಹರ್ಷೋದ್ಗಾರ. ಯಶಸ್ (ನ), ಕೀರ್ತಿ, ಸಮಜ್ಞಾ[1] (ಸ್ತ್ರೀ)=ಕೀರ್ತಿ, ಯಶಸ್ಸು. ಸ್ತವ (ಪು), ಸ್ತೋತ್ರ (ನ), ಸ್ತುತಿ, ನುತಿ (ಸ್ತ್ರೀ)=ಹೊಗಳಿಕೆ. ೧೯೨. ಆಮ್ರೇಡಿತ (ನ)=ಸಂಭ್ರಮಾದಿ ಗಳಿಂದ ಎರಡು ಮೂರು ಸಲ ಉಚ್ಚರಿಸಲ್ಪಟ್ಟ ಶಬ್ದ. ಉದಾ :—ಸರ್ಪ, ಸರ್ಪ. ಉಚ್ಚೈರ್ಘುಷ್ಟ (ನ), ಘೋಷಣಾ (ಸ್ತ್ರೀ) ಕೂಗಿ ಹೇಳುವುದು, ಸಾರಿ ಹೇಳುವುದು. ಕಾಕು (ಸ್ತ್ರೀ)=ಶೋಕ. ಭಯ ಮುಂತಾದವುಗಳಿಂದಾಗುವ ಧ್ವನಿ ವಿಕಾರ. ೧೯೩. ಅವರ್ಣ, ಆಕ್ಷೇಪ, ನಿರ್ವಾದ, ಪರಿವಾದ, ಅಪವಾದ, ಉಪಕ್ರೋಶ (ಪು), ಜುಗುಪ್ಸಾ, ಕುತ್ಸಾ, ನಿಂದಾ (ಸ್ತ್ರೀ), ಗರ್ಹಣ[2] (ನ)=ನಿಂದೆ.

---

[1] ಸಮಾಜ್ಞಾ, ಸಮಜ್ಯಾ ಎಂದು ಪಾಠಾಂತರವಿದೆ. [2] ಗರ್ಹಣಾ (ಸ್ತ್ರೀ).

ಪಾರುಷ್ಯಮತಿವಾದಃ ಸ್ಯಾದ್ಭರ್ತ್ಸನಂ ತ್ವಪಕಾರಗೀಃ ।
ಯಸ್ಸನಿಂದ ಉಪಾಲಂಭಸ್ತತ್ರ ಸ್ಯಾತ್ಪರಿಭಾಷಣಮ್ ॥ ೧೯೪
ತತ್ರ ತ್ವಾಕ್ಷಾರಣಾ ಯಃ ಸ್ಯಾದಾಕ್ರೋಶೋ ಮೈಥುನಂ ಪ್ರತಿ ।
ಸ್ಯಾದಾಭಾಷಣಮಾಲಾಪಃ ಪ್ರಲಾಪೋಽನರ್ಥಕಂ ವಚಃ ॥ ೧೯೫
ಅನುಲಾಪೋ ಮುಹುರ್ಭಾಷಾ ವಿಲಾಪಃ ಪರಿದೇವನಮ್ ।
ವಿಪ್ರಲಾಪೋ ವಿರೋಧೋಕ್ತಿಸ್ಸಂಲಾಪೋ ಭಾಷಣಂ ಮಿಥಃ ॥ ೧೯೬
ಸುಪ್ರಲಾಪಸ್ಸುವಚನಮಪಲಾಪಸ್ತು ನಿಹ್ನವಃ ।
ಸಂದೇಶವಾಗ್ವಾಚಿಕಂ ಸ್ಯಾದ್ವಾಗ್ಭೇದಾಸ್ತು ತ್ರಿಷೂತ್ತರೇ ॥ ೧೯೭
ರುಶತೀ ವಾಗಕಲ್ಯಾಣೀ ಸ್ಯಾತ್ಕಲ್ಯಾ ತು ಶುಭಾತ್ಮಿಕಾ ।
ಅತ್ಯರ್ಥಮಧುರಂ ಸಾಂತ್ವಂ ಸಂಗತಂ ಹೃದಯಂಗಮಮ್ ॥ ೧೯೮
ನಿಷ್ಠುರಂ ಪರುಷಂ ಗ್ರಾಮ್ಯಮಶ್ಲೀಲಂ ಸೂನೃತಂ ಪ್ರಿಯೇ ।
ಸತ್ಯೇಽಥ ಸಂಕುಲಕ್ಲಿಷ್ಟೇ ಪರಸ್ಪರಪರಾಹತೇ ॥ ೧೯೯

---

೧೯೪. ಪಾರುಷ್ಯ (ನ), ಅತಿವಾದ (ಪು)=ಅಪ್ರಿಯವಾದ ಮಾತು. ಭರ್ತ್ಸನ (ನ), ಅಪಕಾರಗಿರ್ (ಸ್ತ್ರೀ)=ಬೆದರಿಕೆಯ ಮಾತು. ಉಪಾಲಂಭ (ಪು), ಪರಿಭಾಷಣ (ನ)= ಬಯ್ಯುವುದು. ೧೯೫. ಆಕ್ಷಾರಣಾ[1] (ಸ್ತ್ರೀ)=ಮೈಥುನಕ್ಕಾಗಿ ಹಂಬಲಿಸಿ ಕೂಗುವುದು. ಆಭಾಷಣ (ನ), ಆಲಾಪ (ಪು)=ಸಂಭಾಷಣೆ. ಪ್ರಲಾಪ (ಪು)=ವ್ಯರ್ಥವಾದ ಮಾತು (Prattle). ೧೯೬. ಅನುಲಾಪ (ಪು)=ಮತ್ತೆ ಮತ್ತೆ ಹೇಳುವುದು. ವಿಲಾಪ (ಪು), ಪರಿದೇವನ (ನ)=ಅಳುವುದು, ಗೋಳಾಡುವುದು (Lamentation). ವಿಪ್ರಲಾಪ (ಪು), ವಿರೋಧೋಕ್ತಿ (ಸ್ತ್ರೀ)=ಅನ್ಯೋನ್ಯ ವಿರುದ್ಧವಾದ ಮಾತು. ಸಂಲಾಪ (ಪು)=ಅನ್ಯೋನ್ಯ ಸಂಭಾಷಣೆ (Conversation). ೧೯೭. ಸುಪ್ರಲಾಪ (ಪು)=ಒಳ್ಳೆಯ ಮಾತು. ಅಪಲಾಪ, ನಿಹ್ನವ (ಪು)=ಅಲ್ಲಗಳೆಯುವುದು. ಸಂದೇಶವಾಚ್ (ಸ್ತ್ರೀ) ವಾಚಿಕ (ನ)=ಹೇಳಿಕಳಿಸುವ ಮಾತು (Message). ಮುಂದೆ ಹೇಳುವ ಶಬ್ದಗಳು ಲಿಂಗತ್ರಯದಲ್ಲಿ ಇರುತ್ತವೆ. ೧೯೮. ರುಶತೀ (ಸ್ತ್ರೀ)=ಅಶುಭವಾಕ್ಯ (ರುಶನ್ ಶಬ್ದಃ, ರುಶತ್ ವಚನಮ್). ಕಲ್ಯಾ (ಸ್ತ್ರೀ)=ಶುಭವಾಕ್ಯ. ಸಾಂತ್ವ (ನ)=ಬಹಳ ಒಳ್ಳೆಯ ಮಾತು. ಸಂಗತ (ನ)=ಮನಸ್ಸಿಗೆ ಒಪ್ಪುವ ಮಾತು.

೧೯೯. ನಿಷ್ಠುರ, ಪರುಷ (ನ)=ಒರಟು ಮಾತು. ಗ್ರಾಮ್ಯ, ಅಶ್ಲೀಲ (ನ)=ಭಂಡತನದ

---

[1] ಆಕ್ಷಾರಣ ಎಂದು ನಪುಂಸಕವೂ ಉಂಟು.

ಲುಪ್ತವರ್ಣಪದಂ ಗ್ರಸ್ತಂ ನಿರಸ್ತಂ ತ್ವರಿತೋದಿತಮ್ ।
ಅಂಬೂಕೃತಂ ಸನಿಷ್ಠೀವಮಬದ್ಧಂ ಸ್ಯಾದನರ್ಥಕಮ್ ॥ ೨೦೦
ಅನಕ್ಷರಮವಾಚ್ಯಂ ಸ್ಯಾದಾಹತಂ ತು ಮೃಷಾರ್ಥಕಮ್ ।
ಅಥ ಮ್ಲಿಷ್ಟಮವಿಸ್ಪಷ್ಟಂ ವಿತಥಂ ತ್ವನೃತಂ ವಚಃ ॥ ೨೦೧
ಸೋಲ್ಲುಂಠನಂ ತು ಸೋತ್ಪ್ರಾಸಂ ಮಣಿತಂ ರತಿಕೂಜಿತಮ್ ।
ಸತ್ಯಂ ತಥ್ಯಮೃತಂ ಸಮ್ಯಗಮೂನಿ ತ್ರಿಷು ತದ್ವತಿ ॥ ೨೦೨

ಇತಿ ವಾಗ್ವರ್ಗಃ

೭. ಶಬ್ದಾದಿವರ್ಗಃ

ಶಬ್ದೇ ನಿನಾದನಿನದಧ್ವನಿಧ್ವಾನರವಸ್ವನಾಃ ।
ಸ್ವಾನನಿರ್ಘೋಷನಿರ್ಹ್ರಾದನಾದನಿಸ್ವಾನನಿಸ್ವನಾಃ ।

ಮಾತು. ಸೂನೃತ (ನ)=ಸತ್ಯವೂ ಪ್ರಿಯವೂ ಆದ ಮಾತು. ಸಂಕುಲ, ಕ್ಲಿಷ್ಟ (ನ)=ಅನನ್ವಿತವೂ ವಿರುದ್ಧವೂ ಆದ ಮಾತು. ೨೦೦. ಗ್ರಸ್ತ (ನ)=ಅಕ್ಷರವನ್ನೋ ಶಬ್ದವನ್ನೋ ನುಂಗಿ ಆಡುವ ಮಾತು. ನಿರಸ್ತ (ನ)=ತ್ವರೆಯಿಂದ ಹೇಳುವ ಮಾತು. ಅಂಬೂಕೃತ (ನ)=ಉಗುಳು ತೂರುವಂತೆ ಆಡುವ ಮಾತು. ಅಬದ್ಧ (ನ)=ಅರ್ಥಶೂನ್ಯವಾದ ಮಾತು. ೨೦೧. ಅನಕ್ಷರ, ಅವಾಚ್ಯ (ನ)=ಹೇಳಬಾರದ ನಿಂದಾವಾಕ್ಯ. ಆಹತ (ನ)=ಅಸಂಭಾವಿತವಾದ ಸುಳ್ಳು ಮಾತು. ಮ್ಲಿಷ್ಟ, ಅವಿಸ್ಪಷ್ಟ (ನ)=ಅಸ್ಫುಟವಾದ ವಚನ. ವಿತಥ, ಅನೃತ (ನ)=ಸುಳ್ಳು. ೨೦೨. ಸೋಲ್ಲುಂಠನ, ಸೋತ್ಪ್ರಾಸ (ನ)=ಚುಚ್ಚುಮಾತು, ಅಣಕ. ಮಣಿತ (ನ)=ರತಿಕಾಲದ ಶಬ್ದ (Murmuring sound uttered at cohabitation). ಸತ್ಯ, ತಥ್ಯ, ಋತ, ಸಮ್ಯಚ್ (ನ)= ಸತ್ಯ (ಸಮ್ಯಕ್, ಸಮ್ಯಂಚೌ, ಸಮ್ಯಂಚಃ (ಪು), ಸಮೀಚೀ (ಸ್ತ್ರೀ). ರುಶತೀ ಶಬ್ದದಿಂದ ಹಿಡಿದು ಸಮ್ಯಕ್ ಶಬ್ದದವರೆಗೆ ವಿಶೇಷ್ಯ ನಿಘ್ನಗಳು. ಕಲ್ಯಾ ಮೊದಲಾದವು—ಕಲ್ಯಾ (ಸ್ತ್ರೀ), ಕಲ್ಯಃ (ಪು), ಕಲ್ಯಂ (ನ) ಎಂಬುದಾಗಿ ಮೂರು ಲಿಂಗಗಳಲ್ಲಿಯೂ ರೂಪಗಳನ್ನು ಪಡೆಯುತ್ತವೆ.

ಶಬ್ದಾದಿವರ್ಗ

೨೦೩—೨೦೪. ಶಬ್ದ, ನಿನಾದ, ನಿನದ, ಧ್ವನಿ, ಧ್ವಾನ, ರವ, ಸ್ವನ, ಸ್ವಾನ, ನಿರ್ಘೋಷ, ನಿರ್ಹ್ರಾದ, ನಾದ, ನಿಸ್ವಾನ, ನಿಸ್ವನ, ಆರವ, ಆರಾವ, ಸಂರಾವ, ವಿರಾವ (ಪು)=ಶಬ್ದ

ಆರವಾರಾವಸಂರಾವವಿರಾವಾ ಅಥ ಮರ್ಮರಃ ॥ ೨೦೩
ಸ್ವನಿತೇ ವಸ್ತ್ರಪರ್ಣಾನಾಂ ಭೂಷಣಾನಾಂ ತು ಶಿಂಜಿತಮ್ ।
ನಿಕ್ವಾಣೋ ನಿಕ್ವಣಃ ಕ್ವಾಣಃ ಕ್ವಣಃ ಕ್ವಣನಮಿತ್ಯಪಿ ॥ ೨೦೪
ವೀಣಾಯಾಃ ಕ್ವಣಿತೇ ಪ್ರಾದೇಃ ಪ್ರಕ್ವಾಣಪ್ರಕ್ವಣಾದಯಃ ।
ಕೋಲಾಹಲಃ ಕಲಕಲಸ್ತ್ರಿರಶ್ಚಾಂ ವಾಶಿತಂ ರುತಮ್ ॥ ೨೦೫
ಸ್ತ್ರೀ ಪ್ರತಿಶ್ರುತ್ಪ್ರತಿಧ್ವಾನೇ ಗೀತಂ ಗಾನಮಿಮೇ ಸಮೇ ।

ಇತಿ ಶಬ್ದಾದಿವರ್ಗಃ

೮. ನಾಟ್ಯವರ್ಗಃ

ನಿಷಾದರ್ಷಭಗಾಂಧಾರಷಡ್ಜಮಧ್ಯಮಧೈವತಾಃ ॥ ೨೦೬
ಪಂಚಮಶ್ಚೇತ್ಯಮೀ ಸಪ್ತ ತಂತ್ರೀಕಂಠೋತ್ಥಿತಾಃ ಸ್ವರಾಃ ।
ಷಡ್ಜಂ ಮಯೂರೋ ವದತಿ ಗಾವಸ್ತ್ವೃಷಭಭಾಷಿಣಃ । ೨೦೭
ಅಜಾವಿಕಂ ತು ಗಾಂಧಾರಂ ಕ್ರೌಂಚಃ ಕ್ವಣತಿ ಮಧ್ಯಮಮ್ ।
ಪುಷ್ಪಸಾಧಾರಣೇ ಕಾಲೇ ಪಿಕಃ ಕೂಜತಿ ಪಂಚಮಮ್ ॥ ೨೦೮

(Sound). ಮರ್ಮರ (ಪು)=ಬಟ್ಟೆ ಮತ್ತು ಎಲೆಗಳ ಮರ್ಮರ ಶಬ್ದ. ಶಿಂಜಿತ (ನ)=ಒಡವೆಗಳ ಶಬ್ದ (Tinkling Sound.) ನಿಕ್ವಾಣ, ನಿಕ್ವಣ, ಕ್ವಾಣ, ಕ್ವಣ (ಪು), ಕ್ವಣನ (ನ)=ವಾದ್ಯ ಮೊದಲಾದವುಗಳ ಮಧುರಧ್ವನಿ. ೨೦೫-೨೦೬. ಪ್ರಕ್ವಾಣ, ಪ್ರಕ್ವಣ, (ಉಪಕ್ವಣ, ಅನುಕ್ವಣ) (ಪು)=ವೀಣಾಧ್ವನಿ. ಕೋಲಾಹಲ, ಕಲಕಲ (ಪು)=ಗುಂಪಿನಲ್ಲಿ ಹುಟ್ಟುವ ದೊಡ್ಡ ಶಬ್ದ. ವಾಶಿತ, ರುತ (ನ)=ಮೃಗ ಪಕ್ಷಿ ಮೊದಲಾದ ಪ್ರಾಣಿಗಳ ಶಬ್ದ. ಪ್ರತಿಶ್ರುತ್ (ಸ್ತ್ರೀ), ಪ್ರತಿಧ್ವಾನ (ಪು)=ಪ್ರತಿಧ್ವನಿ. (Echo). ಗೀತ, ಗಾನ (ನ)=ಹಾಡು, ಸಂಗೀತ.

ನಾಟ್ಯವರ್ಗ

೨೦೬-೨೦೭. ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮ (ಪು)= ಇವು ಏಳು ತಂತಿಯಿಂದಲೂ ಪ್ರಾಣವರ್ಗದ ಕಂಠದಿಂದಲೂ ಉತ್ಪನ್ನವಾಗುವ ಬೇರೆ ಬೇರೆ ಸ್ವರಗಳು. ನವಿಲು ಷಡ್ಜಸ್ವರದಲ್ಲಿ ಕೂಗುತ್ತದೆ. ಎತ್ತುಗಳು ಋಷಭದಲ್ಲಿ ಗುಟರು ಹಾಕುತ್ತವೆ. ೨೦೮. ಆಡು ಕುರಿಗಳು ಗಾಂಧಾರದಲ್ಲಿಯೂ, ಕ್ರೌಂಚಪಕ್ಷಿಯು ಮಧ್ಯಮದಲ್ಲಿಯೂ ಕೂಗುತ್ತವೆ. ವಸಂತಕಾಲದಲ್ಲಿ ಕೋಗಿಲೆಯು ಪಂಚಮಸ್ವರದಲ್ಲಿ

ಧೈವತಂ ಹೇಷತೇ ವಾಜೀ ನಿಷಾದಂ ಬೃಂಹತೇ ಗಜಃ ।
ಮಯೂರಾದಯ ಏತೇ ಹಿ ಮತ್ತಾ ಗಾಯಂತಿ ಪಂಚಮಮ್ ॥ ೨೦೯
ಕಾಕಲೀ ತು ಕಲೇ ಸೂಕ್ಷ್ಮೇ ಧ್ವನೌ ತು ಮಧುರಾಽಸ್ಫುಟೇ ।
ಕಲೋ ಮಂದ್ರಸ್ತು ಗಂಭೀರೇ ತಾರೋಽತ್ಯುಚ್ಚೈಸ್ತ್ರಯಸ್ತ್ರಿಷು ॥ ೨೧೦
ಸಮನ್ವಿತಲಯಸ್ತ್ವೇಕತಾಲೋ ವೀಣಾ ತು ವಲ್ಲಕೀ ।
ವಿಪಂಚೀ ಸಾ ತು ತಂತ್ರೀಭಿಸ್ಸಪ್ತಭಿಃ ಪರಿವಾದಿನೀ ॥ ೨೧೧
ತತಂ ವೀಣಾದಿಕಂ ವಾದ್ಯಮಾನದ್ಧಂ ಮುರಜಾದಿಕಮ್ ।
ವಂಶಾದಿಕಂ ತು ಸುಷಿರಂ ಕಾಂಸ್ಯತಾಲಾದಿಕಂ ಘನಮ್ ॥ ೨೧೨
ಚತುರ್ವಿಧಮಿದಂ ವಾದ್ಯವಾದಿತ್ರಾತೋದ್ಯನಾಮಕಮ್ ।
ಮೃದಂಗಾ ಮುರಜಾ ಭೇದಾಸ್ತ್ವಂಕ್ಯಾಲಿಂಗ್ಯೋರ್ಧ್ವಕಾಸ್ತ್ರಯಃ ॥ ೨೧೩
ಸ್ಯಾದಶಃ ಪಟಹೋ ಢಕ್ಕಾ ಭೇರೀ ಸ್ತ್ರೀ ದುಂದುಭಿಃ ಪುಮಾನ್ ।
ಆನಕಃ ಪಟಹೋಽಸ್ತ್ರೀಸ್ಯಾತ್ಕೋಣೋ ವೀಣಾದಿವಾದನಮ್ ॥ ೨೧೪

ಹಾಡುತ್ತದೆ. ೨೦೯. ಕುದುರೆಯು ಧೈವತದಲ್ಲಿಯೂ ಆನೆಯು ನಿಷಾದದಲ್ಲಿಯೂ ಶಬ್ದಮಾಡುತ್ತವೆ. ನವಿಲು ಮೊದಲಾದ ಹಕ್ಕಿಗಳು ಮದಿಸಿದಾಗ ಪಂಚಮಸ್ವರದಲ್ಲಿ ಹಾಡುವುದುಂಟು. ೨೧೦. ಕಾಕಲೀ (ಸ್ತ್ರೀ)=ಸೂಕ್ಷ್ಮವಾದ ಸ್ಪಷ್ಟ ಮಧುರಧ್ವನಿ. ಕಲ (ಪು)=ಅವ್ಯಕ್ತ ಮಧುರಧ್ವನಿ. ಮಂದ್ರ (ಪು)=ಗಂಭೀರವಾದ ಮೇಘಾದಿಗಳ ಧ್ವನಿ. ತಾರ (ಪು)=ಗಟ್ಟಿಯಾದ ಧ್ವನಿ. ಕಲ, ಮಂದ್ರ, ತಾರ—ಈ ಮೂರು ವಿಶೇಷ್ಯನಿಘ್ನಗಳಾಗಿ ಲಿಂಗತ್ರಯದಲ್ಲಿರುತ್ತವೆ. ೨೧೧. ಏಕತಾಲ (ಪು)=ನೃತ್ಯಗೀತವಾದ್ಯಗಳಿಂದ ಸಮತೆ ಹೊಂದಿದ ಧ್ವನಿ. ವೀಣಾ, ವಲ್ಲಕೀ, ವಿಪಂಚೀ (ಸ್ತ್ರೀ)=ವೀಣೆ. ಪರಿವಾದಿನೀ (ಸ್ತ್ರೀ)=ಏಳು ತಂತಿಗಳಿರುವ ವೀಣೆ (ಸತಾರ್). ೨೧೨. ತತ (ನ)=ವೀಣೆ ಮೊದಲಾದ ತಂತ್ರೀವಾದ್ಯ (ಸೈರಂಧ್ರೀ, ರಾವಣ ಹಸ್ತ, ಕಿಂನರಾದಿವಾದ್ಯ). ಆನದ್ಧ (ನ)=ಮದ್ದಳೆ ಮೊದಲಾದ ಚರ್ಮ ವಾದ್ಯ (ತಬಲ, ಭೇರಿ ಮೊದಲಾದ ವಾದ್ಯ). ಸುಷಿರ (ನ)=ಕೊಳಲು, ಕಹಳೆ ಮೊದಲಾದ ಮುಖವಾದ್ಯ. ಘನ (ನ)=ಕಂಚಿನ ತಾಳ, ಘಂಟೆ ಮೊದಲಾದದ್ದು. ೨೧೩. ವಾದ್ಯ, ವಾದಿತ್ರ, ಆತೋದ್ಯ (ನ)=ತತ ಮೊದಲಾದ ನಾಲ್ಕು ಬಗೆಯ ವಾದ್ಯ. ಮೃದಂಗ, ಮುರಜ (ಪು)=ಮದ್ದಳೆ. ಅಂಕ್ಯ, ಆಲಿಂಗ್ಯ, ಊರ್ಧ್ವಕ (ಪು)=ಇವು ಮೂರು ಮದ್ದಳೆಯ ಭೇದಗಳು. ೨೧೪. ಯಶಃ ಪಟಹ (ಪು), ಢಕ್ಕಾ (ಸ್ತ್ರೀ)=ಢವಣೆ, ಗಿಡಬುಡಕಿ. ಭೇರೀ (ಸ್ತ್ರೀ), ದುಂದುಭಿ (ಪು)=ನಗಾರಿ.

ವೀಣಾದಂಡಃ ಪ್ರವಾಲಃ ಸ್ಯಾತ್ಕಕುಭಸ್ತು ಪ್ರಸೇವಕಃ ।
ಕೋಲಂಬಕಸ್ತು ಕಾಯೋಽಸ್ಯಾ ಉಪನಾಹೋ ನಿಬಂಧನಮ್ ॥ ೨೧೫
ವಾದ್ಯಪ್ರಭೇದಾ ಡಮರುಮಡ್ಡುಡಿಂಡಿಮಝರ್ಝರಾಃ ।
ಮರ್ದಲಃ ಪಣವೋಽನ್ಯೇ ಚ ನರ್ತಕೀ ಲಾಸಿಕಾ ಸಮೇ ॥ ೨೧೬
ವಿಲಂಬಿತಂ ದ್ರುತಂ ಮಧ್ಯಂ ತತ್ವಮೋಘೋ ಘನಂ ಕ್ರಮಾತ್ ।
ತಾಲಃ ಕಾಲಕ್ರಿಯಾಮಾನಂ ಲಯಸ್ಸಾಮ್ಯಮಥಾಸ್ತ್ರಿಯಾಮ್ ॥ ೨೧೭
ತಾಂಡವಂ ನಟನಂ ನಾಟ್ಯಂ ಲಾಸ್ಯಂ ನೃತ್ಯಂ ಚ ನರ್ತನಮ್ ।
ತೌರ್ಯತ್ರಿಕಂ ನೃತ್ತಗೀತವಾದ್ಯಂ ನಾಟ್ಯಮಿದಂ ತ್ರಯಮ್ ॥ ೨೧೮
ಭ್ರಕುಂಸಶ್ಚ ಭ್ರುಕುಂಸಶ್ಚ ಭ್ರೂಕುಂಸಶ್ಚೇತಿ ನರ್ತಕಃ ।
ಸ್ತ್ರೀವೇಷಧಾರೀ ಪುರುಷೋ ನಾಟ್ಯೋಕ್ತೌ ಗಣಿಕಾಜ್ಜುಕಾ ॥ ೨೧೯

ಆನಕ (ಪು), ಪಟಹ (ಪು. ನ)= ತಮಟೆ. ಕೋಣ (ಪು)=ವೀಣೆ ಮೊದಲಾದ್ದನ್ನು ಬಾರಿಸಲು ಉಗುರಿಗೆ ಸಿಕ್ಕಿಸಿಕೊಳ್ಳುವ ನಕ್ಕಿ ಮೊದಲಾದ ವಿವಿಧ ಸಾಧನ. ೨೧೫. ವೀಣಾದಂಡ, ಪ್ರವಾಲ (ಪು)=ವೀಣೆಯ ದಂಡಿಗೆ ತೋಳು (Neck of a lute). ಕಕುಭ, ಪ್ರಸೇವಕ (ಪು)=ವೀಣಾ ದಂಡದ ಕೆಳಗಿರುವ ಬುರುಡೆ. ಕೋಲಂಬಕ (ಪು)=ತಂತ್ರೀಹೀನವಾದ ವೀಣೆಯ ಶರೀರ. ಉಪನಾಹ (ಪು), ನಿಬಂಧನ (ನ)=ವೀಣೆಯ ತಂತಿಯನ್ನು ಬಿಗಿಯುವ ಬಿರಡೆ. ೨೧೬. ಡಮರು, ಮಡ್ಡು, ಡಿಂಡಿಮ, ಝರ್ಝರ, ಮರ್ದಲ, ಪಣವ (ಪು)=ಬಡಿಯುವ ವಾದ್ಯದ ನಾನಾಭೇದಗಳು. ನರ್ತಕೀ, ಲಾಸಿಕಾ (ಸ್ತ್ರೀ)=ನರ್ತಕಿ (ಪುಲ್ಲಿಂಗದಲ್ಲಿ ನರ್ತಕ, ಲಾಸಕ).

೨೧೭. ತತ್ವ (ನ)=ಮೆಲ್ಲಗೆ (ವಿಲಂಬಿತವಾಗಿ) ನಡೆಯುವ ನೃತ್ಯಗೀತವಾದ್ಯಗಳು (ಈ ಅರ್ಥದಲ್ಲಿ ತತ್ವ, ತತ್ತ್ವ ಎಂದು ಎರಡು ಬಗೆಯಲ್ಲಿ ಬರೆಯಬಹುದು.) ಓಘ (ಪು)=ಬೇಗ ಬೇಗನೆ ನಡೆಯುವ ನೃತ್ಯಾದಿ. ಘನ (ನ)=ಮಧ್ಯಸ್ಥವೇಗದಲ್ಲಿ ನಡೆಯುವ ನೃತ್ಯಾದಿ. ತಾಲ (ಪು)=ಸಂಗೀತದಲ್ಲಿ ಕಾಲಕ್ರಿಯೆಗಳನ್ನು ನಿಯಮಿಸುವ ಸಾಧನ. ಲಯ (ಪು)=ಗೀತ, ವಾದ್ಯ, ಪಾದನ್ಯಾಸಾದಿಗಳಲ್ಲಿ ಕಾಲಕ್ರಿಯೆಗಳ ಹೊಂದಾಣಿಕೆ. ೨೧೮. ತಾಂಡವ (ಪು.ನ), ನಟನ, ನಾಟ್ಯ, ಲಾಸ್ಯ, ನೃತ್ಯ, ನರ್ತನ (ನ)=ನೃತ್ಯ, ಕುಣಿತ. ತೌರ್ಯತ್ರಿಕ, ನಾಟ್ಯ (ನ)=ನೃತ್ಯ ಗೀತ ವಾದ್ಯಗಳ ಸಮುದಾಯ. ೨೧೯. ಭ್ರುಕುಂಸ, ಭ್ರುಕುಂಸ, ಭ್ರೂಕುಂಸ (ಪು)=ಸ್ತ್ರೀವೇಷ ವನ್ನು ಧರಿಸಿ ಅಭಿನಯಿಸುವ ಗಂಡಸು. ಮುಂದೆ 'ಅಂಗಹಾರ' ಶಬ್ದದವರೆಗೆ ಇರುವ ಶಬ್ದಗಳು ನಾಟ್ಯಶಾಸ್ತ್ರದಲ್ಲಿ ಪಾರಿಭಾಷಿಕವಾದವುಗಳು. ಅಜ್ಜುಕಾ (ಸ್ತ್ರೀ)=ವೇಶ್ಯೆ.

ಭಗಿನೀಪತಿರಾವುತ್ತೋ ಭಾವೋ ವಿದ್ವಾನಥಾವುಕಃ ।
ಜನಕೋ ಯುವರಾಜಸ್ತು ಕುಮಾರೋ ಭರ್ತೃದಾರಕಃ ॥ ೨೨೦
ರಾಜಾ ಭಟ್ಟಾರಕೋ ದೇವಸ್ತತ್ಸುತಾ ಭರ್ತೃದಾರಿಕಾ ।
ದೇವೀ ಕೃತಾಭಿಷೇಕಾಯಾಮಿತರಾಸು ತು ಭಟ್ಟಿನೀ ॥ ೨೨೧
ಅಬ್ರಹ್ಮಣ್ಯಮವಧ್ಯೋಕ್ತೌ ರಾಜ್ಞಃ ಶ್ಯಾಲಸ್ತು ರಾಷ್ಟ್ರಿಯಃ ।
ಅಂಬಾ ಮಾತಾಥ ಬಾಲಾ ಸ್ಯಾದ್ವಾಸೂರಾರ್ಯಸ್ತು ಮಾರಿಷಃ ॥ ೨೨೨
ಅತ್ತಿಕಾ ಭಗಿನೀ ಜ್ಯೇಷ್ಠಾ ನಿಷ್ಠಾ ನಿರ್ವಹಣೇ ಸಮೇ ।
ಹಂಡೇ ಹಂಜೇ ಹಲಾಹ್ವಾನೇ ನೀಚಾಂ ಚೇಟೀಂ ಸಖೀಂ ಪ್ರತಿ ॥ ೨೨೩
ಅಂಗಹಾರೋಽಂಗವಿಕ್ಷೇಪೋ ವ್ಯಂಜಕಾಭಿನಯೌ ಸಮೌ ।
ನಿರ್ವೃತ್ತೇ ತ್ವಂಗಸತ್ತ್ವಾಭ್ಯಾಂ ದ್ವೇ ತ್ರಿಷ್ವಾಂಗಿಕಸಾತ್ತ್ವಿಕೇ ॥ ೨೨೪

---

೨೨೦. ಆವುತ್ತ (ಪು)= ಸೋದರಿಯ ಗಂಡ. ಭಾವ (ಪು)= ವಿದ್ವಾಂಸ. ಆವುಕ (ಪು)=ತಂದೆ. ಕುಮಾರ, ಭರ್ತೃದಾರಕ (ಪು)=ಯುವರಾಜ, ರಾಜಪುತ್ರ. ೨೨೧. ಭಟ್ಟಾರಕ, ದೇವ (ಪು)=ರಾಜ. ಭರ್ತೃದಾರಿಕಾ (ಸ್ತ್ರೀ)=ರಾಜಪುತ್ರಿ. ದೇವೀ (ಸ್ತ್ರೀ)=ಪಟ್ಟದರಾಣಿ. ಭಟ್ಟಿನೀ (ಸ್ತ್ರೀ)=ಪಟ್ಟಾಭಿಷಿಕ್ತಳಲ್ಲದ ರಾಜ ಭಾರ್ಯೆ.

೨೨೨. ಅಬ್ರಹ್ಮಣ್ಯ (ನ)=ಕೊಲ್ಲಕೂಡದು ಎಂಬ ಅಭಿಪ್ರಾಯದಿಂದ ಅರಚಿಕೊಳ್ಳುವ ಶಬ್ದ. ರಾಷ್ಟ್ರಿಯ (ಪು)=ರಾಜನ ಮೈದುನ. ಅಂಬಾ (ಸ್ತ್ರೀ)=ತಾಯಿ. ವಾಸೂ (ಸ್ತ್ರೀ)=ಕುಮಾರಿ, ಹುಡುಗಿ. ಮಾರಿಷ (ಪು)=ಸಭ್ಯನಾದ ಪುರುಷ. ೨೨೩. ಅತ್ತಿಕಾ (ಸ್ತ್ರೀ)= ಅಕ್ಕ, ಹಿರಿಯ ಸೋದರಿ. ನಿಷ್ಠಾ (ಸ್ತ್ರೀ), ನಿರ್ವಹಣ (ನ)=ಕಥಾಸಮಾಪ್ತಿ, ನಿರ್ವಾಹ, ನಿರ್ವಹಣ ಸಂಧಿ. ಹಂಡೇ, ಹಂಜೇ, ಹಲಾ (ಸ್ತ್ರೀ)=ಇವು ಮೂರು ಸಂಬೋಧನಗಳು. ಕೆಳಮಟ್ಟದ ಹೆಂಗಸನ್ನು ಹಂಡೇ ಎಂದೂ ದಾಸಿಯನ್ನು ಹಂಜೇ ಎಂದೂ ಸಖಿಯನ್ನು ಹಲಾ ಎಂದೂ ಸಂಬೋಧಿಸಬೇಕು. ೨೨೪. ಅಂಗಹಾರ, ಅಂಗವಿಕ್ಷೇಪ (ಪು)=ನೃತ್ಯದಲ್ಲಿ ಅಂಗಗಳ ಚಾಲನೆ. ವ್ಯಂಜಕ, ಅಭಿನಯ (ಪು)=ಅಭಿನಯ. ಅಂಗವಿನ್ಯಾಸದಿಂದ ಭಾವಾವಿಷ್ಕರಣ. ಆಂಗಿಕ (ಪು.ಸ್ತ್ರೀ.ನ)=ಭ್ರೂವಿಕ್ಷೇಪ ಮೊದಲಾಗಿ ಅಂಗಗಳಿಂದ ನಡೆಸುವ ಅಭಿನಯ, (ಸ್ತ್ರೀ. ಆಂಗಿಕೀ). ಸಾತ್ತ್ವಿಕ (ಪು.ಸ್ತ್ರೀ.ನ)=ಸ್ತಂಭ, ಸ್ವೇದ ಮುಂತಾದ ಸಾತ್ತ್ವಿಕ ಭಾವಗಳಿಂದ ನಡೆಸುವ ಅಭಿನಯ (ಸ್ತ್ರೀ. ಸಾತ್ತ್ವಿಕೀ). ೨೨೫. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ=ಇವು ಎಂಟು ರಸಗಳು (ಶಾಂತರಸವನ್ನು ಇಲ್ಲಿ ಹೇಳಿಲ್ಲ, ಅದೂ ಸೇರಿದರೆ

ಶೃಂಗಾರವೀರಕರುಣಾದ್ಭುತಹಾಸ್ಯಭಯಾನಕಾಃ ।
ಬೀಭತ್ಸರೌದ್ರೌ ಚ ರಸಾಃ ಶೃಂಗಾರಶ್ಶುಚಿರುಜ್ಜ್ವಲಃ ॥ ೨೨೫
ಉತ್ಸಾಹವರ್ಧನೋ ವೀರಃ ಕಾರುಣ್ಯಂ ಕರುಣಾ ಘೃಣಾ ।
ಕೃಪಾ ದಯಾನುಕಂಪಾ ಸ್ಯಾದನುಕ್ರೋಶೋಽಪ್ಯಥೋ ಹಸಃ ॥ ೨೨೬
ಹಾಸೋ ಹಾಸ್ಯಂ ಚ ಬೀಭತ್ಸಂ ವಿಕೃತಂ ತ್ರಿಷ್ವಿದಂ ದ್ವಯಮ್ ।
ವಿಸ್ಮಯೋಽದ್ಭುತಮಾಶ್ಚರ್ಯಂ ಚಿತ್ರಮಪ್ಯಥ ಭೈರವಮ್ ॥ ೨೨೭
ದಾರುಣಂ ಭೀಷಣಂ ಭೀಷ್ಮಂ ಘೋರಂ ಭೀಮಂ ಭಯಾನಕಮ್ ।
ಭಯಂಕರಂ ಪ್ರತಿಭಯಂ ರೌದ್ರಂ ತೂಗ್ರಮಮೀ ತ್ರಿಷು ॥ ೨೨೮
ಚತುರ್ದಶ ದರತ್ರಾಸೌ ಭೀತಿರ್ಭೀಃ ಸಾಧ್ವಸಂ ಭಯಮ್ ।
ವಿಕಾರೋ ಮಾನಸೋ ಭಾವೋಽನುಭಾವೋ ಭಾವಬೋಧಕಃ ॥ ೨೨೯

ನವರಸಗಳು). ಶೃಂಗಾರ, ಶುಚಿ, ಉಜ್ಜ್ವಲ (ಪು)=ಶೃಂಗಾರರಸ.

೨೨೬-೨೨೭. ವೀರ (ಪು)=ಉತ್ಸಾಹದಿಂದ ವರ್ಧಿಸುವ ರಸ. ಕಾರುಣ್ಯ (ನ), ಕರುಣಾ, ಘೃಣಾ, ಕೃಪಾ, ದಯಾ, ಅನುಕಂಪಾ[1] (ಸ್ತ್ರೀ), ಅನುಕ್ರೋಶ (ಪು)=ದಯೆ. ಹಸ, ಹಾಸ (ಪು), ಹಾಸ್ಯ (ನ)=ಹಾಸ್ಯ. ಬೀಭತ್ಸ, ವಿಕೃತ (ಪು. ಸ್ತ್ರೀ. ನ)=ಜುಗುಪ್ಸೆಯನ್ನು ಉಂಟು ಮಾಡತಕ್ಕದ್ದು.

೨೨೭-೨೨೮. ವಿಸ್ಮಯ, (ಪು), ಅದ್ಭುತ, ಆಶ್ಚರ್ಯ, ಚಿತ್ರ (ನ)=ಆಶ್ಚರ್ಯಕರ. ಭೈರವ, ದಾರುಣ, ಭೀಷ್ಮ, ಘೋರ, ಭೀಮ, ಭಯಾನಕ, ಭಯಂಕರ, ಪ್ರತಿಭಯ (ನ)=ಭೀತಿದಾಯಕವಾದದ್ದು, ಭಯಾನಕರಸ. ರೌದ್ರ, ಉಗ್ರ (ನ)=ಕೋಪಪ್ರಧಾನವಾದ ರೌದ್ರರಸ. ಅದ್ಭುತ ಶಬ್ದದಿಂದ ಮೊದಲ್ಗೊಂಡು ಮೇಲ್ಕಂಡ ಹದಿನಾಲ್ಕು ಶಬ್ದಗಳು ವಿಶೇಷ್ಯ ನಿಘ್ನವಾಗಿ ಲಿಂಗತ್ರಯದಲ್ಲಿ ಬರುತ್ತವೆ (ಸ್ತ್ರೀ, ರೌದ್ರೀ, ಭೈರವೀ). ೨೨೯. ದರ, ತ್ರಾಸ (ಪು) ಭೀತಿ, ಭೀ (ಸ್ತ್ರೀ), ಸಾಧ್ವಸ, ಭಯ (ನ)=ಹೆದರಿಕೆ. ಭಾವ (ಪು)=ಮನಸ್ಸಿನ ವಿಕಾರ, ಚಿತ್ತವೃತ್ತಿ. ಅನುಭಾವ (ಪು)=ಚಿತ್ತವೃತ್ತಿಯನ್ನು ತಿಳಿಸುವ ಮುಖವಿಕಾಸಾದಿ (The expression of emotion in the features). ೨೩೦-೨೩೧. ಗರ್ವ, ಅಭಿಮಾನ, ಅಹಂಕಾರ (ಪು)= ಅಹಂಕಾರ. ಮಾನ=ನಾನು ದೊಡ್ಡವನೆಂಬ ಚಿತ್ತದ ಉತ್ಕರ್ಷ (Self respect). ಅನಾದರ, ಪರಿಭವ, ಪರೀಭಾವ (ಪು), ತಿರಸ್ಕ್ರಿಯಾ, ರೀಢಾ, ಅವಮಾನನಾ, ಅವಜ್ಞಾ (ಸ್ತ್ರೀ),

---

[1] ಅನುಕಂಪಃ ಎಂದು ಪುಲ್ಲಿಂಗವೂ ಉಂಟು.

ಗರ್ವೋಽಭಿಮಾನೋಽಹಂಕಾರೋ ಮಾನಶ್ಚಿತ್ತಸಮುನ್ನತಿಃ ।
ಅನಾದರಃ ಪರಿಭವಃ ಪರೀಭಾವಸ್ತಿರಸ್ಕ್ರಿಯಾ ॥ ೨೩೦
ರೀಢಾವಮಾನನಾವಜ್ಞಾವಹೇಲನಮಸೂರ್ಕ್ಷಣಮ್ ।
ಮಂದಾಕ್ಷಂ ಹ್ರೀಸ್ತ್ರಪಾ ವ್ರೀಡಾ ಲಜ್ಜಾ ಸಾಪತ್ರಪಾನ್ಯತಃ ॥ ೨೩೧
ಕ್ಷಾಂತಿಸ್ತಿತಿಕ್ಷಾಭಿಧ್ಯಾ ತು ಪರಸ್ಯ ವಿಷಯೇ ಸ್ಪೃಹಾ ।
ಅಕ್ಷಾಂತಿರೀರ್ಷ್ಯಾಸೂಯಾ ತು ದೋಷಾರೋಪೋ ಗುಣೇಷ್ವಪಿ ॥ ೨೩೨
ವೈರಂ ವಿರೋಧೋ ವಿದ್ವೇಷೋ ಮನ್ಯುಶೋಕೌ ತು ಶುಕ್ ಸ್ತ್ರಿಯಾಮ್ ।
ಪಶ್ಚಾತ್ತಾಪೋಽನುತಾಪಶ್ಚ ವಿಪ್ರತೀಸಾರ ಇತ್ಯಪಿ ॥ ೨೩೩
ಕೋಪಕ್ರೋಧಾಮರ್ಷರೋಷಪ್ರತಿಘಾ ರುಟ್‌ಕ್ರುಧೌ ಸ್ತ್ರಿಯೌ ।
ಶುಚೌ ತು ಚರಿತೇ ಶೀಲಮುನ್ಮಾದಶ್ಚಿತ್ತವಿಭ್ರಮಃ ॥ ೨೩೪
ಪ್ರೇಮಾ ನಾ ಪ್ರಿಯತಾ ಹಾರ್ದಂ ಪ್ರೇಮ ಸ್ನೇಹೋಽಥ ದೋಹದಮ್ ।
ಇಚ್ಛಾ ಕಾಂಕ್ಷಾಸ್ಪೃಹೇಹಾ ತೃಡ್ವಾಂಛಾ ಲಿಪ್ಸಾ ಮನೋರಥಃ ॥ ೨೩೫

ಅವಹೇಲನ, ಅಸೂರ್ಕ್ಷಣ (ನ)=ಅವಮಾನ. ಮಂದಾಕ್ಷ (ನ), ಹ್ರೀ, ತ್ರಪಾ, ವ್ರೀಡಾ, ಲಜ್ಜಾ (ಸ್ತ್ರೀ)=ನಾಚಿಕೆ. ಅಪತ್ರಪಾ (ಸ್ತ್ರೀ)=ಪರರ ಎದುರಿಗೆ ಉಂಟಾದ ನಾಚಿಕೆ. ೨೩೨. ಕ್ಷಾಂತಿ, ತಿತಿಕ್ಷಾ (ಸ್ತ್ರೀ)= ತಾಳ್ಮೆ. ಅಭಿಧ್ಯಾ (ಸ್ತ್ರೀ)=ಪರದ್ರವ್ಯದ ಅಪೇಕ್ಷೆ. ಅಕ್ಷಾಂತಿ, ಈರ್ಷ್ಯಾ (ಸ್ತ್ರೀ)=ಹೊಟ್ಟೆಕಿಚ್ಚು. ಅಸೂಯಾ (ಸ್ತ್ರೀ)=ಪರರ ಗುಣದಲ್ಲಿ ದೋಷವನ್ನಾರೋಪಿಸುವ ಬುದ್ಧಿ. ೨೩೩. ವೈರ (ನ), ವಿರೋಧ, ವಿದ್ವೇಷ (ಪು)=ವೈರ. ಮನ್ಯು, ಶೋಕ (ಪು), ಶುಚ್ (ಸ್ತ್ರೀ)=ಶೋಕ. ಪಶ್ಚಾತ್ತಾಪ, ಅನುತಾಪ, ವಿಪ್ರತೀಸಾರ (ಪು)=ಪಶ್ಚಾತ್ತಾಪ. ೨೩೪. ಕೋಪ, ಕ್ರೋಧ, ಅಮರ್ಷ, ರೋಷ, ಪ್ರತಿಘ (ಪು), ರುಷ್, ಕ್ರುಧ್ (ಸ್ತ್ರೀ)= ಸಿಟ್ಟು. ಶೀಲ (ನ)=ಒಳ್ಳೆಯ ನಡತೆ. ಉನ್ಮಾದ, ಚಿತ್ತವಿಭ್ರಮ (ಪು)=ಹುಚ್ಚು. ೨೩೫-೨೩೬. ಪ್ರೇಮನ್ (ಪು), ಪ್ರಿಯತಾ (ಸ್ತ್ರೀ) ಹಾರ್ದ, ಪ್ರೇಮನ್ (ನ), ಸ್ನೇಹ (ಪು)=ಸ್ನೇಹ, ಪ್ರೀತಿ. ದೋಹದ[2] (ನ), ಇಚ್ಛಾ, ಕಾಂಕ್ಷಾ, ಸ್ಪೃಹಾ, ಈಹಾ, ತೃಷ್, ವಾಂಛಾ, ಲಿಪ್ಸಾ (ಸ್ತ್ರೀ) ಮನೋರಥ, ಕಾಮ, ಅಭಿಲಾಷ, ತರ್ಷ (ಪು)=ಇಚ್ಛೆ, ಬಯಕೆ. ಲಾಲಸಾ (ಸ್ತ್ರೀ)=ತೀವ್ರವಾದ ಬಯಕೆ. ಉಪಾಧಿ (ಪು), ಧರ್ಮಚಿಂತಾ (ಸ್ತ್ರೀ)=ಧರ್ಮವಿಚಾರ. ಆಧಿ (ಪು)=ಮನೋವ್ಯಥೆ.

---

[1] ವ್ರೀಡ ಎಂದು ಪುಲ್ಲಿಂಗವೂ ಉಂಟು. [2] ದೋಹದ ಶಬ್ದವು ಪುಲ್ಲಿಂಗದಲ್ಲಿಯೂ ಉಂಟು.

ಕಾಮೋಽಭಿಲಾಷಸ್ತರ್ಷಶ್ಚ ಸ ಮಹಾನ್ ಲಾಲಸಾ ದ್ವಯೋಃ ।
ಉಪಾಧಿರ್ನಾ ಧರ್ಮಚಿಂತಾ ಪುಂಸ್ಯಾಧಿರ್ಮಾನಸೀ ವ್ಯಥಾ ॥ ೨೩೬
ಸ್ಯಾಚ್ಚಿಂತಾ ಸ್ಮೃತಿರಾಧ್ಯಾನಮುತ್ಕಂಠೋತ್ಕಲಿಕೇ ಸಮೇ ।
ಉತ್ಸಾಹೋ ವ್ಯವಸಾಯಃ ಸ್ಯಾತ್ಸ ವೀರ್ಯಮತಿಶಕ್ತಿಭಾಕ್ ॥ ೨೩೭
ಕಪಟೋಽಸ್ತ್ರೀ ವ್ಯಾಜದಂಭೋಪಧಯಶ್ಛದ್ಮಕೈತವೇ ।
ಕುಸೃತಿರ್ನಿಕೃತಿಶ್ಶಾಠ್ಯಂ ಪ್ರಮಾದೋಽನವಧಾನತಾ ॥ ೨೩೮
ಕೌತೂಹಲಂ ಕೌತುಕಂ ಚ ಕುತುಕಂ ಚ ಕುತೂಹಲಮ್ ।
ಸ್ತ್ರೀಣಾಂ ವಿಲಾಸಬಿಬ್ಬೋಕವಿಭ್ರಮಾ ಲಲಿತಂ ತಥಾ ॥ ೨೩೯
ಹೇಲಾ ಲೀಲೇತ್ಯಮೀ ಹಾವಾಃ ಕ್ರಿಯಾಃ ಶೃಂಗಾರಭಾವಜಾಃ ।
ದ್ರವಕೇಲಿಪರೀಹಾಸಾಃ ಕ್ರೀಡಾ ಲೀಲಾ ಚ ನರ್ಮ ಚ ॥ ೨೪೦

---

೨೩೭. ಚಿಂತಾ, ಸ್ಮೃತಿ (ಸ್ತ್ರೀ), ಆಧ್ಯಾನ (ನ)=ಸ್ಮರಿಸಿಕೊಳ್ಳುವುದು. ಉತ್ಕಂಠಾ, ಉತ್ಕಲಿಕಾ (ಸ್ತ್ರೀ)=ತೀವ್ರಾಭಿಲಾಷೆಯಿಂದಾಗುವ ಸ್ಮರಣೆ. ಉತ್ಸಾಹ, ಅಧ್ಯವಸಾಯ (ಪು)=ಉತ್ಸಾಹ. ವೀರ್ಯ (ನ)= ಅತ್ಯಂತ ಶಕ್ತಿಯುಕ್ತವಾದ ಉತ್ಸಾಹ. ೨೩೮. ಕಪಟ (ಪು. ನ), ವ್ಯಾಜ, ದಂಭ, ಉಪಧಿ (ಪು), ಛದ್ಮನ್, ಕೈತವ (ನ), ಕುಸೃತಿ, ನಿಕೃತಿ (ಸ್ತ್ರೀ), ಶಾಠ್ಯ (ನ)=ಕಪಟತನ (Hypocrisy). ಪ್ರಮಾದ (ಪು), ಅನವಧಾನತಾ (ಸ್ತ್ರೀ)= ಎಚ್ಚರಿಕೆಯಿಲ್ಲದಿರುವುದು (Carelessness) ೨೩೯-೨೪೦. ಕೌತೂಹಲ, ಕೌತುಕ, ಕುತುಕ, ಕುತೂಹಲ (ನ)=ಕುತೂಹಲ (Curiosity). ವಿಲಾಸ ಮೊದಲಾದ ಆರು ಶೃಂಗಾರಭಾವ ದಿಂದುಂಟಾಗುವ ಸ್ತ್ರೀಯರ ಚೇಷ್ಟೆಗಳು :— ವಿಲಾಸ (ಪು)=ಕಾಂತನ ಬಳಿಯಲ್ಲಿ ಸಂಭವಿಸುವ ಮುಗುಳ್ನಗೆ ಮೊದಲಾದುದು. ಬಿಬ್ಬೋಕ (ಪು)=ಗರ್ವದಿಂದ ಅನಾದರ. ವಿಭ್ರಮ (ಪು)=ಯೌವನಮದದಿಂದ ಮಾಡುವ ಚೇಷ್ಟೆ. ಲಲಿತ (ನ)=ಕೋಮಲ ವಿಧಾನದಿಂದ ಕರಚರಣಾದ್ಯಂಗಗಳ ಚಾಲನೆ. ಹೇಲಾ.(ಸ್ತ್ರೀ)= ಅಭಿಲಾಷೆಯನ್ನು ವ್ಯಕ್ತಪಡಿಸುವ ಚೇಷ್ಟೆ. ಲೀಲಾ (ಸ್ತ್ರೀ)=ಮನೋವಿನೋದಾರ್ಥವಾಗಿ ಪ್ರಿಯನ ಅನುಕರಣೆ. ೨೪೦-೨೪೧. ದ್ರವ, ಕೇಲಿ[1], ಪರೀಹಾಸ (ಪು), ಕ್ರೀಡಾ, ಲೀಲಾ (ಸ್ತ್ರೀ), ನರ್ಮನ್ (ನ)=ಕ್ರೀಡೆ, ವಿನೋದ. ವ್ಯಾಜ, ಅಪದೇಶ (ಪು), ಲಕ್ಷ್ಯ (ನ)=ವ್ಯಾಜ, ನೆವ (Pretence). ಕ್ರೀಡಾ, ಖೇಲಾ (ಸ್ತ್ರೀ), ಕೂರ್ದನ (ನ)=ಆಟ (Game). ಘರ್ಮ, ನಿದಾಘ, ಸ್ವೇದ (ಪು)=ಸೆಕೆ (Heat).

---

[1] ಕೇಲೀ ಎಂದು ಸ್ತ್ರೀಲಿಂಗವೂ ಉಂಟು.

ವ್ಯಾಜೋಽಪದೇಶೋ ಲಕ್ಷ್ಯಂ ಚ ಕ್ರೀಡಾ ಖೇಲಾ ಚ ಕೂರ್ದನಮ್ ।
ಘರ್ಮೋ ನಿದಾಘಃಸ್ವೇದಃಸ್ಯಾತ್ಪ್ರಲಯೋ ನಷ್ಟಚೇಷ್ಟತಾ ॥ ೨೪೧
ಅವಹಿತ್ಥಾಕಾರಗುಪ್ತಿಸ್ಸಮೌ ಸಂವೇಗಸಂಭ್ರಮೌ ।
ಸ್ಯಾದಾಚ್ಛುರಿತಕಂ ಹಾಸಸ್ಸೋತ್ಪ್ರಾಸಸ್ಸ ಮನಾಕ್ಸ್ಮಿತಮ್ ॥ ೨೪೨
ಮಧ್ಯಮಃಸ್ಯಾದ್ವಿಹಸಿತಂ ರೋಮಾಂಚೋ ರೋಮಹರ್ಷಣಮ್ ।
ಕ್ರಂದಿತಂ ರುದಿತಂ ಕ್ರುಷ್ಟಂ ಜೃಂಭಸ್ತು ತ್ರಿಷು ಜೃಂಭಣಮ್ ॥ ೨೪೩
ವಿಪ್ರಲಂಭೋ ವಿಸಂವಾದೋ ರಿಂಗಣಂ ಸ್ಖಲನಂ ಸಮೇ ।
ಸ್ಯಾನ್ನಿದ್ರಾ ಶಯನಂ ಸ್ವಾಪಃ ಸ್ವಪ್ನಸ್ಸಂವೇಶ ಇತ್ಯಪಿ ॥ ೨೪೪
ತಂದ್ರೀ ಪ್ರಮೀಲಾ ಭ್ರಕುಟಿಃ ಭ್ರುಕುಟಿರ್ಭ್ರೂಕುಟಿಃ ಸ್ತ್ರಿಯಾಮ್ ।
ಅದೃಷ್ಟಿಃ ಸ್ಯಾದಸೌಮ್ಯೇಽಕ್ಷ್ಣಿ ಸಂಸಿದ್ಧಿಪ್ರಕೃತೀ ತ್ವಿಮೇ ॥ ೨೪೫

(ಸ್ವೇದ=ಬೆವರು ಎಂಬ ಅರ್ಥವೂ ಉಂಟು). ಪ್ರಲಯ (ಪು), ನಷ್ಟಚೇಷ್ಟತಾ (ಸ್ತ್ರೀ)=ಮೂರ್ಛೆ, ಹರ್ಷಾದ್ಯತಿರೇಕದಿಂದ ಎಚ್ಚರದಪ್ಪುವುದು. ೨೪೨. ಅವಹಿತ್ಥಾ[1], ಆಕಾರಗುಪ್ತಿ (ಸ್ತ್ರೀ)=ಶೋಕಾದಿಜನ್ಯವಾದ ವಿಕಾರವನ್ನು ಮರೆಮಾಚುವುದು. ಸಂವೇಗ, ಸಂಭ್ರಮ (ಪು)=ಹರ್ಷಾದಿಗಳಿಂದ ಕೆಲಸದಲ್ಲುಂಟಾಗುವ ತ್ವರೆ. ಆಚ್ಛುರಿತಕ (ನ)= ಇನ್ನೊಬ್ಬರನ್ನು ಗೇಲಿಮಾಡುವ ನಗು. ಸ್ಮಿತ (ನ)=ಮುಗುಳ್ನಗೆ (Smile) ೨೪೩. ವಿಹಸಿತ (ನ)=ಮೃದುವಾದ ನಗು (Gentle laugh). ರೋಮಾಂಚ (ಪು), ರೋಮಹರ್ಷಣ (ನ)=ರೋಮಾಂಚ, ಮೈನವಿರೇಳುವುದು. ಕ್ರಂದಿತ, ರುದಿತ, ಕ್ರುಷ್ಟ (ನ)=ಅಳು, ರೋದನ. ಜೃಂಭ (ಪು. ಸ್ತ್ರೀ. ನ) ಜೃಂಭಣ (ನ)=ಆಕಳಿಕೆ ; ಅಂಗಗಳನ್ನು ಹಿಗ್ಗಿಸುವುದು. ೨೪೪. ವಿಪ್ರಲಂಭ, ವಿಸಂವಾದ (ಪು)=ಒಪ್ಪಿದುದನ್ನು ವಿರೋಧಿಸುವುದು (Contradiction) ರಿಂಗಣ, ಸ್ಖಲನ (ನ)=ತಪ್ಪುವುದು, ಜಾರುವುದು (Slip). ನಿದ್ರಾ (ಸ್ತ್ರೀ), ಶಯನ (ನ) ಸ್ವಾಪ, ಸ್ವಪ್ನ, ಸಂವೇಶ (ಪು)=ನಿದ್ರೆ. ೨೪೫-೨೪೬. ತಂದ್ರೀ[2], ಪ್ರಮೀಲಾ (ಸ್ತ್ರೀ)=ಆಯಾಸದಿಂದಾಗುವ ಅಸಾಮರ್ಥ್ಯ (Exhaustion) ; ಜೋಮು (Drowsiness). ಭ್ರಕುಟಿ, ಭ್ರುಕಟಿ, ಭ್ರೂಕುಟಿ (ಸ್ತ್ರೀ)=ಹುಬ್ಬುಗಂಟಿಕ್ಕುವುದು. ಅದೃಷ್ಟಿ (ಸ್ತ್ರೀ)=ಕ್ರೂರದೃಷ್ಟಿ. ಸಂಸಿದ್ಧಿ,

---

[1] ಅವಹಿತ್ಥ ಎಂದು ನಪುಂಸಕಲಿಂಗವೂ ಉಂಟು.

[2] ತಂದ್ರಿ, ತಂದ್ರಾ ಎಂಬ ರೂಪಾಂತರಗಳೂ ಉಂಟು.

ಸ್ವರೂಪಂ ಚ ಸ್ವಭಾವಶ್ಚ ನಿಸರ್ಗಶ್ಚಾಥ ವೇಪಥುಃ ।
ಕಂಪೋಽಥ ಕ್ಷಣ ಉದ್ಧರ್ಷೋ ಮಹ ಉದ್ಧವ ಉತ್ಸವಃ ॥ ೨೪೬

ಇತಿ ನಾಟ್ಯವರ್ಗಃ

ಪ್ರಕೃತಿ (ಸ್ತ್ರೀ), ಸ್ವರೂಪ (ನ), ಸ್ವಭಾವ, ನಿಸರ್ಗ (ಪು)=ಸ್ವಭಾವ (Nature). ವೇಪಥು, ಕಂಪ (ಪು)=ನಡುಕ. ಕ್ಷಣ, ಉದ್ಧರ್ಷ, ಮಹ, ಉದ್ಧವ, ಉತ್ಸವ (ಪು)=ಉತ್ಸವ, ಅತ್ಯಾನಂದ.

೯. ಪಾತಾಲಭೋಗಿವರ್ಗಃ

ಅಧೋಭುವನಪಾತಾಲಬಲಿಸದ್ಮರಸಾತಲಮ್ ।
ನಾಗಲೋಕೋऽಥ ಕುಹರಂ ಶುಷಿರಂ ವಿವರಂ ಬಿಲಮ್ ॥ ೨೪೭
ಛಿದ್ರಂ ನಿರ್ವ್ಯಥನಂ ರೋಕಂ ರಂಧ್ರಂ ಶ್ವಭ್ರಂ ವಪಾ ಶುಷಿಃ ।
ಗರ್ತಾವಟೌ ಭುವಿ ಶ್ವಭ್ರೇ ಸರಂಧ್ರೇ ಶುಷಿರಂ ತ್ರಿಷು ॥ ೨೪೮
ಅಂಧಕಾರೋऽಸ್ತ್ರಿಯಾಂ ಧ್ವಾಂತಂ ತಮಿಸ್ರಂ ತಿಮಿರಂ ತಮಃ ।
ಧ್ವಾಂತೇ ಗಾಢೇऽಂಧತಮಸಂ ಕ್ಷೀಣೇऽವತಮಸಂ ತಮಃ ॥ ೨೪೯
ವಿಷ್ವಕ್‌ಸಂತಮಸಂ ನಾಗಾಃ ಕಾದ್ರವೇಯಾಸ್ತದೀಶ್ವರಃ ।
ಶೇಷೋऽನಂತೋ ವಾಸುಕಿಸ್ತು ಸರ್ಪರಾಜೋऽಥ ಗೋನಸೇ ॥ ೨೫೦
ತಿಲಿತ್ಸಃ ಸ್ಯಾದಜಗರೇ ಶಯುರ್ವಾಹಸ ಇತ್ಯುಭೌ ।
ಅಲಗರ್ದೋ ಜಲವ್ಯಾಲಸ್ಸಮೌ ರಾಜಿಲಡುಂಡುಭೌ ॥ ೨೫೧

ಪಾತಾಳಭೋಗಿವರ್ಗ

೨೪೭-೨೪೮. ಅಧೋಭುವನ, ಪಾತಾಲ, ಬಲಿಸದ್ಮನ್, ರಸಾತಲ (ನ), ನಾಗಲೋಕ (ಪು)=ಪಾತಾಳ. ಕುಹರ, ಶುಷಿರ (ಸುಷಿರ), ವಿವರ, ಬಿಲ, ಛಿದ್ರ, ನಿರ್ವ್ಯಥನ, ರೋಕ, ರಂಧ್ರ, ಶ್ವಭ್ರ (ಸ್ತ್ರೀ), ವಪಾ, ಶುಷಿ (ಸುಷಿ) (ಸ್ತ್ರೀ)=ರಂಧ್ರ, ತೂತು. ಗರ್ತ, ಅವಟ (ಪು)=ನೆಲದಲ್ಲಿರುವ ಹಳ್ಳ, ಗುದ್ದು (Ditch). ಶುಷಿರ (ಸುಷಿರ) (ತ್ರಿ)=ರಂಧ್ರಯುಕ್ತ ವಸ್ತು, ಕೊಳವೆ. ೨೪೯. ಅಂಧಕಾರ (ಪು. ನ), ಧ್ವಾಂತ, ತಮಿಸ್ರ, ತಿಮಿರ, ತಮಸ್ (ನ)=ಕತ್ತಲೆ. ಅಂಧತಮಸ (ನ)=ಕಾರ್ಗತ್ತಲೆ. ಅವತಮಸ (ನ)=ಕಿರುಗತ್ತಲೆ. ೨೫೦-೨೫೧. ಸಂತಮಸ (ನ)=ಸುತ್ತಲೂ ಹರಡಿದ ಕತ್ತಲೆ. ನಾಗ, ಕಾದ್ರವೇಯ (ಪು)=ನಾಗಲೋಕದಲ್ಲಿರುವ ನರಾಕಾರದ ಸರ್ಪಗಳು. ಶೇಷ, ಅನಂತ (ಪು)=ನಾಗಗಳ ಅಧಿಪತಿ. ವಾಸುಕಿ[1] (ಪು)=ಸರ್ಪಗಳ ಅಧಿಪತಿ. ಗೋನಸ, ತಿಲಿತ್ಸ (ಪು)=ಒಂದು ಬಗೆಯ ಹಾವು. ಅಜಗರ, ಶಯು, ವಾಹಸ (ಪು)=ಹೆಬ್ಬಾವು. ಅಲಗರ್ದ, ಜಲವ್ಯಾಲ (ಪು)=ನೀರು ಹಾವು. ರಾಜಿಲ, ಡುಂಡುಭ (ಪು)=ವಿಷವಿಲ್ಲದ ಒಂದು ಜಾತಿಯ ಹಾವು.

---

[1] ಶೇಷ, ವಾಸುಕಿಗಳಲ್ಲಿ ಭೇದವಿದೆ. ಆದರೂ ಕವಿಗಳು ಅಭೇದದಿಂದ ವ್ಯವಹರಿಸುತ್ತಾರೆ.

ಮಾಲುಧಾನೋ ಮಾತುಲಾಹಿರ್ನಿರ್ಮುಕ್ತೋ ಮುಕ್ತಕಂಚುಕಃ ।
ಸರ್ಪಃ ಪೃದಾಕುರ್ಭುಜಗೋ ಭುಜಂಗೋಽಹಿರ್ಭುಜಂಗಮಃ ॥ ೨೫೨
ಆಶೀವಿಷೋ ವಿಷಧರಶ್ಚಕ್ರೀ ವ್ಯಾಲಸ್ಸರೀಸೃಪಃ ।
ಕುಂಡಲೀ ಗೂಢಪಾಚ್ಚಕ್ಷುಃಶ್ರವಾಃ ಕಾಕೋದರಃ ಫಣೀ ॥ ೨೫೩
ದರ್ವೀಕರೋ ದೀರ್ಘಪೃಷ್ಠೋ ದಂದಶೂಕೋ ಬಿಲೇಶಯಃ ।
ಉರಗಃ ಪನ್ನಗೋ ಭೋಗೀ ಜಿಹ್ಮಗಃ ಪವನಾಶನಃ ॥ ೨೫೪
ಲೇಲಿಹಾನೋ ದ್ವಿರಸನೋ ವ್ಯಾಲಃ ಕುಂಭೀನಸೋ ಹರಿಃ ।
ತ್ರಿಷ್ವಾಹೇಯಂ ವಿಷಾಸ್ಥ್ಯಾದಿ ಸ್ಫಟಾಯಾಂ ತು ಫಣಾ ದ್ವಯೋಃ ॥ ೨೫೫
ಸಮೌ ಕಂಚುಕನಿರ್ಮೋಕೌ ಕ್ಷ್ವೇಲಸ್ತು ಗರಲಂ ವಿಷಮ್ ।
ಪುಂಸಿ ಕ್ಲೀಬೇ ಚ ಕಾಕೋಲಕಾಲಕೂಟಹಲಾಹಲಾಃ ॥ ೨೫೬
ಸೌರಾಷ್ಟ್ರಿಕಶ್ಶೌಕ್ಲಿಕೇಯೋ ಬ್ರಹ್ಮಪುತ್ರಃ ಪ್ರದೀಪನಃ ।
ದಾರದೋ ವತ್ಸನಾಭಶ್ಚ ವಿಷಭೇದಾ ಅಮೀ ನವ ॥ ೨೫೭
ವಿಷವೈದ್ಯೋ ಜಾಂಗುಲಿಕೋ ವ್ಯಾಲಗ್ರಾಹ್ಯಹಿತುಂಡಿಕಃ ।

ಇತಿ ಪಾತಾಲಭೋಗಿವರ್ಗಃ

೨೫೨-೫೫. ಮಾಲುಧಾನ, ಮಾತುಲಾಹಿ (ಪು)=ಅನೇಕ ವರ್ಣದ ಹಾವು, ಊಸರವಳ್ಳಿ. ನಿರ್ಮುಕ್ತ, ಮುಕ್ತಕಂಚುಕ (ಪು)=ಪರೆಬಿಟ್ಟ ಹಾವು. ಸರ್ಪ, ಪೃದಾಕು, ಭುಜಗ, ಭುಜಂಗ, ಅಹಿ, ಭುಜಂಗಮ, ಆಶೀವಿಷ, ವಿಷಧರ, ಚಕ್ರಿನ್, ವ್ಯಾಲ, ಸರೀಸೃಪ, ಕುಂಡಲಿನ್, ಗೂಢಪಾದ್, ಚುಕ್ಷುಃಶ್ರವಸ್, ಕಾಕೋದರ, ಫಣಿನ್, ದರ್ವೀಕರ, ದೀರ್ಘಪೃಷ್ಠ, ದಂದಶೂಕ, ಬಿಲೇಶಯ, ಉರಗ, ಪನ್ನಗ, ಭೋಗಿನ್, ಜಿಹ್ಮಗ, ಪವನಾಶನ, ಲೇಲಿಹಾನ, ದ್ವಿರಸನ, ವ್ಯಾಲ, ಕುಂಭೀನಸ, ಹರಿ (ಪು)=ಸರ್ಪ, ಹಾವು. ಆಹೇಯ (ತ್ರಿ)=ಹಾವಿನ ವಿಷ, ಮೂಳೆ ಮೊದಲಾದದ್ದು (ಸ್ತ್ರೀ. ಆಹೇಯೀ). ಸ್ಫಟಾ (ಸ್ತ್ರೀ), ಫಣಾ (ಸ್ತ್ರೀ. ಪು.) (ಪು. ಫಣ)= ಹೆಡೆ, ೨೫೬-೨೫೭. ಕಂಚುಕ, ನಿರ್ಮೋಕ (ಪು)=ಹಾವಿನ ಪರೆ. ಕ್ಷ್ವೇಲ (ಕ್ಷ್ವೇಡ) (ಪು), ಗರಲ, ವಿಷ (ನ)=ವಿಷ. ಕಾಕೋಲ, ಕಾಲಕೂಟ, ಹಲಾಹಲ[1] (ಪು. ನ). ಸೌರಾಷ್ಟ್ರಿಕ, ಶೌಕ್ಲಿಕೇಯ, ಬ್ರಹ್ಮಪುತ್ರ, ಪ್ರದೀಪನ, ದಾರದ, ವತ್ಸನಾಭ (ಪು)= ನಾನಾ ಬಗೆಯ ಒಂಬತ್ತು ವಿಷಗಳು. ೨೫೮. ವಿಷವೈದ್ಯ, ಜಾಂಗುಲಿಕ (ಪು)=ವಿಷವೈದ್ಯ. ವ್ಯಾಲಗ್ರಾಹಿನ್, ಅಹಿತುಂಡಿಕ (ಪು)=ಹಾವಾಡಿಗ.

---

[1] ಹಾಲಾಹಲ, ಹಾಲಹಲ ಎಂಬ ರೂಪಾಂತರಗಳುಂಟು.

೧೦. ನರಕವರ್ಗಃ

ಸ್ಯಾನ್ನಾರಕಸ್ತು ನರಕೋ ನಿರಯೋ ದುರ್ಗತಿಃ ಸ್ತ್ರಿಯಾಮ್ ॥ ೨೫೮
ತದ್ಭೇದಾಸ್ತಪನಾವೀಚಿಮಹಾರೌರವರೌರವಾಃ ।
ಸಂಘಾತಃ ಕಾಲಸೂತ್ರಂ ಚೇತ್ಯಾದ್ಯಾಸ್ಸತ್ತ್ವಾಸ್ತು ನಾರಕಾಃ ॥ ೨೫೯
ಪ್ರೇತಾ ವೈತರಣೀ ಸಿಂಧುಃ ಸ್ಯಾದಲಕ್ಷ್ಮೀಸ್ತು ನಿರ್ಋತಿಃ ।
ವಿಷ್ಟಿರಾಜೂಃ ಕಾರಣಾ ತು ಯಾತನಾ ತೀವ್ರವೇದನಾ ॥ ೨೬೦
ಪೀಡಾ ಬಾಧಾ ವ್ಯಥಾ ದುಃಖಮಾಮನಸ್ಯಂ ಪ್ರಸೂತಿಜಮ್ ।
ಸ್ಯಾತ್ಕಷ್ಟಂ ಕೃಚ್ಛ್ರಮಾಭೀಲಂ ತ್ರಿಷ್ವೇಷಾಂ ಭೇದ್ಯಗಾಮಿ ಯತ್ ॥ ೨೬೧

ಇತಿ ನರಕವರ್ಗಃ

ನರಕವರ್ಗ

೨೫೮. ನಾರಕ, ನರಕ, ನಿರಯ (ಪು), ದುರ್ಗತಿ (ಸ್ತ್ರೀ)=ನರಕ. ೨೫೯-೨೬೦. ತಪನ, ಅವೀಚಿ, ಮಹಾರೌರವ, ರೌರವ, ಸಂಘಾತ, (ಸಂಹಾರ) (ಪು), ಕಾಲಸೂತ್ರ (ನ)=ಇವು ವಿವಿಧ ನರಕಭೇದಗಳು. ನಾರಕ, ಪ್ರೇತ (ಪು)=ನರಕದಲ್ಲಿರುವ ಪ್ರಾಣಿಗಳು. ವೈತರಣೀ (ಸ್ತ್ರೀ)=ವೈತರಣೀ ನದಿ. ಅಲಕ್ಷ್ಮೀ, ನಿರ್ಋತಿ (ಸ್ತ್ರೀ)=ನರಕದಲ್ಲೊದಗುವ ದುರ್ಭಾಗ್ಯ. ವಿಷ್ಟಿ, ಆಜೂ (ಸ್ತ್ರೀ)=ಬಿಟ್ಟಿ ಕೆಲಸ ; ನರಕಪ್ರಕ್ಷೇಪ. ಕಾರಣಾ, ಯಾತನಾ, ತೀವ್ರವೇದನಾ (.ಸ್ತ್ರೀ)=ತೀವ್ರವಾದ ಬಾಧೆ. ೨೬೧. ಪೀಡಾ, ಬಾಧಾ[1], ವ್ಯಥಾ (ಸ್ತ್ರೀ), ದುಃಖ, ಆಮನಸ್ಯ, ಪ್ರಸೂತಿಜ, ಕಷ್ಟ, ಕೃಚ್ಛ್ರ, ಆಭೀಲ (ನ)=ದುಃಖ, ಕಷ್ಟ. ಇವುಗಳಲ್ಲಿ ಕೆಲವು ವಿಶೇಷ್ಯನಿಘ್ನವಾಗಿ ಮೂರು ಲಿಂಗಗಳಲ್ಲಿಯೂ ಬರುತ್ತವೆ.

ಉದಾ:—ದುಃಖಃ ಸುತಃ, ದುಃಖಾ ಸೇವಾ, ದುಃಖಮಧ್ಯಯನಮ್. ಹೀಗೆಯೇ ಕಷ್ಟ, ಕೃಚ್ಛ್ರ, ಆಭೀಲ.

---

[1] ಬಾಧ ಎಂದು ಪುಲ್ಲಿಂಗವೂ ಉಂಟು.

೧೧. ವಾರಿವರ್ಗಃ

ಸಮುದ್ರೋಽಬ್ಧಿರಕೂಪಾರಃ ಪಾರಾವಾರಸ್ಸರಿತ್ಪತಿಃ ।
ಉದನ್ವಾನುದಧಿಃ ಸಿಂಧುಃ ಸರಸ್ವಾನ್ ಸಾಗರೋಽರ್ಣವಃ ॥ ೨೬೨
ರತ್ನಾಕರೋ ಜಲನಿಧಿರ್ಯಾದಃಪತಿರಪಾಂಪತಿಃ ।
ತಸ್ಯ ಪ್ರಭೇದಾಃ ಕ್ಷೀರೋದೋ ಲವಣೋದಸ್ತಥಾಪರೇ ॥ ೨೬೩
ಆಪಃ ಸ್ತ್ರೀ ಭೂಮ್ನಿ ವಾರ್ವಾರಿ ಸಲಿಲಂ ಕಮಲಂ ಜಲಮ್ ।
ಪಯಃ ಕೀಲಾಲಮಮೃತಂ ಜೀವನಂ ಭುವನಂ ವನಮ್ ॥ ೨೬೪
ಕಬಂಧಮುದಕಂ ಪಾಥಃ ಪುಷ್ಕರಂ ಸರ್ವತೋಮುಖಮ್ ।
ಅಂಭೋಽರ್ಣಸ್ತೋಯಪಾನೀಯನೀರಕ್ಷೀರಾಂಬುಶಂಬರಮ್ ॥ ೨೬೫
ಕೃಪೀಟಂ ಕಾಂಡಮಸ್ತ್ರೀ ಸ್ಯಾಜ್ಜೀವನೀಯಂ ಕುಶಂ ವಿಷಮ್ ।
ಮೇಘಪುಷ್ಪಂ ಘನರಸಸ್ತ್ರಿಷು ದ್ವೇ ಆಪ್ಯಮಮ್ಮಯಮ್ ॥ ೨೬೬

ವಾರಿವರ್ಗ

೨೬೨—೨೬೩. ಸಮುದ್ರ, ಅಬ್ಧಿ, ಅಕೂಪಾರ, ಪಾರಾವಾರ, ಸರಿತ್ಪತಿ, ಉದನ್ವತ್, ಉದಧಿ, ಸಿಂಧು, ಸರಸ್ವತ್, ಸಾಗರ, ಅರ್ಣವ, ರತ್ನಾಕರ, ಜಲನಿಧಿ, ಯಾದಃಪತಿ, ಅಪಾಂಪತಿ (ಪು)=ಸಮುದ್ರ. ಕ್ಷೀರೋದ, ಲವಣೋದ (ಪು)= ಇವು ಸಮುದ್ರ ವಿಶೇಷಗಳ ಹೆಸರು.[1] ೨೬೪-೨೬೬. ಅಪ್[2] (ಸ್ತ್ರೀ. ನಿತ್ಯಬಹುವಚನ), ವಾರ್, ವಾರಿ, ಸಲಿಲ, ಕಮಲ, ಜಲ, ಪಯಸ್, ಕೀಲಾಲ, ಅಮೃತ, ಜೀವನ, ಭುವನ, ವನ, ಕಬಂಧ, ಉದಕ, ಪಾಥಸ್, ಪುಷ್ಕರ, ಸರ್ವತೋಮುಖ, ಅಂಭಸ್, ಅರ್ಣಸ್, ತೋಯ, ಪಾನೀಯ, ನೀರ, ಕ್ಷೀರ, ಅಂಬು, ಶಂಬರ, ಕೃಪೀಟ (ನ), ಕಾಂಡ (ಪು. ನ), ಜೀವನೀಯ, ಕುಶ, ವಿಷ, ಮೇಘಪುಷ್ಪ, (ನ), ಘನರಸ (ಪು)=ನೀರು. ಆಪ್ಯ, ಅಮ್ಮಯ (ತ್ರಿ.—ಸ್ತ್ರೀ.—ಅಮ್ಮಯೀ)=ನೀರಿನ ವಿಕಾರ, ನೀರಿನ ರೂಪಾಂತರ.

---

[1] ಒಟ್ಟು ಸಮುದ್ರಗಳು ಏಳು : ಕ್ಷೀರೋದ, ಲವಣೋದ, ಇಕ್ಷುರಸೋದ, ಸುರೋದ, ದಧಿಮಂಡೋದ, ಸ್ವಾದೂದ, ಘೃತೋದ.

[2] ಆಪಸ್ ಎಂಬ ಸಾಂತನಪುಂಸಕ ಶಬ್ದವೂ ಉಂಟು. 'ಆಪೋಭಿರ್ಮಾರ್ಜನಂ ಕೃತ್ವಾ'.

ಭಂಗಸ್ತರಂಗ ಊರ್ಮಿರ್ವಾ ಸ್ತ್ರಿಯಾಂ ವೀಚಿರಥೋರ್ಮಿಷು ।
ಮಹತ್ಸೂಲ್ಲೋಲಕಲ್ಲೋಲೌ ಸ್ಯಾದಾವರ್ತೋಽಂಭಸಾಂ ಭ್ರಮಃ ॥ ೨೬೭
ಪೃಷಂತಿ ಬಿಂದುಪೃಷತಾಃ ಪುಮಾಂಸೋ ವಿಪ್ರುಷಃ ಸ್ತ್ರಿಯಃ ।
ಚಕ್ರಾಣಿ ಪುಟಭೇದಾಃ ಸ್ಯುರ್ಭ್ರಮಾಶ್ಚ ಜಲನಿರ್ಗಮಾಃ ॥ ೨೬೮
ಕೂಲಂ ರೋಧಶ್ಚ ತೀರಂ ಚ ಪ್ರತೀರಂ ಚ ತಟಂ ತ್ರಿಷು ।
ಪಾರಾವಾರೇ ಪರಾರ್ವಾಚೀ ತೀರೇ ಪಾತ್ರಂ ತದಂತರಮ್ ॥ ೨೬೯
ದ್ವೀಪೋಽಸ್ತ್ರಿಯಾಮಂತರೀಪಂ ಯದಂತರ್ವಾರಿಣಸ್ತಟಮ್ ।
ತೋಯೋತ್ಥಿತಂ ತತ್ಪುಲಿನಂ ಸೈಕತಂ ಸಿಕತಾಮಯಮ್ ॥ ೨೭೦
ನಿಷದ್ವರಸ್ತು ಜಂಬಾಲಃ ಪಂಕೋಽಸ್ತ್ರೀ ಶಾದಕರ್ದಮೌ ।
ಜಲೋಚ್ಛ್ವಾಸಾಃ ಪರೀವಾಹಾಃ ಕೂಪಕಾಸ್ತು ವಿದಾರಕಾಃ ॥ ೨೭೧

---

೨೬೭. ಭಂಗ, ತರಂಗ (ಪು), ಊರ್ಮಿ, ವೀಚಿ (ಪು. ಸ್ತ್ರೀ)=ಅಲೆ. ಉಲ್ಲೋಲ, ಕಲ್ಲೋಲ (ಪು)=ದೊಡ್ಡ ಅಲೆ. ಆವರ್ತ (ಪು)=ನೀರಿನ ಸುಳಿ. ೨೬೮. ಪೃಷತ್[1] (ನ), ಬಿಂದು, ಪೃಷತ (ಪು), ವಿಪ್ರುಷ್ (ಸ್ತ್ರೀ)=ನೀರಿನ ಹನಿ. ಚಕ್ರ (ನ), ಪುಟಭೇದ (ಪು)= ನೀರು ಚಕ್ರಾಕಾರವಾಗಿ ಸುತ್ತುತ್ತ ಕೆಳಗಿಳಿಯುವುದು (Whirlpool). ಭ್ರಮ, ಜಲನಿರ್ಗಮ (ಪು)=ನೀರು ಹರಿಯುವ ತೂಬು, ಬಚ್ಚಲು. ೨೬೯. ಕೂಲ, ರೋಧಸ್, ತೀರ, ಪ್ರತೀರ (ನ), ತಟ (ಪು. ನ. ಸ್ತ್ರೀ) (ತಟೀ (ಸ್ತ್ರೀ))=ತೀರ, ದಡ. ಪಾರ (ನ)=ಆಚೆಯ ದಡ. ಆವಾರ (ನ)=ಈಚೆಯ ದಡ. ಪಾತ್ರ (ನ)=ಎರಡು ದಡಗಳ ಮಧ್ಯದಲ್ಲಿ ನೀರು ಹರಿಯುವ ಅಂತರಾಳ (The bed of a river). ೨೭೦. ದ್ವೀಪ (ಪು. ನ), ಅಂತರೀಪ (ನ)=ದ್ವೀಪ, ನಡುಗಡ್ಡೆ. ಪುಲಿನ (ನ)=ನೀರಿಂದ ಮೇಲೆದ್ದ ತೀರ, ದಿಣ್ಣೆ. ಸೈಕತ (ನ)=ಮರಳು ದಿಣ್ಣೆ. ೨೭೧. ನಿಷದ್ವರ, ಜಂಬಾಲ (ಪು), ಪಂಕ (ಪು.ನ), ಶಾದ, ಕರ್ದಮ (ಪು)=ಕೆಸರು. ಜಲೋಚ್ಛ್ವಾಸ, ಪರೀವಾಹ (ಪು)=ಉಕ್ಕಿದ ನೀರು ಹರಿಯುವ ಮಾರ್ಗ, ಕೋಡಿ. ಕೂಪಕ, ವಿದಾರಕ (ಪು)=ಒಣಗಿದ ಹೊಳೆಯಲ್ಲಿ ನೀರಿಗಾಗಿ ತೆಗೆದ ಗುಂಡಿ.

---

[1] ಪೃಷಂತಿ ಎಂದು ಇಕಾರಾಂತ ಪುಲ್ಲಿಂಗವೂ ಉಂಟು.

ನಾವ್ಯಂ ತ್ರಿಲಿಂಗಂ ನೌತಾರ್ಯೇ ಸ್ತ್ರಿಯಾಂ ನೌಸ್ತರಣಿಸ್ತರಿಃ ।
ಉಡುಪಂ ತು ಪ್ಲವಃ ಕೋಲಃ ಸ್ರೋತೋಽಂಬುಸರಣಂ ಸ್ವತಃ ॥ ೨೭೨
ಆತರಸ್ತರಪಣ್ಯಂ ಸ್ಯಾದ್ದ್ರೋಣೀ ಕಾಷ್ಠಾಂಬುವಾಹಿನೀ ।
ಸಾಂಯಾತ್ರಿಕಃ ಪೋತವಣಿಕ್ ಕರ್ಣಧಾರಸ್ತು ನಾವಿಕಃ ॥ ೨೭೩
ನಿಯಾಮಕಾಃ ಪೋತವಾಹಾಃ ಕೂಪಕೋ ಗುಣವೃಕ್ಷಕಃ ।
ನೌಕಾದಂಡಃ ಕ್ಷೇಪಣೀ ಸ್ಯಾದರಿತ್ರಂ ಕೇನಿಪಾತಕಃ ॥ ೨೭೪
ಅಭ್ರಿಃಸ್ತ್ರೀ ಕಾಷ್ಠಕುದ್ದಾಲಃ ಸೇಕಪಾತ್ರಂ ತು ಸೇಚನಮ್ ।
ಯಾನಪಾತ್ರಂ ತು ಪೋತೋಽಬ್ಧಿಭವೇ ತ್ರಿಷುಸ ಮುದ್ರಿಯಮ್ ॥ ೨೭೫

---

೨೭೨. ನಾವ್ಯ (ಪು. ಸ್ತ್ರೀ. ನ)= ದೋಣಿಯಿಂದ ದಾಟಬೇಕಾದಷ್ಟು ನೀರಿರುವ ಹೊಳೆ ಮೊದಲಾದದ್ದು. ನೌ, ತರಣಿ, ತರಿ (ಸ್ತ್ರೀ)=ದೋಣಿ, ಹಡಗು. ಉಡುಪ (ನ), ಪ್ಲವ, ಕೋಲ (ಪು)=ತೆಪ್ಪ (Raft). ಸ್ರೋತಸ್ (ನ)= ತಾನಾಗಿ ಹರಿಯುವ ಜಲಪ್ರವಾಹ (Natural current). ೨೭೩. ಆತರ (ಪು), ತರಪಣ್ಯ (ನ)=ದೋಣಿಯವನಿಗೆ ಕೊಡುವ ಕೂಲಿ (Freight). ದ್ರೋಣೀ (ಸ್ತ್ರೀ)=ನೀರನ್ನು ತುಂಬಿ ಚೆಲ್ಲುವುದಕ್ಕಾಗಿ ಉಪಯೋಗಿಸುವ ಮರದ ಪಾತ್ರೆ (An oval vessel of wood ; ಇದನ್ನು ದೋಣಿ—Boat ಎಂಬ ಅರ್ಥದಲ್ಲಿಯೂ ಉಪಯೋಗಿಸುತ್ತಾರೆ.) ಸಾಂಯಾತ್ರಿಕ, ಪೋತವಣಿಜ್ (ಪು)=ಹಡಗಿನಲ್ಲಿ ಸಂಚರಿಸುವ ವರ್ತಕ. ಕರ್ಣಧಾರ, ನಾವಿಕ (ಪು)=ಹಡಗನ್ನು ನಡೆಸುವವನು. ೨೭೪. ನಿಯಾಮಕ, ಪೋತವಾಹ (ಪು)=ಹಡಗಿನ ಮೇಲ್ವಿಚಾರಣೆ ನೋಡಿಕೊಳ್ಳತಕ್ಕವನು. ಕೂಪಕ, ಗುಣ ವೃಕ್ಷಕ (ಪು)= ಹಡಗಿನ ಮಧ್ಯದಲ್ಲಿರುವ ಕಂಬ. ನೌಕಾದಂಡ (ಪು), ಕ್ಷೇಪಣೀ[1] (ಸ್ತ್ರೀ)=ನೌಕೆಯನ್ನು ನಡೆಸುವ ಎರಡು ಪಕ್ಕಗಳಲ್ಲಿರುವ ಕೋಲು (Oar). ಅರಿತ್ರ (ನ) ಕೇನಿಪಾತಕ (ಪು)=ನೌಕೆಯ ಚುಕ್ಕಾಣಿ, ನೌಕೆಯನ್ನು ನಡೆಸುವ ಹಿಂಬದಿಯ ಕೋಲು. ೨೭೫. ಅಭ್ರಿಃ (ಸ್ತ್ರೀ), ಕಾಷ್ಠಕುದ್ದಾಲ (ಪು)=ನೌಕೆಯನ್ನು ಸ್ವಚ್ಛಮಾಡಲು ಮರದಿಂದ ಮಾಡಿದ ಗುದ್ದಲಿ. ಸೇಕಪಾತ್ರ ಸೇಚನ (ನ)= ನೌಕೆಯ ನೀರನ್ನು ಚೆಲ್ಲುವ ಪಾತ್ರೆ. ಯಾನಪಾತ್ರ (ನ), ಪೋತ (ಪು)=ನೀರನ್ನು ದಾಟುವ ಸಾಧನ (ಹಡಗು, ದೋಣಿ, ತೆಪ್ಪ). ಸಮುದ್ರಿಯ (ಪು. ಸ್ತ್ರೀ. ನ)=ಸಮುದ್ರದಲ್ಲಿ ಹುಟ್ಟಿದ್ದು.

---

[1] ಕ್ಷಿಪಣೀ ಎಂದು ಪಾಠಾಂತರ. ಕ್ಷೇಪಣಿ, ಕ್ಷಿಪಣಿ ಎಂದು ಹ್ರಸ್ವಾಂತಗಳೂ ಉಂಟು.

ಕ್ಲೀಬೇಽರ್ಧನಾವಂ ನಾವ್ಯೋರ್ಧೇಽತೀತನೌಕೇಽತಿನು ತ್ರಿಷು ।
ತ್ರಿಷ್ವಾಗಾಧಾತ್ ಪ್ರಸನ್ನೋಽಚ್ಛಃ ಕಲುಷೋಽನಚ್ಛ ಆವಿಲಃ ॥ ೨೭೬
ನಿಮ್ನಂ ಗಭೀರಂ ಗಂಭೀರಮುತ್ತಾನಂ ತದ್ವಿಪರ್ಯಯೇ ।
ಅಗಾಧಮತಲಸ್ಪರ್ಶೇ ಕೈವರ್ತೇ ದಾಶಧೀವರೌ ॥ ೨೭೭
ಆನಾಯಃ ಪುಂಸಿ ಜಾಲಂ ಸ್ಯಾಚ್ಛಣಸೂತ್ರಂ ಪವಿತ್ರಕಮ್ ।
ಮತ್ಸ್ಯಧಾನೀ ಕುವೇಣೀ ಸ್ಯಾದ್ಬಡಿಶಂ ಮತ್ಸ್ಯವೇಧನಮ್ ॥ ೨೭೮
ಪೃಥುರೋಮಾಝುಷೋ ಮತ್ಸ್ಯೋಮೀನೋ ವೈಸಾರಿಣೋಽಂಡಜಃ ।
ವಿಸಾರಶ್ಶಕಲೀ ಚಾಥ ಗಡಕಶ್ಶಕುಲಾರ್ಭಕಃ ॥ ೨೭೯
ಸಹಸ್ರದಂಷ್ಟ್ರಃ ಪಾಠೀನ ಉಲೂಪೀ ಶಿಶುಕಸ್ಸಮೌ ।
ನಲಮೀನಶ್ಚಿಲಿಚಿಮಃ ಪ್ರೋಷ್ಠೀ ತು ಶಫರೀ ದ್ವಯೋಃ ॥ ೨೮೦

---

೨೭೬. ಅರ್ಧನಾವ (ನ)=ನೌಕೆಯ ಅರ್ಧಭಾಗ. ಅತಿನು (ಪು. ಸ್ತ್ರೀ. ನ)=ನೌಕೆಯನ್ನು ದಾಟಿದ ವಸ್ತು. ಮುಂದೆ 'ಅಗಾಧ' ಶಬ್ದದವರೆಗೆ ಇರುವ ಶಬ್ದಗಳು ವಿಶೇಷ್ಯ ನಿಘ್ನಗಳಾಗಿ ತ್ರಿಲಿಂಗಗಳಾಗುತ್ತವೆ. ಪ್ರಸನ್ನ, ಅಚ್ಛ (ಪು. ಸ್ತ್ರೀ. ನ.)=ನಿರ್ಮಲ. ಕಲುಷ, ಅನಚ್ಛ, ಆವಿಲ (ಪು. ಸ್ತ್ರೀ. ನ)=ಕೊಳೆಯಾದದ್ದು. ೨೭೭. ನಿಮ್ನ, ಗಭೀರ, ಗಂಭೀರ (ಪು. ಸ್ತ್ರೀ. ನ)= ಆಳವಾದದ್ದು. ಉತ್ತಾನ (ಪು.ಸ್ತ್ರೀ.ನ)=ಆಳವಿಲ್ಲದ್ದು. (Shallow). ಅಗಾಧ (ಪು. ಸ್ತ್ರೀ.ನ)=ತಳವಿಲ್ಲದಷ್ಟು ಆಳವಾದದ್ದು. ಕೈವರ್ತ, ದಾಶ, ಧೀವರ (ಪು)=ಬೆಸ್ತ (Fisherman) ದೋಣಿಯನ್ನು ನಡೆಸುವ ವೃತ್ತಿಯವನು. ೨೭೮. ಆನಾಯ (ಪು), ಜಾಲ (ನ)=ಬಲೆ. ಶಣಸೂತ್ರ, ಪವಿತ್ರಕ (ನ)=ಸೆಣಬಿನ ಬಲೆ ; ಬಲೆಯ ದಾರ (Strings of a net). ಮತ್ಸ್ಯಧಾನೀ, ಕುವೇಣೀ (ಸ್ತ್ರೀ)=ಮೀನುಗಳನ್ನು ತುಂಬುವ ಬುಟ್ಟಿ. ಬಡಿಶ (ಬಲಿಶ), ಮತ್ಸ್ಯವೇಧನ (ನ)=ಗಾಳ. ೨೭೯. ಪೃಥುರೋಮನ್, ಝುಷ, ಮತ್ಸ್ಯ, ಮೀನ, ವೈಸಾರಿಣ, ಅಂಡಜ, ವಿಸಾರ, ಶಕಲಿನ್=ಮೀನು. ಗಡಕ, ಶಕುಲಾರ್ಭಕ (ಪು)=ಮರಿಮೀನು. ೨೮೦. ಸಹಸ್ರದಂಷ್ಟ್ರ, ಪಾಠೀನ (ಪು)=ಬಹಳ ಹಲ್ಲುಗಳು ಅಥವಾ ಮುಳ್ಳುಗಳಿರುವ ಮೀನು. ಉಲೂಪೀ (ಸ್ತ್ರೀ), ಶಿಶುಕ (ಪು)=ಉಣಚಿ ಮೀನು. ನಲಮೀನು, ಚಿಲಿಚಿಮ (ಪು)=ಹುಲ್ಲುಮೀನು (Fish living among reeds). ಪ್ರೋಷ್ಠೀ (ಸ್ತ್ರೀ), ಶಫರೀ (ಪು. ಸ್ತ್ರೀ.) (ಪು. ಶಫರ)= ಹಾರುಮೀನು. ೨೮೧-೨೮೨. ಪೋತಾಧಾನ (ನ)=ಮೀನುಮರಿಗಳ ಗುಂಪು. ಮುಂದೆ ಹೇಳುವ ಶಬ್ದಗಳು ನಾನಾ ಜಾತಿಯ ಮೀನುಗಳ ಹೆಸರುಗಳು. ರೋಹಿತ,

ಕ್ಷುದ್ರಾಂಡಮತ್ಸ್ಯ ಸಂಘಾತಃ ಪೋತಾಧಾನಮಥೋ ಝಷಾಃ ।
ರೋಹಿತೋ ಮದ್ಗುರಶ್ಶಾಲೋ ರಾಜೀವಶ್ಶಕುಲಸ್ತಿಮಿಃ ॥ ೨೮೧
ತಿಮಿಂಗಿಲಾದಯಶ್ಚಾಥ ಯಾದಾಂಸಿ ಜಲಜಂತವಃ ।
ತದ್ಭೇದಾಃ ಶಿಶುಮಾರೋದ್ರಶಂಕವೋ ಮಕರಾದಯಃ ॥ ೨೮೨
ಸ್ಯಾತ್ಕುಲೀರಃ ಕರ್ಕಟಕಃ ಕೂರ್ಮೇ ಕಮಠಕಚ್ಛಪೌ ।
ಗ್ರಾಹೋಽವಹಾರೋ ನಕ್ರಸ್ತು ಕುಂಭೀರೋಽಥ ಮಹೀಲತಾ ॥ ೨೮೩
ಗಂಡೂಪದಃ ಕಿಂಚುಲಕೋ ನಿಹಾಕಾ ಗೋಧಿಕಾ ಸಮೇ ।
ರಕ್ತಪಾ ತು ಜಲೂಕಾಯಾಂ ಸ್ತ್ರಿಯಾಂ ಭೂಮ್ನಿ ಜಲೌಕಸಃ ॥ ೨೮೪
ಮುಕ್ತಾಸ್ಫೋಟಃ ಸ್ತ್ರಿಯಾಂ ಶುಕ್ತಿಃ ಶಂಖಸ್ಸ್ಯಾತ್ಕಂಬುರಸ್ತ್ರಿಯೌ ।
ಕ್ಷುದ್ರಶಂಖಾಶ್ಶಂಖನಖಾಶ್ಶಂಬೂಕಾ ಜಲಶುಕ್ತಯಃ ॥ ೨೮೫
ಭೇಕೇ ಮಂಡೂಕವರ್ಷಾಭೂಶಾಲೂರಪ್ಲವದರ್ದುರಾಃ ।
ಶಿಲೀ ಗಂಡೂಪದೀ ಭೇಕೀ ವರ್ಷಾಭ್ವೀ ಕಮಠೀ ದುಲಿಃ ॥ ೨೮೬

ಮದ್ಗುರ, ಶಾಲ, ರಾಜೀವ, ಶಕುಲ, ತಿಮಿ, ತಿಮಿಂಗಿಲ (ಪು) ಇತ್ಯಾದಿ. ಯಾದಸ್ (ನ)=ಜಲಜಂತು. ಶಿಶುಮಾರ (ಪು)=ನೆಗಳು (Alligator ; Gangetic porpoise). ಉದ್ರ (ಪು)=ಮೀನುಗಳನ್ನು ತಿನ್ನುವ ಜಲಜಂತು (Otter). ಶಂಕು (ಪು)=ನೀರು ಹಂದಿ (Water hog). ಮಕರ (ಪು)=ಮೊಸಳೆ ; ಜಲವ್ಯಾಘ್ರ (Shark). ೨೮೩-೨೮೪. ಕುಲೀರ, ಕರ್ಕಟಕ (ಪು)=ಏಡಿ. ಕೂರ್ಮ, ಕಮಠ, ಕಚ್ಛಪ (ಪು)=ಆಮೆ. ಗ್ರಾಹ, ಅವಹಾರ (ಪು)=ಮೊಸಳೆ. ನಕ್ರ, ಕುಂಭೀರ (ಪು)=ಮೊಸಳೆ. (ಮಕರ, ಗ್ರಾಹ, ನಕ್ರ—ಈ ಮೂರು ಶಬ್ದಗಳಿಗೆ ಸಾಮಾನ್ಯವಾಗಿ ಮೊಸಳೆಯೆಂದು ಅರ್ಥ ಹೇಳುತ್ತಾರೆ, ಆದರೆ ಇವು ಭಿನ್ನಜಾತಿಯ ಜಲಜಂತುಗಳು.) ಮಹೀಲತಾ (ಸ್ತ್ರೀ), ಗಂಡೂಪದ, ಕಿಂಚುಲಕ (ಪು)=ಕೆಸರುಹುಳು. ನಿಹಾಕಾ, ಗೋಧಿಕಾ, (ಸ್ತ್ರೀ)=ಉಡುವಿನಂತಹ ಜಲಜಂತು. ರಕ್ತಪಾ, ಜಲೂಕಾ,[1] ಜಲೌಕಸ್ (ಸ್ತ್ರೀ)=ಜಿಗಳೆ (ಜಲೌಕಸ್ ಶಬ್ದಕ್ಕೆ ಸಾಮಾನ್ಯವಾಗಿ ಬಹುವಚನದಲ್ಲಿ ಪ್ರಯೋಗ.) ೨೮೫. ಮುಕ್ತಾಸ್ಫೋಟ (ಪು), ಶುಕ್ತಿ (ಸ್ತ್ರೀ)=ಮುತ್ತಿನ ಚಿಪ್ಪು. ಶಂಖ, ಕಂಬು (ಪು. ನ.)=ಶಂಖ. ಶಂಖನಖ (ಪು)=ಚಿಕ್ಕ ಶಂಖ. ಶಂಬೂಕ (ಪು), ಜಲಶುಕ್ತಿ (ಸ್ತ್ರೀ)=ಕಪ್ಪೆಚಿಪ್ಪು. ೨೮೬. ಭೇಕ, ಮಂಡೂಕ, ವರ್ಷಾಭೂ, ಶಾಲೂರ, ಪ್ಲವ, ದರ್ದುರ (ಪು)=ಕಪ್ಪೆ. ಶಿಲೀ.

---

[1] ಜಲೋಕಾ, ಜಲೌಕಾ ಎಂದು ರೂಪಾಂತರಗಳುಂಟು.

ಮದ್ಗುರಸ್ಯ ಪ್ರಿಯಾ ಶೃಂಗೀ ದುರ್ನಾಮಾ ದೀರ್ಘಕೋಶಿಕಾ ।
ಜಲಾಶಯಾ ಜಲಾಧಾರಾಸ್ತತ್ರಾಗಾಧಜಲೋ ಹ್ರದಃ ॥ ೨೮೭
ಆಹಾವಸ್ತು ನಿಪಾನಂ ಸ್ಯಾದುಪಕೂಪಜಲಾಶಯೇ ।
ಪುಂಸ್ಯೇವಾಂಧುಃ ಪ್ರಹಿಃ ಕೂಪ ಉದಪಾನಂ ತು ಪುಂಸಿ ವಾ ॥ ೨೮೮
ನೇಮಿಸ್ತ್ರಿಕಾಸ್ಯ ಪೀನಾಹೋ ಮುಖಬಂಧನಮಸ್ಯ ಯತ್ ।
ಪುಷ್ಕರಿಣ್ಯಾಂ ತು ಖಾತಂ ಸ್ಯಾದಖಾತಂ ದೇವಖಾತಕಮ್ ॥ ೨೮೯
ಪದ್ಮಾಕರಸ್ತಟಾಕೋಽಸ್ತ್ರೀ ಕಾಸಾರಸ್ಸರಸೀ ಸರಃ ।
ವೇಶಂತಃ ಪಲ್ವಲಂ ಚಾಲ್ಪಸರೋ ವಾಪೀ ತು ದೀರ್ಘಿಕಾ ॥ ೨೯೦
ಖೇಯಂ ತು ಪರಿಖಾಧಾರಸ್ತ್ವಂಭಸಾಂ ಯತ್ರ ಧಾರಣಮ್ ।
ಸ್ಯಾದಾಲವಾಲಮಾವಾಲಮಾವಾಪೋಽಥ ನದೀ ಸರಿತ್ ॥ ೨೯೧

ಗಂಡೂಪದೀ (ಸ್ತ್ರೀ)=ಹೆಣ್ಣು ಕೆಸರುಹುಳು. ಭೇಕೀ, ವರ್ಷಾಭ್ವೀ (ಸ್ತ್ರೀ)=ಹೆಣ್ಣುಕಪ್ಪೆ. ಕಮಠೀ, ದುಲಿ (ಸ್ತ್ರೀ)=ಹೆಣ್ಣು ಆಮೆ. ೨೮೭. ಶೃಂಗೀ (ಸ್ತ್ರೀ)= ಮದ್ಗುರ ಜಾತಿಯ ಹೆಣ್ಣು ಮೀನು. ದುರ್ನಾಮನ್, ದುರ್ನಾಮಾ (ದುರ್ನಾಮ್ನೀ), ದೀರ್ಘಕೋಶಿಕಾ (ಸ್ತ್ರೀ)= ದೊಡ್ಡ ಜಿಗಳೆ. ಜಲಾಶಯ, ಜಲಾಧಾರ (ಪು)=ನೀರಿರುವ ಕೊಳ ಮೊದಲಾದದ್ದು. ಹ್ರದ (ಪು)=ಆಳವಾದ ನೀರಿರುವ ಮಡು. ೨೮೮. ಆಹಾವ (ಪು), ನಿಪಾನ (ನ)=ಪಶುಗಳು ನೀರು ಕುಡಿಯಲೆಂದು ಕಟ್ಟಿದ ನೀರಿನ ತೊಟ್ಟಿ. ಅಂಧು, ಪ್ರಹಿ, ಕೂಪ (ಪ್ರು), ಉದಪಾನ (ಪು. ನ.)= ಸೇದುವ ಬಾವಿ. ೨೮೯. ನೇಮಿ, ತ್ರಿಕಾ (ಸ್ತ್ರೀ)=ಗಡಗಡೆ (An instrument for raising water, pulley). ಪೀನಾಹ (ವೀನಾಹ) (ಪು), ಮುಖಬಂಧನ (ನ)=ಬಾವಿಯ ಹೊದಿಕೆ, ಮುಚ್ಚಲು. ಪುಷ್ಕರಿಣೀ (ಸ್ತ್ರೀ), ಖಾತ (ನ)=ತೋಡಲ್ಪಟ್ಟ ಕೊಳ. ಅಖಾತ, ದೇವಖಾತಕ (ನ)=ಸ್ವಭಾವಸಿದ್ಧವಾದ ಕೊಳ. ೨೯೦. ಪದ್ಮಾಕರ (ಪು), ತಟಾಕ[1] (ಪು. ನ), ಕಾಸಾರ (ಪು), ಸರಸೀ (ಸ್ತ್ರೀ), ಸರಸ್ (ನ)=ಸರೋವರ, ಕೆರೆ. ವೇಶಂತ (ಪು). ಪ್ರಲ್ವಲ, ಅಲ್ಪಸರಸ್ (ನ)=ಚಿಕ್ಕ ಕೊಳ, ಹೊಂಡ. ವಾಪೀ, ದೀರ್ಘಿಕಾ (ಸ್ತ್ರೀ)=ಉದ್ದವಾಗಿರುವ ಬಾವಿ, ಇಳಿಯುವ ಬಾವಿ. ೨೯೧-೨೯೩. ಖೇಯ (ನ), ಪರಿಖಾ (ಸ್ತ್ರೀ)=ನೀರಿರುವ ಕಂದಕ. ಆಧಾರ (ಪು)=ನೀರು ತುಂಬುವ ಕಟ್ಟೆ, ತೊಟ್ಟಿ. ಆಲವಾಲ,[2] ಆವಾಲ (ನ), ಆವಾಪ (ಪು)=ಗಿಡದ ಬುಡದಲ್ಲಿ

---

[1] ತಡಾಕ, ತಡಾಗ, ತಟಾಗ ಎಂದು ಪಾಠಾಂತರ ಉಂಟು.

[2] ಅಲವಾಲ ಎಂಬ ಹ್ರಸ್ವಾದಿಯೂ ಉಂಟು.

ಕೂಲಂಕಷಾ ನಿರ್ಝರಿಣೀ ರೋಧಾವಕ್ರಾ ಸರಸ್ವತೀ ।
ತರಂಗಿಣೀ ಶೈವಲಿನೀ ತಟಿನೀ ಹ್ರಾದಿನೀ ಧುನೀ ॥ ೨೯೨
ಸ್ರೋತಸ್ವತೀ ದ್ವೀಪವತೀ ಸ್ರವಂತೀ ನಿಮ್ನಗಾಪಗಾ ।
ಗಂಗಾ ವಿಷ್ಣುಪದೀ ಜಹ್ನುತನಯಾ ಸುರನಿಮ್ನಗಾ ॥ ೨೯೩
ಭಾಗೀರಥೀ ತ್ರಿಪಥಗಾ ತ್ರಿಸ್ರೋತಾ ಭೀಷ್ಮಸೂರಪಿ ।
ಕಾಲಿಂದೀ ಸೂರ್ಯತನಯಾ ಯಮುನಾ ಶಮನಸ್ವಸಾ ॥ ೨೯೪
ರೇವಾ ತು ನರ್ಮದಾ ಸೋಮೋದ್ಭವಾ ಮೇಖಲಕನ್ಯಕಾ ।
ಕರತೋಯಾ ಸದಾನೀರಾ ಬಾಹುದಾ ಸೈತವಾಹಿನೀ ॥ ೨೯೫
ಶತದ್ರುಸ್ತು ಶುತುದ್ರಿಸ್ಸ್ಯಾದ್ವಿಪಾಶಾ ತು ವಿಪಾಟ್ ಸ್ತ್ರಿಯಾಮ್ ।
ಶೋಣೋ ಹಿರಣ್ಯವಾಹಸ್ಸ್ಯಾತ್ಕುಲ್ಯಾಲ್ಪಾ ಕೃತ್ರಿಮಾ ಸರಿತ್ ॥ ೨೯೬
ಶರಾವತೀ ವೇತ್ರವತೀ ಚಂದ್ರಭಾಗಾ ಸರಸ್ವತೀ ।
ಗೋದಾವರೀ ಭೀಮರಥೀ ಕೃಷ್ಣವೇಣೀ ಚ ಗೌತಮೀ ॥ ೨೯೭
ಕಾವೇರೀ ಸರಿತೋಽನ್ಯಾಶ್ಚ ಸಂಭೇದಸ್ಸಿಂಧುಸಂಗಮಃ ।
ದ್ವಯೋಃ ಪ್ರಣಾಲೀ ಪಯಸಃ ಪದವ್ಯಾಂ ತ್ರಿಷು ತೂತ್ತರೌ ॥ ೨೯೮

ಮಾಡುವ ಪಾತಿ. ನದೀ, ಸರಿತ್, ಕೂಲಂಕಷಾ, ನಿರ್ಝರಿಣೀ, ರೋಧೋವಕ್ರಾ, ಸರಸ್ವತೀ, ತರಂಗಿಣೀ, ಶೈವಲಿನೀ, ತಟಿನೀ, ಹ್ರಾದಿನೀ, ಧುನೀ, ಸ್ರೋತಸ್ವತೀ, ದ್ವೀಪವತೀ, ಸ್ರವಂತೀ, ನಿಮ್ನಗಾ, ಆಪಗಾ (ಸ್ತ್ರೀ)=ನದಿ, ಹೊಳೆ. ೨೯೩-೨೯೪. ಗಂಗಾ, ವಿಷ್ಣುಪದೀ, ಜಹ್ನುತನಯಾ, ಸುರನಿಮ್ನಗಾ, ಭಾಗೀರಥೀ, ತ್ರಿಪಥಗಾ, ತ್ರಿಸ್ರೋತಸ್, ಭೀಷ್ಮಸೂ (ಸ್ತ್ರೀ)=ಗಂಗಾನದಿ. ಕಾಲಿಂದೀ, ಸೂರ್ಯತನಯಾ, ಯಮುನಾ, ಶಮನಸ್ವಸೃ (ಸ್ತ್ರೀ)=ಯಮುನೆ. ೨೯೫. ರೇವಾ, ನರ್ಮದಾ, ಸೋಮೋದ್ಭವಾ, ಮೇಖಲಕನ್ಯಕಾ (ಮೇಕಲಕನ್ಯಕಾ) (ಸ್ತ್ರೀ)= ನರ್ಮದಾ ನದಿ. ಕರತೋಯಾ, ಸದಾನೀರಾ (ಸ್ತ್ರೀ)=ನದೀವಿಶೇಷ, ಪಾರ್ವತೀ ವಿವಹಾಕಾಲದಲ್ಲಿ ಕನ್ಯಾದಾನ ಜಲದಿಂದ ಸಂಭವಿಸಿದ ನದಿ. ಬಾಹುದಾ, ಸೈತವಾಹಿನೀ (ಸ್ತ್ರೀ)=ನದೀವಿಶೇಷ, ಕಾರ್ತವೀರ್ಯನು ನಿರ್ಮಿಸಿದ ನದಿ. ೨೯೬. ಶತದ್ರು, ಶುತುದ್ರಿ (ಸ್ತ್ರೀ)=ನದೀವಿಶೇಷ. ವಿಪಾಶಾ, ವಿಪಾಶ್ (—ಟ್) (ಸ್ತ್ರೀ)=ಪಾಪ ವಿಮೋಚಿನೀ ನದಿ. ಶೋಣ, ಹಿರಣ್ಯಬಾಹು (ಪು)=ಶೋಣವೆಂಬ ನದಿ. ಕುಲ್ಯಾ (ಸ್ತ್ರೀ)=ಕಾಲುವೆ, ೨೯೭-೨೯೮. ಶರಾವತೀ, ವೇತ್ರವತೀ, ಚಂದ್ರಭಾಗಾ, ಸರಸ್ವತೀ, ಗೋದಾವರೀ, ಭೀಮರಥೀ, ಕೃಷ್ಣವೇಣೀ, ಗೌತಮೀ, ಕಾವೇರೀ

ದೇವಿಕಾಯಾಂ ಸರಯ್ವಾಂ ಚ ಭವೇ ದಾವಿಕಸಾರವೌ ।
ಸೌಗಂಧಿಕಂ ತು ಕಹ್ಲಾರಂ ಹಲ್ಲಕಂ ರಕ್ತಸಂಧ್ಯಕಮ್ ॥ ೨೯೯
ಸ್ಯಾದುತ್ಪಲಂ ಕುವಲಯಮಥ ನೀಲಾಂಬುಜನ್ಮ ಚ ।
ಇಂದೀವರಂ ಚ ನೀಲೇಽಸ್ಮಿನ್ ಸಿತೇ ಕುಮುದಕೈರವೇ ॥ ೩೦೦
ಶಾಲೂಕಮೇಷಾಂ ಕಂದಸ್ಸ್ಯಾದ್ವಾರಿಪರ್ಣೀ ತು ಕುಂಭಿಕಾ ।
ಜಲನೀಲೀ ತು ಶೈವಾಲಂ ಶೈವಲೋಽಥ ಕುಮುದ್ವತೀ ॥ ೩೦೧
ಕುಮುದಿನ್ಯಾಂ ನಲಿನ್ಯಾಂ ತು ಬಿಸಿನೀಪದ್ಮಿನೀಮುಖಾಃ ।
ವಾ ಪುಂಸಿ ಪದ್ಮಂ ನಲಿನಮರವಿಂದಂ ಮಹೋತ್ಪಲಮ್ ॥ ೩೦೨
ಸಹಸ್ರಪತ್ರಂ ಕಮಲಂ ಶತಪತ್ರಂ ಕುಶೇಶಯಮ್ ।
ಪಂಕೇರುಹಂ ತಾಮರಸಂ ಸಾರಸಂ ಸರಸೀರುಹಮ್ ॥ ೩೦೩
ಬಿಸಪ್ರಸೂನರಾಜೀವಪುಷ್ಕರಾಂಭೋರುಹಾಣಿ ಚ ।
ಪುಂಡರೀಕಂ ಸಿತಾಂಭೋಜಮಥ ರಕ್ತಸರೋರುಹಮ್ ॥ ೩೦೪
ರಕ್ತೋತ್ಪಲಂ ಕೋಕನದಂ ನಾಲೋ ನಾಲಮಥಾಸ್ತ್ರಿಯಾಮ್ ।
ಮೃಣಾಲಂ ಬಿಸಮಬ್ಜಾದಿಕದಂಬೇ ಷಂಡಮಸ್ತ್ರಿಯಾಮ್ ॥ ೩೦೫

(ಸ್ತ್ರೀ)=ಬೇರೆ ಬೇರೆ ನದಿಗಳ ಹೆಸರು. ಸಂಭೇದ (ಪು)=ನದೀ ಸಂಗಮ. ೨೯೮-೨೯೯. ಪ್ರಣಾಲೀ (ಸ್ತ್ರೀ), ಪ್ರಣಾಲ (ಪು)=ನೀರು ಹರಿಯಲು ಮಾಡಿದ ಮಾರ್ಗ (Drain). ದಾವಿಕ (ಪು. ನ.) (ಸ್ತ್ರೀ. ದಾವಿಕೀ)=ದೇವಿಕಾ ನದಿಯಲ್ಲಿ ಹುಟ್ಟಿದ್ದು. ಸಾರವ (ಪು. ನ.) (ಸ್ತ್ರೀ. ಸಾರವೀ)=ಸರಯೂ ನದಿಯಲ್ಲಿ ಹುಟ್ಟಿದ್ದು. ಸೌಗಂಧಿಕ, ಕಹ್ಲಾರ (ನ)=ಬಿಳಿಯ ಜಲಪುಷ್ಪ (White water-lily). ಹಲ್ಲಕ, ರಕ್ತಸಂಧ್ಯಕ (ನ)=ಕೆಂಪು ಜಲಪುಷ್ಪ (Red water-lily) ೩೦೦. ಉತ್ಪಲ, ಕುವಲಯ (ನ)= ನೈದಿಲೆ. ನೀಲಾಂಬುಜನ್ಮನ್, ಇಂದೀವರ (ನ)= ಕಪ್ಪು ನೈದಿಲೆ. ಕುಮುದ, ಕೈರವ (ನ)=ಬಿಳಿಯ ನೈದಿಲೆ. ೩೦೧-೩೦೨. ಶಾಲೂಕ (ನ)=ಸೌಗಂಧಿಕಾದಿ ಹೂಗಿಡಗಳ ಗಡ್ಡೆ. ವಾರಿಪರ್ಣೀ, ಕುಂಭಿಕಾ (ಸ್ತ್ರೀ)=ನೀರು ಹಾವಸೆಗಿಡ. ಜಲನೀಲೀ (ಸ್ತ್ರೀ), ಶೈವಾಲ (ನ), ಶೈವಲ[1] (ಪು)=ನೀರಿನ ಮೇಲೆ ಮುಚ್ಚಿಕೊಳ್ಳುವ ಪಾಚಿ. ಕುಮುದ್ವತೀ, ಕುಮುದಿನೀ (ಸ್ತ್ರೀ)= ನೈದಿಲೆಗಿಡ. ನಲಿನೀ, ಬಿಸಿನೀ, ಪದ್ಮಿನೀ (ಮೃಣಾಲಿನೀ, ಕಮಲಿನೀ ಇತ್ಯಾದಿ) (ಸ್ತ್ರೀ)=ತಾವರೆಗಿಡ. ೩೦೩—೩೦೪. ಪದ್ಮ (ನ. ಪು.), ನಲಿನ,

---

[1] ಶೇವಲ, ಶೇವಾಲ ಎಂಬ ರೂಪಾಂತರಗಳುಂಟು.

ಕರಹಾಟಶ್ಶಿಫಾಕಂದಃ ಕಿಂಜಲ್ಕಃ ಕೇಸರೋಽಸ್ತ್ರಿಯಾಮ್ ।
ಸಂವರ್ತಿಕಾ ನವದಲಂ ಬೀಜಕೋಶೋ ವರಾಟಕಃ ॥ ೩೦೬

ಇತಿ ವಾರಿವರ್ಗಃ

ಉಕ್ತಂ ಸ್ವರ್ವ್ಯೋಮದಿಕ್ಕಾಲಧೀವಾಕ್ಶಬ್ದಾದಿನಾಟ್ಯಕಮ್ ।
ಪಾತಾಲಭೋಗಿನರಕಂ ವಾರಿ ಚೈಷಾಂ ಚ ಸಂಗತಮ್ ॥ ೩೦೭
ಇತ್ಯಮರಸಿಂಹಕೃತೌ ನಾಮಲಿಂಗಾನುಶಾಸನೇ ।
ಸ್ವರ್ಗಾದಿಕಾಂಡಃ ಪ್ರಥಮಃ ಸಾಂಗ ಏವ ಸಮರ್ಥಿತಃ ॥ ೩೦೮

ಇತಿ ನಾಮಲಿಂಗಾನುಶಾಸನೇ ಪ್ರಥಮಕಾಂಡಂ
ಸಂಪೂರ್ಣಮ್

ಅರವಿಂದ, ಮಹೋತ್ಪಲ, ಸಹಸ್ರಪತ್ರ, ಕಮಲ, ಶತಪತ್ರ, ಕುಶೇಶಯ, ಪಂಕೇರುಹ, ತಾಮರಸ, ಸಾರಸ, ಸರಸೀರುಹ, ಬಿಸಪ್ರಸೂನ, ರಾಜೀವ, ಪುಷ್ಕರ, ಅಂಭೋರುಹ (ನ)=ತಾವರೆ. ೩೦೪-೩೦೫. ಪುಂಡರೀಕ, ಸಿತಾಂಬೋಭೋಜ (ನ)=ಬಿಳಿದಾವರೆ. ರಕ್ತಸರೋರುಹ, ರಕ್ತೋತ್ಪಲ, ಕೋಕನದ (ನ)=ಕೆಂದಾವರೆ. ನಾಲ[1] (ಪು. ನ.)= ಹೂಗಳ ಬುಡದ ದಂಟು. ಮೃಣಾಲ, ಬಿಸ (ನ)=ತಾವರೆದಂಟು. ಷಂಡ (ಪು.ನ)= ತಾವರೆ ಮೊದಲಾದ ಹೂಗಳ ರಾಶಿ. ೩೦೬. ಕರಹಾಟ, ಶಿಫಾಕಂದ (ಪು)=ತಾವರೆಗಡ್ಡೆ. ಕಿಂಜಲ್ಕ (ಪು), ಕೇಸರ (ಪು.ನ)= ಹೂಗಳ ಕುಸುರು (Filament). ಸಂವರ್ತಿಕಾ (ಸ್ತ್ರೀ), ನವದಲ (ನ)= ಹೂವಿನ ಎಳೆಯ ರೇಕು, ಎಳೆಯ ದಳ. ಬೀಜಕೋಶ. ವರಾಟಕ (ಪು)=ಹೂವಿನ ಮಧ್ಯದಲ್ಲಿರುವ ಬೀಜಕೋಶ.

೩೦೭. ಈ ರೀತಿಯಲ್ಲಿ ಸ್ವರ್ಗ, ವ್ಯೋಮ, ದಿಕ್, ಕಾಲ, ಧೀ, ವಾಕ್, ಶಬ್ದ, ನಾಟ್ಯ, ಪಾತಾಲಭೋಗಿ, ನರಕ, ವಾರಿ ಎಂಬ ಹನ್ನೊಂದು ವರ್ಗಗಳನ್ನೂ ಅಲ್ಲಲ್ಲಿ ಅವುಗಳಿಗೆ ಸಂಬಂಧಿಸಿದ ಇತರ ಶಬ್ದಗಳನ್ನೂ ವಿವರಿಸಲಾಯಿತು.

ಅಮರಸಿಂಹನ ಕೃತಿಯಾದ ನಾಮಲಿಂಗಾನುಶಾಸನದಲ್ಲಿ
ಸ್ವರ್ಗಾದಿವರ್ಗಗಳಿಂದ ಕೂಡಿದ ಪ್ರಥಮಕಾಂಡವು
ಸಾಂಗವಾಗಿ ಸಮಾಪ್ತವಾಯಿತು.

---

[1] ನಾಲಾ, ನಾಲೀ ಎಂಬ ಸ್ತ್ರೀಲಿಂಗ ಶಬ್ದಗಳೂ ಉಂಟು.

ದ್ವಿತೀಯಕಾಂಡಮ್

ವರ್ಗಾಃ ಪೃಥ್ವೀಪುರಕ್ಷ್ಮಾಭೃದ್ವನೌಷಧಿಮೃಗಾದಿಭಿಃ ।
ನೃಬ್ರಹ್ಮ ಕ್ಷತ್ರವಿಟ್ಶೂದ್ರೈಸ್ಸಾಂಗೋಪಾಂಗೈರಿಹೋದಿತಾಃ ॥ ೩೦೯

೧. ಭೂಮಿವರ್ಗಃ

ಭೂರ್ಭೂಮಿರಚಲಾನಂತಾ ರಸಾ ವಿಶ್ವಂಭರಾ ಸ್ಥಿರಾ ।
ಧರಾ ಧರಿತ್ರೀ ಧರಣೀ ಕ್ಷೋಣೀ ಜ್ಯಾ ಕಾಶ್ಯಪೀ ಕ್ಷಿತಿಃ ॥ ೩೧೦
ಸರ್ವಂಸಹಾ ವಸುಮತೀ ವಸುಧೋರ್ವೀ ವಸುಂಧರಾ ।
ಗೋತ್ರಾ ಕುಃ ಪೃಥಿವೀ ಪೃಥ್ವೀ ಕ್ಷ್ಮಾವನಿರ್ಮೇದಿನೀ ಮಹೀ ॥ ೩೧೧
ಮೃನ್ಮೃತ್ತಿಕಾ ಪ್ರಶಸ್ತಾ ತು ಮೃತ್ಸಾ ಮೃತ್ಸ್ನಾಚ ಮೃತ್ತಿಕಾ ।
ಉರ್ವರಾ ಸರ್ವಸಸ್ಯಾಢ್ಯಾ ಸ್ಯಾದೂಷಃ ಕ್ಷಾರಮೃತ್ತಿಕಾ ॥ ೩೧೨

ದ್ವಿತೀಯಕಾಂಡ

೩೦೯. ಈ ಕಾಂಡದಲ್ಲಿ ಭೂಮಿ, ಪುರ, ಶೈಲ, ವನೌಷಧಿ, ಸಿಂಹಾದಿ ಮೃಗ, ಮನುಷ್ಯ, ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರವರ್ಗಗಳನ್ನು ಅಂಗೋಪಾಂಗಸಹಿತವಾಗಿ ಹೇಳಲಾಗಿದೆ.

ಭೂಮಿವರ್ಗ

೩೧೦-೩೧೧. ಭೂ, ಭೂಮಿ, ಅಚಲಾ, ಅನಂತಾ, ರಸಾ, ವಿಶ್ವಂಭರಾ, ಸ್ಥಿರಾ, ಧರಾ, ಧರಿತ್ರೀ, ಧರಣೀ (ಧರಣಿ), ಕ್ಷೋಣೀ, ಜ್ಯಾ, ಕಾಶ್ಯಪೀ, ಕ್ಷಿತಿ, ಸರ್ವಂಸಹಾ, ವಸುಮತೀ, ವಸುಧಾ, ಉರ್ವೀ, ವಸುಂಧರಾ, ಗೋತ್ರಾ, ಕು, ಪೃಥಿವೀ, ಪೃಥ್ವೀ, ಕ್ಷ್ಮಾ, ಅವನಿ, ಮೇದಿನೀ, ಮಹೀ (ಸ್ತ್ರೀ)=ಭೂಮಿ.

೩೧೨. ಮೃದ್, ಮೃತ್ತಿಕಾ, (ಸ್ತ್ರೀ)=ಮಣ್ಣು. ಮೃತ್ಸಾ, ಮೃತ್ಸ್ನಾ (ಸ್ತ್ರೀ)= ಪ್ರಶಸ್ತವಾದ ಮಣ್ಣು. ಉರ್ವರಾ (ಸ್ತ್ರೀ)=ಸರ್ವಸಸ್ಯಗಳೂ ಬೆಳೆಯುವ ಫಲವತ್ತಾದ ಮಣ್ಣು ಅಥವಾ ಭೂಮಿ. ಊಷ (ಪು) ಕ್ಷಾರ ಮೃತ್ತಿಕಾ (ಸ್ತ್ರೀ)=ಉಪ್ಪುಮಣ್ಣು.

ಭೂಮಿವರ್ಗಃ

ಊಷವಾನೂಷರೋ ದ್ವಾವಪ್ಯನ್ಯಲಿಂಗೌ ಸ್ಥಲಂ ಸ್ಥಲೀ ।
ಸಮಾನೌ ಮರುಧನ್ವಾನೌ ದ್ವೇ ಖಿಲಾಪ್ರಹತೇ ಸಮೇ ॥ ೩೧೩
ತ್ರಿಷ್ವಥೋ ಜಗತೀ ಲೋಕೋ ವಿಷ್ಟಪಂ ಭುವನಂ ಜಗತ್ ।
ಲೋಕೋಽಯಂ ಭಾರತಂ ವರ್ಷಂ ಶರಾವತ್ಯಾಸ್ತು ಯೋಽವಧೇಃ ॥ ೩೧೪
ದೇಶಃ ಪ್ರಾಗ್ದಕ್ಷಿಣಃ ಪ್ರಾಚ್ಯ ಉದೀಚ್ಯಃ ಪಶ್ಚಿಮೋತ್ತರಃ ।
ಪ್ರತ್ಯಂತೋ ಮ್ಲೇಚ್ಛದೇಶಸ್ಸ್ಯಾನ್ಮಧ್ಯದೇಶಸ್ತು ಮಧ್ಯಮಃ ॥ ೩೧೫
ಆರ್ಯಾವರ್ತಃ ಪುಣ್ಯಭೂಮಿರ್ಮಧ್ಯಂ ವಿಂಧ್ಯಹಿಮಾಗಯೋಃ ।
ನೀವೃಜ್ಜನಪದೌ ದೇಶವಿಷಯೌ ತೂಪವರ್ತನಮ್ ॥ ೩೧೬
ತ್ರಿಷ್ವಾಗೋಷ್ಠಾನ್ನಡಪ್ರಾಯೇ ನಡ್ವಾನ್ನಡ್ವಲ ಇತ್ಯಪಿ ।
ಕುಮುದ್ವಾನ್ ಕುಮುದಪ್ರಾಯೇ ವೇತಸ್ವಾನ್ ಬಹುವೇತಸೇ ॥ ೩೧೭

---

೩೧೩. ಊಷವತ್, ಊಷರ (ವಿ. ನಿಘ್ನ—ಸ್ತ್ರೀ. ಊಷವತೀ)=ಉಪ್ಪುಮಣ್ಣಿನ ಪ್ರದೇಶ. ಸ್ಥಲ (ನ), ಸ್ಥಲೀ[1] (ಸ್ತ್ರೀ)=ಸ್ಥಳ. ಮರು, ಧನ್ವನ್ (ಪು)=ನಿರ್ಜಲವಾದ ಪ್ರದೇಶ, ಮರುಭೂಮಿ. ಖಿಲ, ಅಪ್ರಹತ (ಪು. ಸ್ತ್ರೀ. ನ)=ಉಳಿದಿರುವ ಬಂಜರುಪ್ರದೇಶ.

೩೧೪-೩೧೫. ಜಗತೀ (ಸ್ತ್ರೀ), ಲೋಕ (ಪು), ವಿಷ್ಟಪ, ಭುವನ, ಜಗತ್ (ನ)=ಭೂತಳ (The world). ಭಾರತ, ಭಾರತವರ್ಷ (ನ)=ಹಿಮಾಲಯಕ್ಕೂ ರಾಮಸೇತುವಿಗೂ ಮಧ್ಯದಲ್ಲಿರುವ ರಾಷ್ಟ್ರ, ಹಿಂದೂದೇಶ (India). ಪ್ರಾಚ್ಯ (ಪು)=ಶರಾವತೀ ನದಿಯ ಪೂರ್ವ ಮತ್ತು ದಕ್ಷಿಣಭಾಗವನ್ನೊಳಗೊಂಡ ದೇಶ, ಭರತಖಂಡದ ಪೂರ್ವಭಾಗ. ಉದೀಚ್ಯ (ಪು)=ಶರಾವತಿಯ ಪಶ್ಚಿಮ ಮತ್ತು ಉತ್ತರಭಾಗವನ್ನೊಳಗೊಂಡ ದೇಶ, ಭರತಖಂಡದ ಉತ್ತರಭಾಗ. ಪ್ರತ್ಯಂತ, ಮ್ಲೇಚ್ಛದೇಶ (ಪು)=ಶಿಷ್ಟಾಚಾರವಿಲ್ಲದ ದೇಶ. ಮಧ್ಯದೇಶ, ಮಧ್ಯಮ (ಪು)=ಭರತಖಂಡದ ಮಧ್ಯದೇಶ.

೩೧೬. ಆರ್ಯಾವರ್ತ (ಪು), ಪುಣ್ಯಭೂಮಿ (ಸ್ತ್ರೀ)=ವಿಂಧ್ಯ ಮತ್ತು ಹಿಮಾಲಯಗಳ ನಡುವೆ ಇರುವ ದೇಶ. ನೀವೃತ್, ಜನಪದ (ಪು)=ಜನವಸತಿಯುಳ್ಳ ಪ್ರದೇಶ. ದೇಶ, ವಿಷಯ (ಪು), ಉಪವರ್ತನ (ನ)=ಗ್ರಾಮಸಮುದಾಯವುಳ್ಳ ರಾಷ್ಟ್ರ (Country).

---

[1] ಸ್ಥಲೀ=ಸಹಜವಾದ ನೆಲ. ಉದಾ : ವನಸ್ಥಲೀ. ಸ್ಥಲಾ=ನೆಲಗಟ್ಟುಮಾಡಿದ ಕೃತಕವಾದ ನೆಲ— (ಅಷ್ಟಾ-೪-೧-೪೨).

ಶಾದ್ವಲಶ್ಶಾದಹರಿತೇ ಸಜಂಬಾಲೇ ತು ಪಂಕಿಲಃ ।
ಜಲಪ್ರಾಯಮನೂಪಂ ಸ್ಯಾತ್ಪುಂಸಿ ಕಚ್ಛಸ್ತಥಾವಿಧಃ ॥ ೩೧೮
ಸ್ತ್ರೀ ಶರ್ಕರಾ ಶರ್ಕರಿಲಶ್ಶಾರ್ಕರಶ್ಶರ್ಕರಾವತಿ ।
ದೇಶ ಏವಾದಿಮಾವೇವಮುನ್ನೇಯಾಸ್ಸಿಕತಾವತಿ ॥ ೩೧೯
ದೇಶೋ ನದ್ಯಂಬುವೃಷ್ಟ್ಯಂಬುಸಂಪನ್ನವ್ರೀಹಿಪಾಲಿತಃ ।
ಸ್ಯಾನ್ನದೀಮಾತೃಕೋ ದೇವಮಾತೃಕಶ್ಚ ಯಥಾಕ್ರಮಮ್ ॥ ೩೨೦
ಸುರಾಜ್ಞಿ ದೇಶೇ ರಾಜನ್ವಾನ್ ಸ್ಯಾತ್ತತೋಽನ್ಯತ್ರ ರಾಜವಾನ್ ।
ಗೋಷ್ಠಂ ಗೋಸ್ಥಾನಕಂ ತತ್ತು ಗೌಷ್ಠೀನಂ ಭೂತಪೂರ್ವಕಮ್ ॥ ೩೨೧

---

೩೧೭. ಇನ್ನುಮುಂದೆ ೧೩ನೆಯ ಶ್ಲೋಕದಲ್ಲಿರುವ ಗೋಷ್ಠ ಶಬ್ದದ ವರೆಗೆ ಶಬ್ದಗಳು ಮೂರು ಲಿಂಗಗಳಲ್ಲಿಯೂ ಇರುತ್ತವೆ; ನಡ್ವತ್ (ಸ್ತ್ರೀ. ನಡ್ವತೀ), ನಡ್ವಲ=ನಡ (Reeds) ಎಂಬ ಹುಲ್ಲಿನ ಪ್ರದೇಶ. ಕುಮುದ್ವತ್ (ಸ್ತ್ರೀ. ಕುಮುದ್ವತೀ)=ಬಿಳಿ ನೈದಿಲೆಗಳು ಅಧಿಕವಾಗಿರುವ ಪ್ರದೇಶ. ವೇತಸ್ವತ್ (ಸ್ತ್ರೀ. ವೇತಸ್ವತೀ)= ಜೊಂಡುಹುಲ್ಲು ಬೆಳೆಯುವ ಪ್ರದೇಶ.

೩೧೮. ಶಾದ್ವಲ=ಎಳೆ ಹುಲ್ಲಿನಿಂದ ಹಸುರಾದ ಹುಲ್ಲುಗಾವಲು. ಪಂಕಿಲ=ಕೊಚ್ಚೆಯಾದ ಸ್ಥಳ. ಅನೂಪ, ಕಚ್ಛ=ನೀರಿರುವ ಜೌಗುಪ್ರದೇಶ. ಕಚ್ಛಶಬ್ದವು ಪುಲ್ಲಿಂಗದಲ್ಲಿ ಮಾತ್ರ.

೩೧೯. ಶರ್ಕರಾ (ಸ್ತ್ರೀಲಿಂಗದಲ್ಲಿ ಮಾತ್ರ), ಶರ್ಕರಿಲ, ಶಾರ್ಕರ (-ಸ್ತ್ರೀ. ಶಾರ್ಕರೀ), ಶರ್ಕರಾವತ್ (-ಸ್ತ್ರೀ. ಶರ್ಕರಾವತೀ)=ಕಲ್ಲು ಭೂಮಿ. ಹೀಗೆಯೇ ಮರಳಿನ ಪ್ರದೇಶ ಎಂಬ ಅರ್ಥದಲ್ಲಿ ಸಿಕತಾ, ಸಿಕತಿಲ, ಸೈಕತ, ಸಿಕತಾವತ್ ಎಂಬ ಶಬ್ದಗಳು.

೩೨೦. ನದೀಮಾತೃಕ=ನದೀಜಲದಿಂದ ವ್ಯವಸಾಯ ನಡೆಯುವ ಕ್ಷೇತ್ರ, ನೀರಾವರಿ ಭೂಮಿ. ದೇವಮಾತೃಕ=ಮಳೆನೀರಿನಿಂದ ವ್ಯವಸಾಯ ನಡೆಯುವ ಕ್ಷೇತ್ರ. ೩೨೧. ರಾಜನ್ವತ್ (-ಸ್ತ್ರೀ. ರಾಜನ್ವತೀ)=ಧರ್ಮನಿಷ್ಠನಾದ ರಾಜನು ಆಳುವ ದೇಶ. ರಾಜವತ್ (-ಸ್ತ್ರೀ. ರಾಜವತೀ)= ಸಾಮಾನ್ಯ ರಾಜನು ಆಳುವ ದೇಶ. ಗೋಷ್ಠ, ಗೋಸ್ಥಾನಕ (ನ)=ಕೊಟ್ಟಿಗೆ. ಗೌಷ್ಠೀನ (ನ)=ಹಿಂದೆ ಕೊಟ್ಟಿಗೆಯಾಗಿದ್ದ ಸ್ಥಳ.

ಪರ್ಯಂತಭೂಃ ಪರಿಸರಸ್ಸೇತುರಾಲೌ ಸ್ತ್ರಿಯಾಂ ಪುಮಾನ್ ।
ವಾಮಲೂರಶ್ಚ ನಾಕುಶ್ಚ ವಲ್ಮೀಕಂ ಪುನ್ನಪುಂಸಕಮ್ ॥ ೩೨೨
ಅಯನಂ ವರ್ತ್ಮಮಾರ್ಗಾಧ್ವಪಂಥಾನಃ ಪದವೀ ಸೃತಿಃ ।
ಸರಣಿಃ ಪದ್ಧತಿಃ ಪದ್ಯಾ ವರ್ತನ್ಯೇಕಪದೀತಿ ಚ ॥ ೩೨೩
ಅತಿಪಂಥಾಸ್ಸುಪಂಥಾಶ್ಚ ಸತ್ಪಥಶ್ಚಾರ್ಚಿತೇಽಧ್ವನಿ ।
ವ್ಯಧ್ವೋ ದುರಧ್ವೋ ವಿಪಥಃ ಕದಧ್ವಾ ಕಾಪಥಸ್ಸಮಾಃ ॥ ೩೨೪
ಅಪಂಥಾಸ್ತ್ವಪಥಂ ತುಲ್ಯೇ ಶೃಂಗಾಟಕಚತುಷ್ಪಥೇ ।
ಪ್ರಾಂತರಂ ದೂರಶೂನ್ಯೋಽಧ್ವಾ ಕಾಂತಾರಂ ವರ್ತ್ಮ ದುರ್ಗಮಮ್ ॥ ೩೨೫
ಗವ್ಯೂತಿಃ ಸ್ತ್ರೀ ಕ್ರೋಶಯುಗಂ ನಲ್ವಃ ಕಿಷ್ಕುಚತುಶ್ಶತಮ್ ।
ಘಂಟಾಪಥಸ್ಸಂಸರಣಂ ತತ್ಪುರಸ್ಯೋಪನಿಷ್ಕರಮ್ ॥ ೩೨೬

ಇತಿ ಭೂಮಿವರ್ಗಃ

---

೩೨೨. ಪರ್ಯಂತಭೂ (ಸ್ತ್ರೀ), ಪರಿಸರ (ಪು)=ಸಮೀಪ ಪ್ರದೇಶ, ಸುತ್ತಮುತ್ತಲಿನ ಸ್ಥಳ. ಸೇತು (ಪು), ಆಲಿ (ಸ್ತ್ರೀ)=ಸೇತುವೆ. ವಾಮಲೂರ, ನಾಕು (ಪು), ವಲ್ಮೀಕ (ಪು. ನ.)=ಹುತ್ತ.

೩೨೩. ಅಯನ, ವರ್ತ್ಮನ್ (ನ), ಮಾರ್ಗ, ಅಧ್ವನ್, ಪಥಿನ್ (ಪು), ಪದವೀ, ಸೃತಿ, ಸರಣಿ, ಪದ್ಧತಿ, ಪದ್ಯಾ, ವರ್ತನೀ, ಏಕಪದೀ[1] (ಸ್ತ್ರೀ)=ದಾರಿ.

೩೨೪-೩೨೫. ಅತಿಪಥಿನ್, ಸುಪಥಿನ್, ಸತ್ಪಥ (ಪು)=ಉತ್ತಮವಾದ ರಸ್ತೆ, ಸರಿಯಾದ ದಾರಿ. ವ್ಯಧ್ವ, ದುರಧ್ವ, ವಿಪಥ, ಕದಧ್ವನ್, ಕಾಪಥ (ಪು)=ಕೆಟ್ಟದಾರಿ. ಅಪಥಿನ್ (ಪು), ಅಪಥ (ನ)=ತಪ್ಪುದಾರಿ, ಅಡ್ಡದಾರಿ. ಶೃಂಗಾಟಕ, ಚತುಷ್ಪಥ (ನ)=ನಾಲ್ಕು ರಸ್ತೆಗಳು ಸೇರುವ ಸ್ಥಳ, ಚೌಕ. ಪ್ರಾಂತರ (ನ)=ದೂರವೂ ಜನಶೂನ್ಯವೂ ಆದ ದಾರಿ. ಕಾಂತಾರ (ನ)=ಉಪದ್ರವವಿರುವ ಕಷ್ಟದ ದಾರಿ.

೩೨೬. ಗವ್ಯೂತಿ (ಸ್ತ್ರೀ)=ಎರಡು ಹರದಾರಿ (ಸುಮಾರು ೪ ಮೈಲು). ನಲ್ವ (ಪು)=ನಾನೂರು ಮೊಳದಷ್ಟು ದೂರ (A furlong). ಘಂಟಾಪಥ (ಪು), ಸಂಸರಣ (ನ)=ವಿಶಾಲವಾದ ರಸ್ತೆ. ಉಪನಿಷ್ಕರ (ನ)=ನಗರದಲ್ಲಿರುವ ರಾಜಬೀದಿ.

---

[1] ಏಕಪದೀ=ಕಾಲುದಾರಿ ಎಂಬ ಅರ್ಥವು ಸಮಂಜಸವಾಗಿದೆ.

೫೨೬-೫೨೭. ಶಾರ್ದೂಲ, ದ್ವೀಪಿನ್, ವ್ಯಾಘ್ರ (ಪು)=ಹುಲಿ.[2] ತರಕ್ಷು, ಮೃಗಾದನ (ಪು)=ಕಿರುಬ, ಶಿವಂಗಿ. ವರಾಹ, ಸೂಕರ, ಘೃಷ್ಟಿ, ಕೋಲ, ಪೋತ್ರಿನ್, ಕಿರಿ, ಕಿಟಿ, ದಂಷ್ಟ್ರಿನ್, ಘೋಣಿನ್, ಸ್ತಬ್ಧರೋಮನ್, ಕ್ರೋಡ, ಭೂದಾರ (ಪು)=ಹಂದಿ.

೫೨೭-೫೨೮. ಕಪಿ, ಪ್ಲವಂಗ, ಪ್ಲವಗ, ಶಾಖಾಮೃಗ, ವಲೀಮುಖ, ಮರ್ಕಟ, ವಾನರ, ಕೀಶ, ವನೌಕಸ್ (ಪು)=ಕಪಿ, ಕೋತಿ. ಭಲ್ಲುಕ, ಋಕ್ಷ, ಅಚ್ಛಭಲ್ಲ, ಭಲ್ಲ, ಭಲ್ಲೂಕ (ಪು)=ಕರಡಿ. ಗಂಡಕ, ಖಡ್ಗ, ಖಡ್ಗಿನ್, (ಪು)=ಗಂಡಾಮೃಗ, ಖಡ್ಗಮೃಗ.

೫೨೯ -೫೩೦. ಲುಲಾಯ, ಮಹಿಷ, ವಾಹದ್ವಿಷತ್, ಕಾಸರ, ಸೈರಿಭ (ಪು)=ಕೋಣ. ಶಿವಾ (ಸ್ತ್ರೀ), ಭೂರಿಮಾಯ, ಗೋಮಾಯು, ಮೃಗಧೂರ್ತಕ, ಶೃಗಾಲ (ಸೃಗಾಲ), ವಂಚಕ, ಕ್ರೋಷ್ಟು, ಫೇರು, ಫೇರವ, ಜಂಬುಕ (ಪು)=ನರಿ. (ಶಿವಾಶಬ್ದವು ಗಂಡು ಹೆಣ್ಣು ನರಿ

---

1 'ಕಂಠೀರವೋ ಮೃಗರಿಪುರ್ಮೃಗದೃಷ್ಟಿರ್ಮೃಗಾಶನಃ'—ಇವೂ ಸಿಂಹಪರ್ಯಾಯಗಳು.

2 'ಪುಂಡರೀಕಃ ಪಂಚನಖಚಿತ್ರಕಾಯ ಮೃಗದ್ವಿಷಃ'—ಇವೂ ಹುಲಿಯ ಪರ್ಯಾಯಗಳು.

ತ್ರಯೋ ಗೌಧೇರಗೌಧಾರಗೌಧೇಯಾ ಗೋಧಿಕಾತ್ಮಜೇ ।
ಶ್ವಾವಿತ್ತು ಶಲ್ಯಸ್ತಲ್ಲೋಮ್ನಿ ಶಲಲೀ ಶಲಲಂ ಶಲಮ್ ॥ ೫೩೧
ವಾತಪ್ರಮೀರ್ವಾತಮೃಗಃ ಕೋಕಸ್ತ್ವೀಹಾಮೃಗೋ ವೃಕಃ ।
ಮೃಗೇ ಕುರಂಗವಾತಾಯುಹರಿಣಾಜಿನಯೋನಯಃ ॥ ೫೩೨
ಐಣೇಯಮೇಣ್ಯಾಶ್ಚರ್ಮಾದ್ಯಮೇಣಸ್ಯೈಣಮುಭೇ ತ್ರಿಷು ।
ಕದಲೀ ಕಂದಲೀ ಚೀನಶ್ಚಮೂರುಪ್ರಿಯಕಾವಪಿ ॥ ೫೩೩
ಸಮೂರುಶ್ಚೇತಿ ಹರಿಣಾ ಅಮೀ ಅಜಿನಯೋನಯಃ ।
ಕೃಷ್ಣಸಾರ ರುರು ನ್ಯಂಕು ರಂಕು ಶಂಬರ ರೌಹಿಷಾಃ ॥ ೫೩೪
ಗೋಕರ್ಣಪೃಷತೈಣರ್ಶ್ಯರೋಹಿತಾಶ್ಚಮರೋ ಮೃಗಾಃ ।
ಗಂಧರ್ವಶ್ಶರಭೋ ರಾಮಸ್ಸೃಮರೋ ಗವಯಃ ಶಶಃ ॥ ೫೩೫

ಗಳೆರಡನ್ನೂ ಬೋಧಿಸುತ್ತದೆ. ಕ್ರೋಷ್ಟು ಶಬ್ದದ ಸ್ತ್ರೀಲಿಂಗರೂಪ ಕ್ರೋಷ್ಟ್ರೀ). ಓತು, ಬಿಡಾಲ, ಮಾರ್ಜಾಲ (ಮಾರ್ಜಾರ), ವೃಷದಂಶಕ, ಆಖುಭುಜ್ (ಪು)=ಬೆಕ್ಕು.

೫೩೧. ಗೌಧೇರ, ಗೌಧಾರ, ಗೌಧೇಯ (ಪು)=ಉಡ, ಉಡದ ಮರಿ. ಶ್ವಾವಿಧ್, ಶಲ್ಯ (ಪು)=ಮುಳ್ಳುಹಂದಿ. ಶಲಲೀ (ಸ್ತ್ರೀ), ಶಲಲ, ಶಲ (ನ)=ಮುಳ್ಳುಹಂದಿಯ ಕೂದಲು, ವರಾಹಕಟ್ಟು.

೫೩೨. ವಾತಪ್ರಮೀ, ವಾತಮೃಗ (ಪು)=ಗಾಳಿಗೆ ಎದುರಾಗಿ ಓಡುವ ಸ್ವಭಾವವುಳ್ಳ ಜಿಂಕೆ. ಕೋಕ, ಈಹಾಮೃಗ, ವೃಕ (ಪು)=ತೋಳ. ಮೃಗ, ಕುರಂಗ, ವಾತಾಯು, ಹರಿಣ, ಅಜಿನಯೋನಿ (ಪು)=ಜಿಂಕೆ.

೫೩೩-೫೩೪. ಐಣೇಯ (ನ)=ಹೆಣ್ಣುಜಿಂಕೆಯ ಚರ್ಮ, ಮಾಂಸ ಮೊದಲಾದದ್ದು. ಐಣ (ನ)= ಗಂಡುಜಿಂಕೆಯ ಚರ್ಮ, ಮಾಂಸ ಮೊದಲಾದದ್ದು. ಈ ಎರಡು ಶಬ್ದಗಳು ವಿಶೇಷ್ಯಾನುರೋಧವಾಗಿ ಮೂರು ಲಿಂಗಗಳಲ್ಲಿಯೂ ಬರುತ್ತವೆ. ಉದಾ :—ಐಣೇಯಃ -ಐಣಃ ಪಾದಃ, ಐಣೇಯೀ- ಐಣೀ ತ್ವಕ್, ಐಣೇಯಂ-ಐಣಂ ಮಾಂಸಮ್. ಕದಲೀ, ಕಂದಲೀ (ಸ್ತ್ರೀ), ಚೀನ, ಚಮೂರು, ಪ್ರಿಯಕ, ಸಮೂರು (ಪು)=ಉತ್ತಮವಾದ ಚರ್ಮವನ್ನು ಕೊಡುವ ವಿವಿಧ ಜಿಂಕೆಗಳು.

೫೩೪-೫೩೫. ಕೃಷ್ಣಸಾರ, ರುರು, ನ್ಯಂಕು, ರಂಕು, ಶಂಬರ (ಶಂವರ), ರೌಹಿಷ, ಗೋಕರ್ಣ, ಪೃಷತ, ಏಣ, ಋಶ್ಯ (ಋಷ್ಯ), ರೋಹಿತ, ಚಮರ (ಪು)=ವಿವಿಧ ಜಾತಿಯ ಜಿಂಕೆಗಳು. ಗಂಧರ್ವ (ಪು)=ಕಸ್ತೂರೀ ಮೃಗ. ಶರಭ (ಪು)=ಸಿಂಹಕ್ಕಿಂತ ಬಲಶಾಲಿಯಾದ

ಇತ್ಯಾದಯೋ ಮೃಗೇಂದ್ರಾದ್ಯಾ ಗವಾದ್ಯಾಃ ಪಶುಜಾತಯಃ ।
ಉಂದುರುರ್ಮೂಷಿಕೋಽಪ್ಯಾಖುರ್ಗಿರಿಕಾ ಬಾಲಮೂಷಿಕಾ ॥ ೫೩೬
ಚುಚುಂದರೀ ಗಂಧಮೂಷೀ ದೀರ್ಘದೇಹೀ ತು ಮೂಷಿಕಾ ।
ಸರಟಃ ಕೃಕಲಾಸಸ್ಸ್ಯಾನ್ಮುಸಲೀ ಗೃಹಗೋಧಿಕಾ ॥ ೫೩೭
ಲೂತಾ ಸ್ತ್ರೀ ತಂತುವಾಯೋರ್ಣನಾಭಮರ್ಕಟಕಾಸ್ಸಮಾಃ ।
ನೀಲಂಗುಸ್ತು ಕ್ರಿಮಿಃ ಕರ್ಣಜಲೌಕಾ ಶತಪದ್ಯುಭೇ ॥ ೫೩೮
ವೃಶ್ಚಿಕಶ್ಶೂಕಕೀಟಸ್ಸ್ಯಾದಲಿದ್ರೋಣೌ ತು ವೃಶ್ಚಿಕೇ ।
ಪಾರಾವತಃ ಕಲರವಃ ಕಪೋತೋಽಥ ಶಶಾದನಃ ॥ ೫೩೯
ಪತ್ರೀ ಶ್ಯೇನ ಉಲೂಕಸ್ತು ವಾಯಸಾರಾತಿಪೇಚಕೌ ।
ವ್ಯಾಘ್ರಾಟಃ ಸ್ಯಾದ್ಭರದ್ವಾಜಃ ಖಂಜರೀಟಸ್ತು ಖಂಜನಃ ॥ ೫೪೦

ಮೃಗವಿಶೇಷ. ರಾಮ (ಪು)=ದೊಡ್ಡ ಜಾತಿಯ ಜಿಂಕೆ. ಸೃಮರ (ಪು)=ದೊಡ್ಡ ಚಮರೀಮೃಗ. ಗವಯ (ಪು)=ಹಸುವಿನಂತಿರುವ ಒಂದು ಮೃಗ, ಕಾಡುಹಸು, ಕಡವ. ಶಶ (ಪು)=ಮೊಲ.

೫೩೬. ಇದುವರೆಗೆ ಹೇಳಿದ ಸಿಂಹಾದಿಪ್ರಾಣಿಗಳಿಗೂ ಮುಂದೆ ವೈಶ್ಯವರ್ಗದಲ್ಲಿ ಹೇಳುವ ಗೋ, ಮೇಷಾದಿಗಳಿಗೂ ಪಶುಗಳೆಂದು ಹೆಸರು. ಉಂದುರು, ಮೂಷಿಕ,[1] ಆಖು (ಪು)=ಇಲಿ. ಗಿರಿಕಾ, ಬಾಲಮೂಷಿಕಾ (ಸ್ತ್ರೀ)=ಚಿಟ್ಟಿಲಿ, ಚಿಕ್ಕ ಜಾತಿಯ ಇಲಿ.

೫೩೭. ಚುಚುಂದರೀ, ಗಂಧಮೂಷೀ (ಸ್ತ್ರೀ)=ಮೂಗಿಲಿ. ದೀರ್ಘದೇಹಿನ್ (ಪು) ಮೂಷಿಕಾ (ಸ್ತ್ರೀ)=ಹೆಗ್ಗಣ. ಸರಟ, ಕೃಕಲಾಸ (ಪು)=ಓತೀಕೇತ, ಹೆಂಟೆಗೊದ್ದ, ಹಾವುರಾಣಿ. ಮುಸಲೀ, ಗೃಹಗೋಧಿಕಾ (ಸ್ತ್ರೀ)=ಹಲ್ಲಿ, ಪಲ್ಲಿ, ಗೌಳಿ.

೫೩೮. ಲೂತಾ (ಸ್ತ್ರೀ), ತಂತುವಾಯ, ಊರ್ಣನಾಭ, ಮರ್ಕಟಕ (ಪು)=ಜೇಡರಹುಳು. ನೀಲಂಗು, ಕ್ರಿಮಿ[2] (ಪು)=ಹುಳು, ಕ್ರಿಮಿ. ಕರ್ಣಜಲೌಕಾ, ಕರ್ಣಜಲೌಕಸ್, ಶತಪದೀ (ಸ್ತ್ರೀ)=ಜರಿ, ನೂರು ಕಾಲಿನ ಹುಳು.

೫೩೯-೫೪೦. ವೃಶ್ಚಿಕ, ಶೂಕಕೀಟ (ಪು)=ಚೇಳಿನಂತಿರುವ ಒಂದು ಹುಳು. ಅಲಿ, ದ್ರೋಣ (ದ್ರುಣ), ವೃಶ್ಚಿಕ, (ಪು)=ಚೇಳು. ಪಾರಾವತ, ಕಲರವ, ಕಪೋತ (ಪು)=ಪಾರಿವಾಳ. ಶಶಾದನ, ಪತ್ರಿನ್, ಶ್ಯೇನ (ಪು)=ಗಿಡಗ, ಡೇಗೆ. ಉಲೂಕ, ವಾಯಸಾರಾತಿ, ಪೇಚಕ[3] (ಪು)=ಗೂಗೆ,

---

[1] ಉಂದರ, ಮೂಷಕ ಎಂಬ ರೂಪಾಂತರಗಳೂ ಉಂಟು.

[2] ಕೃಮಿ ಎಂಬ ರೂಪಾಂತರವೂ ಉಂಟು.

[3] 'ದಿವಾಂಧಃ ಕೌಶಿಕೋ ಘೂಕೋ ದಿವಾಭೀತೋ ನಿಶಾಟನಃ' ಇವೂ ಗೂಬೆಯ ಪರ್ಯಾಯಗಳು.

ಲೋಹಪೃಷ್ಠಸ್ತು ಕಂಕಸ್ಸ್ಯಾದಥ ಚಾಷಃ ಕಿಕೀದಿವಿಃ ।
ಕಲಿಂಗಭೃಂಗಧೂಮ್ಯಾಟಾ ಅಥ ಸ್ಯಾಚ್ಛತಪತ್ರಕಃ ॥ ೫೪೧
ದಾರ್ವಾಘಾಟೋಽಥ ಸಾರಂಗಸ್ತೋಕಕಶ್ಚಾತಕಸ್ಸಮಾಃ ।
ಕೃಕವಾಕುಸ್ತಾಮ್ರಚೂಡಃ ಕುಕ್ಕುಟಶ್ಚರಣಾಯುಧಃ ॥ ೫೪೨
ಚಟಕಃ ಕಲವಿಂಕಃ ಸ್ಯಾತ್ತಸ್ಯ ಸ್ತ್ರೀ ಚಟಕಾ ತಯೋಃ ।
ಪುಮಪತ್ಯೇ ಚಾಟಕೈರಸ್ತ್ರ್ಯಪತ್ಯೇ ಚಟಕೈವ ಸಾ ॥ ೫೪೩
ಕರ್ಕರೇಟುಃ ಕರೇಟುಃ ಸ್ಯಾತ್ಕೃಕಣಕ್ರಕರೌ ಸಮೌ ।
ವನಪ್ರಿಯಃ ಪರಭೃತಃ ಕೋಕಿಲಃ ಪಿಕ ಇತ್ಯಪಿ ॥ ೫೪೪
ಕಾಕೇ ತು ಕರಟಾರಿಷ್ಟಬಲಿಪುಷ್ಟಸಕೃತ್ಪ್ರಜಾಃ ।
ಧ್ವಾಂಕ್ಷಾತ್ಮಘೋಷಪರಭೃದ್ಬಲಿಭುಗ್ವಾಯಸಾ ಅಪಿ ॥ ೫೪೫

ಗೂಬೆ. ವ್ಯಾಘ್ರಾಟ, ಭರದ್ವಾಜ (ಪು)=ಭರದ್ವಾಜಪಕ್ಷಿ. ಖಂಜರೀಟ, ಖಂಜನ (ಪು)=ಕೆಂಬೂತ, ಕಾಡಿಗೆ, ಸೊಗಸಿನ ಹಕ್ಕಿ.

೫೪೧ -೫೪೨. ಲೋಹಪೃಷ್ಠ, ಕಂಕ (ಪು)=ಒಂದು ಜಾತಿಯ ಹದ್ದು. ಚಾಷ, ಕಿಕೀದಿವಿ (ಪು)=ಶಕುನದ ಹಕ್ಕಿ, ಹಾಲುಹಕ್ಕಿ. ಕಲಿಂಗ, ಭೃಂಗ, ಧೂಮ್ಯಾಟ (ಪು)=ನೀರಿನಲ್ಲಿ ಆಟವಾಡುವ ಕುಕ್ಕುಟಿ ಎಂಬ ಹಕ್ಕಿ. ಶತಪತ್ರಕ, ದಾರ್ವಾಘಾಟ (ಪು) ಮರಕುಟುಕ ಹಕ್ಕಿ. ಸಾರಂಗ (ಶಾರಂಗ), ಸ್ತೋಕಕ,=ಚಾತಕಪಕ್ಷಿ. ಕೃಕವಾಕು, ತಾಮ್ರಚೂಡ, ಕುಕ್ಕುಟ, ಚರಣಾಯುಧ (ಪು)=ಕೋಳಿ.

೫೪೩. ಚಟಕ, ಕಲವಿಂಕ (ಪು)=ಗುಬ್ಬಿ, ಗುಬ್ಬಚ್ಚಿ. ಚಟಕಾ (ಸ್ತ್ರೀ)=ಹೆಣ್ಣುಗುಬ್ಬಚ್ಚಿ. ಚಾಟಕೈರ (ಪು)=ಗಂಡುಗುಬ್ಬಚ್ಚಿಮರಿ. ಚಟಕಾ (ಸ್ತ್ರೀ)=ಹೆಣ್ಣುಗುಬ್ಬಚ್ಚಿಮರಿ.

೫೪೪. ಕರ್ಕರೇಟು, ಕರೇಟು (ಪು)=ಕಬ್ಬಕ್ಕಿ, ಕರ್ಕರೆಹಕ್ಕಿ. ಕೃಕಣ, ಕ್ರಕರ (ಪು)=ಕಾಡುಕೋಳಿ. ವನಪ್ರಿಯ, ಪರಭೃತ, ಕೋಕಿಲ, ಪಿಕ (ಪು)=ಕೋಗಿಲೆ.

೫೪೫-೫೪೬. ಕಾಕ, ಕರಟ, ಅರಿಷ್ಟ, ಬಲಿಪುಷ್ಟ, ಸಕೃತ್‌ಪ್ರಜಸ್, ಧ್ವಾಂಕ್ಷ, ಆತ್ಮ ಘೋಷ, ಪರಭೃತ್, ಬಲಿಭುಜ್, ವಾಯಸ, ಚಿರಜೀವಿನ್, ಏಕದೃಷ್ಟಿ, ಮೌಕುಲಿ, ಪಿಕ ವರ್ಧನ (ಪು)=ಕಾಗೆ. ದ್ರೋಣಕಾಕ, ಕಾಕೋಲ (ಪು)=ಸಂಬಾರಕಾಗೆ, ಕುಂಬಾರಕಾಗೆ. ದಾತ್ಯೂಹ, ಕಾಲಕಂಠಕ (ಪು)=ನೀರುಕೋಳಿ.

ಚಿರಜೀವೀ ಚೈಕದೃಷ್ಟಿರ್ಮೌಕುಲಿಃ ಪಿಕವರ್ಧನಃ ।
ದ್ರೋಣಕಾಕಸ್ತು ಕಾಕೋಲೋ ದಾತ್ಯೂಹಃ ಕಾಲಕಂಠಕಃ ॥ ೫೪೭
ಆತಾಯಿಚಿಲ್ಲೌ ದಾಕ್ಷಾಯ್ಯಗೃಧ್ರೌ ಕೀರಶುಕೌ ಸಮೌ ।
ಕ್ರುಙ್ ಕ್ರೌಂಚೋಽಥ ಬಕಃ ಕಹ್ವಃ ಪುಷ್ಕರಾಹ್ವಸ್ತು ಸಾರಸಃ ॥ ೫೪೨
ಕೋಕಶ್ಚಕ್ರಶ್ಚಕ್ರವಾಕೋ ರಥಾಂಗಾಹ್ವಯನಾಮಕಃ ।
ಕಾದಂಬಃ ಕಲಹಂಸಸ್ಸ್ಯಾದುತ್ಕ್ರೋಶಕುರರೌ ಸಮೌ ॥ ೫೪೮
ಹಂಸಾಸ್ತು ಶ್ವೇತಗರುತಶ್ಚಕ್ರಾಂಗಾ ಮಾನಸೌಕಸಃ ।
ರಾಜಹಂಸಾಸ್ತು ತೇ ಚಂಚುಚರಣೈರ್ಲೋಹಿತೈಸ್ಸಿತಾಃ ॥ ೫೪೯
ಮಲಿನೈರ್ಮಲ್ಲಿಕಾಖ್ಯಾಸ್ತೇ ಧಾರ್ತರಾಷ್ಟ್ರಾಸ್ಸಿತೇತರೈಃ ।
ಶರಾರಿರಾಟಿರಾಡಿಶ್ಚ ಬಲಾಕಾ ಬಿಸಕಂಠಿಕಾ ॥ ೫೫೦

---

೫೪೭. ಆತಾಯಿನ್, ಚಿಲ್ಲ (ಪು)=ಚಿಕ್ಕ ಹದ್ದು, ಮುಂಡಮುಳಕನ ಹಕ್ಕಿ. ದಾಕ್ಷಾಯ್ಯ, ಗೃಧ್ರ (ಪು)=ಹದ್ದು. ಕೀರ, ಶುಕ (ಪು)=ಗಿಳಿ. ಕ್ರುಂಚ್, ಕ್ರೌಂಚ (ಪು)=ನೀರುಕೊಕ್ಕರೆ, ನಾರಾಯಣ ಪಕ್ಷಿ, ಕೊಂಚೆ. ಬಕ, ಕಹ್ವ (ಪು)=ಬಕಪಕ್ಷಿ, ಕೊಕ್ಕರೆ, ಬೆಳ್ಳಕ್ಕಿ. ಪುಷ್ಕರಾಹ್ವ, ಸಾರಸ (ಪು)=ಸಾರಸ ಪಕ್ಷಿ, ತಾವರೆಹಕ್ಕಿ.

೫೪೮. ಕೋಕ, ಚಕ್ರ, ಚಕ್ರವಾಕ, ರಥಾಂಗಾಹ್ವಯನಾಮಕ, (ರಥಾಂಗಾಹ್ವ, ರಥಾಂಗನಾಮನ್) (ಪು)=ಚಕ್ರವಾಕ ಪಕ್ಷಿ. ಕಾದಂಬ, ಕಲಹಂಸ[1] (ಪು)=ಧೂಮ್ರವರ್ಣದ ರೆಕ್ಕೆಯುಳ್ಳ ಒಂದು ಬಗೆಯ ಹಂಸ ; ಬಾತು. ಉತ್ಕ್ರೋಶ, ಕುರರ (ಪು)=ಕುರವ ಹಕ್ಕಿ, ಕಡಲ ಹದ್ದು.

೫೪೯. ಹಂಸ, ಶ್ವೇತಗರುತ್, ಚಕ್ರಾಂಗ, ಮಾನಸೌಕಸ್ (ಪು)=ಬಿಳಿಯ ಹಂಸ. ರಾಜಹಂಸ (ಪು)=ಕೊಕ್ಕು ಮತ್ತು ಕಾಲುಗಳು ಕೆಂಪಾಗಿರುವ ಬಿಳಿಯ ಹಂಸ.

೫೫೦. ಮಲ್ಲಿಕಾಖ್ಯ (ಮಲ್ಲಿಕಾಕ್ಷ) (ಪು)=ಮಾಸಲು ಬಣ್ಣದ ಕೊಕ್ಕು ಮತ್ತು ಕಾಲುಗಳಿರುವ ಬಿಳಿಯ ಹಂಸ, ಧಾರ್ತರಾಷ್ಟ್ರ (ಪು)=ಕಪ್ಪು ಬಣ್ಣದ ಕೊಕ್ಕು ಮತ್ತು ಕಾಲುಗಳಿರುವ ಬಿಳಿಯ ಹಂಸ. ಶರಾರಿ, ಆಟಿ, ಆಡಿ (ಆತಿ) (ಸ್ತ್ರೀ)=ಸರಕುಟ ಹಕ್ಕಿ. ಬಲಾಕಾ, ಬಿಸಕಂಠಿಕಾ (ಸ್ತ್ರೀ)=ದೊಡ್ಡಕೊಕ್ಕರೆ, ದೊಡ್ಡ ಬೆಳ್ಳಕ್ಕಿ.

---

[1] ಕಲಹಂಸ ಶಬ್ದಕ್ಕೆ ಬಿಳಿಯ ರಾಜಹಂಸ ಎಂಬ ಅರ್ಥವೂ ಇದೆ.

ಹಂಸಸ್ಯ ಯೋಷಿದ್ವರಟಾ ಸಾರಸಸ್ಯ ತು ಲಕ್ಷ್ಮಣಾ ।
ಜತುಕಾಜಿನಪತ್ರಾ ಸ್ಯಾತ್ಪರೋಷ್ಣೀ ತೈಲಪಾಯಿಕಾ ॥ ೫೫೧
ವರ್ವಣಾ ಮಕ್ಷಿಕಾ ನೀಲಾ ಸರಘಾ ಮಧುಮಕ್ಷಿಕಾ ।
ಪತಂಗಿಕಾ ಪುತ್ತಿಕಾ ಸ್ಯಾದ್ದಂಶಸ್ತು ವನಮಕ್ಷಿಕಾ ॥ ೫೫೨
ದಂಶೀ ತಜ್ಜಾತಿರಲ್ಪಾ ಸ್ಯಾದ್ಗಂಧೋಲೀ ವರಟಾ ದ್ವಯೋಃ ।
ಭೃಂಗಾರೀ ಚೀರುಕಾ ಚೀರೀ ಝಿಲ್ಲಿಕಾ ಚ ಸಮಾ ಇಮಾಃ ॥ ೫೫೩
ಸಮೌ ಪತಂಗಶಲಭೌ ಖದ್ಯೋತೋ ಜ್ಯೋತಿರಿಂಗಣಃ ।
ಮಧುವ್ರತೋ ಮಧುಕರೋ ಮಧುಲಿಣ್ಮಧುಪಾಲಿನಃ ॥ ೫೫೪
ದ್ವಿರೇಫಪುಷ್ಪಲಿಡ್ಭೃಂಗಷಟ್ಪದಭ್ರಮರಾಲಯಃ ।
ಇಂದಿಂದಿರಶ್ಚಂಚರೀಕೋ ರೋಲಂಬೋ ಬಂಭರಶ್ಚ ಸಃ ॥ ೫೫೫
ಮಯೂರೋ ಬರ್ಹಿಣೋ ಬರ್ಹೀ ನೀಲಕಂಠೋ ಭುಜಂಗಭುಕ್ ।
ಶಿಖಾವಲಶ್ಶಿಖೀ ಕೇಕೀ ಮೇಘನಾದಾನುಲಾಸ್ಯಪಿ ॥ ೫೫೬

---

೫೫೧. ವರಟಾ (ಸ್ತ್ರೀ)=ಹೆಣ್ಣು ಹಂಸ. ಲಕ್ಷ್ಮಣಾ (ಸ್ತ್ರೀ)=ಹೆಣ್ಣು ಸಾರಸ. ಜತುಕಾ (ಜಾತೂಕಾ), ಅಜಿನಪತ್ರಾ (ಸ್ತ್ರೀ)=ಬಾವಲಿ, ಕಪಟದಹಕ್ಕಿ, ಕಬ್ಬಟ್ಟೆಹಕ್ಕಿ. ಪರೋಷ್ಣೀ, ತೈಲ ಪಾಯಿಕಾ (ಸ್ತ್ರೀ)=ಜಿರಲೆ.

೫೫೨. ವರ್ವಣಾ, ಮಕ್ಷಿಕಾ, ನೀಲಾ (ಸ್ತ್ರೀ)=ನೊಣ. ಸರಘಾ, ಮಧುಮಕ್ಷಿಕಾ (ಸ್ತ್ರೀ)=ಜೇನುಹುಳು, ಜೇನುನೊಣ. ಪತಂಗಿಕಾ, ಪುತ್ತಿಕಾ (ಸ್ತ್ರೀ)=ಜೇನುನೊಣದ ಭೇದ ; ಪತಂಗ. ದಂಶ (ಪು), ವನಮಕ್ಷಿಕಾ (ಸ್ತ್ರೀ)=ಕಾಡುನೊಣ.

೫೫೩. ದಂಶೀ (ಸ್ತ್ರೀ)=ಚಿಕ್ಕದಾದ ಕಾಡುನೊಣ. ಗಂಧೋಲೀ (ಸ್ತ್ರೀ), ವರಟಾ (ಸ್ತ್ರೀಪು.—ವರಟ)=ಕಣಜದ ಹುಳು. ಭೃಂಗಾರೀ, ಚೀರುಕಾ (ಚೀರಿಕಾ), ಚೀರೀ, ಝಿಲ್ಲಿಕಾ (ಸ್ತ್ರೀ)=ಜೀರುಂಡೆ.

೫೫೪-೫೫೫. ಪತಂಗ, ಶಲಭ (ಪು)=ಮಿಡತೆ, ದೀಪದ ಹುಳು. ಖದ್ಯೋತ, ಜ್ಯೋತಿರಿಂಗಣ (ಪು)=ಮಿಂಚುಹುಳ. ಮಧುವ್ರತ, ಮಧುಕರ, ಮಧುಲಿಹ್, ಮಧುಪ, ಅಲಿನ್, ದ್ವಿರೇಫ, ಪುಷ್ಪಲಿಹ್, ಭೃಂಗ, ಷಟ್ಪದ, ಭ್ರಮರ, ಅಲಿ, ಇಂದಿಂದಿರ, ಚಂಚರೀಕ, ರೋಲಂಬ, ಬಂಭರ (ಪು)=ದುಂಬಿ.

೫೫೬. ಮಯೂರ, ಬರ್ಹಿಣ, ಬರ್ಹಿನ್, ನೀಲಕಂಠ, ಭುಜಂಗಭುಜ್, ಶಿಖಾವಲ, ಶಿಖಿನ್, ಕೇಕಿನ್, ಮೇಘನಾದಾನುಲಾಸಿನ್ (ಪು)=ನವಿಲು.

ಕೇಕಾ ವಾಣೀ ಮಯೂರಸ್ಯ ಸಮೌ ಚಂದ್ರಕಮೇಚಕೌ ।
ಶಿಖಾ ಚೂಡಾ ಶಿಖಂಡಸ್ತು ಪಿಚ್ಛಬರ್ಹೇ ನಪುಂಸಕೇ ॥ ೫೫೭
ಖಗೇ ವಿಹಂಗ ವಿಹಗ ವಿಹಂಗಮ ವಿಹಾಯಸಃ ।
ಶಕುಂತಿ ಪಕ್ಷಿ ಶಕುನಿ ಶಕುಂತ ಶಕುನ ದ್ವಿಜಾಃ ॥ ೫೫೮
ಪತತ್ರಿಪತ್ರಿಪತಗ ಪತತ್ಪತ್ರ ರಥಾಂಡಜಾಃ ।
ನಗೌಕೋ ವಾಜಿ ವಿಕಿರ ವಿ ವಿಷ್ಕಿರ ಪತತ್ರ್ರಯಃ ॥ ೫೫೯
ನೀಡೋದ್ಭವಾ ಗರುತ್ಮಂತಃ ಪಿತ್ಸಂತೋ ನಭಸಂಗಮಾಃ ।
ತೇಷಾಂ ವಿಶೇಷಾ ಹಾರೀತೋ ಮದ್ಗುಃ ಕಾರಂಡವಃ ಪ್ಲವಃ ॥ ೫೬೦
ತಿತ್ತಿರಿಃ ಕುಕ್ಕುಭೋ ಲಾವೋ ಜೀವಂಜೀವಶ್ಚಕೋರಕಃ ।
ಕೋಯಷ್ಟಿಕಷ್ಟಿಟ್ಟಿಭಕೋ ವರ್ತಕೋ ವರ್ತಿಕಾದಯಃ ॥ ೫೬೧
ಗರುತ್ಪಕ್ಷಚ್ಛದಾಃ ಪತ್ರಂ ಪತತ್ರಂ ಚ ತನೂರುಹಮ್ ।
ಸ್ತ್ರೀ ಪಕ್ಷತಿಃ ಪಕ್ಷಮೂಲಂ ಚಂಚುಸ್ತ್ರೋಟಿರುಭೇ ಸ್ತ್ರಿಯೌ ॥ ೫೬೨

---

೫೫೭. ಕೇಕಾ (ಸ್ತ್ರೀ)=ನವಿಲಿನ ಕೂಗು. ಚಂದ್ರಕ, ಮೇಚಕ (ಪು)=ನವಿಲುಗರಿಯ ಕಣ್ಣು. ಶಿಖಾ, ಚೂಡಾ (ಸ್ತ್ರೀ)=ನವಿಲುಜುಟ್ಟು. ಶಿಖಂಡ (ಪು), ಪಿಚ್ಛ, ಬರ್ಹ (ನ)=ನವಿಲುಗರಿ.

೫೫೮-೫೫೯-೫೬೦. ಖಗ, ವಿಹಂಗ, ವಿಹಗ, ವಿಹಂಗಮ, ವಿಹಾಯಸ್, ಶಕುಂತಿ, ಪಕ್ಷಿನ್, ಶಕುನಿ, ಶಕುಂತ, ಶಕುನ, ದ್ವಿಜ, ಪತತ್ರಿನ್, ಪತ್ರಿನ್, ಪತಗ, ಪತತ್, ಪತ್ರರಥ, ಅಂಡಜ, ನಗೌಕಸ್, ವಾಜಿನ್, ವಿಕಿರ, ವಿ, ವಿಷ್ಕಿರ, ಪತತ್ರಿ, ನೀಡೋದ್ಭವ, ಗರುತ್ಮತ್, ಪಿತ್ಸತ್, ನಭಸಂಗಮ (ಪು)=ಹಕ್ಕಿ.

೫೬೦ -೫೬೧. ಹಾರೀತ (ಪು)=ಹಸಿರು ಬಣ್ಣದ ಒಂದು ಹಕ್ಕಿ. ಮದ್ಗು (ಪು)=ನೀರುಕಾಗೆ. ಕಾರಂಡವ (ಪು)=ಚಿತ್ರವರ್ಣದ ನೀರುಹಕ್ಕಿ. ಪ್ಲವ (ಪು)=ಚಿಕ್ಕ ನೀರುಕೋಳಿ. ಕಾರಂಡವ, ಪ್ಲವ ಇವೆರಡೂ ಪರ್ಯಾಯಗಳೆಂದು ಕೆಲವರ ಮತ. ತಿತ್ತಿರಿ (ಪು)=ಕವುಜಗ ಹಕ್ಕಿ. ಕುಕ್ಕಭ (ಕುಕ್ಕುಭ) (ಪು)=ಕಾಡುಕೋಳಿ, ಗುಮ್ಮನ ಹಕ್ಕಿ. ಲಾವ (ಪು)=ಲಾವಿಗೆ ಹಕ್ಕಿ. ಜೀವಂಜೀವ (ಪು)=ವಿಷನಾಶಕವಾದ ಒಂದು ಹಕ್ಕಿ. ಚಕೋರಕ (ಪು)=ಚಕೋರಪಕ್ಷಿ. ಜೀವಂಜೀವ, ಚಕೋರಕ=ಇವೆರಡೂ ಪರ್ಯಾಯಗಳೆಂದು ಕೆಲವರ ಮತ. ಕೋಯಷ್ಟಿಕ (ಪು)=ಕೀಚು ಬಾಲದ ಹಕ್ಕಿ. ಟಿಟ್ಟಿಭಕ (ಪು)=ಟಿಬ್ಬಿಭಪಕ್ಷಿ. ವರ್ತಕ (ಪು)=ಕೆಂಡಲೆ ಹಕ್ಕಿ ವರ್ತಿಕಾ (ಸ್ತ್ರೀ)=ಪಕ್ಷಿವಿಶೇಷ.

೫೬೨. ಗರುತ್, ಪಕ್ಷ, ಛದ (ಪು), ಪತ್ರ, ಪತತ್ರ, ತನೂರುಹ (ನ)=ರೆಕ್ಕೆ. ಪಕ್ಷತಿ (ಸ್ತ್ರೀ), ಪಕ್ಷಮೂಲ. (ನ) ರೆಕ್ಕೆಯ ಮೂಲಭಾಗ ಚಂಚು, ತ್ರೋಟಿ (ಸ್ತ್ರೀ)=ಕೊಕ್ಕು.

ಪ್ರಡೀನೋಡ್ಡೀನಸಂಡೀನಾನ್ಯೇತಾಃ ಖಗಗತಿಕ್ರಿಯಾಃ ।
ಪೇಶೀ ಕೋಶೋ ದ್ವಿಹೀನೇಽಂಡಂ ಕುಲಾಯೋ ನೀಡಮಸ್ತ್ರಿಯಾಮ್ ॥ ೫೬೩
ಪೋತಃ ಪಾಕೋಽರ್ಭಕೋ ಡಿಂಭಃ ಪೃಥುಕಶ್ಶಾವಕಶ್ಶಿಶುಃ ।
ಸ್ತ್ರೀಪುಂಸೌ ಮಿಥುನಂ ದ್ವಂದ್ವಂ ಯುಗ್ಮಂ ತು ಯುಗಲಂ ಯುಗಮ್ ॥ ೫೬೪
ಸಮೂಹ ನಿವಹ ವ್ಯೂಹ ಸಂದೋಹ ವಿಸರ ವ್ರಜಾಃ ।
ಸ್ತೋಮೌಘ ನಿಕರ ವ್ರಾತ ವಾರ ಸಂಘಾತ ಸಂಚಯಾಃ ॥ ೫೬೫
ಸಮುದಾಯಸ್ಸಮುದಯಸ್ಸಮವಾಯಶ್ಚಯೋ ಗಣಃ ।
ಸ್ತ್ರಿಯಾಂ ತು ಸಂಹತಿರ್ವೃಂದಂ ನಿಕುರಂಬಂ ಕದಂಬಕಮ್ ॥ ೫೬೬
ವೃಂದಭೇದಾಃ ಸಮೈರ್ವರ್ಗಃ ಸಂಘಸಾರ್ಥೌ ತು ಜಂತುಭಿಃ ।
ಸಜಾತೀಯೈಃ ಕುಲಂ ಯೂಥಂ ತಿರಶ್ಚಾಂ ಪುನ್ನಪುಂಸಕಮ್ ॥ ೫೬೭

---

೫೬೩. ಪ್ರಡೀನ (ನ)=ನೇರವಾಗಿ ಮುಂದಕ್ಕೆ ಹಾರುವುದು. ಉಡ್ಡೀನ (ನ)=ಮೇಲಕ್ಕೆ ಹಾರುವುದು. ಸಂಡೀನ (ನ)= ಗುಂಪಾಗಿ ಹಾರುವುದು. ಪೇಶೀ (ಸ್ತ್ರೀ), ಕೋಶ (ಕೋಷ)[1] (ಪು) ಅಂಡ (ನ)=ಮೊಟ್ಟೆ, ತತ್ತಿ. ಕುಲಾಯ (ಪು), ನೀಡ (ಪು.ನ)=ಹಕ್ಕಿಗಳ ಗೂಡು.

೫೬೪. ಪೋತ, ಪಾಕ, ಅರ್ಭಕ, ಡಿಂಭ, ಪೃಥುಕ, ಶಾವಕ, ಶಿಶು (ಪು)=ಮರಿ, ಪಿಳ್ಳೆ. ಸ್ತ್ರೀಪುಂಸ (ಪು. ನಿತ್ಯದ್ವಿವಚನ), ಮಿಥುನ (ನ), ದ್ವಂದ್ವ (ನ)=ಗಂಡು ಹೆಣ್ಣುಗಳ ಜೋಡಿ. ಯುಗ್ಮ, ಯುಗಲ, ಯುಗ (ನ)=ಎರಡು, ಜೊತೆ.

೫೬೫ -೫೬೭. ಸಮೂಹ, ನಿವಹ, ವ್ಯೂಹ, ಸಂದೋಹ, ವಿಸರ, ವ್ರಜ, ಸ್ತೋಮ, ಓಘ, ನಿಕರ, ವ್ರಾತ, ವಾರ, ಸಂಘಾತ, ಸಂಚಯ, ಸಮುದಾಯ, ಸಮುದಯ, ಸಮವಾಯ, ಚಯ, ಗಣ (ಪು), ಸಂಹತಿ (ಸ್ತ್ರೀ), ವೃಂದ, ನಿಕುರಂಬ (ನಿಕುರಂಬ), ಕದಂಬಕ (ನ)=ಸಮುದಾಯ, ಗುಂಪು.

೫೬೭. ಮುಂದೆ ಹೇಳತಕ್ಕವು ಸಮೂಹಭೇದಗಳು. ವರ್ಗ (ಪು)=ಸಜಾತೀಯವಾದ ಪ್ರಾಣಿಗಳ ಅಥವಾ ಪ್ರಾಣೇತರವಸ್ತುಗಳ ಸಮೂಹ. ಉದಾ : ಮನುಷ್ಯವರ್ಗ, ವೃಕ್ಷವರ್ಗ. ಶಿಲಾವೃಕ್ಷವರ್ಗ ಎನ್ನುವುದು ಅಯುಕ್ತ. ಸಂಘ, ಸಾರ್ಥ (ನ)=ಸಜಾತೀಯವಾದ ಅಥವಾ ವಿಜಾತೀಯವಾದ ಪ್ರಾಣಿಗಳ ಸಮೂಹ. ಉದಾ : ವಿದ್ಯಾರ್ಥಿ ಸಂಘ, ಮೃಗಸಂಘ, ಮೃಗಪಕ್ಷಿ ಸಾರ್ಥ. ವೃಕ್ಷಸಂಘ ಎನ್ನುವುದು ಅಯುಕ್ತ. ಕುಲ (ನ)=ಸಜಾತೀಯ ಪ್ರಾಣಿಗಳ

---

[1] ಕೋಶಶಬ್ದವು ನಪುಂಸಕದಲ್ಲಿಯೂ ಇದೆ.

ಪಶೂನಾಂ ಸಮಜೋಽನ್ಯೇಷಾಂ ಸಮಾಜೋಽಥ ಸಧರ್ಮಿಣಾಮ್ ।
ಸ್ಯಾನ್ನಿಕಾಯಃ ಪುಂಜರಾಶೀ ತೂತ್ಕರಃ ಕೂಟಮಸ್ತ್ರಿಯಾಮ್ ॥ ೫೬೮
ಕಾಪೋತಶೌಕಮಾಯೂರತೈತ್ತಿರಾದೀನಿ ತದ್ಗಣೇ ।
ಗೃಹಾಸಕ್ತಾಃ ಪಕ್ಷಿಮೃಗಾಶ್ಛೇಕಾಃ ಸ್ಯುರ್ಗೃಹ್ಯಕಾಶ್ಚ ತೇ ॥ ೫೬೯

ಇತಿ ಸಿಂಹಾದಿವರ್ಗಃ

ಸಮೂಹ. ಉದಾ : ಮನುಷ್ಯಕುಲ, ಮನುಷ್ಯ ಮೃಗಕುಲ ಅಥವಾ ವೃಕ್ಷಕುಲ ಎನ್ನುವುದು ಅಯುಕ್ತ[1]. ಯೂಥ (ನ)=ತಿರ್ಯಗ್ಜಂತುಗಳ ಸಮೂಹ. ಉದಾ : ಗಜಯೂಥ. ಸ್ತ್ರೀಯೂಥ ಎನ್ನುವುದು ಅಯುಕ್ತ.

೫೬೮. ಸಮಜ (ಪು)=ಪಶುಗಳ ಸಮೂಹ. ಸಮಾಜ (ಪು)=ಪಶುಭಿನ್ನಗಳಾದ ಮನುಷ್ಯ ಪಕ್ಷಿ ಮುಂತಾದವುಗಳ ಸಮೂಹ. ನಿಕಾಯ (ಪು)=ಸಮಾನವಾದ ಅಭಿಪ್ರಾಯ ಗುಣಸ್ವಭಾವಗಳಿರತಕ್ಕವರ ಸಮೂಹ. ಉದಾ : ವಿದ್ವನ್ನಿಕಾಯ. ಒಂದಾನೊಂದು ವಿಷಯ ದಲ್ಲಿ ವಿದ್ವಾಂಸರೆಲ್ಲರೂ ಸಮಾನವಾದ ಅಭಿಪ್ರಾಯವನ್ನು ಹೊಂದಿದ್ದಾರೆಂದು ಈ ಶಬ್ದ ದಿಂದ ಪ್ರತೀತವಾಗುತ್ತದೆ. ಪುಂಜ, ರಾಶಿ, ಉತ್ಕರ (ಪು), ಕೂಟ (ಪು. ನ.)=ಧಾನ್ಯಾದಿಗಳ ರಾಶಿ (Heap, Mass).

೫೬೯. ಕಾಪೋತ (ನ)=ಪಾರಿವಾಳಗಳ ಗುಂಪು. ಶೌಕ (ನ)=ಗಿಳಿಗಳ ಹಿಂಡು, ಮಾಯೂರ (ನ)=ನವಿಲುಗಳ ಗುಂಪು. ತೈತ್ತಿರ (ನ)=ತಿತ್ತಿರಿಪಕ್ಷಿಗಳ ಸಮೂಹ. ಹೀಗೆಯೇ ಕಾಕ (ನ)=ಕಾಗೆಗಳ ಗುಂಪು, ಬಾಕ (ನ)=ಬಕಗಳ ಗುಂಪು, ಔಲೂಕ (ನ)=ಗೂಬೆಗಳ ಗುಂಪು ಇತ್ಯಾದಿ. ಛೇಕ, ಗೃಹ್ಯಕ (ಪು)=ಮನೆಯಲ್ಲಿ ಸಾಕಿದ ಪಕ್ಷಿ ಅಥವಾ ಮೃಗ.

---

[1] ಆದರೆ 'ಅವರ್ಣಕುಲಂ' ಎಂದು ಮಹಾಭಾಷ್ಯ ಪ್ರಯೋಗವಿದೆ.

೬. ಮನುಷ್ಯವರ್ಗಃ

ಮನುಷ್ಯಾ ಮಾನುಷಾ ಮರ್ತ್ಯಾ ಮನುಜಾ ಮಾನವಾ ನರಾಃ ।
ಸ್ಯುಃ ಪುಮಾಂಸಃ ಪಂಚಜನಾಃ ಪುರುಷಾಃ ಪೂರುಷಾ ನರಃ ॥ ೫೭೦
ಸ್ತ್ರೀ ಯೋಷಿದಬಲಾ ಯೋಷಾ ನಾರೀ ಸೀಮಂತಿನೀ ವಧೂಃ ।
ಪ್ರತೀಪದರ್ಶಿನೀ ವಾಮಾ ವನಿತಾ ಮಹಿಲಾ ತಥಾ ॥ ೫೭೧
ವಿಶೇಷಾಸ್ತ್ವಂಗನಾ ಭೀರುಃ ಕಾಮಿನೀ ವಾಮಲೋಚನಾ ।
ಪ್ರಮದಾ ಮಾನಿನೀ ಕಾಂತಾ ಲಲನಾ ಚ ನಿತಂಬಿನೀ ॥ ೫೭೨
ಸುಂದರೀ ರಮಣೀ ರಾಮಾ ಕೋಪನಾ ಸೈವ ಭಾಮಿನೀ ।
ವರಾರೋಹಾ ಮತ್ತಕಾಶಿನ್ಯುತ್ತಮಾ ವರವರ್ಣಿನೀ ॥ ೫೭೩
ಕೃತಾಭಿಷೇಕಾ ಮಹಿಷೀ ಭೋಗಿನ್ಯೋಽನ್ಯಾ ನೃಪಸ್ತ್ರಿಯಃ ।
ಪತ್ನೀ ಪಾಣಿಗೃಹೀತೀ ಚ ದ್ವಿತೀಯಾ ಸಹಧರ್ಮಿಣೀ ॥ ೫೭೪

ಮನುಷ್ಯವರ್ಗಃ

೫೭೦. ಮನುಷ್ಯ, ಮಾನುಷ, ಮರ್ತ್ಯ, ಮನುಜ, ಮಾನವ, ನರ (ಪು)=ಮನುಷ್ಯ. ಪುಂಸ್, ಪಂಚಜನ, ಪುರುಷ, ಪೂರುಷ, ನೃ[1] (ಪು)=ಗಂಡಸು.

೫೭೧. ಸ್ತ್ರೀ, ಯೋಷಿತ್, ಅಬಲಾ, ಯೋಷಾ, ನಾರೀ, ಸೀಮಂತಿನೀ, ವಧೂ, ಪ್ರತೀಪದರ್ಶಿನೀ, ವಾಮಾ, ವನಿತಾ, ಮಹಿಲಾ[2] (ಸ್ತ್ರೀ)=ಸ್ತ್ರೀ, ಹೆಂಗಸು.

೫೭೨-೫೭೩. ಅಂಗನಾ, ಭೀರು, ಕಾಮಿನೀ, ವಾಮಲೋಚನಾ, ಪ್ರಮದಾ, ಮಾನಿನೀ, ಕಾಂತಾ, ಲಲನಾ, ನಿತಂಬಿನೀ, ಸುಂದರೀ, ರಮಣೀ, ರಾಮಾ, ಕೋಪನಾ, ಭಾಮಿನೀ, ವರಾರೋಹಾ, ಮತ್ತಕಾಶಿನೀ, ಉತ್ತಮಾ, ವರವರ್ಣಿನೀ (ಸ್ತ್ರೀ)=ವಿವಿಧ ಗುಣಗಳಿರುವ ಉತ್ತಮ ಸ್ತ್ರೀಯರು.

---

[1] ಮನುಷ್ಯ ಶಬ್ದದಿಂದ ನೃ ಶಬ್ದದವರೆಗೆ ೧೧ ಶಬ್ದಗಳೂ ಮನುಷ್ಯ ಸಾಮಾನ್ಯವಾಚಿಗಳೆಂದು ಕೆಲವರು ಹೇಳುತ್ತಾರೆ. ಮನುಷೀ, ಮಾನುಷೀ, ಮರ್ತ್ಯಾ, ಮನುಜಾ, ಮಾನವೀ, ನಾರೀ (ಸ್ತ್ರೀ)= ಇವು ಮನುಷ್ಯಜಾತಿ ಸ್ತ್ರೀವಾಚಕಗಳು. ಪುಂಸ್, ಪಂಚಜನ, ಪುರುಷ, ಪೂರುಷ—ಇವು ನಾಲ್ಕು ಗಂಡಸು ಎಂಬ ಅರ್ಥವನ್ನು ಮಾತ್ರ ಬೋಧಿಸುತ್ತವೆ ; ನೃ. ನರ - ಈ ಎರಡು ಶಬ್ದಗಳ ಸ್ತ್ರೀಲಿಂಗದ ರೂಪ ನಾರೀ.

[2] ಮಹೇಲಾ ಎಂಬ ಶಬ್ದವೂ ಇದೆ.

ಭಾರ್ಯಾ ಜಾಯಾಥ ಪುಂಭೂಮ್ನಿ ದಾರಾಃ ಸ್ಯಾತ್ತು ಕುಟುಂಬಿನೀ ।
ಪುರಂಧ್ರೀ ಸುಚರಿತ್ರಾ ತು ಸತೀ ಸಾಧ್ವೀ ಪತಿವ್ರತಾ ॥ ೫೭೫
ಕೃತಸಾಪತ್ನಿಕಾಧ್ಯೂಢಾಽಧಿವಿನ್ನಾಥ ಸ್ವಯಂವರಾ ।
ಪತಿಂವರಾ ಚ ವರ್ಯಾಥ ಕುಲಸ್ತ್ರೀ ಕುಲಪಾಲಿಕಾ ॥ ೫೭೬
ಕನ್ಯಾ ಕುಮಾರೀ ಗೌರೀ ತು ನಗ್ನಿಕಾನಾಗತಾರ್ತವಾ ।
ಸ್ಯಾನ್ಮಧ್ಯಮಾ ದೃಷ್ಟರಜಾಸ್ತರುಣೀ ಯುವತಿಸ್ಸಮೇ ॥ ೫೭೭
ಸಮಾಃ ಸ್ನುಷಾಜನೀವಧ್ವಶ್ಚಿರಂಟೀ ತು ಸುವಾಸಿನೀ ।
ಇಚ್ಛಾವತೀ ಕಾಮುಕಾ ಸ್ಯಾದ್ವೃಷಸ್ಯಂತೀ ಕು ಕಾಮುಕೀ ॥ ೫೭೮

೫೭೪-೫೭೫. ಮಹಿಷೀ (ಸ್ತ್ರೀ)=ಪಟ್ಟಾಭಿಷಿಕ್ತಳಾದ ರಾಜಪತ್ನಿ, ಪಟ್ಟದ ರಾಣಿ. ಭೋಗಿನೀ (ಸ್ತ್ರೀ)=ರಾಜನ ಭೋಗಕ್ಕಾಗಿ ಇರುವ ಸ್ತ್ರೀ. ಪತ್ನೀ, ಪಾಣಿಗೃಹಿತೀ, ದ್ವಿತೀಯಾ, ಸಹಧರ್ಮಿಣೀ, ಭಾರ್ಯಾ, ಜಾಯಾ (ಸ್ತ್ರೀ), ದಾರ (ಪು. ನಿತ್ಯಬಹುವಚನ)=ಹೆಂಡತಿ. ಕುಟುಂಬಿನೀ, ಪುರಂಧ್ರೀ (ಪುರಂಧ್ರಿ) (ಸ್ತ್ರೀ)=ಮಕ್ಕಳಿರುವ ಮುತ್ತೈದೆ. ಸುಚರಿತ್ರಾ, ಸತೀ, ಸಾಧ್ವೀ, ಪತಿವ್ರತಾ (ಸ್ತ್ರೀ)=ಪತಿವ್ರತೆಯಾದ ಹೆಂಗಸು.

೫೭೬. ಕೃತಸಾಪತ್ನಿಕಾ, ಅಧ್ಯೂಢಾ, ಅಧಿವಿನ್ನಾ (ಸ್ತ್ರೀ)=ಅನೇಕ ಹೆಂಡತಿಯರಲ್ಲಿ ಮೊದಲು ಮದುವೆಯಾದವಳು, ಹಿರಿಯ ಹೆಂಡತಿ. ಸ್ವಯಂವರಾ, ಪತಿಂವರಾ, ವರ್ಯಾ (ಸ್ತ್ರೀ)=ತಾನಾಗಿ ಗಂಡನನ್ನು ವರಿಸಿದವಳು. ಕುಲಸ್ತ್ರೀ, ಕುಲಪಾಲಿಕಾ (ಸ್ತ್ರೀ)=ಪರಿಶುದ್ಧಚಾರಿತ್ರ ಳಾದ ಹೆಂಗಸು, ಗರತಿ.

೫೭೭. ಕನ್ಯಾ, ಕುಮಾರೀ (ಸ್ತ್ರೀ)=ಮದುವೆಯಾಗದ ಹುಡುಗಿ. ಗೌರೀ, ನಗ್ನಿಕಾ, ಅನಾಗ ತಾರ್ತವಾ (ಸ್ತ್ರೀ)=ಮೈನೆರೆಯದವಳು. ಮಧ್ಯಮಾ (ಸ್ತ್ರೀ)=ಹೊಸದಾಗಿ ಮೈನೆರೆದವಳು. ತರುಣೀ, ಯುವತಿ[1] (ಸ್ತ್ರೀ)=ಯುವತಿ.

೫೭೮. ಸ್ನುಷಾ, ಜನೀ, ವಧೂ (ಸ್ತ್ರೀ)=ಸೊಸೆ. ಚಿರಂಟೀ (ಚಿರಿಂಟೀ), ಸುವಾಸಿನೀ (ಸ್ತ್ರೀ)=ಸುಮಂಗಲಿ ; ಮುತ್ತೈದೆ. ಇಚ್ಛಾವತೀ, ಕಾಮುಕಾ (ಸ್ತ್ರೀ)=ಸಾಮಾನ್ಯವಾದ ಯಾವುದಾದರೊಂದು ಆಸೆಯುಳ್ಳವಳು. ವೃಷಸ್ಯಂತೀ, ಕಾಮುಕೀ (ಸ್ತ್ರೀ)=ಮೈಥುನೇಚ್ಛೆಯುಳ್ಳ ವಳು.

---

[1] ಯುವತೀ ಎಂಬ ದೀರ್ಘಾಂತವೂ ಉಂಟು.

ಕಾಂತಾರ್ಥಿನೀ ತು ಯಾ ಯಾತಿ ಸಂಕೇತಂ ಸಾಭಿಸಾರಿಕಾ ।
ಪುಂಶ್ಚಲೀ ಧರ್ಷಣೀ ಬಂಧಕ್ಯಸತೀ ಕುಲಟೇತ್ವರೀ ॥ ೫೭೯
ಸ್ವೈರಿಣೀ ಪಾಂಸುಲಾ ಚ ಸ್ಯಾದಶಿಶ್ವೀ ಶಿಶುನಾ ವಿನಾ ।
ಅವೀರಾ ನಿಷ್ಪತಿಸುತಾ ವಿಶ್ವಸ್ತಾವಿಧವೇ ಸಮೇ ॥ ೫೮೦
ಆಲಿಸ್ಸಖೀ ವಯಸ್ಯಾ ಚ ಪತಿವತ್ನೀ ಸಭರ್ತೃಕಾ ।
ವೃದ್ಧಾ ಪಲಿಕ್ನೀ ಪ್ರಾಜ್ಞೀ ತು ಪ್ರಜ್ಞಾ ಪ್ರಾಜ್ಞಾ ತು ಧೀಮತೀ ॥ ೫೮೧
ಶೂದ್ರೀ ಶೂದ್ರಸ್ಯ ಭಾರ್ಯಾ ಸ್ಯಾಚ್ಛೂದ್ರಾ ತಜ್ಜಾತಿರಂಗನಾ ।
ಆಭೀರೀ ತು ಮಹಾಶೂದ್ರೀ ಜಾತಿಪುಂಯೋಗಯೋಸ್ಸಮೇ ॥ ೫೮೨
ಅರ್ಯಾಣೀ ಸ್ವಯಮರ್ಯಾ ಸ್ಯಾತ್ ಕ್ಷತ್ರಿಯಾ ಕ್ಷತ್ರಿಯಾಣ್ಯಪಿ ।
ಉಪಾಧ್ಯಾಯಾಽಪ್ಯುಪಾಧ್ಯಾಯೀ ಸ್ಯಾದಾಚಾರ್ಯಾಪಿ ಚ ಸ್ವತಃ ॥ ೫೮೩

೫೭೯-೫೮೦. ಅಭಿಸಾರಿಕಾ (ಸ್ತ್ರೀ)=ಪ್ರಿಯನ ಬಯಕೆಯಿಂದ ಸಂಕೇತಸ್ಥಾನಕ್ಕೆ ಹೋಗುವವಳು. ಪುಂಶ್ಚಲೀ, ಧರ್ಷಣೀ (ಚರ್ಷಣೀ), ಬಂಧಕೀ, ಅಸತೀ, ಕುಲಟಾ, ಇತ್ವರೀ, ಸ್ವೈರಿಣೀ, ಪಾಂಸುಲಾ (ಸ್ತ್ರೀ)= ವ್ಯಭಿಚಾರಿಣಿ. ಅಶಿಶ್ವೀ (ಸ್ತ್ರೀ)=ಮಕ್ಕಳಿಲ್ಲದವಳು. ಅವೀರಾ (ಸ್ತ್ರೀ)=ಗಂಡನೂ ಮಕ್ಕಳೂ ಇಲ್ಲದವಳು. ವಿಶ್ವಸ್ತಾ, ವಿಧವಾ (ಸ್ತ್ರೀ)=ವಿಧವೆ.

೫೮೧. ಆಲಿ,[1] ಸಖೀ, ವಯಸ್ಯಾ (ಸ್ತ್ರೀ)=ಗೆಳತಿ. ಪತಿವತ್ನೀ, ಸಭರ್ತೃಕಾ (ಸ್ತ್ರೀ)= ಗಂಡನಿರುವ ಸ್ತ್ರೀ, ಮುತ್ತೈದೆ. ವೃದ್ಧಾ, ಪಲಿಕ್ನೀ (ಸ್ತ್ರೀ)=ಮುದುಕಿ. ಪ್ರಾಜ್ಞೀ, ಪ್ರಜ್ಞಾ (ಸ್ತ್ರೀ)=ತಿಳಿದವಳು, ವ್ಯವಹಾರಚತುರೆ. ಪ್ರಾಜ್ಞಾ, ಧೀಮತೀ (ಸ್ತ್ರೀ)=ಸೂಕ್ಷ್ಮಬುದ್ಧಿಯವಳು, ಮೇಧಾವಿನಿ, ಶಾಸ್ತ್ರಜ್ಞಾನವುಳ್ಳವಳು.

೫೮೨. ಶೂದ್ರೀ (ಸ್ತ್ರೀ)=ಶೂದ್ರನ ಹೆಂಡತಿ. ಶೂದ್ರಾ (ಸ್ತ್ರೀ)=ಶೂದ್ರಜಾತಿಯ ಹೆಂಗಸು. ಆಭೀರೀ, ಮಹಾಶೂದ್ರೀ (ಸ್ತ್ರೀ)=ಗೊಲ್ಲ ಜಾತಿಯ ಹೆಂಗಸು ; ಗೊಲ್ಲನ ಹೆಂಡತಿ ; ಆಭೀರ ಎಂಬ ಸಂಕರಜಾತಿಯ ಹೆಂಗಸು ; ಸಂಕರಜಾತಿಯವನ ಹೆಂಡತಿ.

೫೮೩. ಅರ್ಯಾಣೀ, ಅರ್ಯಾ (ಸ್ತ್ರೀ)=ವೈಶ್ಯಜಾತಿಯ ಹೆಂಗಸು. ಕ್ಷತ್ರಿಯಾ, ಕ್ಷತ್ರಿಯಾಣೀ (ಸ್ತ್ರೀ)=ಕ್ಷತ್ರಿಯಸ್ತ್ರೀ. ಉಪಾಧ್ಯಾಯಾ, ಉಪಾಧ್ಯಾಯೀ (ಸ್ತ್ರೀ)=ಕಲಿಸುವವಳು, ಅಧ್ಯಾಪಿಕೆ. ಆಚಾರ್ಯಾ (ಸ್ತ್ರೀ)=ಮಂತ್ರವ್ಯಾಖ್ಯಾನ ಮಾಡತಕ್ಕವಳು, ವೇದಶಾಸ್ತ್ರಗಳನ್ನು ಕಲಿಸುವವಳು.

---

[1] ಆಲೀ ಎಂಬ ದೀರ್ಘಾಂತವೂ ಉಂಟು.

ಆಚಾರ್ಯಾನೀ ತು ಪುಂಯೋಗೇ ಸ್ಯಾದರ್ಯೀ ಕ್ಷತ್ರಿಯೀ ತಥಾ ।
ಉಪಾಧ್ಯಾಯಾನ್ಯುಪಾಧ್ಯಾಯೀ ಪೋಟಾ ಸ್ತ್ರೀಪುಂಸಲಕ್ಷಣಾ ॥ ೫೮೪
ವೀರಪತ್ನೀ ವೀರಭಾರ್ಯಾ ವೀರಮಾತಾ ತು ವೀರಸೂಃ ।
ಜಾತಾಪತ್ಯಾ ಪ್ರಜಾತಾ ಚ ಪ್ರಸೂತಾ ಚ ಪ್ರಸೂತಿಕಾ ॥ ೫೮೫
ಸ್ತ್ರೀ ನಗ್ನಿಕಾ ಕೋಟವೀ ಸ್ಯಾದ್ದೂತೀಸಂಚಾರಿಕೇ ಸಮೇ ।
ಕಾತ್ಯಾಯನ್ಯರ್ಧವೃದ್ಧಾ ಯಾ ಕಾಷಾಯವಸನಾಧವಾ ॥ ೫೮೬
ಸೈರಂಧ್ರೀ ಪರವೇಶ್ಮಸ್ಥಾ ಸ್ವವಶಾ ಶಿಲ್ಪಕಾರಿಕಾ ।
ಅಸಿಕ್ನೀ ಸ್ಯಾದವೃದ್ಧಾ ಯಾ ಪ್ರೇಷ್ಯಾಂತಃಪುರಚಾರಿಣೀ ॥ ೫೮೭
ವಾರಸ್ತ್ರೀ ಗಣಿಕಾ ವೇಶ್ಯಾ ರೂಪಾಜೀವಾಥ ಸಾ ಜನೈಃ ।
ಸತ್ಕೃತಾ ವಾರಮುಖ್ಯಾ ಸ್ಯಾತ್ಕುಟ್ಟನೀ ಶಂಭಲೀ ಸಮೇ ॥ ೫೮೮

---

೫೮೪. ಆಚಾರ್ಯಾನೀ (ಸ್ತ್ರೀ)=ಆಚಾರ್ಯನ ಪತ್ನಿ. ಅರ್ಯೀ (ಸ್ತ್ರೀ)=ವೈಶ್ಯನ ಹೆಂಡತಿ. ಕ್ಷತ್ರಿಯೀ (ಸ್ತ್ರೀ)=ಕ್ಷತ್ರಿಯನ ಹೆಂಡತಿ. ಉಪಾಧ್ಯಾಯಾನೀ, ಉಪಾಧ್ಯಾಯೀ (ಸ್ತ್ರೀ)=ಉಪಾಧ್ಯಾಯನ ಪತ್ನಿ. ಪೋಟಾ (ಸ್ತ್ರೀ)=ಮೀಸೆ ಮುಂತಾದ ಪುರುಷಲಕ್ಷಣವುಳ್ಳ ಹೆಂಗಸು.

೫೮೫. ವೀರಪತ್ನೀ, ವೀರಭಾರ್ಯಾ (ಸ್ತ್ರೀ)=ವೀರನ ಪತ್ನಿ. ವೀರಮಾತೃ, ವೀರಸೂ (ಸ್ತ್ರೀ)=ವೀರನ ತಾಯಿ. ಜಾತಾಪತ್ಯಾ, ಪ್ರಜಾತಾ, ಪ್ರಸೂತಾ, ಪ್ರಸೂತಿಕಾ (ಸ್ತ್ರೀ)=ಬಾಣಂತಿ.

೫೮೬. ನಗ್ನಿಕಾ, ಕೋಟವೀ (ಸ್ತ್ರೀ)=ಬೆತ್ತಲೆಯಾದ ಹೆಂಗಸು. ದೂತೀ, ಸಂಚಾರಿಕಾ (ಸ್ತ್ರೀ)=ದೂತಿ (Handmaid). ಕಾತ್ಯಾಯನೀ (ಸ್ತ್ರೀ)=ಕಾಷಾಯವಸ್ತ್ರವನ್ನುಟ್ಟಿರುವ ವಯಸ್ಸಾದ ವಿಧವೆ.

೫೮೭. ಸೈರಂಧ್ರೀ (ಸ್ತ್ರೀ)=ಪರಗೃಹದಲ್ಲಿದ್ದು ಕುಶಲಕಲೆಗಳನ್ನು ಮಾಡುವ ಸ್ವತಂತ್ರಳಾದ ಸ್ತ್ರೀ. ಅಸಿಕ್ನೀ (ಸ್ತ್ರೀ)=ಅಂತಃಪುರದಲ್ಲಿರುವ ಚಿಕ್ಕವಯಸ್ಸಿನ ದಾಸಿ.

೫೮೮. ವಾರಸ್ತ್ರೀ, ಗಣಿಕಾ, ವೇಶ್ಯಾ, ರೂಪಾಜೀವಾ (ಸ್ತ್ರೀ)=ಸೂಳೆ. ವಾರಮುಖ್ಯಾ (ಸ್ತ್ರೀ)=ಜನರಿಂದ ಸತ್ಕೃತಳಾದ ಸೂಳೆ. ಕುಟ್ಟನೀ[1], ಶಂಭಲೀ (ಸ್ತ್ರೀ)=ತಲೆಹಿಡುಕಿ (Procuress).

೫೮೯-೫೯೦. ವಿಪ್ರಶ್ನಿಕಾ, ಈಕ್ಷಣಿಕಾ, ದೈವಜ್ಞಾ (ಸ್ತ್ರೀ)=ಕಣಿ, ಶಕುನಫಲ— ಮುಂತಾದ್ದನ್ನು ಹೇಳತಕ್ಕವಳು. ರಜಸ್ವಲಾ, ಸ್ತ್ರೀಧರ್ಮಿಣೀ, ಅವಿ, ಆತ್ರೇಯೀ, ಮಲಿನೀ,

---

[1] ಕುಟ್ಟನೀ ಎಂಬ ರೂಪವೂ ಉಂಟು.

ವಿಪ್ರಶ್ನಿಕಾ ತ್ರೀಕ್ಷಣಿಕಾ ದೈವಜ್ಞಾಥ ರಜಸ್ವಲಾ ।
ಸ್ತ್ರೀಧರ್ಮಿಣ್ಯವಿರಾತ್ರೇಯೀ ಮಲಿನೀ ಪುಷ್ಪವತ್ಯಪಿ ॥ ೫೮೯
ಋತುಮತ್ಯಪ್ಯುದಕ್ಯಾಪಿ ಸ್ಯಾದ್ರಜಃ ಪುಷ್ಪಮಾರ್ತವಮ್ ।
ಶ್ರದ್ಧಾಲುರ್ದೋಹದವತೀ ನಿಷ್ಕಲಾ ವಿಗತಾರ್ತವಾ ॥ ೫೯೦
ಆಪನ್ನಸತ್ತ್ವಾ ಸ್ಯಾದ್ಗುರ್ವಿಣ್ಯಂತರ್ವತ್ನೀ ಚ ಗರ್ಭಿಣೀ ।
ಗಣಿಕಾದೇಸ್ತು ಗಾಣಿಕ್ಯಂ ಗಾರ್ಭಿಣಂ ಯೌವತಂ ಗಣೇ ॥ ೫೯೧
ಪುನರ್ಭೂರ್ದಿಧಿಷೂರೂಢಾ ದ್ವಿಸ್ತಸ್ಯಾ ದಿಧಿಷುಃ ಪತಿಃ ।
ಸ ತು ದ್ವಿಜೋಽಗ್ರೇದಿಧಿಷೂಸ್ಸೈವ ಯಸ್ಯ ಕುಟುಂಬಿನೀ ॥ ೫೯೨
ಕಾನೀನಃ ಕನ್ಯಕಾಜಾತಸ್ಸುತೋಽಥ ಸುಭಗಾಸುತಃ ।
ಸೌಭಾಗಿನೇಯಃ ಸ್ಯಾತ್ಪಾರಸ್ತ್ರೈಣೇಯಸ್ತು ಪರಸ್ತ್ರಿಯಾಃ ॥ ೫೯೩

ಪುಷ್ಪವತೀ, ಋತುಮತೀ, ಉದಕ್ಯಾ (ಸ್ತ್ರೀ)=ಮುಟ್ಟಾದವಳು. ರಜಸ್, ಪುಷ್ಪ, ಆರ್ತವ (ನ)=ಮುಟ್ಟು. ಶ್ರದ್ಧಾಲು, ದೋಹದವತೀ (ಸ್ತ್ರೀ)=ಗರ್ಭಿಣಿಯಾಗಿ ಬಯಕೆಯುಳ್ಳವಳು. ನಿಷ್ಕಲಾ, ವಿಗತಾರ್ತವಾ (ಸ್ತ್ರೀ)=ಮುಟ್ಟು ನಿಂತವಳು.

೫೯೧. ಆಪನ್ನಸತ್ತ್ವಾ, ಗುರ್ವಿಣೀ, ಅಂತರ್ವತ್ನೀ, ಗರ್ಭಿಣೀ (ಸ್ತ್ರೀ)=ಗರ್ಭಿಣಿ. ಗಾಣಿಕ್ಯ (ನ)=ಸೂಳೆಯರ ಸಮೂಹ. ಗಾರ್ಭಿಣ (ನ)=ಗರ್ಭಿಣಿಯರ ಸಮೂಹ. ಯೌವತ[2] (ನ)=ಯುವತಿಯರ ಸಮೂಹ.

೫೯೨. ಪುನರ್ಭೂ, ದಿಧಿಷೂ (ಸ್ತ್ರೀ)=ಪುನರ್ವಿವಾಹವನ್ನು ಮಾಡಿಕೊಂಡವಳು. ದಿಧಿಷು (ದಿಧಿಷೂ) (ಪು)=ಪುನರ್ವಿವಾಹವನ್ನು ಮಾಡಿಕೊಂಡವಳ ಗಂಡ. ಅಗ್ರೇದಿಧಿಷೂ[3] (ಪು)=ಪುನರ್ವಿವಾಹವಾದವಳು ಯಾವನ ಮನೆಯಲ್ಲಿ ಗೃಹಕೃತ್ಯವನ್ನು ಸಾಗಿಸುವಳೋ ಅವನು.

೫೯೩. ಕಾನೀನ (ಪು)=ಮದುವೆಯಾಗದವಳು ಹೆತ್ತ ಮಗ. ಸೌಭಾಗಿನೇಯ (ಪು)=ಭಾಗ್ಯವಂತೆಯ ಮಗ. ಪಾರಸ್ತ್ರೈಣೇಯ (ಪು)=ಪರಸ್ತ್ರೀಯರಲ್ಲಿ ಪಡೆದ ಮಗ.

---

1 ಯೌವನ ಎಂಬ ರೂಪವೂ ಉಂಟು.

2 ಅಗ್ರೇದಿಧಿಷೂ (ಪು)=ಜ್ಯೇಷ್ಠಸಹೋದರನ ಮರಣಾನಂತರ ಅವನ ಪತ್ನಿಯನ್ನು ಮದುವೆಯಾದವನು. (ಸ್ತ್ರೀ)= ಜ್ಯೇಷ್ಠಸಹೋದರಿಯು ಮದುವೆಯಾಗುವುದಕ್ಕೆ ಮೊದಲು ಮದುವೆಯಾದವಳು—ಎಂಬ ಅರ್ಥಾಂತರಗಳೂ ಉಂಟು.

ಪೈತೃಷ್ವಸೇಯಃ ಸ್ಯಾತ್ಪೈತೃಷ್ವಸ್ರೀಯಶ್ಚ ಪಿತೃಷ್ವಸುಃ ।
ಸುತೋ ಮಾತೃಷ್ವಸುಶ್ಚೈವಂ ವೈಮಾತ್ರೇಯೋ ವಿಮಾತೃಜಃ ॥ ೫೯೪
ಅಥ ಬಾಂಧಕಿನೇಯಃ ಸ್ಯಾದ್ಬಂಧುಲಶ್ಚಾಸತೀಸುತಃ ।
ಕೌಲಟೇರಃ ಕೌಲಟೇಯೋ ಭಿಕ್ಷುಕೀ ತು ಸತೀ ಯದಿ ॥ ೫೯೫
ತದಾ ಕೌಲಟಿನೇಯೋಽಸ್ಯಾಃ ಕೌಲಟೇಯೋಽಪಿ ಚಾತ್ಮಜೇ ।
ಆತ್ಮಜಸ್ತನಯಸ್ಸೂನುಸ್ಸುತಃ ಪುತ್ರಃ ಸ್ತ್ರಿಯಾಂ ತ್ವಮೀ ॥ ೫೯೬
ಆಹುರ್ದುಹಿತರಂ ಸರ್ವೇಽಪತ್ಯಂ ತೋಕಂ ತಯೋಸ್ಸಮೇ ।
ಸ್ವಜಾತೇ ತ್ವೌರಸೋರಸ್ಯೌ ತಾತಸ್ತು ಜನಕಃ ಪಿತಾ ॥ ೫೯೭
ಜನಯಿತ್ರೀ ಪ್ರಸೂರ್ಮಾತಾ ಜನನೀ ಭಗಿನೀ ಸ್ವಸಾ ।
ನನಾಂದಾ ತು ಸ್ವಸಾ ಪತ್ಯುರ್ನಪ್ತ್ರೀ ಪೌತ್ರೀ ಸುತಾತ್ಮಜಾ ॥ ೫೯೮
ಭಾರ್ಯಾಸ್ತು ಭ್ರಾತೃವರ್ಗಸ್ಯ ಯಾತರಃ ಸ್ಯುಃ ಪರಸ್ಪರಮ್ ।
ಪ್ರಜಾವತೀ ಭ್ರಾತೃಜಾಯಾ ಮಾತುಲಾನೀ ತು ಮಾತುಲೀ ॥ ೫೯೯

---

೫೯೪. ಪೈತೃಷ್ವಸೇಯ, ಪೈತೃಷ್ವಸ್ರೀಯ (ಪು)=ಸೋದರತ್ತೆಯ (ತಂದೆಯ ಸಹೋದರಿಯ) ಮಗ. ಮಾತೃಷ್ವಸೇಯ, ಮಾತೃಷ್ವಸ್ರೀಯ (ಪು)=ತಾಯಿಯ ಸಹೋದರಿಯ ಮಗ. (ಸ್ತ್ರೀ. ಮಾತೃಷ್ವಸೇಯೀ, ಮಾತೃಷ್ವಸ್ರೀಯಾ) ವೈಮಾತ್ರೇಯ (ಪು)=ಮಲತಾಯಿಯ ಮಗ.

೫೯೫-೫೯೬. ಬಾಂಧಕಿನೇಯ, ಬಂಧುಲ, ಅಸತೀಸುತ, ಕೌಲಟೇರ, ಕೌಲಟೇಯ (ಪು)=ವ್ಯಭಿಚಾರಿಣಿಯ ಮಗ. ಕೌಲಟಿನೇಯ, ಕೌಲಟೇಯ (ಪು)=ಶೀಲವಂತೆಯಾದ ಭಿಕ್ಷುಕಿಯ ಮಗ.

೫೯೬-೫೯೭. ಆತ್ಮಜ, ತನಯ, ಸೂನು, ಸುತ, ಪುತ್ರ (ಪು)=ಮಗ. ಈ ಶಬ್ದಗಳೇ ಸ್ತ್ರೀಲಿಂಗದಲ್ಲಿದ್ದರೆ- ಆತ್ಮಜಾ, ತನಯಾ, ಸೂನು, ಸುತಾ, ಪುತ್ರೀ ಮತ್ತು ದುಹಿತೃ (ಸ್ತ್ರೀ)=ಮಗಳು. ಅಪತ್ಯ, ತೋಕ (ನ)=ಮಗ ಅಥವಾ ಮಗಳು (Child). ಔರಸ, ಔರಸ್ಯ (ಪು)=ಹೊಟ್ಟೆಯಲ್ಲಿ ಹುಟ್ಟಿದ ಮಗ (Legitimate Son.) ತಾತ, ಜನಕ, ಪಿತೃ (ಪು)=ತಂದೆ.

೫೯೮. ಜನಯಿತ್ರೀ, ಪ್ರಸೂ, ಮಾತೃ, ಜನನೀ (ಸ್ತ್ರೀ)=ತಾಯಿ. ಭಗಿನೀ, ಸ್ವಸೃ (ಸ್ತ್ರೀ)=ಸಹೋದರಿ. ನನಾಂದೃ (ಸ್ತ್ರೀ)=ಗಂಡನ ಒಡಹುಟ್ಟಿದವಳು, ನಾದಿನಿ. ನಪ್ತ್ರೀ, ಪೌತ್ರೀ, ಸುತಾತ್ಮಜಾ (ಸ್ತ್ರೀ)=ಮಗನ ಅಥವಾ ಮಗಳ ಮಗಳು.

ಪತಿಪತ್ನ್ಯೋಃ ಪ್ರಸೂಃ ಶ್ವಶ್ರೂಃ ಶ್ವಶುರಸ್ತು ಪಿತಾ ತಯೋಃ ।
ಪಿತುರ್ಭ್ರಾತಾ ಪಿತೃವ್ಯಃ ಸ್ಯಾತ್ ಮಾತುರ್ಭ್ರಾತಾ ತು ಮಾತುಲಃ ॥ ೬೦೦
ಶ್ಯಾಲಾಸ್ಸ್ಯುರ್ಭ್ರಾತರಃ ಪತ್ನ್ಯಾಃ ಸ್ವಾಮಿನೋ ದೇವೃದೇವರೌ ।
ಸ್ವಸ್ರೀಯೋ ಭಾಗಿನೇಯಃ ಸ್ಯಾಜ್ಜಾಮಾತಾ ದುಹಿತುಃ ಪತಿಃ ॥ ೬೦೧
ಪಿತಾಮಹಃ ಪಿತೃಪಿತಾ ತತ್ಪಿತಾ ಪ್ರಪಿತಾಮಹಃ ।
ಮಾತುರ್ಮಾತಾಮಹಾದ್ಯೇವಂ ಸಪಿಂಡಾಸ್ತು ಸನಾಭಯಃ ॥ ೬೦೨
ಸಮಾನೋದರ್ಯಸೋದರ್ಯಸಗರ್ಭ್ಯಸಹಜಾಸ್ಸಮಾಃ ।
ಸಗೋತ್ರಬಾಂಧವಜ್ಞಾತಿಬಂಧುಸ್ವಸ್ವಜನಾಸ್ಸಮಾಃ ॥ ೬೦೩

---

೫೯೯. ಯಾತೃ (ಸ್ತ್ರೀ)=ಗಂಡನ ಸೋದರನ ಪತ್ನಿ, ಓರಗಿತ್ತಿ. ಪ್ರಜಾವತೀ, ಭ್ರಾತೃಜಾಯಾ (ಸ್ತ್ರೀ)=ಸೋದರನ ಹೆಂಡತಿ, ಅತ್ತಿಗೆ. ಮಾತುಲಾನೀ, ಮಾತುಲೀ (ಸ್ತ್ರೀ)=ಸೋದರಮಾವನ ಹೆಂಡತಿ.

೬೦೦. ಶ್ವಶ್ರೂ (ಸ್ತ್ರೀ)=ಗಂಡನ ಅಥವಾ ಹೆಂಡತಿಯ ತಾಯಿ, ಅತ್ತೆ, ಶ್ವಶುರ (ಪು)=ಗಂಡನ ಅಥವಾ ಹೆಂಡತಿಯ ತಂದೆ, ಮಾವ. ಪಿತೃವ್ಯ (ಪು)=ತಂದೆಯ ಸೋದರ, ಚಿಕ್ಕಪ್ಪ, ದೊಡ್ಡಪ್ಪ. ಮಾತುಲ(ಪು)=ತಾಯಿಯ ಸಹೋದರ, ಸೋದರಮಾವ.

೬೦೧. ಶ್ಯಾಲ (ಸ್ಯಾಲ) (ಪು)= ಹೆಂಡತಿಯ ಸೋದರ. ದೇವೃ, ದೇವರ[1] (ಪು)=ಗಂಡನ ಸೋದರ, ಮೈದುನ. ಸ್ವಸ್ರೀಯ, ಭಾಗಿನೇಯ (ಪು)=ಸೋದರಿಯ ಮಗ, ಸೋದರಳಿಯ. ಜಾಮಾತೃ (ಪು)=ಮಗಳ ಗಂಡ, ಅಳಿಯ.

೬೦೨. ಪಿತಾಮಹ (ಪು)=ತಂದೆಯ ತಂದೆ, ಅಜ್ಜ. ಪ್ರಪಿತಾಮಹ (ಪು)=ಅಜ್ಜನ ತಂದೆ, ಮುತ್ತಜ್ಜ. ಮಾತಾಮಹ (ಪು)=ತಾಯಿಯ ತಂದೆ. ಪ್ರಮಾತಾಮಹ (ಪು)=ಮಾತಾಮಹನ ತಂದೆ. ಸಪಿಂಡ, ಸನಾಭಿ (ಪು)=ಮೂಲಪುರುಷನಿಂದ ಏಳು ತಲೆಯವರೆಗಿನ ಜ್ಞಾತಿ, ದಾಯಾದಿ.

೬೦೩. ಸಮಾನೋದರ್ಯ, ಸೋದರ್ಯ,[2] ಸಗರ್ಭ್ಯ, ಸಹಜ (ಪು)=ಸಹೋದರ. ಸಗೋತ್ರ, ಬಾಂಧವ, ಜ್ಞಾತಿ, ಬಂಧು, ಸ್ವ, ಸ್ವಜನ (ಪು)=ಒಂದೇ ಕುಲದಲ್ಲಿ ಹುಟ್ಟಿದವನು ; ನೆಂಟ.

---

[1] ದೇವನ್ ಎಂಬ ನಕಾರಾಂತವೂ ಇದೆ.

[2] ಸಹೋದರ, ಸೋದರ ಶಬ್ದಗಳೂ ಇವೆ.

ಜ್ಞಾತೇಯಂ ಬಂಧುತಾ ತೇಷಾಂ ಕ್ರಮಾದ್ಭಾವಸಮೂಹಯೋಃ ।
ಧವಃ ಪ್ರಿಯಃ ಪತಿರ್ಭರ್ತಾ ಜಾರಸ್ತೂಪಪತಿಸ್ಸಮೌ ॥ ೬೦೪
ಅಮೃತೇ ಜಾರಜಃ ಕುಂಡೋ ಮೃತೇ ಭರ್ತರಿ ಗೋಲಕಃ ।
ಭ್ರಾತ್ರೀಯೋ ಭ್ರಾತೃಜೋ ಭ್ರಾತೃಭಗಿನ್ಯೌ ಭ್ರಾತರಾವುಭೌ ॥ ೬೦೫
ಮಾತಾಪಿತರೌ ಪಿತರೌ ಮಾತರಪಿತರೌ ಪ್ರಸೂಜನಯಿತಾರೌ ।
ಶ್ವಶ್ರೂಶ್ವಶುರೌ ಶ್ವಶುರೌ ಪುತ್ರೌ ಪುತ್ರಶ್ಚ ದುಹಿತಾ ಚ ॥ ೬೦೬
ದಂಪತೀ ಜಂಪತೀ ಜಾಯಾಪತೀ ಭಾರ್ಯಾಪತೀ ಚ ತೌ ।
ಗರ್ಭಾಶಯೋ ಜರಾಯುಃ ಸ್ಯಾದುಲ್ಬಂ ಚ ಕಲಲೋಽಸ್ತ್ರಿಯಾಮ್ ॥ ೬೦೭
ಸೂತಿಮಾಸೋ ವೈಜನನೋ ಗರ್ಭೋ ಭ್ರೂಣ ಇಮೌ ಸಮೌ ।
ತೃತೀಯಾ ಪ್ರಕೃತಿಃ ಷಂಡಃ ಕ್ಲೀಬಃ ಪಂಡೋ ನಪುಂಸಕಮ್ ॥ ೬೦೮

---

೬೦೪. ಜ್ಞಾತೇಯ (ನ)=ನೆಂಟತನ, ಬಾಂಧವ್ಯ. ಬಂಧುತಾ[1] (ಸ್ತ್ರೀ)=ಬಂಧುಗಳ ಸಮೂಹ. ಧವ, ಪ್ರಿಯ, ಪತಿ, ಭರ್ತೃ (ಪು)=ಗಂಡ. ಜಾರ, ಉಪಪತಿ (ಪು)=ಮಿಂಡ.

೬೦೫. ಕುಂಡ (ಪು)=ಗಂಡನಿರುವಾಗ ವ್ಯಭಿಚಾರದಿಂದ ಹುಟ್ಟಿದವನು. ಗೋಲಕ (ಪು)=ಗಂಡನು ಸತ್ತಮೇಲೆ ವ್ಯಭಿಚಾರದಿಂದ ಹುಟ್ಟಿದವನು. ಭ್ರಾತ್ರೀಯ, ಭ್ರಾತೃಜ (ಪು)=ಸೋದರನ ಮಗ. ಭ್ರಾತೃಭಗಿನೀ (ಸ್ತ್ರೀ), ಭ್ರಾತೃ (ಪು)=(ಈ ಎರಡು ಶಬ್ದಗಳೂ ದ್ವಿವಚನ ಅಥವಾ ಬಹುವಚನದಲ್ಲಿರುವಾಗ) ಸೋದರ ಸೋದರಿಯರು, ಅಣ್ಣತಂಗಿಯರು, ಅಕ್ಕತಮ್ಮಂದಿರು.

೬೦೬. ಮಾತಾಪಿತೃ, ಪಿತೃ, ಮಾತರಪಿತೃ (ಪು. ದ್ವಿವಚನ ಅಥವಾ ಬಹುವಚನ)=ತಂದೆ ತಾಯಿಗಳು. ಶ್ವಶ್ರೂಶ್ವಶುರ, ಶ್ವಶುರ (ಪು. ದ್ವಿವಚನ ಅಥವಾ ಬಹುವಚನ)=ಅತ್ತೆ ಮಾವಂದಿರು. ಪುತ್ರ (ಪು. ದ್ವಿವಚನ ಅಥವಾ ಬಹುವಚನ)=ಮಗ ಮತ್ತು ಮಗಳು.

೬೦೭. ದಂಪತಿ, ಜಂಪತಿ, ಜಾಯಾಪತಿ, ಭಾರ್ಯಾಪತಿ (ಪು.) (ಸ್ವಾಭಾವಿಕವಾಗಿ ದ್ವಿವಚನ. ಅನೇಕ ದಂಪತಿಗಳು ಎಂಬ ಅರ್ಥದಲ್ಲಿ ಬಹುವಚನವೂ ಬರಬಹುದು)=ಗಂಡ ಹೆಂಡಿರು, ದಂಪತಿಗಳು. ಗರ್ಭಾಶಯ, ಜರಾಯು (ಪು), ಉಲ್ಬ (ನ)=ಗರ್ಭವನ್ನು ಸುತ್ತಿರುವ ಚೀಲ, ಮಾಸು. ಕಲಲ (ಪು. ನ)=ಗರ್ಭದ ಪ್ರಥಮಾವಸ್ಥೆ, ಶುಕ್ಲಶೋಣಿತಗಳ ಸಂಪಾತ.

---

[1] ಇದಕ್ಕೆ ಬಾಂಧವ್ಯ, ನೆಂಟತನ ಎಂಬ ಅರ್ಥವೂ ಇದೆ.

ಶಿಶುತ್ವಂ ಶೈಶವಂ ಬಾಲ್ಯಂ ತಾರುಣ್ಯಂ ಯೌವನಂ ಸಮೇ ।
ಸ್ಯಾತ್‌ಸ್ಥಾವಿರಂ ತು ವೃದ್ಧತ್ವಂ ವೃದ್ಧಸಂಘೇಽಪಿ ವಾರ್ಧಕಮ್ ॥ ೬೦೯
ಪಲಿತಂ ಜರಸಾ ಶೌಕ್ಲ್ಯಂ ಕೇಶಾದೌ ವಿಸ್ರಸಾ ಜರಾ ।
ಸ್ಯಾದುತ್ತಾನಶಯಾ ಡಿಂಭಾ ಸ್ತನಪಾ ಚ ಸ್ತನಂಧಯೀ ॥ ೬೧೦
ಬಾಲಸ್ತು ಸ್ಯಾನ್ಮಾಣವಕೋ ವಯಸ್ಥಸ್ತರುಣೋ ಯುವಾ ।
ಪ್ರವಯಾಃ ಸ್ಥವಿರೋ ವೃದ್ಧೋ ಜೀನೋ ಜೀರ್ಣೋ ಜರನ್ನಪಿ ॥ ೬೧೧
ವರ್ಷೀಯಾನ್ ದಶಮೀ ಜ್ಯಾಯಾನ್ ಪೂರ್ವಜಸ್ತ್ವಗ್ರಿಯೋಽಗ್ರಜಃ ।
ಜಘನ್ಯಜೇ ಸ್ಯುಃ ಕನಿಷ್ಠಯವೀಯೋಽವರಜಾನುಜಾಃ ॥ ೬೧೨

---

೬೦೮. ಸೂತಿಮಾಸ, ವೈಜನನ (ಪು)=ಹೆರಿಗೆಯ ತಿಂಗಳು. ಗರ್ಭ, ಭ್ರೂಣ (ಪು)=ಗರ್ಭ. ತೃತೀಯಪ್ರಕೃತಿ (ಸ್ತ್ರೀ), ಷಂಡ,[1] ಕ್ಲೀಬ, ಪಂಡ (ಪು), ನಪುಂಸಕ[2] (ನ)=ನಪುಂಸಕ.

೬೦೯. ಶಿಶುತ್ವ, ಶೈಶವ, ಬಾಲ್ಯ (ನ)=ಹುಡುಗತನ. ತಾರುಣ್ಯ, ಯೌವನ (ನ)=ಪ್ರಾಯ. ಸ್ಥಾವಿರ, ವೃದ್ಧತ್ವ, ವಾರ್ಧಕ[3] (ನ)=ಮುಪ್ಪು. ವಾರ್ಧಕ (ನ)=ಮುದುಕರ ಗುಂಪು.

೬೧೦. ಪಲಿತ (ನ)=ಮುಪ್ಪಿನಿಂದಾದ ಕೂದಲಿನ ಬಿಳುಪು, ನರೆ. ವಿಸ್ರಸಾ, ಜರಾ (ಸ್ತ್ರೀ)=ಬಹಳ ಮುಪ್ಪು. ಉತ್ತಾನಶಯಾ, ಡಿಂಭಾ, ಸ್ತನಪಾ, ಸ್ತನಂಧಯೀ (ಸ್ತ್ರೀ)=ಹೆಣ್ಣು ಶಿಶು, ಎಳೆಯ ಮಗು. (ಮುಂದೆ ೬೧೮ನೆಯ ಶ್ಲೋಕದಲ್ಲಿ 'ತ್ರಿಷು ಜರಾವರಾ' ಎಂದು ಹೇಳಿರುವುದರಿಂದ ಉತ್ತಾನಶಯಾ ಮುಂತಾದ ಶಬ್ದಗಳು ವಿಶೇಷ್ಯನಿಘ್ನವಾಗಿ ಮೂರು ಲಿಂಗಗಳಲ್ಲಿಯೂ ಇರುತ್ತವೆ. ಉದಾ : ಉತ್ತಾನಶಯಃ ಪುತ್ರಃ, ಉತ್ತಾನಶಯಾ ಪುತ್ರೀ, ಉತ್ತಾನಶಯಮಪತ್ಯಮ್. ಉತ್ತಾನಶಯ, ಡಿಂಭ, ಸ್ತನಪ, ಸ್ತನಂಧಯ (ಪು) ನಪುಂಸಕದಲ್ಲಿ ಪುಲ್ಲಿಂಗ ಪ್ರಕೃತಿರೂಪಗಳೇ ಇರುತ್ತವೆ.)

೬೧೧. ಬಾಲ, ಮಾಣವಕ (ಪು) (-ಸ್ತ್ರೀ. ಮಾಣವಿಕಾ)=ಹುಡುಗ. ವಯಸ್ಥ, ತರುಣ, ಯುವನ್ (ಪು) (-ಸ್ತ್ರೀ. ತರುಣೀ, ಯುವತಿ)=ಯುವಕ. ಪ್ರವಯಸ್,. ಸ್ಥವಿರ, ವೃದ್ಧ, ಜೀನ, ಜೀರ್ಣ, ಜರತ್ (ಪು) (- ಸ್ತ್ರೀ. ಜರತೀ)=ಮುದುಕ.

೬೧೨. ವರ್ಷೀಯಸ್, ದಶಮಿನ್, ಜ್ಯಾಯಸ್ (ಪು) (ಸ್ತ್ರೀ. ವರ್ಷೀಯಸೀ, ದಶಮಿನೀ,

---

[1] ಶಂಡ, ಶಂಢ ಎಂಬ ರೂಪಗಳೂ ಇವೆ.

[2] ಇದು ಪುಲ್ಲಿಂಗದಲ್ಲಿಯೂ ಇದೆ.

[3] ವಾರ್ಧಕ್ಯ ಎಂಬ ಶಬ್ದವೂ ಇದೆ.

ಅಮಾಂಸೋ ದುರ್ಬಲಶ್ಛಾತೋ ಬಲವಾನ್ ಮಾಂಸಲೋಽಂಸಲಃ ।
ತುಂದಿಲಸ್ತುಂದಿಭಸ್ತುಂದೀ ಬೃಹತ್ಕುಕ್ಷಿಃ ಪಿಚಂಡಿಲಃ ॥ ೬೧೩
ಅವಟೀಟೋಽವನಾಟಶ್ಚಾವಭ್ರಟೋ ನತನಾಸಿಕೇ ।
ಕೇಶವಃ ಕೇಶಿಕಃ ಕೇಶೀ ವಲಿನೋ ವಲಿಭಸ್ಸಮೌ ॥ ೬೧೪
ವಿಕಲಾಂಗಸ್ತು ಪೋಗಂಡಃ ಖರ್ವೋ ಹ್ರಸ್ವಶ್ಚ ವಾಮನಃ ।
ಖರಣಾಸ್ಸ್ಯಾತ್ಖರಣಸೋ ವಿಗ್ರಸ್ತು ಗತನಾಸಿಕಃ ॥ ೬೧೫
ಖುರಣಾಸ್ಸ್ಯಾತ್ಖುರಣಸಃ ಪ್ರಜ್ಞುಃ ಪ್ರಗತಜಾನುಕಃ ।
ಊರ್ಧ್ವಜ್ಞುರೂರ್ಧ್ವಜಾನುಃ ಸ್ಯಾತ್ ಸಂಜ್ಞುಸ್ಸಂಹತಜಾನುಕಃ ॥ ೬೧೬

ಜ್ಯಾಯಸೀ)=ಹಣ್ಣುಮುದುಕ. ಪೂರ್ವಜ, ಅಗ್ರಿಯ, ಅಗ್ರಜ (ಪು)=ಹಿರಿಯ ಸೋದರ, ಅಣ್ಣ. ಜಘನ್ಯಜ, ಕನಿಷ್ಠ, ಯವೀಯಸ್, ಅವರಜ, ಅನುಜ (ಪು) (-ಸ್ತ್ರೀ. ಯವೀಯಸೀ)= ಕಿರಿಯಸೋದರ, ತಮ್ಮ.

೬೧೩. ಅಮಾಂಸ, ದುರ್ಬಲ, ಛಾತ (ಪು)=ಬಡಕಲು ಮೈಯವನು, ಅಶಕ್ತ. ಬಲವತ್, ಮಾಂಸಲ, ಅಂಸಲ (ಪು) (-ಸ್ತ್ರೀ. ಬಲವತೀ)=ದೇಹಪುಷ್ಟಿಯುಳ್ಳವನು, ಬಲಶಾಲಿ. ತುಂದಿಲ, ತುಂದಿಭ, (ತುಂದಿಕ), ತುಂದಿನ್, ಬೃಹತ್ಕುಕ್ಷಿ, ಪಿಚಂಡಿಲ (ಪಿಚಿಂಡಿಲ) (ಪು.) (ಸ್ತ್ರೀ.- ತುಂದಿನೀ)=ಡೊಳ್ಳುಹೊಟ್ಟೆಯವನು.

೬೧೪. ಅವಟೀಟ, ಅವನಾಟ, ಅವಭ್ರಟ, ನತನಾಸಿಕ (ಪು)=ಚಪ್ಪಟೆ ಮೂಗುಳ್ಳವನು. ಕೇಶವ, ಕೇಶಿಕ, ಕೇಶಿನ್ (ಪು) (—ಸ್ತ್ರೀ. ಕೇಶಿನೀ)=ಸುಂದರವಾದ ತಲೆ ಕೂದಲುಳ್ಳವನು. ವಲಿನ, ವಲಿಭ (ಪು)=ಸುಕ್ಕುಗಟ್ಟಿದ ಚರ್ಮ ಉಳ್ಳವನು.

೬೧೫. ವಿಕಲಾಂಗ, ಪೋಗಂಡ[1] (ಪು) (ಸ್ತ್ರೀ. ವಿಕಲಾಂಗೀ, ವಿಕಲಾಂಗಾ)=ಅಂಗಹೀನ. ಖರ್ವ, ಹ್ರಸ್ವ, ವಾಮನ (ಪು)=ಕುಳ್ಳ. ಖರಣಸ್, ಖರಣಸ (ಪು)=ಚೂಪಾದ ಮೂಗುಳ್ಳವನು, ಗಿಣಿಮೂಗ. ವಿಗ್ರ[2], ಗತನಾಸಿಕ (ಪು)=ಮೂಗಿಲ್ಲದವನು.

೬೧೬. ಖುರಣಸ್, ಖುರಣಸ (ಪು)=ಗೊರಸಿನಂತಹ ಮೂಗುಳ್ಳವನು, ಚಪ್ಪಟೆಮೂಗ. ಪ್ರಜ್ಞು, ಪ್ರಗತಜಾನುಕ (ಪು)=ಒಂದಕ್ಕೊಂದು ದೂರವಾದ ಮೊಳಕಾಲುಳ್ಳವನು, ಕಿಸಿಗಾಲಿನವನು. ಊರ್ಧ್ವಜ್ಞು, ಊರ್ಧ್ವಜಾನು(ಪು)=ಉದ್ದವಾದ ಮೊಳಕಾಲುಳ್ಳವನು, ಮಾರುಗಾಲಿನವನು. ಸಂಜ್ಞು, ಸಂಹತಜಾನುಕ (ಪು)=ಒಂದಕ್ಕೊಂದು ತಗಲುವ ಮೊಣಕಾಲುಳ್ಳವನು.

---

[1] ಅಪೋಗಂಡ ಎಂಬ ರೂಪಾಂತರವೂ, ಬಾಲಕ ಎಂಬ ಅರ್ಥಾಂತರವೂ ಉಂಟು.
[2] ವಿಖ್ಯ ಎಂಬ ರೂಪಾಂತರವೂ ಉಂಟು.

ಸ್ಯಾದೇಡೇ ಬಧಿರಃ ಕುಬ್ಜೇ ಗಡುಲಃ ಕುಕರೇ ಕುಣಿಃ ।
ಪೃಶ್ನಿರಲ್ಪತನೌ ಶ್ರೋಣಃ ಪಂಗೌ ಮುಂಡಸ್ತು ಮುಂಡಿತೇ ॥ ೬೧೭
ವಲಿರಃ ಕೇಕರೇ ಖೋಡೇ ಖಂಜಸ್ತ್ರಿಷು ಜರಾವರಾಃ ।
ಜಟುಲಃ ಕಾಲಕಃ ಪಿಪ್ಲುಸ್ತಿಕಸ್ತಿಲಕಾಲಕಃ ॥ ೬೧೮
ಅನಾಮಯಂ ಸ್ಯಾದಾರೋಗ್ಯಂ ಚಿಕಿತ್ಸಾ ರುಕ್ಪ್ರತಿಕ್ರಿಯಾ ।
ಭೇಷಜೌಷಧಭೈಷಜ್ಯಾನ್ಯಗದೋ ಜಾಯುರಿತ್ಯಪಿ ॥ ೬೧೯
ಸ್ತ್ರೀ ರುಗ್ರುಜಾ ಚೋಪತಾಪರೋಗವ್ಯಾಧಿಗದಾಮಯಾಃ ।
ಕ್ಷಯಃ ಶೋಷಶ್ಚ ಯಕ್ಷ್ಮಾ ಚ ಪ್ರತಿಶ್ಯಾಯಸ್ತು ಪೀನಸಃ ॥ ೬೨೦

---

೬೧೭. ಏಡ, ಬಧಿರ (ಪು)=ಕಿವುಡ. ಕುಬ್ಜ, ಗಡುಲ (ಪು)=ಗೂನುಬೆನ್ನಿನವ, ಗುಜ್ಜಾರಿ. ಕುಕರ, ಕುಣಿ[1] (ಪು)=ಕೈ ಇಲ್ಲದವನು ; ಸೊಟ್ಟ ಕೈಯವನು. ಪೃಶ್ನಿ, ಅಲ್ಪತನು (ಪು)=ಚಿಕ್ಕ ಮೈಕಟ್ಟುಳ್ಳವನು. ಶ್ರೋಣ, ಪಂಗು (ಪು) (-ಸ್ತ್ರೀ. ಪಂಗೂ)=ಕುಂಟ. ಮುಂಡ, ಮುಂಡಿತ (ಪು)= ಕೂದಲನ್ನು ಬೋಳಿಸಿಕೊಂಡ ತಲೆಯವನು.

೬೧೮. ವಲಿರ, ಕೇಕರ (ಪು)=ಮೆಳ್ಳುಗಣ್ಣಿನವನು. ಖೋಡ, ಖಂಜ (ಪು)=ಹೆಳವ, ಕಾಲಿಲ್ಲದವನು. ೬೧೧ನೆಯ ಶ್ಲೋಕದ ಉತ್ತಾನಶಯ ಶಬ್ದದಿಂದ ಖಂಜ ಶಬ್ದದವರೆಗಿರುವ ಶಬ್ದಗಳು ಮೂರು ಲಿಂಗಗಳಲ್ಲಿಯೂ ಅರ್ಥಾನುಸಾರವಾಗಿ ಬರುತ್ತವೆ. ಜಟುಲ (ಜಡುಲ), ಕಾಲಕ, ಪಿಪ್ಲು, ತಿಲಕ, ತಿಲಕಾಲಕ (ಪು)=ದೇಹದಮೇಲಿರುವ ಕರಿಯ ಮಚ್ಚೆ.

೬೧೯. ಅನಾಮಯ, ಆರೋಗ್ಯ (ನ)=ಆರೋಗ್ಯ. ಚಿಕಿತ್ಸಾ, ರುಕ್ಪ್ರತಿಕ್ರಿಯಾ (ಸ್ತ್ರೀ)=ರೋಗದ ಚಿಕಿತ್ಸೆ. ಭೇಷಜ, ಔಷಧ, ಭೈಷಜ್ಯ (ನ), ಅಗದ, ಜಾಯು (ಪು)=ಔಷಧ, ಮದ್ದು.

೬೨೦. ರುಜ್, ರುಜಾ, (ಸ್ತ್ರೀ), ಉಪತಾಪ, ರೋಗ, ವ್ಯಾಧಿ, ಗದ, ಆಮಯ (ಪು)=ರೋಗ, ಕಾಹಿಲೆ. ಕ್ಷಯ, ಶೋಷ, ಯಕ್ಷ್ಮನ್ (ಪು)=ಕ್ಷಯರೋಗ. ಪ್ರತಿಶ್ಯಾ[2]ಯ, ಪೀನಸ (ಪು)=ನೆಗಡಿ. (ವೈದ್ಯಶಾಸ್ತ್ರದಲ್ಲಿ ಪೀನಸವೆಂದರೆ ಮೂಗಿನ ಒಂದು ರೋಗ ಭೇದ).

---

[1] ಕೂಣಿ ಎಂಬ ರೂಪಾಂತರವೂ ಇದೆ.

[2] ಪ್ರತಿಶ್ಯಾ ಎಂಬ ಆಕಾರಾಂತವೂ ಇದೆ.

ಸ್ತ್ರೀಕ್ಷುತ್ಕ್ಷುತಂ ಕ್ಷವಃ ಪುಂಸಿ ಕಾಸಸ್ತು ಕ್ಷವಥುಃ ಪುಮಾನ್ ।
ಶೋಫಸ್ತು ಶ್ವಯಥುಶ್ಶೋಥಃ ಪಾದಸ್ಫೋಟೋ ವಿಪಾದಿಕಾ ॥ ೬೨೧
ಕಿಲಾಸಸಿಧ್ಮೇ ಕಚ್ಛ್ವಾಂ ತು ಪಾಮಪಾಮೇ ವಿಚರ್ಚಿಕಾ ।
ಕಂಡೂಃ ಖರ್ಜೂಶ್ಚ ಕಂಡೂಯಾ ವಿಸ್ಫೋಟಃ ಪಿಟಕಸ್ತ್ರಿಷು ॥ ೬೨೨
ವ್ರಣೋಽಸ್ತ್ರಿಯಾಮೀರ್ಮಮರುಃ ಕ್ಲೀಬೇ ನಾಡೀವ್ರಣಃ ಪುಮಾನ್ ।
ಕೋಠೋ ಮಂಡಲಕಂ ಕುಷ್ಠಶ್ವಿತ್ರೇ ದುರ್ನಾಮಕಾರ್ಶಸೀ ॥ ೬೨೩
ಆನಾಹಸ್ತು ನಿಬಂಧಃ ಸ್ಯಾತ್ ಗ್ರಹಣೀ ರುಕ್ಪ್ರವಾಹಿಕಾ ।
ಪ್ರಚ್ಛರ್ದಿಕಾ ವಮಿಶ್ಚ ಸ್ತ್ರೀ ಪುಮಾಂಸ್ತು ವಮಥುಃ ಸಮಾಃ ॥ ೬೨೪
ವ್ಯಾಧಿಭೇದಾ ವಿದ್ರಧಿಃ ಸ್ತ್ರೀ ಜ್ವರಮೇಹಭಗಂದರಾಃ ।
ಅಶ್ಮರೀ ಮೂತ್ರಕೃಚ್ಛ್ರಂ ಸ್ಯಾತ್ ಪೂರ್ವೇ ಶುಕ್ರಾವಧೇಸ್ತ್ರಿಷು ॥ ೬೨೫

---

೬೨೧. ಕ್ಷುತ್ (ಸ್ತ್ರೀ), ಕ್ಷುತ (ನ), ಕ್ಷವ (ಪು)=ಶೀನು (Sneezing). ಕಾಸ ಕ್ಷವಥು (ಪು)=ಕೆಮ್ಮು. ಶೋಫ, ಶ್ವಯಥು, ಶೋಥ (ಪು)=ಊತ (Swelling). ಪಾದಸ್ಫೋಟ (ಪು), ವಿಪಾದಿಕಾ (ಸ್ತ್ರೀ) ಕಾಲೊಡೆಯುವುದು, ಕಾಲುಬಿರಿತ.

೬೨೨. ಕಿಲಾಸ, ಸಿಧ್ಮ (ನ)=ಚಿಬ್ಬು, ಬಿಳಿಯ ಚಿಬ್ಬು (Scab). ಕಚ್ಛೂ (ಸ್ತ್ರೀ), ಪಾಮನ್ (ನ), ಪಾಮಾ, ವಿಚರ್ಚಿಕಾ (ಸ್ತ್ರೀ)=ಕಜ್ಜಿ. ಕಂಡೂ, ಖರ್ಜೂ, ಕಂಡೂಯಾ (ಸ್ತ್ರೀ)=ನವೆ (Itching). ವಿಸ್ಫೋಟ (ಪು), ಪಿಟಕ (ಪು. ಸ್ತ್ರೀ. ನ)=ಕುರು ; ಗುಳ್ಳೆ.

೬೨೩. ವ್ರಣ (ಪು. ನ), ಈರ್ಮ, ಅರುಸ್ (ನ)=ಗಾಯ, ಹುಣ್ಣು. ನಾಡೀವ್ರಣ (ಪು)=ನಾರು ಹುಣ್ಣು. ಕೋಠ (ಪು),ಮಂಡಲಕ (ನ)=ಮಂಡಲಾಕಾರವಾಗಿ ಏಳುವ ಚರ್ಮವ್ಯಾಧಿ, ಹುಳುಕಡ್ಡಿ, ತದ್ದು. ಕುಷ್ಠ, ಶ್ವಿತ್ರ (ನ)=ತೊನ್ನು. ದುರ್ನಾಮಕ, ಅರ್ಶಸ್ (ನ)=ಮೂಲವ್ಯಾಧಿ, ಮೊಳೆರೋಗ.

೬೨೪. ಆನಾಹ, ನಿಬಂಧ (ವಿಬಂಧ) (ಪು)=ಮಲಮೂತ್ರಗಳು ಕಟ್ಟಿಕೊಳ್ಳುವುದು. ಗ್ರಹಣೀ, ಪ್ರವಾಹಿಕಾ (ಸ್ತ್ರೀ)=ಅತಿಸಾರ (Diarrhoea). ಪ್ರಚ್ಛರ್ದಿಕಾ, ವಮಿ (ಸ್ತ್ರೀ), ವಮಥು (ಸ್ತ್ರೀ)=ವಾಂತಿರೋಗ.

೬೨೫. ವಿದ್ರಧಿ (ಸ್ತ್ರೀ)=ಬಾವು, (Abscess). ಜ್ವರ (ಪು)=ಜ್ವರ. ಮೇಹ (ಪು)=ಮೇಹ ರೋಗ. ಭಗಂದರ (ಪು)=ಗುದದ್ವಾರದಲ್ಲಿ ಸಂಭವಿಸುವ ಒಂದು ವ್ರಣ. ಅಶ್ಮರೀ (ಸ್ತ್ರೀ), ಮೂತ್ರಕೃಚ್ಛ್ರ (ನ)=ಮೂತ್ರರೋಗ (Stone in the bladder) ಇಲ್ಲಿಂದ ಮುಂದೆ

ರೋಗಹಾರ್ಯಗಂದಕಾರೋ ಭಿಷಗ್ವೈದ್ಯಶ್ಚಿಕಿತ್ಸಕೇ ।
ವಾರ್ತೋ ನಿರಾಮಯಃ ಕಲ್ಯಉಲ್ಲಾಘೋ ನಿರ್ಗತೋ ಗದಾತ್ ॥ ೬೨೬
ಗ್ಲಾನಗ್ಲಾಸ್ನೂ ಆಮಯಾವೀ ವಿಕೃತೋ ವ್ಯಾಧಿತೋಽಪಟುಃ ।
ಆತುರೋಽಭ್ಯಮಿತೋಽಭ್ಯಾಂತಃ ಸಮೌ ಪಾಮನಕಚ್ಛುರೌ ॥ ೬೨೭
ದದ್ರುಣೋ ದದ್ರುರೋಗೀ ಸ್ಯಾದರ್ಶೋರೋಗಯುತೋಽರ್ಶಸಃ ।
ವಾತಕೀ ವಾತರೋಗೀ ಸ್ಯಾತ್ಸಾತಿಸಾರೋಽತಿಸಾರಕೀ ॥ ೬೨೮
ಸ್ಯುಃ ಕ್ಲಿನ್ನಾಕ್ಷೇ ಚುಲ್ಲಚಿಲ್ಲಿಪಿಲ್ಲಾಃ ಕ್ಲಿನ್ನೇಽಕ್ಷ್ಣಿ ಚಾಪ್ಯಮೀ ।
ಉನ್ಮತ್ತ ಉನ್ಮಾದವತಿ ಶ್ಲೇಷ್ಮಲಃ ಶ್ಲೇಷ್ಮಣಃ ಕಫೀ ॥ ೬೨೯
ನ್ಯುಬ್ಜೋ ಭುಗ್ನೇ ರುಜಾ ವೃದ್ಧನಾಭೌ ತುಂಡಿಲ ತುಂಡಿಭೌ ।
ಕಿಲಾಸೀ ಸಿಧ್ಮಲೋಽಂಽಧೋಽದೃಙ್ಮೂರ್ಛಾಲೇ ಮೂರ್ತಮೂರ್ಛಿತೌ ॥

೬೩೧ನೆಯ ಶ್ಲೋಕದ ಶುಕ್ರ ಶಬ್ದದವರೆಗೆ-ಮೂರ್ಛಿತ ಶಬ್ದ ಪರ್ಯಂತ- ಶಬ್ದಗಳು ಅರ್ಥಾನುಸಾರವಾಗಿ ಮೂರು ಲಿಂಗಗಳಲ್ಲಿಯೂ ಇರುತ್ತವೆ.

೬೨೬. ರೋಗಹಾರಿನ್, ಅಗದಂಕಾರ, ಭಿಷಜ್, ವೈದ್ಯ, ಚಿಕಿತ್ಸಕ (ಪು) (-ಸ್ತ್ರೀ. ರೋಗಹಾರಿಣೀ, ಅಗದಂಕಾರೀ, ಚಿಕಿತ್ಸಿಕಾ)=ವೈದ್ಯ. ವಾರ್ತ, ನಿರಾಮಯ, ಕಲ್ಯ, ಉಲ್ಲಾಘ, (ಪ)=ಆರೋಗ್ಯಶಾಲಿ.

೬೨೭. ಗ್ಲಾನ, ಗ್ಲಾಸ್ನು (ಪು)=ರೋಗದಿಂದ ದುರ್ಬಲನಾದವನು. ಆಮಯಾವಿನ್, ವಿಕೃತ, ವ್ಯಾಧಿತ, ಅಪಟು, ಆತುರ, ಅಭ್ಯಮಿತ, ಅಭ್ಯಾಂತ (ಪು) (-ಸ್ತ್ರೀ. ಆಮಯಾವಿನೀ, ಅಪಟು-ಅಪಟ್ವೀ)=ರೋಗಿ. ಪಾಮನ, ಕಚ್ಛುರ (ಪು)=ಕಜ್ಜಿಯುಳ್ಳವನು, ಕಜ್ಜಿಬುರುಕ.

೬೨೮. ದದ್ರುಣ (ಪು)=ತದ್ದುರೋಗಿ. ಅರ್ಶಸ (ಪು)=ಮೂಲವ್ಯಾಧಿಯುಳ್ಳವನು. ಪಾತಕಿನ್ (ಪು) (-ಸ್ತ್ರೀ. ವಾತಕಿನೀ)=ವಾತರೋಗಿ. ಅತಿಸಾರಕಿನ್ (ಪು) (-ಸ್ತ್ರೀ. ಅತಿ ಸಾರಕಿನೀ)=ಅತಿಸಾರರೋಗ ಉಳ್ಳವನು.

೬೨೯. ಚುಲ್ಲ, ಚಿಲ್ಲ, ಪಿಲ್ಲ (ಪು)=ನೀರು ಸುರಿಯುವ ಕಣ್ಣುಳ್ಳವನು ; ನೀರು ಸುರಿಯುವ ಕಣ್ಣು. ಉನ್ಮತ್ತ, ಉನ್ಮಾದವತ್ (ಪು) (-ಸ್ತ್ರೀ. ಉನ್ಮಾದವತೀ)=ಹುಚ್ಚ. ಶ್ಲೇಷ್ಮಲ, ಶ್ಲೇಷ್ಮಣ, ಕಫಿನ್ (ಪು) (-ಸ್ತ್ರೀ. ಕಫಿನೀ)=ಕಫರೋಗಿ.

೬೩೦. ನ್ಯುಬ್ಜ (ಪು)=ವಾತ ಮುಂತಾದ ರೋಗದಿಂದ ಬಗ್ಗಿದವನು. ತುಂಡಿಲ, ತುಂಡಿಭ (ಪು) ದೊಡ್ಡ ಹೊಕ್ಕಳುಳ್ಳವನು. ಕಿಲಾಸಿನ್, ಸಿಧ್ಮಲ (ಪು) (ಸ್ತ್ರೀ. ಕಿಲಾಸಿನೀ)=ಚಿಬ್ಬು

ಶುಕ್ರಂ ತೇಜೋರೇತಸೀ ಚ ಬೀಜವೀರ್ಯೇಂದ್ರಿಯಾಣಿ ಚ ।
ಮಾಯುಃ ಪಿತ್ತಂ ಕಫಃ ಶ್ಲೇಷ್ಮಾ ಸ್ತ್ರಿಯಾಂ ತು ತ್ವಗಸೃಗ್ಧರಾ ॥ ೬೩೧
ಪಿಶಿತಂ ತರಸಂ ಮಾಂಸಂ ಪಲಲಂ ಕ್ರವ್ಯಮಾಮಿಷಮ್ ।
ಉತ್ತಪ್ತಂ ಶುಷ್ಕಮಾಂಸಂ ಸ್ಯಾತ್ತದ್ವಲ್ಲೂರಂ ತ್ರಿಲಿಂಗಕಮ್ ॥ ೬೩೨
ರುಧೀರೇಽಸೃಗ್ಲೋಹಿತಾಸ್ರರಕ್ತಕ್ಷತಜಶೋಣಿತಮ್ ।
ವುಕ್ಕಾಗ್ರಮಾಂಸಂ ಹೃದಯಂ ಹೃನ್ಮೇದಸ್ತು ವಸಾ ವಪಾ ॥ ೬೩೩
ಪಶ್ಚಾದ್ಗ್ರೀವಾ ಸಿರಾ ಮನ್ಯಾ ನಾಡೀ ತು ಧಮನಿಸ್ಸಿರಾ ।
ತಿಲಕಂ ಕ್ಲೋಮ ಮಸ್ತಿಷ್ಕಂ ಗೋರ್ದಂ ಕಿಟ್ಟಂ ಮಲೋಽಸ್ತ್ರಿಯಾಮ್ ॥ ೬೩೪

ಹಿಡಿದವನು. ಅಂಧ, ಅದೃಶ್ (ಪು)=ಕುರುಡ. ಮೂರ್ಛಾಲ, ಮೂರ್ತ, ಮೂರ್ಛಿತ (ಪು)=ಮೂರ್ಛೆರೋಗ ಉಳ್ಳವನು ; ಮೂರ್ಛೆ ಹೋದವನು.

೬೩೧. ಶುಕ್ರ, ತೇಜಸ್, ರೇತಸ್, ಬೀಜ, ವೀರ್ಯ, ಇಂದ್ರಿಯ (ನ)=ರೇತಸ್ಸು. ಮಾಯು (ಪು) ಪಿತ್ತ (ನ)=ಪಿತ್ತ. ಕಫ, ಶ್ಲೇಷ್ಮನ್ (ಪು)=ಕಫ. ತ್ವಚ್,[1] ಅಸೃಗ್ಧರಾ (ಸ್ತ್ರೀ)=ಚರ್ಮ.

೬೩೨. ಪಿಶಿತ, ತರಸ, ಮಾಂಸ, ಪಲಲ, ಕ್ರವ್ಯ, ಆಮಿಷ[2] (ನ)=ಮಾಂಸ. ಉತ್ತಪ್ತ, ಶುಷ್ಕಮಾಂಸ (ನ), ವಲ್ಲೂರ (ಪು. ಸ್ತ್ರೀ. ನ)=ಒಣಗಿದ ಮಾಂಸ.

೬೩೩. ರುಧಿರ, ಅಸೃಜ್, ಲೋಹಿತ, ಆಸ್ರ, ರಕ್ತ, ಕ್ಷತಜ, ಶೋಣಿತ (ನ)=ರಕ್ತ. ವುಕ್ಕಾ[3] (ಸ್ತ್ರೀ), ಅಗ್ರಮಾಂಸ (ನ) ಎದೆಯ ಭಾಗದಲ್ಲಿರುವ ಮಾಂಸ. ಹೃದಯ, ಹೃದ್ (ನ)=ಎದೆಯ ಕೋಶ (Heart). ವುಕ್ಕಾ ಮುಂತಾದ ನಾಲ್ಕು ಶಬ್ದಗಳೂ ಹೃದಯವಾಚಿಗಳೆಂದು ಕೆಲವರು. ಮೇದ (ಪು),ಮೇದಸ್ (ನ), ವಸಾ (ಸ್ತ್ರೀ)=ಕೊಬ್ಬು. ವಪಾ (ಸ್ತ್ರೀ)=ನಾಭಿಯ ಕೆಳಗೆ ಇರುವ ಪೊರೆ. ವಪೆಯೆಂದರೂ ಕೊಬ್ಬು ಎಂದು ಕೆಲವರು.

೬೩೪. ಮನ್ಯಾ (ಸ್ತ್ರೀ)=ಕತ್ತಿನ ಹಿಂದಿರುವ ರಕ್ತನಾಳ. ನಾಡೀ, ಧಮನಿ (ಧಮನೀ), ಸೀರಾ (ಶಿರಾ) (ಸ್ತ್ರೀ)=ರಕ್ತನಾಳ. ತಿಲಕ, ಕ್ಲೋಮನ್ (ನ)=ಮೂತ್ರಕೋಶ. ಮಸ್ತಿಷ್ಕ, ಗೋರ್ದ (ನ)=ಮೆದುಳು. ಕಿಟ್ಟ (ನ), ಮಲ (ಪು.ನ)=ದೇಹದ ಕೊಳೆ.

---

[1] ತ್ವಚ ಎಂಬ ಅಕಾರಾಂತ ನಪುಂಸಕ ಶಬ್ದವೂ ಉಂಟು.
[2] ಮಾಂಸ, ಆಮಿಷ ಶಬ್ದಗಳು ಪುಲ್ಲಿಂಗದಲ್ಲಿಯೂ ಉಂಟು.
[3] ವೃಕ್ಕಾ, ವೃಕ್ಯಾ (ಸ್ತ್ರೀ), ವುಕ್ಕ, ವೃಕ್ಕ, ವೃಕ್ಯ (ಪು.ನ) ಎಂಬ ರೂಪಾಂತರಗಳೂ ಉಂಟು.

ಅಂತ್ರಂ ಪುರೀತದ್ಗುಲ್ಮಸ್ತು ಪ್ಲೀಹಾ ಪುಂಸ್ಯಥ ವಸ್ನಸಾ ।
ಸ್ನಾಯುಃ ಸ್ತ್ರಿಯಾಂ ಕಾಲಖಂಡಯಕೃತೀ ತು ಸಮೇ ಇಮೇ ॥ ೬೩೫
ಸೃಣಿಕಾ ಸ್ಯಂದಿನೀ ಲಾಲಾ ದೂಷಿಕಾ ನೇತ್ರಯೋರ್ಮಲಮ್ ।
ಮೂತ್ರಂ ಪ್ರಸ್ರಾವ ಉಚ್ಚಾರಾವಸ್ಕರೌ ಶಮಲಂ ಶಕೃತ್ ॥ ೬೩೬
ಪುರೀಷಂ ಗೂಥವರ್ಚಸ್ಕಮಸ್ತ್ರೀ ವಿಷ್ಠಾವಿಷೌ ಸ್ತ್ರಿಯೌ ।
ಸ್ಯಾತ್ಕರ್ಪರಃ ಕಪಾಲೋಽಸೀ ಕೀಕಸಂ ಕುಲ್ಯಮಸ್ಥಿ ಚ ॥ ೬೩೭
ಸ್ಯಾಚ್ಛರೀರಾಸ್ಥ್ನಿ ಕಂಕಾಲಃ ಪೃಷ್ಠಾಸ್ಥ್ನಿ ತು ಕಶೇರುಕಾ ।
ಶಿರೋಽಸ್ಥನಿ ಕರೋಟಿಃ ಸ್ತ್ರೀ ಪಾರ್ಶ್ವಾಸ್ಥನಿ ತು ಪರ್ಶುಕಾ ॥ ೬೩೮
ಅಂಗಂ ಪ್ರತೀಕೋಽವಯವೋಽಪಘನೋಽಥ ಕಲೇವರಮ್ ।
ಗಾತ್ರಂ ವಪುಸ್ಸಂಹನನಂ ಶರೀರಂ ವರ್ಷ್ಮ ವಿಗ್ರಹಃ ॥ ೬೩೯

---

೬೩೫. ಅಂತ್ರ, ಪುರೀತತ್[1] (ನ)=ಕರುಳು. ಗುಲ್ಮ, ಪ್ಲೀಹನ್[2] (ಪು)=ಹೊಟ್ಟೆಯ ಎಡಭಾಗದ ಒಂದು ಮಾಂಸಖಂಡ (Spleen)ವಸ್ನಸಾ, ಸ್ನಾಯು (ಸ್ತ್ರೀ)=ನರ (Tendon) ಕಾಲಖಂಡ, ಯಕೃತ್ (ನ)=ಪಿತ್ತಕೋಶ (Lever)

೬೩೬-೬೩೭. ಸೃಣಿಕಾ, ಸ್ಯಂದಿನೀ, ಲಾಲಾ (ಸ್ತ್ರೀ)=ಜೊಲ್ಲು. ದೂಷಿಕಾ (ಸ್ತ್ರೀ)=ಕಣ್ಣಿನ ಪಿಸಿರು, ಗೀಜು1 ಮೂತ್ರ (ನ), ಪ್ರಸ್ರಾವ (ಪು)=ಮೂತ್ರ. ಉಚ್ಚಾರ, ಅವಸ್ಕರ (ಪು),ಶಮಲ, ಶಕೃತ್, ಪುರೀಷ (ನ), ಗೂಥ, ವರ್ಚಸ್ಕ (ಪು. ನ), ವಿಷ್ಠಾ, ವಿಷ್ (ವಿಶ್) (ಸ್ತ್ರೀ)=ಮಲ, 'ಪಾಯಖಾನೆ.' ಕರ್ಪರ (ಪು),ಕಪಾಲ (ಪು. ನ)= ತಲೆಯ ಚಿಪ್ಪು, ತಲೆ ಮೂಳೆಯ ಅರ್ಧಭಾಗ. ಕೀಕಸ, ಕುಲ್ಯ, ಅಸ್ಥಿ (ನ)=ಮೂಳೆ, ಎಲುಬು.

೬೩೮. ಕಂಕಾಲ (ಪು)=ಮೈಯೆಲುಬು, ಅಸ್ಥಿಪಂಜರ (Skeleton) ಕಶೇರುಕಾ (ಸ್ತ್ರೀ)=ಬೆನ್ನುಮೂಳೆ. ಕರೋಟ (ಸ್ತ್ರೀ)=ತಲೆಮೂಳೆ (Skull). ಪರ್ಶುಕಾ (ಸ್ತ್ರೀ)=ಪಕ್ಕೆ, ಪಾರ್ಶ್ವದ ಮೂಳೆ (Rib).

೬೩೯-೬೪೯. ಅಂಗ (ನ), ಪ್ರತೀಕ, ಅವಯವ, ಅಪಘನ (ಪು)=ಕೈಕಾಲು ಮುಂತಾದ ಅವಯವ. ಕಲೇವರ, ಗಾತ್ರ, ವಪುಸ್, ಸಂಹನನ, ಶರೀರ, ವರ್ಷ್ಮನ್ (ನ),ವಿಗ್ರಹ,

---

[1] ಪುರೀತತಂ=ನಾಡೀವಿಶೇಷವೆಂಬ ಅರ್ಥವೂ ಇದೆ. ಇದು ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿಯೂ ಇದೆ.

[2] ಪ್ಲೀಹಾ ಎಂಬ ಆಕಾರಾಂತ ಸ್ತ್ರೀಲಿಂಗವೂ ಇದೆ.

[1] ಇಲ್ಲಿ 'ನಾಸಾಮಲಂ ತು ಶಿಂಘಾಣಂ ಶಿಂಜೂಷಂ ಕರ್ಣಯೋರ್ಮಲಂ' ಎಂದು ಪಾಠಾಂತರವಿದೆ. ಶಿಂಘಾಣ (ನ)=ಸಿಂಬಳ. ಶಿಂಜೂಷ (ನ)=ಕಿವಿಯ ಕುಗ್ಗೆ.

ಕಾಯೋ ದೇಹಃ ಕ್ಲೀಬಪುಂಸೋಃ ಸ್ತ್ರಿಯಾಂ ಮೂರ್ತಿಸ್ತನುಸ್ತನೂಃ ।
ಪಾದಾಗ್ರಂ ಪ್ರಪದಂ ಪಾದಃ ಪದಂಘ್ರಿಶ್ಚರಣೋಽಸ್ತ್ರಿಯಾಮ್ ॥ ೬೪೦
ತದ್ಗ್ರಂಥೀ ಘುಟಿಕೇ ಗುಲ್ಫೌ ಪುಮಾನ್ ಪಾರ್ಷ್ಣಿಸ್ತಯೋರಧಃ ।
ಜಂಘಾ ತು ಪ್ರಸೃತಾ ಜಾನೂರುಪರ್ವಾಷ್ಠೀವದಸ್ತ್ರಿಯಾಮ್ ॥ ೬೪೧
ಸಕ್ಥಿ ಕ್ಲೀಬೇ ಪುಮಾನೂರುಸ್ತತ್ಸಂಧಿಃ ಪುಂಸಿ ವಂಕ್ಷಣಃ ।
ಗುದಂ ತ್ವಪಾನಂ ಪಾಯುರ್ನಾ ವಸ್ತಿರ್ನಾಭೇರಧೋ ದ್ವಯೋಃ ॥ ೬೪೨
ಕಟೋ ನಾ ಶ್ರೋಣಿಫಲಕಂ ಕಟಿಶ್ರೋಣಿಃ ಕಕುದ್ಮತೀ ।
ಪಶ್ಚಾನ್ನಿತಂಬಃ ಸ್ತ್ರೀಕಟ್ಯಾಃ ಕ್ಲೀಬೇ ತು ಜಘನಂ ಪುರಃ ॥ ೬೪೩
ಕೂಪಕೌ ತು ನಿತಂಬಸ್ಥೌ ದ್ವಯಹೀನೇ ಕುಕುಂದರೇ ।
ಸ್ತ್ರಿಯಾಂ ಸ್ಫಿಚೌ ಕಟಿಪ್ರೋಥಾವುಪಸ್ಥೋ ವಕ್ಷ್ಯಮಾಣಯೋಃ ॥ ೬೪೪

ಕಾಯ (ಪು),ದೇಹ (ಪು.ನ),ಮೂರ್ತಿ, ತನು, ತನೂ (ಸ್ತ್ರೀ)=ದೇಹ. ಪಾದಾಗ್ರ, ಪ್ರಪದ (ನ)=ತುದಿಗಾಲು. ಪಾದ, ಪದ್, ಅಂಘ್ರಿ (ಪು),ಚರಣ (ಪು.ನ)=ಕಾಲು (Leg) ; ಹೆಜ್ಜೆ(Foot).

೬೪೧. ಘುಟಿಕಾ (ಸ್ತ್ರೀ), ಗುಲ್ಫ (ಪು)=ಹೆಜ್ಜೆಯ ಗಂಟು (Ankle). ಪಾರ್ಷ್ಣಿ (ಪು)=ಹಿಡಿ, (Heel) ಜಂಘಾ, ಪ್ರಸೃತಾ (ಸ್ತ್ರೀ)=ಮೊಳಕಾಲು. ಜಾನು (ನ), ಊರುಪರ್ವನ್ (ನ), ಅಷ್ಠೀವತ್ (ಪು. ನ)=ಮಂಡಿ (Knee).

೬೪೨. ಸಕ್ಥಿ (ನ)ಊರು (ಪು)=ವಂಕ್ಷಣ (ಪು)=ತೊಡೆಯ ಸಂಧಿ (Groin). ಗುದ, ಅಪಾನ (ನ), ಪಾಯು (ಪು)=ಗುದಸ್ಥಾನ (Anus). ವಸ್ತಿ (ಪು. ಸ್ತ್ರೀ)= ಕಿಬ್ಬೊಟ್ಟೆ (Abdomen) ; ಮೂತ್ರಾಶಯ.

೬೪೩. ಕಟ (ಪು), ಶ್ರೋಣಿಫಲಕ (ನ)=ಸೊಂಟ (Hip). ಕಟಿ, ಶ್ರೋಣಿ, ಕಕುದ್ಮತೀ (ಸ್ತ್ರೀ)=ಪಿರ್ರೆ, ಅಂಡು. (ಕಟ ಮುಂತಾದ ಐದು ಶಬ್ದಗಳೂ ಪರ್ಯಾಯಗಳೆಂದು ಕೆಲವರು). ನಿತಂಬ (ಪು)=ಸ್ತ್ರೀಯ ಸೊಂಟದ ಹಿಂಭಾಗ, ಸ್ತ್ರೀಯರ ಪಿರ್ರೆ. ಜಘನ (ನ)=ಸ್ತ್ರೀಯರ ಸೊಂಟದ ಮುಂಭಾಗ, ಸ್ತ್ರೀಯರ ನಾಭಿಯ ಕೆಳಗಿರುವ ಮುಂಭಾಗ, ಕಟಿಯ ಮುಂಭಾಗ.

೬೪೪. ಕೂಪಕ (ಪು) ಕುಕುಂದರ (ನ)=ಸ್ತ್ರೀಯರ ನಿತಂಬದಲ್ಲಿರುವ ಗುಳಿ. ಸ್ಫಿಚ್ (ಸ್ತ್ರೀ), ಕಟಿ, ಪ್ರೋಥ, ಕಟಿಪ್ರೋಥ (ಪು)=ಅಂಡಿನ ಒಂದೊಂದು ಪಾರ್ಶ್ವ. ಉಪಸ್ಥ (ಪು)=ಸ್ತ್ರೀಪುರುಷರ ಜನನೇಂದ್ರಿಯ.

ಭಗಂ ಯೋನಿರ್ದ್ವಯೋಃ ಶಿಶ್ನೋ ಮೇಢ್ರೋ ಮೇಹನಶೇಫಸೀ ।
ಮುಷ್ಕೋಽಂಡಕೋಶೋ ವೃಷಣಃ ಪೃಷ್ಠವಂಶಾಧರೇ ತ್ರಿಕಮ್ ॥ ೬೪೫
ಪಿಚಂಡಕುಕ್ಷೀ ಜಠರೋದರತುಂದಂ ಸ್ತನೌ ಕುಚೌ ।
ಚೂಚುಕಂ ತು ಕುಚಾಗ್ರಂ ಸ್ಯಾನ್ನನಾ ಕ್ರೋಡಂ ಭುಜಾಂತರಮ್ ॥ ೬೪೬
ಉರೋ ವತ್ಸಂ ಚ ವಕ್ಷಶ್ಚ ಪೃಷ್ಠಂ ತು ಚರಮಂ ತನೋಃ ।
ಸ್ಕಂಧೋ ಭುಜಶಿರೋಽಂಸೋಽಸ್ತ್ರೀ ಸಂಧೀ ತಸ್ಯೈವ ಜತ್ರುಣೀ ॥ ೬೪೭
ಬಾಹುಮೂಲೇ ಉಭೇ ಕಕ್ಷೌ ಪಾರ್ಶ್ವಮಸ್ತ್ರೀ ತಯೋರಧಃ ।
ಮಧ್ಯಮಂ ಚಾವಲಗ್ನಂ ಚ ಮಧ್ಯೋಽಸ್ತ್ರೀ ದ್ವೌಪರೌ ದ್ವಯೋಃ ॥ ೬೪೮
ಭುಜಬಾಹೂ ಪ್ರವೇಷ್ಟೋ ದೋಃ ಸ್ಯಾತ್ ಕಫೋಣಿಸ್ತು ಕೂರ್ಪರಃ ।
ಅಸ್ಯೋಪರಿ ಪ್ರಗಂಡಸ್ಸ್ಯಾತ್ ಪ್ರಕೋಷ್ಠಸ್ತಸ್ಯ ಚಾಪ್ಯಧಃ ॥ ೬೪೯

---

೬೪೫. ಭಗ (ನ), ಯೋನಿ (ಪು. ಸ್ತ್ರೀ)=ಸ್ತ್ರೀಜನನೇಂದ್ರಿಯ. ಶಿಶ್ನ, ಮೇಢ್ರ (ಪು), ಮೇಹನ, ಶೇಫ[1]ಸ್ (ನ)=ಪುರುಷಜನನೇಂದ್ರಿಯ. ಮುಷ್ಕ, ಅಂಡಕೋಶ, ವೃಷಣ (ಪು)=ವೃಷಣ (Testicle). ತ್ರಿಕ (ನ)=ಬೆನ್ನುಮೂಳೆಯ ಕೆಳಭಾಗ.

೬೪೬ -೬೪೭. ಪಿಚಂಡ, ಕುಕ್ಷಿ (ಪು), ಜಠರ, ಉದರ, ತುಂದ (ನ)=ಹೊಟ್ಟೆ. ಸ್ತನ, ಕುಚ (ಪು)=ಮೊಲೆ. ಚೂಚುಕ, ಕುಚಾಗ್ರ (ನ)=ಮೊಲೆಯ ತೊಟ್ಟು. ಕ್ರೋಡ (ಸ್ತ್ರೀ.ನ),ಭುಜಾಂತರ (ನ),ಉರಸ್, ವತ್ಸ, ವಕ್ಷಸ್ (ನ)=ಎದೆ. ಪೃಷ್ಠ(ನ)=ಬೆನ್ನು. ಸ್ಕಂಧ (ಪು), ಭುಜಶಿರಸ್ (ನ), ಅಂಸ (ಪು. ನ)=ಹೆಗಲು. ಜತ್ರು (ನ)=ಹೆಗಲಸಂದು, ಹೆಗಲ ದಡ.

೬೪೮. ಕಕ್ಷ (ಪು)=ಕಂಕಳು. ಪಾರ್ಶ್ವ (ಪು. ನ)=ಪಕ್ಕೆ. ಮಧ್ಯಮ, ಅವಲಗ್ನ, ಮಧ್ಯ (ಪು. ನ)= ನಡು, ಕಟಿಯ ಮೇಲಿನ ಕೃಶವಾದ ಭಾಗ.

೬೪೯. ಭುಜ, ಬಾಹು[2] (ಪು. ಸ್ತ್ರೀ)ಪ್ರವೇಷ್ಟ, ದೋಸ್[1] (ಪು)=ತೋಳು. ಕಫೋಣಿ (ಪು)=ಮೊಳಕೈ ಕೀಲು (Elbow). ಪ್ರಗಂಡ (ಪು)=ಮೊಳಕೈ ಕೀಲಿನ ಮೇಲ್ಭಾಗ. ಪ್ರಕೋಷ್ಠ (ಪು)=ಮೊಳಕೈ (Fore-arm).

---

[1] ಶೇಪಸ್ ಎಂಬ ರೂಪಾಂತರವೂ ಶೇಪ, ಶೇಫ ಎಂಬ ಅಕಾರಾಂತ ಪುಲ್ಲಿಂಗಗಳೂ ಉಂಟು.
[2] ಬಾಹಾ, ದೋಷಾ ಎಂಬ ಅಕಾರಾಂತ ಸ್ತ್ರೀಲಿಂಗಗಳೂ ಉಂಟು.

ಮಣಿಬಂಧಾದಾಕನಿಷ್ಠಂ ಕರಸ್ಯ ಕರಭೋ ಬಹಿಃ ।
ಪಂಚಶಾಖಃ ಶಯಃ ಪಾಣಿಸ್ತರ್ಜನೀ ಸ್ಯಾತ್ ಪ್ರದೇಶಿನೀ ॥ ೬೫೦
ಅಂಗುಲ್ಯಃ ಕರಶಾಖಾಃ ಸ್ಯುಃ ಪುಂಸ್ಯಂಗುಷ್ಠಃ ಪ್ರದೇಶಿನೀ ।
ಮಧ್ಯಮಾನಾಮಿಕಾ ಚಾಪಿ ಕನಿಷ್ಠಾ ಚೇತಿ ತಾಃ ಕ್ರಮಾತ್ ॥ ೬೫೧
ಪುನರ್ಭವಃ ಕರುರುಹೋ ನಖೋऽಸ್ತ್ರೀ ನಖರೋऽಸ್ತ್ರಿಯಾಮ್ ।
ಪ್ರಾದೇಶತಾಲಗೋಕರ್ಣಾಸ್ತರ್ಜನ್ಯಾದಿಯುತೇ ತತೇ ॥ ೬೫೨
ಅಂಗುಷ್ಠೇ ಸಕನಿಷ್ಠೇ ಸ್ಯಾದ್ವಿತಸ್ತಿರ್ದ್ವಾದಶಾಂಗುಲಃ ।
ಪಾಣೌ ಚಪೇಟಪ್ರತರಪ್ರಹಸ್ತಾ ವಿಸ್ತೃತಾಂಗುಲೌ ॥ ೬೫೩
ದ್ವೌ ಸಂಹತೌ ಸಂಹತಲಃ ಪ್ರತಲೌ ವಾಮದಕ್ಷಿಣೌ ।
ಪಾಣಿರ್ನಿಕುಬ್ಜಃ ಪ್ರಸೃತಿಸ್ತೌ ಯುತಾವಂಜಲಿಃ ಪುಮಾನ್ ॥ ೬೫೪

---

೬೫೦. ಕರಭ (ಪು)=ಮಣಿಕಟ್ಟಿನಿಂದ ಕಿರುಬೆರಳಿನವರೆಗಿರುವ ಹಸ್ತದ ಹೊರಭಾಗ. ಪಂಚಶಾಖ, ಶಯ, ಪಾಣಿ (ಪು)=ಕೈ. ತರ್ಜನೀ, ಪ್ರದೇಶಿನೀ (ಸ್ತ್ರೀ)=ಹೆಬ್ಬೆರಳಿನ ಒತ್ತಿಗಿರುವ ಬೆರಳು, ತೋರ್ಬೆರಳು.

೬೫೧. ಅಂಗು[1]ಲೀ, ಕರಶಾಖಾ (ಸ್ತ್ರೀ)=ಬೆರಳು. ಅಂಗುಷ್ಠ (ಪು)=ಹೆಬ್ಬೆರಳು. ಪ್ರದೇಶಿನೀ (ಸ್ತ್ರೀ)=ತೋರ್ಬೆರಳು. ಮಧ್ಯಮಾ (ಸ್ತ್ರೀ)=ನಡುಬೆರಳು. ಅನಾಮಿಕಾ (ಸ್ತ್ರೀ)=ಉಂಗುರದ ಬೆರಳು. ಕನಿಷ್ಠಾ (ಸ್ತ್ರೀ)=ಕಿರಿಬೆರಳು. ಇವು ಕ್ರಮವಾಗಿ ಐದು ಬೆರಳುಗಳು.

೬೫೨. ಪುನರ್ಭವ, ಕರರುಹ (ಪು), ನಖ, ನಖರ (ಪು. ನ)=ಉಗುರು. ಪ್ರಾದೇ[2]ಶ (ಪು)= ಹೆಬ್ಬೆರಳು ಮತ್ತು ತರ್ಜನಿಯನ್ನು ನೀಡಿದಾಗ ಬರುವ ಅಳತೆ, ಚೋಟು. ತಾಲ (ಪು)=ಹೆಬ್ಬೆರಳು ಮತ್ತು ನಡುಬೆರಳನ್ನು ನೀಡಿದಾಗ ಬರುವ ಅಳತೆ. ಗೋಕರ್ಣ (ಪು)=ಹೆಬ್ಬೆರಳು ಮತ್ತು ಉಂಗುರದ ಬೆರಳನ್ನು ನೀಡಿದಾಗ ಬರುವ ಅಳತೆ.

೬೫೩. ವಿತಸ್ತಿ, ದ್ವಾದಶಾಂಗುಲ (ಪು)=ಹೆಬ್ಬೆರಳು ಮತ್ತು ಕಿರುಬೆರಳನ್ನು ನೀಡಿದಾಗ ಬರುವ ಅಳತೆ, ಗೇಣು. ಚಪೇಟ, ಪ್ರತಲ, ಪ್ರಹಸ್ತ (ಪು)=ಎಲ್ಲ ಬೆರಳುಗಳನ್ನೂ ನೀಡಿದ ಅಂಗೈ.

---

[1] ಅಂಗುಲಿ ಎಂಬ ಇಕಾರಾಂತವೂ ಇದೆ.

[2] ಪ್ರದೇಶ ಎಂಬ ರೂಪಾಂತರವೂ ಇದೆ.

ಪ್ರಕೋಷ್ಠೇ ವಿಸ್ತೃತಕರೇ ಹಸ್ತೋ ಮುಷ್ಟ್ಯಾ ತು ಬದ್ಧಯಾ ।
ಸ ರತ್ನಿ ಸ್ಸ್ಯಾದರತ್ನಿಸ್ತು ನಿಷ್ಕನಿಷ್ಠೇನ ಮುಷ್ಟಿನಾ ॥ ೬೫೫
ವ್ಯಾಮೋ ಬಾಹ್ವೋಸ್ಸಕರಯೋಸ್ತತಯೋಸ್ತಿರ್ಯಗಂತರಮ್ ।
ಊರ್ಧ್ವವಿಸ್ತೃತದೋಃ ಪಾಣೆನೃಮಾನೇ ಪೌರುಷಂ ತ್ರಿಷು ॥ ೬೫೬
ಕಂಠೋ ಗಲೋಽಥ ಗ್ರೀವಾಯಾಂ ಶಿರೋಧಿಃ ಕಂಧರೇತ್ಯಪಿ ।
ಕಂಬುಗ್ರೀವಾ ತ್ರಿರೇಖಾ ಸಾಽವಟುರ್ಘಾಟಾ ಕೃಕಾಟಿಕಾ ॥ ೬೫೭
ವಕ್ತ್ರಾಸ್ಯೇ ವದನಂ ತುಂಡಮಾನನಂ ಲಪನಂ ಮುಖಮ್ ।
ಕ್ಲೀಬೇ ಘ್ರಾಣಂ ಗಂಧವಹಾ ಘೋಣಾ ನಾಸಾ ಚ ನಾಸಿಕಾ ॥ ೬೫೮

---

೬೫೪. ಸಂಹತಲ (ಸಿಂಹತಲ) (ಪು)=ಎಲ್ಲ ಬೆರಳುಗಳನ್ನೂ ನೀಡಿ ಕೂಡಿಸಿಕೊಂಡಿರುವ ಎರಡು ಅಂಗೈಗಳು. ಪ್ರಸೃತಿ (ಸ್ತ್ರೀ)=ಸೆರೆ. ಅಂಜಲಿ (ಪು)=ಕೂಡಿಸಿಕೊಂಡ ಎರಡು ಸೆರೆಗಳು, ಬೊಗಸೆ, ಜೋಡಿಸಿದ ಕೈಗಳ ಸಂಪುಟ.

೬೫೫. ಹಸ್ತ (ಪು)=ಮೊಳ. ರತ್ನಿ[1](ಪು)=ಗುದ್ದುಮೊಳ. ಅರ[1]ತ್ನಿ (ಪು)=ಕಿರುಬೆರಳನ್ನು ನೀಡಿದ ಗುದ್ದುಮೊಳ, ಮೊಳಕೈ ಕೀಲಿನಿಂದ ಕಿರುಬೆರಳಿನ ತುದಿಯವರೆಗಿನ ಅಳತೆ.

೬೫೬. ವ್ಯಾಮ (ಪು)=ಮಾರು. ಪೌರುಷ (ಪು. ಸ್ತ್ರೀ. ನ) (-ಸ್ತ್ರೀ. ಪೌರುಷೀ)=ಮೇಲೆ ಕೈ ಎತ್ತಿದ ಪುರುಷನ ಪ್ರಮಾಣ, ಆಳೆತ್ತರ. ಉದಾ : ಪೌರುಷಃ ಸೇತುಃ, ಪೌರುಷೀ ಲತಾ, ಪೌರುಷಂ ಜಲಮ್.

೬೫೭. ಕಂಠ, ಗಲ (ಪು)=ಕುತ್ತಿಗೆ, ಕತ್ತು, ಕೊರಳಿನ ಮುಂಭಾಗ (Throat). ಗ್ರೀವಾ, ಶಿರೋಧಿ, ಕಂಧರಾ (ಸ್ತ್ರೀ) ಕೊರಳು (Neck). ಕಂಬುಗ್ರೀವಾ (ಸ್ತ್ರೀ)=ಮೂರು ರೇಖೆಯುಳ್ಳ ಶಂಖದಂತಹ ಕೊರಳು. ಅವಟು, ಘಾಟಾ, ಕೃಕಾಟಿಕಾ (ಸ್ತ್ರೀ)=ಕೊರಳಿನಲ್ಲಿ ಮುಂದೆ ಚಾಚಿಕೊಂಡಿರುವ ಗಂಟು, ಗ್ಯಾಕೆ. ಹೆಡದಲೆ (Nape of the neck)ಎಂದು ಕೆಲವರು.

೬೫೮. ವಕ್ತ್ರ, ಆಸ್ಯ, ವದನ, ತುಂಡ, ಆನನ, ಲಪನ, ಮುಖ (ನ)=ಬಾಯಿ ; ಮುಖ, ಮೋರೆ. ಘ್ರಾಣ (ನ)ಗಂಧವಹಾ, ಘೋಣಾ, ನಾಸಾ, ನಾಸಿಕಾ (ಸ್ತ್ರೀ)=ಮೂಗು.

---

[1] ರತ್ನಿ, ಅರತ್ನಿ ಶಬ್ದಗಳು ಸ್ತ್ರೀಲಿಂಗದಲ್ಲಿಯೂ ಇವೆ.

ಓಷ್ಠಾಧರೌ ತು ರದನಚ್ಛದೌ ದಶನವಾಸಸೀ ।
ಅಧಸ್ತಾತ್ ಚಿಬುಕಂ ಗಂಡೌ ಕಪೋಲೌ ತತ್ಪರಾ ಹನುಃ ॥ ೬೫೯
ರದನಾ ದಶನಾ ದಂತಾ ರದಾಸ್ತಾಲು ತು ಕಾಕುದಮ್ ।
ರಸಜ್ಞಾ ರಸನಾ ಜಿಹ್ವಾ ಪ್ರಾಂತಾವೋಷ್ಠಸ್ಯ ಸೃಕ್ಕಣೀ ॥ ೬೬೦
ಲಲಾಟಮಲಿಕಂ ಗೋಧಿರೂರ್ಧ್ವೇ ದೃಗ್ಭ್ಯಾಂ ಭ್ರುವೌ ಸ್ತ್ರಿಯೌ ।
ಕೂರ್ಚಮಸ್ತ್ರೀ ಭ್ರುವೋರ್ಮಧ್ಯಂ ತಾರಕಾಕ್ಷ್ಣಃ ಕನೀನಿಕಾ ॥ ೬೬೧
ಲೋಚನಂ ನಯನಂ ನೇತ್ರಮೀಕ್ಷಣಂ ಚಕ್ಷುರಕ್ಷಿಣೀ ।
ದೃಗ್ದೃಷ್ಟೀ ಚಾಸ್ರು ನೇತ್ರಾಂಬು ರೋದನಂ ಚಾಸ್ರಮಶ್ರು ಚ ॥ ೬೬೨
ಅಪಾಂಗೌ ನೇತ್ರಯೋರಂತೌ ಕಟಾಕ್ಷೋऽಪಾಂಗದರ್ಶನೇ ।
ಕರ್ಣಶಬ್ದಗ್ರಹೌ ಶ್ರೋತ್ರಂ ಶ್ರುತಿಃ ಸ್ತ್ರೀ ಶ್ರವಣಂ ಶ್ರವಃ ॥ ೬೬೩

೬೫೯. ಓಷ್ಠ, ಅಧರ (ಪು),ರದನಚ್ಛದ, ದಶನವಾಸಸ್ (ನ)=ತುಟಿ. (ಅಧರ ಶಬ್ದವು ಕೆಳದುಟಿ ಎಂಬ ಅರ್ಥದಲ್ಲಿದೆ.) ಚಿಬುಕ (ನ)=ಗದ್ದ (Chin) ಗಂಡ, ಕಪೋಲ (ಪು)=ಕೆನ್ನೆ. ಹನು[1] (ಸ್ತ್ರೀ)=ಕೆನ್ನೆಯ ಮೇಲ್ಭಾಗ.

೬೬೦. ರದನ, ದಶನ, ದಂತ, ರದ (ಪು)=ಹಲ್ಲು. ತಾಲು, ಕಾಕುದ (ನ)=ಹಲ್ಲುಗಳ ಹಿಂದೆ ಮೇಲ್ಗಡೆ ಇರುವ ಮಾಂಸಗ್ರಂಥಿ, ಚವರ್ಗವನ್ನು ಉಚ್ಚರಿಸುವಾಗ ನಾಲಿಗೆಯು ಸೋಕುವ ಸ್ಥಳ (Palate) ; ದವಡೆ. ರಸಜ್ಞಾ, ರಸನಾ, ಜಿಹ್ವಾ (ಸ್ತ್ರೀ)=ನಾಲಿಗೆ. ಸೃಕ್ಕನ್[2] (ನ)=ಕಟವಾಯಿ.

೬೬೧. ಲಲಾಟ, ಅಲಿಕ (ನ), ಗೋಧಿ (ಪು)=ಹಣೆ. ಭ್ರೂ (ಸ್ತ್ರೀ)=ಹುಬ್ಬು. ಕೂರ್ಚ (ಪು.ನ)=ಹುಬ್ಬುಗಳ ನಡು. ತಾರಕಾ, ಕನೀನಿಕಾ (ಸ್ತ್ರೀ)=ಕಣ್ಣುಗುಡ್ಡೆ.

೬೬೨. ಲೋಚನ, ನಯನ, ನೇತ್ರ, ಈಕ್ಷಣ, ಚಕ್ಷುಸ್, ಅಕ್ಷಿ (ನ), ದೃಶ್, ದೃಷ್ಟಿ (ಸ್ತ್ರೀ)=ಕಣ್ಣು. ಅಸ್ರು, ನೇತ್ರಾಂಬು, ರೋದನ, ಅಸ್ರ,[3] ಅಶ್ರು (ನ)=ಕಣ್ಣೀರು.

೬೬೩. ಅಪಾಂಗ (ಪು)=ಕಡೆಗಣ್ಣು. ಕಟಾಕ್ಷ (ಪು)=ಕಡೆಗಣ್ಣಿನ ನೋಟ. ಕರ್ಣ, ಶಬ್ದಗ್ರಹ (ಪು), ಶ್ರೋತ್ರ (ನ), ಶ್ರುತಿ (ಸ್ತ್ರೀ), ಶ್ರವಣ, ಶ್ರವಸ್ (ನ)=ಕಿವಿ.

[1] ಇದು ಪುಲ್ಲಿಂಗದಲ್ಲಿಯೂ ಇದೆ.

[2] ಸೃಕ್ಕ, ಸೃಕ್ಕಿ ಎಂಬ ನಪುಂಸಕಲಿಂಗದ ರೂಪಾಂತರಗಳೂ ಉಂಟು.

[3] ಅಶ್ರ ಎಂಬ ರೂಪಾಂತರವೂ ಉಂಟು.

ಉತ್ತಮಾಂಗಂ ಶಿರಶ್ಶೀರ್ಷಂ ಮೂರ್ಧಾ ನಾ ಮಸ್ತಕೋಽಸ್ತ್ರಿಯಾಮ್ ।
ಚಿಕುರಃ ಕುಂತಲೋ ವಾಲಃ ಕಚಃ ಕೇಶಃ ಶಿರೋರುಹಃ ॥ ೬೬೪
ತದ್ವೃಂದೇ ಕೈಶಿಕಂ ಕೈಶ್ಯಮಲಕಾಶ್ಚೂರ್ಣಕುಂತಲಾಃ ।
ತೇ ಲಲಾಟೇ ಭ್ರಮರಕಾಃ ಕಾಕಪಕ್ಷಶ್ಶಿಖಂಡಕಃ ॥ ೬೬೫
ಕಬರೀ ಕೇಶವೇಶೋಽಥ ಧಮ್ಮಿಲ್ಲಸ್ಸಂಯತಾಃ ಕಚಾಃ ।
ಶಿಖಾ ಚೂಡಾ ಕೇಶಪಾಶೇ ವ್ರತಿನಸ್ತು ಸಟಾ ಜಟಾ ॥ ೬೬೬
ವೇಣೀ ಪ್ರವೇಣೀ ಶೀರ್ಷಣ್ಯಶಿರಸ್ಯೌ ವಿಶದೇ ಕಚೇ ।
ಪಾಶಃ ಪಕ್ಷಶ್ಚ ಹಸ್ತಶ್ಚ ಕಲಾಪಾರ್ಥಾಃ ಕಚಾತ್ಪರೇ ॥ ೬೬೭
ತನೂರುಹಂ ರೋಮ ಲೋಮ ತದ್ವೃದ್ಧೌ ಶ್ಮಶ್ರು ಪುಂಮುಖೇ ।
ಆಕಲ್ಪವೇಷೌ ನೇಪಥ್ಯಂ ಪ್ರತಿಕರ್ಮ ಪ್ರಸಾಧನಮ್ ॥ ೬೬೮

---

೬೬೪. ಉತ್ತಮಾಂಗ, ಶಿರಸ್, ಶೀರ್ಷ (ನ)ಮೂರ್ಧನ್ (ಪು),ಮಸ್ತಕ (ಪು. ನ)=ತಲೆ. ಚಿಕುರ, ಕುಂತಲ, ವಾಲ, ಕಚ, ಕೇಶ, ಶಿರೋರುಹ (ಪು)=ತಲೆಗೂದಲು, ಕೇಶ.

೬೬೫. ಕೈಶಿಕ, ಕೈಶ್ಯ (ನ)=ಕೇಶರಾಶಿ. ಅಲಕ, ಚೂರ್ಣ ಕುಂತಲ (ಪು)=ಗುಂಗುರು ಕೂದಲು. ಭ್ರಮರಕ (ಪು)=ಹಣೆಯ ಮೇಲೆ ಜಾರಿದ ಗುಂಗುರುಕೂದಲು. ಕಾಕಪಕ್ಷ, ಶಿಖಂಡಕ (ಪು)=ಬಾಲಕರ ಜುಟ್ಟು, ದೀರ್ಘವಾಗಿ ಬೆಳೆದಿರುವ (ಬಾಲಕರ) ಕೇಶ.

೬೬೬. ಕಬರೀ (ಸ್ತ್ರೀ), ಕೇಶವೇಶ (ಪು)=ತುರುಬು, ಹೆರಳು. ಧಮ್ಮಿಲ್ಲ (ಪು)=ಗಂಟುಹಾಕಿದ ಕೂದಲು, ಮುಡಿಗಂಟು. ಶಿಖಾ, ಚೂಡಾ (ಸ್ತ್ರೀ), ಕೇಶಪಾಶ (ಪು)=ಜುಟ್ಟು. ಸಟಾ, ಜಟಾ (ಸ್ತ್ರೀ)=ಋಷಿ ಮೊದಲಾದವರ ಜಟೆ.

೬೬೭. ವೇಣೀ, ಪ್ರವೇಣೀ (ಸ್ತ್ರೀ)=ಹೆಣೆಯಲ್ಪಟ್ಟು ನೀಳವಾಗಿ ಬಿಟ್ಟಿರುವ ಕೇಶ ; ಹೆಣೆಯದೆ ನೀಳವಾಗಿ ಬಿಟ್ಟು ಕಟ್ಟಿರುವ ಕೇಶ. ಶೀರ್ಷಣ್ಯ, ಶಿರಸ್ಯ (ಪು)=ಒಂದಕ್ಕೊಂದು ಕೂಡಿಕೊಳ್ಳದಂತೆ ಬಿಟ್ಟು ಕಟ್ಟಿರುವ ಕೇಶ. ಪಾಶ, ಪಕ್ಷ, ಹಸ್ತ (ಪು)=ಈ ಶಬ್ದಗಳು ಕೇಶವಾಚಕ ಪದಗಳ ಮುಂದೆ ಪ್ರಯುಕ್ತವಾದಾಗ ಸಮೂಹ ಎಂಬ ಅರ್ಥವನ್ನು ಬೋಧಿಸುತ್ತವೆ. ಉದಾ : ಕೇಶಪಾಶಃ, ಚಿಕುರಪಕ್ಷಃ, ಕಚಹಸ್ತಃ.

೬೬೮. ತನೂರುಹ, ರೋಮನ್, ಲೋಮನ್ (ನ)=ಮೈ ಕೂದಲು. ಶ್ಮಶ್ರು (ನ)=ಮೀಸೆ, ಗಡ್ಡ. ಆಕಲ್ಪ, ವೇಷ (ಪು), ನೇಪಥ್ಯ, ಪ್ರತಿಕರ್ಮನ್, ಪ್ರಸಾಧನ (ನ)=ವಸ್ತ್ರಾದಿಗಳಿಂದ ಅಲಂಕರಿಸಿಕೊಳ್ಳುವುದು.

ದಶೈತೇ ತ್ರಿಷ್ವಲಂಕರ್ತ್ರಾಲಂಕರಿಷ್ಣುಶ್ಚ ಮಂಡಿತಃ ।
ಪ್ರಸಾಧಿತೋಽಲಂಕೃತಶ್ಚ ಭೂಷಿತಶ್ಚ ಪರಿಷ್ಕೃತಃ ॥ ೬೬೯
ವಿಭ್ರಾಡ್ಭ್ರಾಜಿಷ್ಣು ರೋಚಿಷ್ಣೂ ಭೂಷಾ ತು ಸ್ಯಾದಲಂಕ್ರಿಯಾ ।
ಅಲಂಕಾರಸ್ತ್ವಾಭರಣಂ ಪರಿಷ್ಕಾರೋ ವಿಭೂಷಣಮ್ ॥ ೬೭೦
ಮಂಡನಂ ಚಾಥ ಮುಕುಟಂ ಕಿರೀಟಂ ಪುನ್ನಪುಂಸಕಮ್ ।
ಚೂಡಾಮಣಿಶ್ಶಿರೋರತ್ನಂ ತರಲೋ ಹಾರಮಧ್ಯಗಃ ॥ ೬೭೧
ವಾಲಪಾಶ್ಯಾ ಪಾರಿತಥ್ಯಾ ಪತ್ರಪಾಶ್ಯಾ ಲಲಾಟಿಕಾ ।
ಕರ್ಣಿಕಾ ತಾಲಪತ್ರಂ ಸ್ಯಾತ್ಕುಂಡಲಂ ಕರ್ಣವೇಷ್ಟನಮ್ ॥ ೬೭೨
ಗ್ರೈವೇಯಕಂ ಕಂಠಭೂಷಾ ಲಂಬನಂ ಸ್ಯಾಲ್ಲಲಂತಿಕಾ ।
ಸ್ವರ್ಣೈಃ ಪ್ರಾಲಂಬಿಕಾಥೋರಸ್ಸೂತ್ರಿಕಾ ಮೌಕ್ತಿಕೈಃ ಕೃತಾ ॥ ೬೭೩

---

೬೬೯. ಮುಂದೆ ಹೇಳುವ ಹತ್ತು ಶಬ್ದಗಳು ಅರ್ಥಾನುರೋಧವಾಗಿ ಮೂರು ಲಿಂಗಗಳಲ್ಲಿಯೂ ಇರುತ್ತವೆ : ಅಲಂಕರ್ತೃ, ಅಲಂಕರಿಷ್ಣು (ಪು. ಸ್ತ್ರೀ. ನ) (-ಸ್ತ್ರೀ. ಅಲಂಕರ್ತ್ರೀ)=ಅಲಂಕರಿಸತಕ್ಕವನು ; ಅಲಂಕರಿಸಿಕೊಳ್ಳುವ ಸ್ವಭಾವದವನು. ಮಂಡಿತ, ಪ್ರಸಾಧಿತ, ಅಲಂಕೃತ, ಭೂಷಿತ, ಪರಿಷ್ಕೃತ (ಪು. ಸ್ತ್ರೀ. ನ)=ಅಲಂಕೃತನಾದವನು.

೬೭೦-೬೭೧. ವಿಭ್ರಾಜ್, ಭ್ರಾಜಿಷ್ಣು, ರೋಚಿಷ್ಣು (ಪು. ಸ್ತ್ರೀ. ನ)=ಭೂಷಣಾದಿಗಳಿಂದ ಶೋಭಿಸತಕ್ಕವನು. ಭೂಷಾ, ಅಲಂಕ್ರಿಯಾ (ಸ್ತ್ರೀ)=ಅಲಂಕರಿಸುವಿಕೆ. ಅಲಂಕಾರ (ಪು), ಆಭರಣ (ನ), ಪರಿಷ್ಕಾರ (ಪು),ವಿಭೂಷಣ, ಮಂಡನ (ನ)=ಒಡವೆ. ಮುಕುಟ (ಮಕುಟ) (ನ), ಕಿರೀಟ (ಪು.ನ)=ಕಿರೀಟ. ಚೂಡಾಮಣಿ (ಪು), ಶಿರೋರತ್ನ (ನ)=ತಲೆಯಲ್ಲಿ ಧರಿಸುವ ರತ್ನಖಚಿತವಾದ ಒಡವೆ. ತರಲ (ಪು)=ಹಾರಮಧ್ಯದಲ್ಲಿರುವ ನಾಯಕಮಣಿ.

೬೭೨. ವಾಲಪಾಶ್ಯಾ, ಪಾರಿತಥ್ಯಾ (ಸ್ತ್ರೀ)=ಕೇಶದಲ್ಲಿ ಧರಿಸುವ ಜಡೆಬಿಲ್ಲೆ. ಪತ್ರಪಾಶ್ಯಾ, ಲಲಾಟಿಕಾ (ಸ್ತ್ರೀ)=ಹಣೆಯ ಮೇಲ್ಗಡೆ ತೂಗುವ ಆಭರಣ ; ಬಾಸಿಂಗ. ಕರ್ಣಿಕಾ (ಸ್ತ್ರೀ), ತಾಲಪತ್ರ (ನ)=ಸ್ತ್ರೀಯರು ಕಿವಿಯಲ್ಲಿ ಧರಿಸುವ ಓಲೆ ಮುಂತಾದ ಒಡವೆ. ಕುಂಡಲ, ಕರ್ಣವೇಷ್ಟನ (ನ)=ಕಿವಿಯುಂಗುರ, ಹತ್ತಕಡಕು ಇತ್ಯಾದಿ.

೬೭೩-೬೭೪. ಗ್ರೈವೇಯಕ (ನ), ಕಂಠಭೂಷಾ (ಸ್ತ್ರೀ)=ಅಡ್ಡಿಕೆ, ತಾಳಿ ಮುಂತಾದ ಕಂಠಾಭರಣ. ಪ್ರಾಲಂಬಿಕಾ (ಸ್ತ್ರೀ)=ಚಿನ್ನದ ಸರ. ಉರಸ್ಸೂತ್ರಿಕಾ (ಸ್ತ್ರೀ), ಹಾರ (ಪು), ಮುಕ್ತಾವಲೀ (ಸ್ತ್ರೀ)=ಮುತ್ತಿನ ಸರ. ದೇವಚ್ಛಂದ (ಪು)=ನೂರು ಎಳೆಗಳಿರುವ ಮುತ್ತಿನ ಸರ.

ಹಾರೋ ಮುಕ್ತಾವಲೀ ದೇವಚ್ಛಂದೋಽಸೌ ಶತಯಷ್ಟಿಕಃ ।
ಹಾರಭೇದಾ ಯಷ್ಟಿಭೇದಾದ್ಗುತ್ಸಗುತ್ಸಾರ್ಧಗೋಸ್ತನಾಃ ॥ ೬೭೪
ಅರ್ಧಹಾರೋ ಮಾಣವಕ ಏಕಾವಲ್ಯೇಕಯಷ್ಟಿಕಾ ।
ಸೈವ ನಕ್ಷತ್ರಮಾಲಾ ಸ್ಯಾತ್ಸಪ್ತವಿಂಶತಿಮೌಕ್ತಿಕೈಃ ॥ ೬೭೫
ಆವಾಪಕಃ ಪಾರಿಹಾರ್ಯಃ ಕಟಕೋ ವಲಯೋಽಸ್ತ್ರಿಯಾಮ್ ।
ಕೇಯೂರಮಂಗದಂ ತುಲ್ಯೇ ಅಂಗುಲೀಯಕಮೂರ್ಮಿಕಾ ॥ ೬೭೬
ಸಾಕ್ಷರಾಂಗುಲಿಮುದ್ರಾ ಸಾ ಕಂಕಣಂ ಕರಭೂಷಣಮ್ ।
ಸ್ತ್ರೀಕಟ್ಯಾಂ ಮೇಖಲಾ ಕಾಂಚೀ ಸಪ್ತಕೀ ರಶನಾ ತಥಾ ॥ ೬೭೭
ಕ್ಲೀಬೇ ಸಾರಸನಂ ಚಾಥ ಪುಂಸ್ಕಟ್ಯಾಂ ಶೃಂಖಲಂ ತ್ರಿಷು ।
ಪಾದಾಂಗದಂ ತುಲಾಕೋಟಿರ್ಮಂಜೀರೋ ನೂಪುರೋಽಸ್ತ್ರಿಯಾಮ್ ॥

೬೭೪-೬೭೫. ಮುಂದಿನವು ಎಳೆಗಳ ಸಂಖ್ಯಾಭೇದದಿಂದ ಆಗುವ ವಿವಿಧ ಮುತ್ತಿನ ಸರಗಳು : ಗುತ್ಸ(ಗುಚ್ಛ) (ಪು)=ಮೂವತ್ತೆರಡು ಎಳೆಗಳುಳ್ಳ ಹಾರ - ದ್ವಾತ್ರಿಂಶಲ್ಲತಿಕೋ ಗುಚ್ಛಃ. ಗುತ್ಸಾರ್ಧ (ಗುಚ್ಛಾರ್ಧ) (ಪು)=ಇಪ್ಪತ್ತುನಾಲ್ಕು ಎಳೆಗಳುಳ್ಳ ಹಾರ (ಗುಚ್ಛಾರ್ಧಸ್ತತ್ಸ್ವ ಸಂಖ್ಯಕಃ). ಗೋಸ್ತನ (ಪು)=ಮೂವತ್ತುನಾಲ್ಕು ಎಳೆಗಳುಳ್ಳ ಹಾರ (ಚತುಸ್ತ್ರಿಂಶಲ್ಲತೋ ಹಾರಶ್ಚತುಃಸರಿಚ್ಚ ಗೋಸ್ತನಃ) ನಾಲ್ಕು ಎಳೆಗಳಿರುವ ಹಾರವೆಂದೂ ನಲವತ್ತು ಎಳೆಗಳಿರುವ ಹಾರವೆಂದೂ ಕೆಲವರು. ಅರ್ಧಹಾರ, ಮಾಣವಕ (ಪು)=ಇಪ್ಪತ್ತು ಎಳೆಗಳಿರುವ ಹಾರ (ವಿಂಶತಿಯಷ್ಟಿಕೋ ಹಾರೋ ಮಾಣವಃ ಪರಿಕೀರ್ತಿತಃ) ಏಕಾವಲೀ (ಸ್ತ್ರೀ)=ಒಂದು ಎಳೆಯ ಹಾರ. ನಕ್ಷತ್ರ ಮಾಲಾ (ಸ್ತ್ರೀ)=ಇಪ್ಪತ್ತೇಳು ಮುತ್ತುಗಳಿಂದ ರಚಿತವಾದ ಒಂದೆಳೆಯ ಹಾರ.

೬೭೬. ಅವಾಪಕ, ಪಾರಿಹಾರ್ಯ, ಕಟಕ (ಪು), ವಲಯ (ಪು. ನ)=ಕೈಬಳೆ, ಕಡಗ. ಕೇಯೂರ, ಅಂಗದ (ನ)=ತೋಳಿನ ಒಡವೆ, ವಂಕಿ. ಅಂಗುಲೀಯಕ (ನ), ಊರ್ಮಿಕಾ (ಸ್ತ್ರೀ)=ಉಂಗುರ.

೬೭೭-೬೭೮. ಅಂಗುಲಿಮುದ್ರಾ (ಸ್ತ್ರೀ)=ಅಕ್ಷರಗಳನ್ನು ಕೆತ್ತಿದ ಉಂಗುರ. ಕಂಕಣ, ಕರಭೂಷಣ (ನ)=ಮಣಿಬಂಧದಲ್ಲಿ ಧರಿಸುವ ಹಸ್ತಾಭರಣ. ಮೇಖಲಾ, ಕಾಂಚಿ, ಸಪ್ತಕೀ, ರಶನಾ (ಸ್ತ್ರೀ),ಸಾರಸನ (ನ)=ಹೆಂಗಸರ ಸೊಂಟದ ಆಭರಣ, ಡಾಬು, ಒಡ್ಯಾಣ. ಶೃಂಖಲ (ಪು. ಸ್ತ್ರೀ. ನ.)=ಗಂಡಸರ ಸೊಂಟದ ಆಭರಣ, ನೇವಳ. ಪಾದಾಂಗದ (ನ),ತುಲಾಕೋಟಿ (ಸ್ತ್ರೀ)=ಮಂಜೀರ (ಪು),ನೂಪುರ (ಪು. ನ), ಹಂಸಕ, ಪಾದಕಟಕ (ಪು)=ಕಾಲಂದಿಗೆ, ಕಾಲ್ಕಡಗ. ಕಿಂಕಿಣೀ, ಕ್ಷುದ್ರಘಂಟಿಕಾ (ಸ್ತ್ರೀ)=ಗೆಜ್ಜೆ, ಕಿರುಗಂಟೆ.

ಹಂಸಕಃ ಪಾದಕಟಕಃ ಕಿಂಕಿಣೀ ಕ್ಷುದ್ರಘಂಟಿಕಾ ।
ತ್ವಕ್‌ಫಲಕ್ರಿಮಿರೋಮಾಣಿ ವಸ್ತ್ರಯೋನಿರ್ದಶ ತ್ರಿಷು ॥ ೬೭೯
ವಾಲ್ಕಂ ಕ್ಷೌಮಾದಿ ಫಾಲಂ ತು ಕಾರ್ಪಾಸಂ ಬಾದರಂ ಚ ತತ್ ।
ಕೌಶೇಯಂ ಕೃಮಿಕೋಶೋತ್ಥಂ ರಾಂಕವಂ ಮೃಗರೋಮಜಮ್ ॥ ೬೮೦
ಅನಾಹತಂ ನಿಷ್ಪ್ರವಾಣಿ ತಂತ್ರಕಂ ಚ ನವಾಂಬರೇ ।
ತತ್ಸ್ಯಾದುದ್ಗಮನೀಯಂ ಯದ್ಧೌತಯೋರ್ವಸ್ತ್ರಯೋರ್ಯುಗಮ್ ॥ ೬೮೧
ಪತ್ರೋರ್ಣಂ ಧೌತಕೌಶೇಯಂ ಬಹುಮೂಲ್ಯಂ ಮಹಾಧನಮ್ ।
ಕ್ಷೌಮಂ ದುಕೂಲಂ ಸ್ಯಾದ್ದ್ವೇ ತು ನಿವೀತಂ ಪ್ರಾವೃತಂ ತ್ರಿಷು ॥ ೬೮೨
ಸ್ತ್ರಿಯಾಂ ಬಹುತ್ವೇ ವಸ್ತ್ರಸ್ಯ ದಶಾಸ್ಸ್ಯುರ್ವಸ್ತ್ರಯೋರ್ದ್ವಯೋಃ ।
ದೈರ್ಘ್ಯಮಾಯಾಮ ಆರೋಹಃ ಪರಿಣಾಹೋ ವಿಶಾಲತಾ ॥ ೬೮೩

೬೭೯-೬೮೧. ವಸ್ತ್ರಯೋನಿ (ಸ್ತ್ರೀ)=ಬಟ್ಟೆಗೆ ಕಾರಣವಾದ ಮರದ ತೊಗಟೆ, ಕಾಯಿ, ಕ್ರಿಮಿ ಮತ್ತು ರೋಮಗಳು. ಮುಂದೆ ಹೇಳುವ ವಾಲ್ಕ, ಕ್ಷೌಮ, ಫಾಲ, ಕಾರ್ಪಾಸ, ಬಾದರ, ಕೌಶೇಯ, ರಾಂಕವ, ಅನಾಹತ, ನಿಷ್ಪ್ರವಾಣಿ ಮತ್ತು ತಂತ್ರಕ ಎಂಬ ಹತ್ತು ಶಬ್ದಗಳು ಮೂರು ಲಿಂಗಗಳಲ್ಲಿಯೂ ಅರ್ಥಾನುಸಾರವಾಗಿ ವರ್ತಿಸುತ್ತವೆ. ಉದಾ- ವಾಲ್ಕಃ ಪಟಃ, ವಾಲ್ಕೀ ಪಟೀ, ವಾಲ್ಕಂ ವಸ್ತ್ರಂ.

ವಾಲ್ಕ(-(ಸ್ತ್ರೀ. ವಾಲ್ಕೀ)=ನಾರು ಬಟ್ಟೆ. ಕ್ಷೌಮ (-ಸ್ತ್ರೀ. ಕ್ಷೌಮೀ)=ಅಗಸೆನಾರಿನ ಬಟ್ಟೆ. ಫಾಲ (-ಸ್ತ್ರೀಫಾಲೀ)=ಹತ್ತಿಯ ಕಾಯಿ ಮೊದಲಾದ ಫಲದಿಂದ ಆದ ಬಟ್ಟೆ. ಕಾರ್ಪಾಸ, ಬಾದರ (-ಸ್ತ್ರೀ. ಕಾರ್ಪಾಸೀ, ಬಾದರೀ)=ಹತ್ತಿಯ ಬಟ್ಟೆ. ಕೌಶೇಯ (-ಸ್ತ್ರೀ. ಕೌಶೇಯೀ)=ರೇಶ್ಮೆಯ ಬಟ್ಟೆ. ರಾಂಕವ (-ಸ್ತ್ರೀ. ರಾಂಕವೀ)=ರೋಮಗಳಿಂದಾದ ಕಂಬಳಿ ಮೊದಲಾದ್ದು, ಉಣ್ಣೆಬಟ್ಟೆ. ಅನಾಹತ, ನಿಷ್ಪ್ರವಾಣಿ, ತಂತ್ರಕ (-ಸ್ತ್ರೀ. ತಂತ್ರಿಕಾ)=ಹೊಸ ಬಟ್ಟೆ. ಉದ್ಗಮನೀಯ (ನ)=ಒಗೆದ ಬಟ್ಟೆಗಳ ಜೊತೆ.

೬೮೨. ಪತ್ರೋರ್ಣ (ನ)=ಒಗೆದ ರೇಶ್ಮೆಯ ಬಟ್ಟೆ. ಬಹುಮೂಲ್ಯ, ಮಹಾಧನ (ನ)=ಬೆಲೆಬಾಳುವ ಉತ್ತಮವಸ್ತ್ರ. ಕ್ಷೌಮ, ದುಕೂಲ (ನ)=ಪಟ್ಟೆವಸ್ತ್ರ, ಪೀತಾಂಬರ. ನಿವೀತ, ಪ್ರಾವೃತ (ಪು. ಸ್ತ್ರೀ. ನ)=ಹೊದೆಯುವ ಶಲ್ಯ.

೬೮೩. ದಶಾ (ಸ್ತ್ರೀ. ನಿತ್ಯ ಬಹುವಚನ), ವಸ್ತಿ (ಪು. ಸ್ತ್ರೀ)=ವಸ್ತ್ರದ ಅಂಚು, ದಡಿ, ಕಂಬಿ. ದೈರ್ಘ್ಯ (ನ), ಆಯಾಮ, ಆನಾಹ (ಪು)=ಉದ್ದ. ಪರಿಣಾಹ (ಪು), ವಿಶಾಲತಾ (ಸ್ತ್ರೀ)=ಅಗಲ.

ಪಟಚ್ಚರಂ ಜೀರ್ಣವಸ್ತ್ರಂ ಸಮೌ ನಕ್ತಕಕರ್ಪಟೌ ।
ವಸ್ತ್ರಮಾಚ್ಛಾದನಂ ವಾಸಶ್ಚೇಲಂ ವಸನಮಂಶುಕಮ್ ॥ ೬೮೪
ಸುಚೇಲಕಃ ಪಟೋಽಸ್ತ್ರೀ ಸ್ಯಾದ್ವರಾಶಿಃ ಸ್ಥೂಲಶಾಟಕಃ ।
ನಿಚೋಲಃ ಪ್ರಚ್ಛದಪಟಃ ಸಮೌ ರಲ್ಲಕಕಂಬಲೌ ॥ ೬೮೫
ಅಂತರೀಯೋಪಸಂವ್ಯಾನಪರಿಧಾನಾನ್ಯಧೋಂಽಶುಕೇ ।
ದ್ವೌ ಪ್ರಾವಾರೋತ್ತರಾಸಂಗೌ ಸಮೌ ಬೃಹತಿಕಾ ತಥಾ ॥ ೬೮೬
ಸಂವ್ಯಾನಮುತ್ತರೀಯಂ ಚ ಚೋಲಃ ಕೂರ್ಪಾಸಕೋಽಸ್ತ್ರಿಯಾಮ್ ।
ನೀಶಾರಃ ಸ್ಯಾತ್ಪ್ರಾವರಣೇ ಹಿಮಾನಿಲನಿವಾರಣೇ ॥ ೬೮೭
ಅರ್ಧೋರುಕಂ ವರಸ್ತ್ರೀಣಾಂ ಸ್ಯಾಚ್ಚಂಡಾತಕಮಂಶುಕಮ್ ।
ಸ್ಯಾತ್ತ್ರಿಷ್ವಾಪ್ರಪದೀನಂ ತತ್ಪ್ರಾಪ್ನೋತ್ಯಾಪ್ರಪದಂ ಹಿ ಯತ್ ॥ ೬೮೮

---

೬೮೪. ಪಟಚ್ಚರ, ಜೀರ್ಣವಸ್ತ್ರ (ನ)=ಹರಕುಬಟ್ಟೆ. ನಕ್ತಕ (ಲಕ್ತಕ), ಕರ್ಪಟ (ಪು)=ಕರ ವಸ್ತ್ರ ; ಕೊಳೆ ಬಟ್ಟೆ. ವಸ್ತ್ರ, ಆಚ್ಛಾದನ, ವಾಸಸ್, ಚೇಲ, ವಸನ, ಅಂಶುಕ (ನ)=ಬಟ್ಟೆ.

೬೮೫. ಸುಚೇಲಕ (ಪು) ಪಟ[1] (ಪು. ನ)=ನಯವಾದ ಬಟ್ಟೆ, ತೆಳುವಾದ ಬಟ್ಟೆ. ವರಾಶಿ (ವರಾಸಿ), ಸ್ಥೂಲಶಾಟಕ (ಪು)=ದಪ್ಪವಾದ ಬಟ್ಟೆ, ಒರಟು ಬಟ್ಟೆ. ನಿಚೋಲ, ಪ್ರಚ್ಛದಪಟ (ಪು)=ಹಾಸುವ ಬಟ್ಟೆ, ಮೇಲು ಹಾಸಿಗೆ. ರಲ್ಲಕ, ಕಂಬಲ (ಪು)=ಕಂಬಳಿ, ರಗ್ಗು, ಶಾಲು.

೬೮೬-೬೮೭. ಅಂತರೀಯ, ಉಪಸಂವ್ಯಾನ, ಪರಿಧಾನ, ಅಧೋಂಶುಕ (ನ)= ಕೆಳವಸ್ತ್ರ, ಉಡುವ ಬಟ್ಟೆ, ಪಂಚೆ ಅಥವಾ ಸೀರೆ. ಪ್ರಾವಾರ, ಉತ್ತರಾಸಂಗ (ಪು), ಬೃಹತಿಕಾ (ಸ್ತ್ರೀ), ಸಂವ್ಯಾನ,[2] ಉತ್ತರೀಯ (ನ)=ಹೊದೆಯುವ ಬಟ್ಟೆ, ಶಲ್ಯ. ಚೋಲ, ಕೂರ್ಪಾಸಕ[3] (ಪು.ನ)=ಸಾಮಾನ್ಯವಾಗಿ ಹೆಂಗಸರ ಕುಪ್ಪಸ, ರವಿಕೆ. ಗಂಡಸರ ಅಂಗಿಯೂ ಆಗಬಹುದೆಂದು ಮಕುಟನ ಮತ. ನೀಶಾರ (ಪು)=ಚಳಿಗಾಳಿಗಳ ನಿವಾರಣೆಗಾಗಿ ಹೊದೆಯುವ ಬಟ್ಟೆ- ಕಂಬಳಿ ಮೊದಲಾದದ್ದು.

೬೮೮. ಅರ್ಧೋರುಕ, ಚಂಡಾತಕ (ನ)=ಹೆಂಗಸರ ಲಂಗ, ಚಡ್ಡಿ. ಆಪ್ರಪದೀನ (ಪು. ಸ್ತ್ರೀ. ನ)=ತುದಿಗಾಲಿನವರೆಗೆ ಇರುವ ಬಟ್ಟೆ, ನಿಲುವಂಗಿ ಮೊದಲಾದದ್ದು.

---

[1] ಬಟ್ಟೆ ಎಂಬ ಅರ್ಥದಲ್ಲಿ ಪಟೀ, ಅಪಟೀ- ಎಂಬ ಈ ಕಾರಾಂತ ಸ್ತ್ರೀಲಿಂಗ ಉಂಟು.
[2] ಉಪಸಂವ್ಯಾನ ಎಂಬ ರೂಪವೂ ಇದೆ.
[3] ಕೂರ್ಪಾಸ ಎಂಬ ರೂಪವೂ ಇದೆ.

ಅಸ್ತ್ರೀ ವಿತಾನಮುಲ್ಲೋಚೋ ದೂಷ್ಯಾದ್ಯಂ ವಸ್ತ್ರವೇಶ್ಮನಿ ।
ಪ್ರತಿಸೀರಾ ಜವನಿಕಾ ಸ್ಯಾತ್ತಿರಸ್ಕರಣೀ ಚ ಸಾ ॥ ೬೮೯
ಪರಿಕರ್ಮಾಂಗಸಂಸ್ಕಾರಃ ಸ್ಯಾನ್ಮಾರ್ಷ್ಟಿರ್ಮಾರ್ಜನಾ ಮೃಜಾ ।
ಉದ್ವರ್ತನೋತ್ಸಾದನೇ ದ್ವೇ ಸಮೇ ಆಪ್ಲಾವ ಆಪ್ಲವಃ ॥ ೬೯೦
ಸ್ನಾನಂ ಚರ್ಚಾ ತು ಚಾರ್ಚಿಕ್ಯಂ ಸ್ಥಾಸಕೋಽಥ ಪ್ರಬೋಧನಮ್ ।
ಅನುಬೋಧಃ ಪತ್ರಲೇಖಾ ಪತ್ರಾಂಗುಲಿರಿಮೇ ಸಮೇ ॥ ೬೯೧
ತಮಾಲಪತ್ರತಿಲಕಚಿತ್ರಕಾಣಿ ವಿಶೇಷಕಮ್ ।
ದ್ವಿತೀಯಂ ಚ ತುರೀಯಂ ಚ ನ ಸ್ತ್ರಿಯಾಮಥ ಕುಂಕುಮಮ್ ॥ ೬೯೨
ಕಾಶ್ಮೀರಜನ್ಮಾಗ್ನಿಶಿಖಂ ವರಂ ಬಾಹ್ಲೀಕಪೀತನೇ ।
ರಕ್ತಸಂಕೋಚಪಿಶುನಂ ಧೀರಲೋಹಿತಚಂದನಮ್ ॥ ೬೯೩

---

೬೮೯. ವಿತಾನ (ಪು. ನ), ಉಲ್ಲೋಚ (ಪು)=ಸಿಂಹಾಸನ ಹಾಸಿಗೆ ಚಪ್ಪರ ಮುಂತಾದ್ದರ ಮೇಲ್ಕಟ್ಟು (Canopy). ದೂಷ್ಯ (ನ)ಮೊದಲಾದದ್ದು ಎಂದರೆ-ಕುಟರ (ಪು. ನ), ಪಟಕುಟೀ (ಸ್ತ್ರೀ), ಪಟವಾಸ (ಪು)=ಡೇರೆ, ಗುಡಾರ (Tent). ಪ್ರತಿಸೀರಾ, ಜವನಿಕಾ, ತಿರಸ್ಕರಣೀ (ತಿರಸ್ಕರಿಣೀ)(ಸ್ತ್ರೀ)=ಪರದೆ, ತೆರೆ.

೬೯೦-೬೯೧. ಪರಿಕರ್ಮನ್ (ನ), ಅಂಗಸಂಸ್ಕಾರ (ಪು)=ಸ್ನಾನಾದಿಗಳಿಂದ ದೇಹವನ್ನು ಅಲಂಕರಿಸಿಕೊಳ್ಳುವುದು. ಮಾರ್ಷ್ಟಿ, ಮಾರ್ಜನಾ, ಮೃಜಾ (ಸ್ತ್ರೀ)=ಸ್ವಚ್ಛಗೊಳಿಸುವುದು, ನಿರ್ಮಲೀಕರಣ. ಉದ್ವರ್ತನ, ಉತ್ಸಾದನ (ನ)=ಮೈ ಉಜ್ಜುವುದು ; ಉಜ್ಜುವ ಶೀಗೆಪುಡಿ ಮೊದಲಾದ್ದು. ಆಪ್ಲಾವ, ಆಪ್ಲವ (ಪು), ಸ್ನಾನ (ನ)=ಸ್ನಾನ. ಚರ್ಚಾ (ಸ್ತ್ರೀ), ಚಾರ್ಚಿಕ್ಯ (ನ), ಸ್ಥಾಸಕ (ಪು)=ಗಂಧಾದಿದ್ರವ್ಯ ; ಗಂಧಾದಿದ್ರವ್ಯವನ್ನು ಲೇಪಿಸಿಕೊಳ್ಳುವುದು. ಪ್ರಬೋಧನ (ನ), ಅನುಬೋಧ (ಪು)=ಅಡಗಿರುವ ಗಂಧವನ್ನು ಉಜ್ಜ್ವಲಗೊಳಿಸುವುದು -ಧೂಪಕ್ಕೆ ಬೆಂಕಿಯನ್ನಿಡುವುದು ; ಉಜ್ಜುವುದು. ಪತ್ರಲೇಖಾ, ಪತ್ರಾಂಗುಲಿ (ಸ್ತ್ರೀ)=ಹೆಂಗಸರ ಕೆನ್ನೆ ಕೈ ಮುಂತಾದ ಸ್ಥಳಗಳಲ್ಲಿ ಅಲಂಕಾರಕ್ಕಾಗಿ ಬರೆವ ಚಿತ್ರರೇಖೆ, ಹಚ್ಚೆ.

೬೯೨-೬೯೩. ತಮಾಲಪತ್ರ (ನ),ತಿಲಕ (ಪು. ನ) ಚಿತ್ರಕ (ನ), ವಿಶೇಷಕ (ಪುನ.)=ಹಣೆಯ ಮೇಲೆ ಇಟ್ಟುಕೊಳ್ಳುವ ಬಟ್ಟು, ತಿಲಕ. ಕುಂಕುಮ, ಕಾಶ್ಮೀರ ಜನ್ಮನ್, ಅಗ್ನಿಶಿಖ, ವರ, ಬಾಹ್ಲೀಕ, ಪೀತನ, ರಕ್ತ, ಸಂಕೋಚ, ಪಿಶುನ, ಧೀರ, ಲೋಹಿತ, ಲೋಹಿತಚಂದನ, ಚಂದನ (ನ)=ಕೇಸರಿ (Saffron).

ಲಾಕ್ಷಾ ರಾಕ್ಷಾ ಜತು ಕ್ಲೀಬೇ ಯಾವೋಽಲಕ್ತೋ ದ್ರುಮಾಮಯಃ ।
ಲವಂಗಂ ದೇವಕುಸುಮಂ ಶ್ರೀಸಂಜ್ಞಮಥ ಜಾಯಕಮ್ ॥ ೬೯೪
ಕಾಲೀಯಕಂ ಚ ಕಾಲಾನುಸಾರ್ಯಂ ಚಾಥ ಸಮಾರ್ಥಕಮ್ ।
ವಂಶಕಾಗುರುರಾಜಾರ್ಹಲೋಹಂ ಕೃಮಿಜಜೋಂಗಕಮ್ ॥ ೬೯೫
ಕಾಲಾಗುರ್ವಗುರು ಸ್ಯಾತ್ತು ಮಂಗಲ್ಯಂ ಮಲ್ಲಿಗಂಧಿ ಯತ್ ।
ಯಕ್ಷಧೂಪಸ್ಸರ್ಜರಸೋ ರಾಲಸರ್ವರಸಾವಪಿ ॥ ೬೯೬
ಬಹುರೂಪೋಽಪ್ಯಥ ವೃಕಧೂಪಕೃತ್ರಿಮಧೂಪಕೌ ।
ತುರುಷ್ಕಃ ಪಿಂಡಕಸ್ಸಿಲ್ಹೋ ಯಾವನೋಽಪ್ಯಥ ಪಾಯಸಃ ॥ ೬೯೭
ಶ್ರೀವಾಸೋ ವೃಕಧೂಪೋಽಪಿ ಶ್ರೀವೇಷ್ಟಸರಲದ್ರವೌ ।
ಮೃಗನಾಭಿರ್ಮೃಗಮದಃ ಕಸ್ತೂರೀ ಚಾಥ ಕೋಲಕಮ್ ॥ ೬೯೮
ಕಕ್ಕೋಲಕಂ ಕೋಶಫಲಮಥ ಕರ್ಪೂರಮಸ್ತ್ರಿಯಾಮ್ ।
ಘನಸಾರಶ್ಚಂದ್ರಸಂಜ್ಞಸ್ಸಿತಾಭ್ರೋ ಹಿಮವಾಲುಕಾ ॥ ೬೯೯

೬೯೪-೬೯೫. ಲಾಕ್ಷಾ, ರಾಕ್ಷಾ (ಸ್ತ್ರೀ), ಜತು (ನ), ಯಾವ, ಅಲಕ್ತ, ದ್ರುಮಾಮಯ (ಪು)=ಅರಗು, ಒಂದು ಮರದ ಅಂಟು. ಲವಂಗ, ದೇವಕುಸುಮ, ಶ್ರೀಸಂಜ್ಞ(ನ)=ಲವಂಗ. ಜಾಯಕ (ಚಾಪಕ),ಕಾಲೀಯಕ, ಕಾಲಾನುಸಾರ್ಯ (ನ)=ಒಂದು ಬಗೆಯ ಸುಗಂಧದ್ರವ್ಯ, ಜಾಯಿಕಾಯಿ. ವಂಶಕ, ಅಗುರು, ರಾಜಾರ್ಹ, ಲೋಹ, ಕೃಮಿಜ (ಕ್ರಿಮಿಜ), ಜೋಂಗಕ (ನ)=ಅಗರು, ಸುಗಂಧದ್ರವ್ಯ.

೬೯೬-೬೯೭. ಕಾಲಾಗುರು (ನ)=ಕಪ್ಪು ಅಗರು. ಮಂಗಲ್ಯ (ನ)=ಮಲ್ಲಿಗೆಯ ವಾಸನೆ ಇರುವ ಅಗರು. ಯಕ್ಷಧೂಪ, ಸರ್ಜರಸ, ರಾಲ, ಸರ್ವರಸ, ಬಹುರೂಪ (ಪು)=ರಾಳ. ವೃಕಧೂಪ, ಕೃತ್ರಿಮಧೂಪ (ಪು)=ಅನೇಕ ಸುವಾಸನಾದ್ರವ್ಯಗಳಿಂದ ಮಾಡಿದ ಧೂಪ, ದಶಾಂಗ.

೬೯೭-೬೯೮. ತುರುಷ್ಕ, ಪಿಂಡಕ, ಸಿಲ್ಹ, ಯಾವನ (ಪು)=ಲೋಭಾನ. ಪಾಯಸ, ಶ್ರೀವಾಸ, ವೃಕಧೂಪ, ಶ್ರೀವೇಷ್ಟ, ಸರಲದ್ರವ (ಪು)=ಸರಳ ವೃಕ್ಷದ ಹಾಲುಮಡ್ಡಿ.

೬೯೮-೬೯೯. ಮೃಗನಾಭಿ (ಪು. ಸ್ತ್ರೀ), ಮೃಗಮದ (ಪು), ಕಸ್ತೂರೀ (ಸ್ತ್ರೀ)=ಕಸ್ತೂರಿ. ಕೋಲಕ, ಕಕ್ಕೋಲಕ, ಕೋಶಫಲ (ನ)=ತಕ್ಕೋಲವೆಂಬ ಮರದಿಂದ ತೆಗೆದ ಪರಿಮಳದ್ರವ್ಯ. ಕರ್ಪೂರ (ಪು. ನ), ಘನಸಾರ, ಚಂದ್ರಸಂಜ್ಞ, ಸಿತಾಭ್ರ (ಪು), ಹಿಮವಾಲುಕಾ (ಸ್ತ್ರೀ)=ಕರ್ಪೂರ.

ಗಂಧಸಾರೋ ಮಲಯಜೋ ಭದ್ರಶ್ರೀಶ್ಚಂದ್ರನೋಽಸ್ತ್ರಿಯಾಮ್ ।
ತೈಲಪರ್ಣಿಕಗೋಶೀರ್ಷೇ ಹರಿಚಂದನಮಸ್ತ್ರಿಯಾಮ್ ॥ ೨೦೦
ತಿಲಪರ್ಣೀ ತು ಪತ್ರಾಂಗಂ ರಂಜನಂ ರಕ್ತಚಂದನಮ್ ।
ಕುಚಂದನಂ ಚಾಥ ಜಾಕಿತೋಶಜಾತಿ ಫಲೇ ಸಮೇ ॥ ೨೦೧
ಕರ್ಪೂರಾಗರುಕಸ್ತೂರೀಕಕ್ಕೋಲೈರ್ಯಕ್ಷಕರ್ದಮಃ ।
ಗಾತ್ರಾನುಲೇಪನೀ ವರ್ತಿರ್ವರ್ಣಕಂ ಸ್ಯಾದ್ವಿಲೇಪನಮ್ ॥ ೨೦೨
ಚೂರ್ಣಾನಿ ವಾಸಯೋಗಾಸ್ಸ್ಯುರ್ಭಾವಿತಂ ವಾಸಿತಂ ತ್ರಿಷು ।
ಸಂಸ್ಕಾರೋ ಗಂಧಮಾಲ್ಯಾದ್ಯೈರ್ಯಸ್ಸ್ಯಾತ್ತದಧಿವಾಸನಮ್ ॥ ೨೦೩
ಮಾಲ್ಯಂ ಮಾಲಾಸ್ರಜೌ ಮೂರ್ಧ್ನಿ ಕೇಶಮಧ್ಯೇ ತು ಗರ್ಭಕಃ ।
ಪ್ರಭ್ರಷ್ಟಕಂ ಶಿಖಾಲಂಬಿ ಪುರೋ ನ್ಯಸ್ತಂ ಲಲಾಮಕಮ್ ॥ ೨೦೪
ಪ್ರಾಲಂಬಮೃಜುಲಂಬಿ ಸ್ಯಾತ್ಕಂಠಾದ್ವೈಕಕ್ಷಕಂ ತು ತತ್ ।
ಯತ್ತಿರ್ಯಕ್ ಕ್ಷಿಪ್ತಮುರಸಿ ಶಿಖಾಸ್ವಾಪೀಡಶೇಖರೌ ॥ ೨೦೫

---

೨೦೦. ಗಂಧಸಾರ, ಮಲಯಜ, ಭದ್ರಶ್ರೀ (ಪು),ಚಂದನ (ಪು.ನ)=ಗಂಧದ ಮರ ; ಅದರಿಂದ ತೆಗೆದ ಗಂಧ. ತೈಲಪರ್ಣಿಕ, ಗೋಶೀರ್ಷ (ನ), ಹರಿಚಂದನ (ಪು. ನ)=ಬೇರೆ ಬೇರೆ ಜಾತಿಯ ಗಂಧದ ಮರ.

೨೦೧. ತಿಲಪರ್ಣೀ (ಸ್ತ್ರೀ),ಪತ್ರಾಂಗ, ರಂಜನ, ರಕ್ತಚಂದನ, ಕುಚಂದನ (ನ)=ಕೆಂಪು ಚಂದನ. ಜಾತಿಕೋಶ, ಜಾತಿಫಲ (ನ)=ಜಾಯಿಕಾಯಿ.

೨೦೨. ಯಕ್ಷಕರ್ದಮ (ಪು)=ಕರ್ಪೂರ, ಅಗರು, ಕಸ್ತೂರಿ, ತಕ್ಕೋಲ-ಇವುಗಳಿಂದ ಮಾಡಿದ ಸುಗಂಧದ್ರವ್ಯ. ಗಾತ್ರಾನುಲೇಪನೀ, ವರ್ತಿ (ಸ್ತ್ರೀ), ವರ್ಣಕ, ವಿಲೇಪನ (ನ)=ಮೈಗೆ ಹಚ್ಚಿ ಕೊಳ್ಳಲು ಸಿದ್ಧಪಡಿಸಿದ ಗಂಧದ್ರವ್ಯ, ಗಂಧದ ಬಿಲ್ಲೆ. ೨೦೩. ಚೂರ್ಣ (ನ), ವಾಸಯೋಗ (ಪು)=ಗಂಧದಪುಡಿ. ಭಾವಿತ, ವಾಸಿತ (ಪು. ಸ್ತ್ರೀ.ನ)=ಸುಗಂಧವನ್ನು ಲೇಪಿಸಿದ ವಸ್ತು. ಅಧಿವಾಸನ (ನ)=ಗಂಧಮಾಲ್ಯಗಳಿಂದ ಪರಿಷ್ಕಾರಗೊಳಿಸುವುದು.

೨೦೪. ಮಾಲ್ಯ (ನ),ಮಾಲಾ, ಸ್ರಜ್ (ಸ್ತ್ರೀ)=ತಲೆಯಲ್ಲಿ ಧರಿಸುವ ಹೂಮಾಲೆ. ಗರ್ಭಕ (ಪು)=ಕೇಶದೊಳಗೆ ಮುಡಿದಿರುವ ಹೂ. ಪ್ರಭ್ರಷ್ಟಕ (ನ)=ಕೂದಲಿನಲ್ಲಿ ನೇತಾಡುವ ಹೂಮಾಲೆ. ಲಲಾಮಕ (ನ)=ಹಣೆಯ ಮೇಲೆ ನೇತಾಡುವಂತೆ ಮುಡಿದ ಹೂಮಾಲೆ. ೨೦೫. ಪ್ರಾಲಂಬ (ನ)=ಕೊರಳಲ್ಲಿ ನೆಟ್ಟಗೆ ಜೋತಾಡುವ ಮಾಲೆ. ವೈಕಕ್ಷಕ (ನ)=ಜನಿವಾರ ದಂತೆ ಧರಿಸಿದ ಮಾಲೆ. ಆಪೀಡ, ಶೇಖರ (ಪು)=ಶಿಖೆಯ ಅಗ್ರಭಾಗದಲ್ಲಿ ಮುಡಿದ ಹೂ.

ರಚನಾ ಸ್ಯಾತ್ಪರಿಸ್ಪಂದ ಆಭೋಗಃ ಪರಿಪೂರ್ಣತಾ ।
ಉಪಧಾನಂ ತೂಪಬರ್ಹಃ ಶಯ್ಯಾಯಾಂ ಶಯನೀಯವತ್ ॥ ೨೦೬
ಶಯನಂ ಮಂಚಪರ್ಯಂಕಪಲ್ಯಂಕಾಃ ಖಟ್ವಯಾ ಸಮಾಃ ।
ಗೇಂದುಕಃ ಕಂದುಕೋ ದೀಪಃ ಪ್ರದೀಪಃ ಪೀಠಮಾಸನಮ್ ॥ ೨೦೭
ಸಮುದ್ಗಕಸ್ಸಂಪುಟಕಃ ಪ್ರತಿಗ್ರಾಹಃ ಪತದ್ಗ್ರಹಃ ।
ಪ್ರಸಾಧನೀ ಕಂಕತಿಕಾ ಪಿಷ್ಟಾತಃ ಪಟವಾಸಕಃ ॥ ೨೦೮
ದರ್ಪಣೇ ಮುಕುರಾದರ್ಶೌ ವ್ಯಜನಂ ತಾಲವೃಂತಕಮ್ ।

ಇತಿ ಮನುಷ್ಯವರ್ಗಃ

೨೦೬-೨೦೭. ರಚನಾ (ಸ್ತ್ರೀ),ಪರಿಸ್ಪಂದ (ಪು)=ವಸ್ತ್ರಾದ್ಯಲಂಕಾರಗಳಲ್ಲಿ ಕೌಶಲ ಪ್ರದರ್ಶನ. ಆಭೋಗ (ಪು), ಪರಿಪೂರ್ಣತಾ (ಸ್ತ್ರೀ)=ವಸ್ತುಗಳಲ್ಲಿ ಯಾವ ಕೊರತೆಯೂ ಇಲ್ಲದ ಪರಿಪೂರ್ಣತೆ. ಉಪಧಾನ (ನ), ಉಪಬರ್ಹ (ಪು)=ತಲೆದಿಂಬು. ಶಯ್ಯಾ (ಸ್ತ್ರೀ), ಶಯನೀಯ, ಶಯನ (ನ)=ಹಾಸಿಗೆ. ಮಂಚ, ಪರ್ಯಂಕ, ಪಲ್ಯಂಕ (ಪು), ಖಟ್ವಾ (ಸ್ತ್ರೀ)=ಮಂಚ. ಗೇಂದುಕ, ಕಂದುಕ (ಪು)=ಚೆಂಡು. ದೀಪ, ಪ್ರದೀಪ (ಪು)=ದೀವಿಗೆ. ಪೀಠ, ಆಸನ (ನ)=ಗದ್ದುಗೆ, ಮಣೆ ಮುಂತಾದ ಕುಳಿತುಕೊಳ್ಳುವ ಸಾಮಗ್ರಿ.

೨೦೮. ಸಮುದ್ಗಕ, ಸಂಪುಟಕ (ಪು)=ಕರಡಿಗೆ, ಭರಣಿ (Caset) ಪ್ರತಿಗ್ರಾಹ, ಪತದ್ಗ್ರಹ (ಪು)=ಪೀಕದಾನಿ. ಪ್ರಸಾಧನೀ, ಕಂಕತಿ[1]ಕಾ (ಸ್ತ್ರೀ)=ಬಾಚಣಿಗೆ. ಪಿಷ್ಟಾತ, ಪಟವಾಸಕ (ಪು)=ಬಟ್ಟೆಗಳಿಗೆ ಹಾಕುವ ಸುಗಂಧದ್ರವ್ಯ.

೨೦೯. ದರ್ಪಣ, ಮು[2]ಕುರ, ಆದರ್ಶ (ಪು)=ಕನ್ನಡಿ. ವ್ಯಜನ, ತಾಲವೃಂತಕ (ನ)=ಬೀಸಣಿಗೆ.

---

1 ಕಂಕತ ಎಂಬ ನಪುಂಸಕ ಲಿಂಗವೂ ಇದೆ.

2 ಮಕುರ. ಎಂಬ ರೂಪವೂ ಇದೆ.

೭. ಬ್ರಹ್ಮವರ್ಗ

ಸಂತತಿರ್ಗೋತ್ರಜನನಕುಲಾನ್ಯಭಿಜನಾನ್ವಯೌ ॥ ೭೦೯
ವಂಶೋಽನ್ವವಾಯಃ ಸಂತಾನೋ ವರ್ಣಾಃ ಸ್ಯುರ್ಬ್ರಾಹ್ಮಣಾದಯಃ।
ವಿಪ್ರಕ್ಷತ್ರಿಯವಿಟ್ಛೂದ್ರಾಶ್ಚಾತುರ್ವರ್ಣ್ಯಮಿತಿ ಸ್ಮೃತಮ್ ॥ ೭೧೦
ರಾಜಬೀಜೀ ರಾಜವಂಶ್ಯೋ ಬೀಜ್ಯಸ್ತು ಕುಲಸಂಭವಃ ।
ಮಹಾಕುಲಕುಲೀನಾರ್ಯಸಭ್ಯ ಸಜ್ಜನಸಾಧವಃ ॥ ೭೧೧
ಬ್ರಹ್ಮಚಾರೀ ಗೃಹೀ ವಾನಪ್ರಸ್ಥೋ ಭಿಕ್ಷುಶ್ಚತುಷ್ಟಯೇ ।
ಆಶ್ರಮೋಽಸ್ತ್ರೀ ದ್ವಿಜಾತ್ಯಗ್ರಜನ್ಮಭೂದೇವವಾಡವಾಃ ॥ ೭೧೨
ವಿಪ್ರಶ್ಚ ಬ್ರಾಹ್ಮಣೋಽಸೌ ಷಟ್ಕರ್ಮಾ ಯಾಗಾದಿಭಿರ್ಯುತಃ ।
ವಿದ್ವಾನ್ ವಿಪಶ್ಚಿದ್ದೋಷಜ್ಞಃ ಸನ್ಸುಧೀಃ ಕೋವಿದೋ ಬುಧಃ ॥ ೭೧೩
ಧೀರೋ ಮನೀಷೀ ಜ್ಞಃ ಪ್ರಾಜ್ಞಸ್ಸಂಖ್ಯಾವಾನ್ಪಂಡಿತಃ ಕವಿಃ ।
ಧೀಮಾನ್ ಸೂರಿಃ ಕೃತೀ ಕೃಷ್ಟಿರ್ಲಬ್ಧವರ್ಣೋ ವಿಚಕ್ಷಣಃ ॥ ೭೧೪

---

೭. ಬ್ರಹ್ಮವರ್ಗ

೭೦೯-೭೧೦. ಸಂತತಿ (ಸ್ತ್ರೀ), ಗೋತ್ರ, ಜನನ, ಕುಲ (ನ), ಅಭಿಜನ, ಅನ್ವಯ, ವಂಶ, ಅನ್ವವಾಯ, ಸಂತಾನ (ಪು)=ಕುಲ, ಮನೆತನ. ವರ್ಣ (ಪು)=ಬ್ರಾಹ್ಮಣಾದಿ ಚತುಷ್ಟಯ. ಚಾತುರ್ವರ್ಣ್ಯ (ನ)=ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳು.

೭೧೧. ರಾಜಬೀಜಿನ್, ರಾಜವಂಶ್ಯ (ಪು)=ರಾಜವಂಶದಲ್ಲಿ ಹುಟ್ಟಿದವನು. ಬೀಜ್ಯ, ಕುಲಸಂಭವ (ಪು)=ಕುಲದಲ್ಲಿ ಜನಿಸಿದವನು. ಮಹಾಕುಲ, ಕುಲೀನ, ಆರ್ಯ, ಸಭ್ಯ, ಸಜ್ಜನ, ಸಾಧು (ಪು)=ಸತ್ಕುಲದಲ್ಲಿ ಹುಟ್ಟಿದವನು.

೭೧೨-೭೧೩. ಬ್ರಹ್ಮಚಾರಿನ್ (ಪು)=ಉಪನಯನವಾದವನು, ವೇದಾಧ್ಯಯನವ್ರತದಲ್ಲಿ ತೊಡಗಿದವನು. ಗೃಹಿನ್ (ಪು)=ಮದುವೆಯಾದವನು. ವಾನಪ್ರಸ್ಥ (ಪು)=ವನದಲ್ಲಿ ತಪಸ್ಸನ್ನಾಚರಿಸುವವನು. ಭಿಕ್ಷು (ಪು)=ಸಂನ್ಯಾಸಿ. ಆಶ್ರಮ (ಪು)=ಬ್ರಹ್ಮಚಾರಿ ಮೊದಲಾದ ನಾಲ್ವರ ಅವಸ್ಥಾ ಧರ್ಮ. ದ್ವಿಜಾತಿ, ಅಗ್ರಜನ್ಮನ್, ಭೂದೇವ, ವಾಡವ, ವಿಪ್ರ, ಬ್ರಾಹ್ಮಣ (ಪು)=ಬ್ರಾಹ್ಮಣ. ಷಟ್ಕರ್ಮನ್ (ಪು)=ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಮತ್ತು ಪ್ರತಿಗ್ರಹ- ಎಂಬ ಆರು ಕರ್ತವ್ಯಗಳನ್ನು ನೆರವೇರಿಸುವ ಬ್ರಾಹ್ಮಣ.

ದೂರದರ್ಶೀ ದೀರ್ಘದರ್ಶೀ ಶ್ರೋತ್ರಿಯಚ್ಛಾಂದಸೌ ಸಮೌ ।
ಉಪಾಧ್ಯಾಯೋಽಧ್ಯಾಪಕೋಽಥ ಸ್ಯಾನ್ನಿಷೇಕಾದಿಕೃದ್ಗುರುಃ ॥ ೭೧೫
ಮನ್ತ್ರವ್ಯಾಖ್ಯಾಕೃದಾಚಾರ್ಯಃ ಆದೇಷ್ಟಾ ತ್ವಧ್ವರೇ ವ್ರತೀ ।
ಯಷ್ಟಾ ಚ ಯಜಮಾನಶ್ಚ ಸ ಸೋಮವತಿ ದೀಕ್ಷಿತಃ ॥ ೭೧೬
ಇಜ್ಯಾಶೀಲೋ ಯಾಯಜೂಕೋ ಯಜ್ವಾ ತು ವಿಧಿನೇಷ್ಟವಾನ್ ।
ಸ ಗೀಷ್ಪತೀಷ್ಟ್ಯಾ ಸ್ಥಪತಿಃ ಸೋಮಪೀಥೀ ತು ಸೋಮಪಃ ॥ ೭೧೭
ಸರ್ವವೇದಾಃ ಸ ಯೇನೇಷ್ಟೋ ಯಾಗಸ್ಸರ್ವಸ್ವದಕ್ಷಿಣಃ ।
ಅನೂಚಾನಃ ಪ್ರವಚನೇ ಸಾಂಗೇಽಧೀತೀ ಗುರೋಸ್ತು ಯಃ ॥ ೭೧೮

೭೧೩-೭೧೪. ವಿದ್ವಸ್, ವಿಪಶ್ಚಿತ್, ದೋಷಜ್ಞ, ಸತ್, ಸುಧೀ, ಕೋವಿದ, ಬುಧ, ಧೀರ, ಮನೀಷಿನ್, ಜ್ಞ, ಪ್ರಾಜ್ಞ, ಸಂಖ್ಯಾವತ್, ಪಂಡಿತ, ಕವಿ, ಧೀಮತ್, ಸೂರಿ, ಕೃತಿನ್, ಕೃಷ್ಟಿ, ಲಬ್ಧವರ್ಣ, ವಿಚಕ್ಷಣ1 (ಪು)=ವಿದ್ವಾಂಸ.

೭೧೫. ದೂರದರ್ಶಿನ್, ದೀರ್ಘದರ್ಶಿನ್ (ಪು)=ದೀರ್ಘಾಲೋಚನೆಯುಳ್ಳವನು. ಶ್ರೋತ್ರಿಯ, ಛಾಂದಸ (ಪು)=ವೇದಾಧ್ಯಯನ ಮಾಡಿದವನು. ಉಪಾಧ್ಯಾಯ, ಅಧ್ಯಾಪಕ (ಪು)=ವೇದ ಅಥವಾ ವೇದಾಂಗವನ್ನು ಕಲಿಸತಕ್ಕವನು ; ಉಪಾಧ್ಯಾಯ. ಗುರು (ಪು)=ನಿಷೇಕಾದಿ ಸಂಸ್ಕಾರಗಳನ್ನು ಮಾಡಿಸಿದವನು.

೭೧೬. ಆಚಾರ್ಯ (ಪು)=ವೇದಾರ್ಥವನ್ನು ಬೋಧಿಸುವವನು. ಆದೇಷ್ಟೃ (ಆದಿಷ್ಟಿನ್), ವ್ರತಿನ್, ಯಷ್ಟೃ, ಯಜಮಾನ (ಪು)=ಯಜ್ಞಕರ್ತ. ದೀಕ್ಷಿತ (ಪು)=ಸೋಮಯಾಗಕರ್ತ.

೭೧೭. ಇಜ್ಯಾಶೀಲ, ಯಾಯಜೂಕ (ಪು)=ಆಗಾಗ ಯಜ್ಞಮಾಡತಕ್ಕವನು. ಯಜ್ವನ್ (ಪು)=ವಿಧಿಪೂರ್ವಕವಾಗಿ ಯಜ್ಞಮಾಡಿದವನು. ಸ್ಥಪತಿ (ಪು)=ಬೃಹಸ್ಪತಿಯಾಗವನ್ನು ಮಾಡಿದವನು. ಸೋಮಪೀಥಿನ್, ಸೋಮಪ (ಪು)=ಯಜ್ಞದಲ್ಲಿ ಸೋಮಪಾನವನ್ನು ಮಾಡಿದವನು.

೭೧೮. ಸರ್ವವೇದಸ್ (ಪು)=ಸರ್ವಸ್ವವೂ ದಕ್ಷಿಣೆಯಾಗಿರುವ ವಿಶ್ವಜಿತ್ ಮುಂತಾದ ಯಾಗವನ್ನು ಮಾಡಿದವನು. ಅನೂಚಾನ (ಪು)=ವೇದ-ವೇದಾಂಗಗಳನ್ನು ಕಲಿತವನು.

---

1 ಅರ್ಥಾನುಸಾರವಾಗಿ ಇವು ಸ್ತ್ರೀಲಿಂಗವನ್ನು ಪಡೆಯುತ್ತವೆ : ವಿದುಷೀ, ಸತೀ, ಮನೀಷಿಣೀ, ಸಂಖ್ಯಾವತೀ, ಧೀಮತೀ, ಕೃತಿನೀ.

ಲಬ್ಧಾನುಜ್ಞಸ್ಸಮಾವೃತ್ತಃ ಸುತ್ವಾ ತ್ವಭಿಷವೇ ಕೃತೀ ।
ಛಾತ್ರಾಂತೇವಾಸಿನೌ ಶಿಷ್ಯೇ ಶೈಕ್ಷಾಃ ಪ್ರಾಥಮಕಲ್ಪಿಕಾಃ ॥ ೭೧೯
ಏಕಬ್ರಹ್ಮವ್ರತಾಚಾರಾ ಮಿಥಃ ಸಬ್ರಹ್ಮಚಾರಿಣಃ ।
ಸತೀರ್ಥ್ಯಾಸ್ತ್ವೇಕ ಗುರುವಶ್ಚಿತವಾನಗ್ನಿಮಗ್ನಿಚಿತ್ ॥ ೭೨೦
ಪಾರಂಪರ್ಯೋಪದೇಶೇ ಸ್ಯಾದೈತಿಹ್ಯಮಿತಿಹಾವ್ಯಯಮ್ ।
ಉಪಜ್ಞಾ ಜ್ಞಾನಮಾದ್ಯಂ ಸ್ಯಾತ್ ಜ್ಞಾತ್ವಾರಂಭ ಉಪಕ್ರಮಃ ॥ ೭೨೧
ಯಜ್ಞಸ್ಸವೋಽಧ್ವರೋ ಯಾಗಸ್ಸಪ್ತತಂತುರ್ಮಖಃ ಕ್ರತುಃ ।
ಪಾಠೋ ಹೋಮಶ್ಚಾತಿಥೀನಾಂ ಸಪರ್ಯಾತರ್ಪಣಂ ಬಲಿಃ ॥ ೭೨೨
ಏತೇ ಪಂಚ ಮಹಾಯಜ್ಞಾ ಬ್ರಹ್ಮಯಜ್ಞಾದಿನಾಮಕಾಃ ।
ಸಮಜ್ಯಾ ಪರಿಷದ್ಗೋಷ್ಠೀ ಸಭಾಸಮಿತಿಸಂಸದಃ ॥ ೭೨೩

---

೭೧೯. ಸಮಾವೃತ್ತ (ಪು)=ಅಧ್ಯಯನವನ್ನು ಮುಗಿಸಿ ಗುರುವಿನ ಅನುಜ್ಞೆಯನ್ನು ಪಡೆದು ಗುರುಕುಲದಿಂದ ನಿವೃತ್ತನಾದವನು. ಸುತ್ವನ್ (ಪು)=ಅವಭೃಥಸ್ನಾನವನ್ನು ಮಾಡಿದವನು ; ಸೋಮಲತೆಯನ್ನು ಕುಟ್ಟಿ ರಸವನ್ನು ತೆಗೆಯುವುದರಲ್ಲಿ ಕುಶಲ. ಛಾತ್ರ, ಅಂತೇವಾಸಿನ್, ಶಿಷ್ಯ (ಪು)=ಶಿಷ್ಯ. ಶೈಕ್ಷ, ಪ್ರಾಥಮಕಲ್ಪಿಕ (ಪು)=ಹೊಸದಾಗಿ ಅಧ್ಯಯನವನ್ನು ಆರಂಭಿಸಿದ ವಿದ್ಯಾರ್ಥಿ.

೭೨೦. ಸಬ್ರಹ್ಮಚಾರಿನ್ (ಪು)=ಪರಸ್ಪರ ಒಂದೇ ವೇದಶಾಖೆಯನ್ನೋದುವ ವಿದ್ಯಾರ್ಥಿ. ಸತೀರ್ಥ್ಯ(ಪು)=ಒಬ್ಬನೇ ಗುರುವಾಗಿ ಉಳ್ಳ ಸಹಾಧ್ಯಾಯಿ. ಅಗ್ನಿಚಿತ್ (ಪು)=ಅಗ್ನಿಚಯನ ಮಾಡಿದವನು, ಆಹಿತಾಗ್ನಿ.

೭೨೧. ಐತಿಹ್ಯ (ನ), ಇತಿಹ (ಅವ್ಯಯ)=ಪರಂಪರೆಯಿಂದ ಬಂದ ಜನರ ಹೇಳಿಕೆ. ಉಪಜ್ಞಾ (ಸ್ತ್ರೀ)=ಆದ್ಯಜ್ಞಾನ, ತಾನಾಗಿ ಹೊಳೆದ ಜ್ಞಾನ ; (ಅಂಥ ಜ್ಞಾನಕ್ಕೆ ಗೋಚರವಾದದ್ದು (ನ) : ಉದಾ : ಪ್ರಾಚೇತಸೋಪಜ್ಞಂ ರಾಮಾಯಣಂ, ಪಾಣಿನ್ಯುಪಜ್ಞಂ ವ್ಯಾಕರಣಂ). ಉಪಕ್ರಮ (ಪು)=ಜ್ಞಾನಪೂರ್ವಕವಾದ ಪ್ರಥಮಾರಂಭ ; (ಅಂತಹ ಉಪಕ್ರಮಕ್ಕೆ ವಿಷಯವಾದದ್ದು (ನ) : ನಂದೋಪಕ್ರಮಂ ದ್ರೋಣಃ).

೭೨೨-೭೨೩. ಯಜ್ಞ, ಸವ, ಅಧ್ವರ, ಯಾಗ, ಸಪ್ತತಂತು, ಮಖ, ಕ್ರತು (ಪು)=ಯಜ್ಞ. ಪಾಠ (ಪು)=ವೇದಪಾಠ, ಬ್ರಹ್ಮಯಜ್ಞ. ಹೋಮ (ಪು)=ಹವನ, ದೇವಯಜ್ಞ. ಅತಿಥಿ ಸಪರ್ಯಾ (ಸ್ತ್ರೀ)=ಅತಿಥಿಸತ್ಕಾರ, ಮನುಷ್ಯಯಜ್ಞ. ತರ್ಪಣ (ನ)=ಪಿತೃತರ್ಪಣ, ಪಿತೃಯಜ್ಞ. ಬಲಿ (ಪು)=ಭೂತಬಲಿ, ಭೂತಯಜ್ಞ. ಈ ವೇದಪಾಠಾದಿಗಳು ಪಂಚಮಹಾಯಜ್ಞಗಳು.

ಆಸ್ಥಾನೀ ಕ್ಲೀಬಮಾಸ್ಥಾನಂ ಸ್ತ್ರೀನಪುಂಸಕಯೋಸ್ಸದಃ ।
ಪ್ರಾಗ್ವಂಶಃ ಪ್ರಾಗ್ಘವಿರ್ಗೇಹಾತ್ಸದಸ್ಯಾ ವಿಧಿದರ್ಶಿನಃ ॥ ೭೨೪
ಸಭಾಸದಸ್ಸಭಾಸ್ತಾರಾಸ್ಸಭ್ಯಾಸ್ಸಾಮಾಜಿಕಾಶ್ಚ ತೇ ।
ಅಧ್ವರ್ಯೂದ್ಗಾತೃಹೋತಾರೋ ಯಜುಸ್ಸಾಮರ್ಗ್ವಿದಃ ಕ್ರಮಾತ್ ॥ ೭೨೫
ಆಗ್ನೀಧ್ರಾದ್ಯಾ ಧನೈರ್ವಾರ್ಯಾ ಋತ್ವಿಜೋ ಯಾಜಕಾಶ್ಚತೇ ।
ವೇದಿಃ ಪರಿಷ್ಕೃತಾ ಭೂಮಿಃ ಸಮೇ ಸ್ಥಂಡಿಲಚತ್ವರೇ ॥ ೭೨೬
ಚಷಾಲೋ ಯೂಪಕಟಕಃ ಕುಂಬಾ ಸುಗಹನಾ ವೃತಿಃ ।
ಯೂಪಾಗ್ರಂ ತರ್ಮ ನಿರ್ಮಂಥ್ಯದಾರುಣಿ ತ್ವರಣಿರ್ದ್ವಯೋಃ ॥ ೭೨೭

೭೨೩-೭೨೪. ಸಮಜ್ಯಾ, ಪರಿಷದ್, ಗೋಷ್ಠೀ, ಸಭಾ, ಸಮಿತಿ, ಸಂಸದ್, ಆಸ್ಥಾನೀ (ಸ್ತ್ರೀ), ಆಸ್ಥಾನ (ನ), ಸದಸ್ (ಸ್ತ್ರೀ. ನ)=ಸಭೆ. ಪ್ರಾಗ್ವಂಶ (ಪು)=ಹೋಮದ್ರವ್ಯಶಾಲೆಯ ಪೂರ್ವ ದಿಕ್ಕಿನಲ್ಲಿ ಯಜಮಾನಾದಿಗಳು ಇರುವ ಸ್ಥಳ. ಸದಸ್ಯ, ವಿಧಿದರ್ಶಿನ್ (ಪು)=ಯಾಗದಲ್ಲಿ ನ್ಯೂನಾತಿರೇಕಗಳು ಬಾರದಂತೆ ನೋಡಿಕೊಳ್ಳುವ ಋತ್ವಿಜನು.

೭೨೫. ಸಭಾಸದ್, ಸಭಾಸ್ತಾರ, ಸಭ್ಯ, ಸಾಮಾಜಿಕ (ಪು)=ಸಭೆಯಲ್ಲಿರುವವನು. ಅಧ್ವರ್ಯು (ಪು)= ಯಜುರ್ವೇದವನ್ನು ಬಲ್ಲ ಋತ್ವಿಜ. ಉದ್ಗಾತೃ (ಪು)=ಸಾಮವೇದವನ್ನು ಬಲ್ಲ ಋತ್ವಿಜ. ಹೋತೃ (ಪು)=ಋಗ್ವೇದವನ್ನು ಬಲ್ಲ ಋತ್ವಿಜ.

೭೨೬. ಋತ್ವಿಜ್, ಯಾಜಕ (ಪು)=ಯಜಮಾನನಿಂದ ದಕ್ಷಿಣೆ ಮೊದಲಾದ್ದನ್ನು ಪಡೆದು ಯಜ್ಞವನ್ನು ನಿರ್ವಹಿತಕ್ಕ ಆಗ್ನೀಧ್ರಾ[1]ದಿಗಳು. ವೇದಿ (ಸ್ತ್ರೀ)=ಯಾಗಕ್ಕಾಗಿ ಚತುರಸ್ರವಾಗಿ ಸಂಸ್ಕರಿಸಲ್ಪಟ್ಟ ಸ್ಥಳ. ಸ್ಥಂಡಿಲ, ಚತ್ವರ (ನ)=ಅಗ್ನಿಹೋತ್ರವನ್ನಿಡುವುದಕ್ಕಾಗಿ ಸಂಸ್ಕರಿಸಲ್ಪಟ್ಟ ಸ್ಥಳ.

೭೨೭. ಚಷಾಲ. ಯೂಪಕಟಕ (ಪು)=ಯೂಪಸ್ತಂಭದ ಶಿರೋಭಾಗದಲ್ಲಿರುವ ಮರದ ಬಳೆ. ಕುಂಬಾ (ಸ್ತ್ರೀ)=ಯಜ್ಞಶಾಲೆಯ ಸುತ್ತಲೂ ಕಟ್ಟಿದ ಬೇಲಿ. ತರ್ಮನ್ (ನ)=ಯೂಪ ಸ್ತಂಭದ ತುದಿ. ಅರಣಿ (ಪು. ಸ್ತ್ರೀ)=ಯಾಗಾಗ್ನಿಯನ್ನು ಮಥಿಸಿ ತೆಗೆಯುವ ಶಮೀವೃಕ್ಷದ ತುಂಡು.

1 ಒಟ್ಟು ಋತ್ವಿಜರ ಸಂಖ್ಯೆ ಹದಿನಾರು : ಆಗ್ನೀಧ್ರ, ಬ್ರಹ್ಮನ್, ಉದ್ಗಾತೃ, ಹೋತೃ, ಅಧ್ವರ್ಯು, ಬ್ರಾಹ್ಮಣಾಚ್ಛಂಸಿನ್, ಅಚ್ಛಾವಾಕ, ನೇಷ್ಟೃ, ಪೋತೃ, ಪ್ರಸ್ತೋತೃ, ಪ್ರತಿಹರ್ತೃ, ಪ್ರತಿಪ್ರಸ್ಥಾತೃ, ಉನ್ನೇತೃ, ಗ್ರಾವಸ್ತುತ್, ಮೈತ್ರಾವರುಣ ಮತ್ತು ಸುಬ್ರಹ್ಮಣ್ಯ (ಪು).

ದಕ್ಷಿಣಾಗ್ನಿರ್ಗಾರ್ಹಪತ್ಯಾಹವನೀಯೌ ತ್ರಯೋಽಗ್ನಯಃ ।
ಅಗ್ನಿತ್ರಯಮಿದಂ ತ್ರೇತಾ ಪ್ರಣೀತಃ ಸಂಸ್ಕೃತೋಽನಲಃ ॥ ೭೨೮
ಸಮೂಹ್ಯಃ ಪರಿಚಾಯ್ಯೋಪಚಾಯ್ಯಾವಗ್ನೌ ಪ್ರಯೋಗಿಣಃ ।
ಯೋ ಗಾರ್ಹಪತ್ಯಾದಾನೀಯ ದಕ್ಷಿಣಾಗ್ನಿಃ ಪ್ರಣೀಯತೇ ॥ ೭೨೯
ತಸ್ಮಿನ್ ಆನಾಯ್ಯೋಽಥಾಗ್ನಾಯೀ ಸ್ವಾಹಾ ಚ ಹುತಭುಕ್ಪ್ರಿಯಾ ।
ಋಕ್ಸಾಮಿಧೇನೀ ಧಾಯ್ಯಾ ಚ ಯಾ ಸ್ಯಾದಗ್ನಿಸಮಿಂಧನೇ ॥ ೭೩೦
ಗಾಯತ್ರೀಪ್ರಮುಖಂ ಛಂದೋ ಹವ್ಯಪಾಕೇ ಚರುಃ ಪುಮಾನ್ ।
ಆಮಿಕ್ಷಾ ಸಾ ಶೃತೋಷ್ಣೇ ಯಾ ಕ್ಷೀರೇ ಸ್ಯಾದ್ದಧಿಯೋಗತಃ ॥ ೭೩೧
ಧವಿತ್ರಂ ವ್ಯಜನಂ ತದ್ಯದ್ರಚಿತಂ ಮೃಗಚರ್ಮಣಾ ।
ಪೃಷದಾಜ್ಯಂ ಸದಧ್ಯಾಜ್ಯೇ ಪರಮಾನ್ನಂ ತು ಪಾಯಸಮ್ ॥ ೭೩೨

---

೭೨೮. ದಕ್ಷಿಣಾಗ್ನಿ (ಪು)=ವೇದಿಯ ದಕ್ಷಿಣದಲ್ಲಿ ಪ್ರತಿಷ್ಠಿತವಾಗುವ ಅಗ್ನಿ. ಗಾರ್ಹಪತ್ಯ (ಪು)=ಯಜಮಾನನಿಂದ ಮೊದಲೇ ಸಂಸ್ಕೃತವಾದ ಅಗ್ನಿ, ಆಹವನೀಯ (ಪು)=ಯಜ್ಞ ಸಮಾಪ್ತಿಪರ್ಯಂತವೂ ಉಪಯುಕ್ತವಾದ ಅಗ್ನಿ. ತ್ರೇತಾ (ಸ್ತ್ರೀ)=ದಕ್ಷಿಣಾಗ್ನಿ ಮುಂತಾದ ಮೂರು ಅಗ್ನಿಗಳು. ಪ್ರಣೀತ (ಪು)=ಸಂಸ್ಕೃತವಾದ ಅಗ್ನಿ.

೭೨೯. -೭೩೦. ಸಮೂಹ್ಯ, ಪರಿಚಾರ್ಯ, ಉಪಚಾಯ್ಯ (ಪು)=ಅಗ್ನಿವಿಶೇಷ ; ಅಗ್ನಿವಿಶೇಷವನ್ನಿಡುವ ಸ್ಥಳ. ಆನಾಯ್ಯ (ಪು)=ಗಾರ್ಹಪತ್ಯಾಗ್ನಿಯಿಂದ ತೆಗೆದು ದಕ್ಷಿಣಾಗ್ನಿಯಾಗಿ ಸಂಸ್ಕರಿಸಲ್ಪಡುವ ಅಗ್ನಿ. ಅಗ್ನಾಯೀ, ಸ್ವಾಹಾ, ಹುತಭುಕ್ ಪ್ರಿಯಾ (ಸ್ತ್ರೀ)=ಅಗ್ನಿಯ ಪತ್ನಿ. ಸಾಮಿಧೇನೀ, ಧಾಯ್ಯಾ (ಸ್ತ್ರೀ)=ಅಗ್ನಿಯನ್ನು ಪ್ರಜ್ವಲಿಸುವುದಕ್ಕಾಗಿ ಹೇಳಬೇಕಾದ ಋಕ್ಕು.

೭೩೧. ಛಂದಸ್ (ನ)=ಗಾಯತ್ರೀ ಜಗತೀ ಮುಂತಾದ ಛಂದಸ್ಸು. ಚರು (ಪು)=ಹೋಮ ಯೋಗ್ಯವಾದ ಪಕ್ವಾನ್ನ. ಆಮಿಕ್ಷಾ (ಸ್ತ್ರೀ)=ಬಿಸಿ ಹಾಲಿಗೆ ಮೊಸರನ್ನು ಸೇರಿಸಿದಾಗ ಒಡೆದು ಗಟ್ಟಿಯಾಗಿ ಉಳಿಯುವ ಭಾಗ.

೭೩೨. ಧವಿತ್ರ (ನ)=ಅಗ್ನಿಯನ್ನು ಪ್ರಜ್ವಲಿಸುವುದಕ್ಕಾಗಿ ಕೃಷ್ಣಾಜಿನದಿಂದ ರಚಿಸಿದ ಬೀಸಣಿಗೆ. ಪೃಷದಾ[1]ಜ್ಯ (ನ) ಮೊಸರು ಬೆರೆತ ತುಪ್ಪ. ಪರಮಾನ್ನ, ಪಾಯಸ (ನ)=ಹಾಲನ್ನು ಸೇರಿಸಿ ಪಕ್ವಮಾಡಿದ ಅನ್ನ.

---

[1] ಪೃಷಾತಕ (ನ) ಎಂಬ ಶಬ್ದಾಂತರವೂ ಇದೆ.

ಹವ್ಯಕವ್ಯೇ ದೈವಪಿತ್ರ್ಯೇ ತ್ವನ್ನೇ ಪಾತ್ರಂ ಸ್ರುವಾದಿಕಮ್ ।
ಧ್ರುವೋಪಭೃಜ್ಜುಹೂರ್ನಾ ತು ಸ್ರುವೋ ಭೇದಾಸ್ಸ್ರುಚಃ ಸ್ತ್ರಿಯಃ ॥ ೭೩೩
ಉಪಾಕೃತಃ ಪಶುರಸೌ ಯೋಽಭಿಮಂತ್ರ್ಯ ಕ್ರತೌ ಹತಃ ।
ಪರಂಪರಾಕಂ ಶಮನಂ ಪ್ರೋಕ್ಷಣಂ ಚ ವಧಾರ್ಥಕಮ್ ॥ ೭೩೪
ವಾಚ್ಯಲಿಂಗಾಃ ಪ್ರಮೀತೋಪಸಂಪನ್ನಪ್ರೋಕ್ಷಿತಾ ಹತೇ ।
ಸಾಂನಾಯ್ಯಂ ಹವಿರಗ್ನೌ ತು ಹುತಂ ತ್ರಿಷು ವಷಟ್ಕೃತಮ್ ॥ ೭೩೫
ದೀಕ್ಷಾಂತೋಽವಭೃಥೋ ಯಜ್ಞೇ ತತ್ಕರ್ಮಾರ್ಹಂ ತು ಯಜ್ಞಿಯಮ್ ।
ತ್ರಿಷ್ವಥ ಕ್ರತುಕರ್ಮೇಷ್ಟಂ ಪೂರ್ತಂ ಖಾತಾದಿಕರ್ಮ ಯತ್ ॥ ೭೩೬
ಅಮೃತಂ ವಿಘಸೋ ಯಜ್ಞಶೇಷಭೋಜನಶೇಷಯೋಃ ।
ತ್ಯಾಗೋ ವಿಹಾಪಿತಂ ದಾನಮುತ್ಸರ್ಜನವಿಸರ್ಜನೇ ॥ ೭೩೭
ವಿಶ್ರಾಣನಂ ವಿತರಣಂ ಸ್ಪರ್ಶನಂ ಪ್ರತಿಪಾದನಮ್ ।
ಪ್ರಾದೇಶನಂ ನಿರ್ವಪಣಮಪವರ್ಜನಮಂಹತಿಃ ॥ ೭೩೮

---

೭೩೩. ಹವ್ಯ (ನ)=ದೇವತೆಗಳಿಗೆ ಅರ್ಪಿಸಬೇಕಾದ ಅನ್ನ. ಕವ್ಯ (ನ)=ಪಿತೃಗಳಿಗೆ ಅರ್ಪಿಸಬೇಕಾದ ಅನ್ನ. ಪಾತ್ರ (ನ)=ಯಜ್ಞೋಪಯೋಗಿಯಾದ ಸ್ರುವಾದಿ ಸಲಕರಣೆ. ಮುಂದೆ ಹೇಳತಕ್ಕವು ವಿಭಿನ್ನ ಯಜ್ಞ ಪಾತ್ರೆಗಳು : ಧ್ರುವಾ, ಉಪಭೃತ್, ಜುಹೂ (ಸ್ತ್ರೀ), ಸ್ರುವ, (ಪು), ಸ್ರುಚ್ (ಸ್ತ್ರೀ).

೭೩೪. ಉಪಾಕೃತ (ಪು)=ಯಜ್ಞದಲ್ಲಿ ಮಂತ್ರಪೂರ್ವಕವಾಗಿ ವಧಿಸಲ್ಪಡುವ ಪಶು. ಪರಂಪರಾಕ, ಶಮನ (ಶಸನ), ಪ್ರೋಕ್ಷಣ (ನ)=ಯಜ್ಞಾರ್ಥವಾಗಿ ಪಶುವಧೆ.

೭೩೫. ಪ್ರಮೀತ, ಉಪಸಂಪನ್ನ, ಪ್ರೋಕ್ಷಿತ (ಪು. ಸ್ತ್ರೀ. ನ. ವಿಶೇಷ್ಯ ನಿಘ್ನ)=ಯಜ್ಞದಲ್ಲಿ ಹತವಾದ ಪಶು. ಸಾಂನಾಯ್ಯ, ಹವಿಸ್ (ನ)=ಹವಿಸ್ಸು. ಹುತ, ವಷಟ್ಕೃತ (ಪು. ಸ್ತ್ರೀ.ನ)=ಹೋಮಮಾಡಲ್ಪಟ್ಟದ್ದು.

೭೩೬. ಅವಭೃಥ (ಪು)=ಯಜ್ಞ ಸಮಾಪ್ತಿಯಲ್ಲಿ ಮಾಡಬೇಕಾದ ಸ್ನಾನ. ಯಜ್ಞಿಯ (ಪು. ಸ್ತ್ರೀ. ನ)=ಯಜ್ಞಯೋಗ್ಯವಾದ ವಸ್ತು. ಇಷ್ಟ (ನ)=ಯಜ್ಞದಲ್ಲಿ ಹೋಮದಾನಾದಿ ಕ್ರಿಯೆ. ಪೂರ್ತ (ನ)=ಭಾವಿ ಕೆರೆ ದೇವಾಲಯಗಳ ನಿರ್ಮಾಣ-ಮುಂತಾದ ಪುಣ್ಯಕರ್ಮ.

೭೩೭-೭೩೮. ಅಮೃತ (ನ)=ಯಜ್ಞದಲ್ಲಿ ಅವಶಿಷ್ಟವಾದ ಹವಿಸ್ಸು. ವಿಘಸ (ಪು)=ಯಜ್ಞದಲ್ಲಿ ಅತಿಥಿಗಳು ಭುಂಜಿಸಿದಮೇಲೆ ಅವಶಿಷ್ಟವಾದ ಅನ್ನ. ತ್ಯಾಗ (ಪು), ವಿಹಾಪಿತ

ಮೃತಾರ್ಥಂ ತದಹೇ ದಾನಂ ತ್ರಿಷು ಸ್ಯಾದೌರ್ಧ್ವದೈಹಿಕಮ್ ।
ಪಿತೃದಾನಂ ನಿವಾಪಸ್ಸ್ಯಾತ್ ಶ್ರಾದ್ಧಂ ತತ್ಕರ್ಮ ಶಾಸ್ತ್ರತಃ ॥ ೭೩೯
ಅನ್ವಾಹಾರ್ಯಂ ಮಾಸಿಕೇಂಽಶೋಽಷ್ಟಮೋಽಹ್ನಃ ಕುತಪೋ ಽಸ್ತ್ರಿಯಾಂ ।
ಪರ್ಯೇಷಣಾ ಪರೀಷ್ಟಿಶ್ಚಾನ್ವೇಷಣಾ ಚ ಗವೇಷಣಾ ॥ ೭೪೦
ಸನಿಸ್ತ್ವಧ್ಯೇಷಣಾ ಯಾಚ್ಞಾಭಿಶಸ್ತಿರ್ಯಾಚನಾರ್ಥನಾ ।
ಷಟ್ತು ತ್ರಿಷ್ವರ್ಘ್ಯಮರ್ಘಾರ್ಥೇ ಪಾದ್ಯಂ ಪಾದಾಯ ವಾರಿಣಿ ॥ ೭೪೧
ಕ್ರಮಾದಾತಿಥ್ಯಾತಿಥೇಯೇ ಅತಿಥ್ಯರ್ಥೇಽತ್ರ ಸಾಧುನಿ ।
ಸ್ಯುರಾವೇಶಿಕ ಆಗಂತುರತಿಥಿರ್ನಾ ಗೃಹಾಗತೇ ॥ ೭೪೨

(ವಿಹಾಯಿತ), ದಾನ, ಉತ್ಸರ್ಜನ, ವಿಸರ್ಜನ, ವಿಶ್ರಾಣನ, ವಿತರಣ, ಸ್ಪರ್ಶನ, ಪ್ರತಿಪಾದನ, ಪ್ರಾದೇಶನ, ನಿರ್ವಪಣ, ಅಪವರ್ಜನ (ನ), ಅಂಹತಿ (ಸ್ತ್ರೀ)=ದಾನ.

೭೩೯. ಔರ್ಧ್ವದೈಹಿಕ (ಪು.ಸ್ತ್ರೀ.ನ) (-ಸ್ತ್ರೀ. ಔರ್ಧ್ವದೈಹಿಕೀ)=ಮೃತನಿಗೋಸ್ಕರ ಸಪಿಂಡೀಕರಣದವರೆಗೆ ಮಾಡುವ ಜಲಪಿಂಡಾದಿ ದಾನ. ಪಿತೃದಾನ (ನ, ನಿವಾಪ (ಪು)=ಸಪಿಂಡವಾದಮೇಲೆ ಪಿತೃಗಳಿಗೋಸ್ಕರ ಮಾಡುವ ದಾನ. ಶ್ರಾದ್ಧ (ನ)=ವಿಧಿಪೂರ್ವಕವಾಗಿ ಗೊತ್ತಾದ ದೇಶಕಾಲಗಳಲ್ಲಿ ಮಾಡುವ ಪಿತೃಕರ್ಮ.

೭೪೦. ಅನ್ವಾಹಾರ್ಯ, ಮಾಸಿಕ (ನ)=ಪ್ರತಿಮಾಸದಲ್ಲಿಯೂ ಮಾಡುವ ಪಿತೃಶ್ರಾದ್ಧ. ಕುತಪ (ಪು. ನ)=ಹಗಲಿನ ಪ್ರಮಾಣವನ್ನು ಹದಿನೈದುಭಾಗಗಳಾಗಿ ಮಾಡಿದಾಗ ಎಂಟನೆಯ ಭಾಗದ ಕಾಲ. ಪರ್ಯೇಷಣಾ, ಪರೀಷ್ಟಿ, ಅನ್ವೇಷಣಾ, ಗವೇಷಣಾ (ಸ್ತ್ರೀ)= ವಿಹಿತಕಾರ್ಯಕ್ಕಾಗಿ ಬ್ರಾಹ್ಮಣಾದಿಗಳನ್ನು ಹುಡುಕುವುದು.

೭೪೧. ಸನಿ, ಅಧ್ಯೇಷಣಾ (ಸ್ತ್ರೀ)=ವಿಜ್ಞಾಪನೆ, ಕಾರ್ಯವನ್ನು ನಡೆಸಿಕೊಡುವಂತೆ ಹಿರಿಯರನ್ನು ಕೇಳಿಕೊಳ್ಳುವುದು. ಯಾಚ್ಞಾ, ಅಭಿಶಸ್ತಿ, ಯಾಚನಾ, ಅರ್ಥನಾ (ಸ್ತ್ರೀ)=ಪ್ರಾರ್ಥನೆ, ಬೇಡಿಕೆ. ಮುಂದೆ ಹೇಳುವ ಅರ್ಘ್ಯಶಬ್ದದಿಂದ ಆಗಂತು ಶಬ್ದದವರೆಗೆ ಆರು ಶಬ್ದಗಳು ಅರ್ಥಾನುಸಾರವಾಗಿ ಮೂರು ಲಿಂಗಗಳಲ್ಲಿ ಇರುತ್ತವೆ. ಅರ್ಘ್ಯ (ನ)=ಪೂಜಾರ್ಥವಾದ ಜಲ ; ಪತ್ರ ಪುಷ್ಪ ಮುಂತಾದ ಪೂಜಾದ್ರವ್ಯ. ಪಾದ್ಯ (ನ)=ಕಾಲನ್ನು ತೊಳೆಯುವುದಕ್ಕಾಗಿ ಕೊಡುವ ನೀರು.

೭೪೨. ಆತಿಥ್ಯ (ನ)=ಅತಿಥಿಗೋಸ್ಕರ ಕಲ್ಪಿಸುವ ಅನ್ನಾದಿದ್ರವ್ಯ. ಆತಿಥೇಯ (ನ) (ಸ್ತ್ರೀ. ಆತಿಥೇಯೀ)= ಅತಿಥಿಗೆ ಹಿತಕರವಾದ ಸತ್ಕಾರ ; ಅತಿಥಿಯನ್ನು ಸತ್ಕರಿಸತಕ್ಕವನು. ಆವೇಶಿಕ, ಆಗಂತು (ಪು) (-ಸ್ತ್ರೀ.ಆವೇಶಿಕೀ), ಅತಿಥಿ (ಪು)=ಮನೆಗೆ ಬಂದವನು.

ಪೂಜಾ ನಮಸ್ಯಾಪಚಿತಿಸ್ಸಪರ್ಯಾರ್ಚಾರ್ಹಣಾಸ್ಸಮಾಃ ।
ವರಿವಸ್ಯಾ ತು ಶುಶ್ರೂಷಾ ಪರಿಚರ್ಯಾಪ್ಯುಪಾಸನಾ ॥ ೭೪೩
ವ್ರಜ್ಯಾಟಾಟ್ಯಾ ಪರ್ಯಟನಂ ಚರ್ಯಾತ್ವೀರ್ಯಾಪಥೇ ಸ್ಥಿತಿಃ ।
ಉಪಸ್ಪರ್ಶಸ್ತ್ವಾಚಮನಮಥ ಮೌನಮಭಾಷಣಮ್ ॥ ೭೪೪
ಆನುಪೂರ್ವೀ ಸ್ತ್ರಿಯಾಮಾವೃತ್ಪರಿಪಾಟಿ[1]ರನುಕ್ರಮಃ ।
ಪರ್ಯಾಯಶ್ಚಾತಿಪಾತಸ್ತು ಸ್ಯಾತ್ಪರ್ಯಯ ಉಪಾತ್ಯಯಃ ॥ ೭೪೫
ನಿಯಮೋ ವ್ರತಮಸ್ತ್ರೀ ತಚ್ಚೋಪವಾಸಾದಿ ಪುಣ್ಯಕಮ್ ।
ಔಪವಸ್ತಂ ತೂಪವಾಸೋ[2] ವಿವೇಕಃ ಪೃಥಗಾತ್ಮತಾ ॥ ೭೪೬
ಸ್ಯಾದ್ಬ್ರಹ್ಮವರ್ಚಸಂ ವೃತ್ತಾಧ್ಯಯನರ್ದ್ಧಿರಥಾಂಜಲಿಃ ।
ಪಾಠೇ ಬ್ರಹ್ಮಾಂಜಲಿಃ ಪಾಠೇ ವಿಪ್ರುಷೋ ಬ್ರಹ್ಮಬಿಂದವಃ ॥ ೭೪೭

---

೭೪೩. ಪೂಜಾ, ನಮಸ್ಯಾ, ಅಪಚಿತಿ, ಸಪರ್ಯಾ, ಅರ್ಚಾ, ಅರ್ಹಣಾ (ಸ್ತ್ರೀ)=ಪೂಜೆ, ಸತ್ಕಾರ. ವರಿವಸ್ಯಾ, ಶುಶ್ರೂಷಾ, ಪರಿಚರ್ಯಾ, ಉಪಾಸನಾ (ಸ್ತ್ರೀ)=ಸೇವೆ.

೭೪೪. ವ್ರಜ್ಯಾ, ಅಟಾಟ್ಯಾ (ಸ್ತ್ರೀ), ಪರ್ಯಟನ (ನ)=ತಿರುಗಾಟ. ಚರ್ಯಾ, ಈರ್ಯಾ (ಸ್ತ್ರೀ)=ಸನ್ಮಾರ್ಗದಲ್ಲಿ ಇರುವುದು. ಉಪಸ್ಪರ್ಶ (ಪು), ಆಚಮನ (ನ)=ಆಚಮನ. ಮೌನ, ಅಭಾಷಣ (ನ)=ಮಾತಾಡದಿರುವುದು.

೭೪೫. ಆನುಪೂರ್ವೀ (ಸ್ತ್ರೀ. ನ) (-ನ. ಅನುಪೂರ್ವ್ಯ), ಆವೃತ್, ಪರಿಪಾಟಿ[1] (ಸ್ತ್ರೀ), ಅನುಕ್ರಮ, ಪರ್ಯಾಯ (ಪು)=ಕ್ರಮ (Regular Succession). ಅತಿಪಾತ, ಪರ್ಯಯ, ಉಪಾತ್ಯಯ (ಪು)=ಕ್ರಮದ ಉಲ್ಲಂಘನೆ.

೭೪೬. ನಿಯಮ (ಪು), ವ್ರತ (ಪು. ನ)=ಶಾಸ್ತ್ರೋಕ್ತವಾದ ಆಚರಣೆ. ಪುಣ್ಯಕ (ನ)=ಉಪಾವಾಸಾದಿಪುಣ್ಯವ್ರತ. ಔಪವಸ್ತ(ನ), ಉಪವಾ[2]ಸ (ನ)=ಊಟಮಾಡದಿರುವುದು. ವಿವೇಕ (ಪು)=ಪ್ರಕೃತಿಪುರುಷರ ವಿವೇಚನಾಜ್ಞಾನ.

೭೪೭. ಬ್ರಹ್ಮವರ್ಚಸ (ನ)=ಅನುಷ್ಠಾನ ಮತ್ತು ವೇದಾಧ್ಯಯನದಿಂದುಂಟಾದ ತೇಜಸ್ಸು. ಬ್ರಹ್ಮಾಂಜಲಿ (ಪು)=ವೇದಾಧ್ಯಯನ ಮಾಡುವಾಗ ಜೋಡಿಸಿದ ಕೈ. ಬ್ರಹ್ಮಬಿಂದು (ಪು)= ವೇದಪಾಠದ ಸಮಯದಲ್ಲಿ ಬಾಯಿಂದ ಹೊರಡುವ ತುಂತುರು.

---

[1] ಪರಿಪಾಟೀ ಎಂಬ ಈಕಾರಾಂತರವೂ ಇದೆ.

[2] ಉಪೋಶಷಿತ, ಉಪೋಷಣ (ನ) ಎಂಬ ಶಬ್ದಾಂತರಗಳೂ ಇವೆ.

ಧ್ಯಾನಯೋಗಾಸನೇ ಬ್ರಹ್ಮಾಸನಂ ಕಲ್ಪೇ ವಿಧಿಕ್ರಮೌ ।
ಮುಖ್ಯಃ ಸ್ಯಾತ್ಪ್ರಥಮಃ ಕಲ್ಪೋಽನುಕಲ್ಪಸ್ತು ತತೋಽಧಮಃ ॥ ೭೪೮
ಸಂಸ್ಕಾರಪೂರ್ವಂ ಗ್ರಹಣಂ ಸ್ಯಾದುಪಾಕರಣಂ ಶ್ರುತೇಃ ।
ಸಮೇ ತು ಪಾದಗ್ರಹಣಮಭಿವಾದನಮಿತ್ಯುಭೇ ॥ ೭೪೯
ಭಿಕ್ಷುಃ ಪರಿವ್ರಾಟ್ಕರ್ಮಂದೀ ಪಾರಾಶರ್ಯಪಿ ಮಸ್ಕರೀ ।
ತಪಸ್ವೀ ತಾಪಸಃ ಪಾರಿಕಾಂಕ್ಷೀ ವಾಚಂಯಮೋ ಮುನಿಃ ॥ ೭೫೦
ತಪಃ ಕ್ಲೇಶಸಹೋ ದಾಂತೋ ವರ್ಣಿನೋ ಬ್ರಹ್ಮಚಾರಿಣಃ ।
ಋಷಯಸ್ಸತ್ಯವಚಸಃ ಸ್ನಾತಕಸ್ತ್ವಾಪ್ಲುತವ್ರತೀ ॥ ೭೫೧
ಯೇ ನಿರ್ಜಿತೇಂದ್ರಿಯಗ್ರಾಮಾ ಯತಿನೋ ಯತಯಶ್ಚತೇ ।
ಯಃ ಸ್ಥಂಡಿಲೇ ವ್ರತವಶಾಚ್ಛೇತೇ ಸ್ಥಂಡಿಲಶಾಯ್ಯಸೌ ॥ ೭೫೨

---

೭೪೮. ಬ್ರಹ್ಮಾಸನ (ನ)=ವೇದಾಧ್ಯಯನಮಾಡುವಾಗ ಕುಳಿತುಕೊಳ್ಳುವ ಸ್ಥಿತಿ, ಸ್ವಸ್ತಿಕಾದ್ಯಾಸನ. ಕಲ್ಪ, ವಿಧಿ, ಕ್ರಮ (ಪು)=ಶಾಸ್ತ್ರೋಕ್ತವಾದ ವಿಧಾನ. ಮುಖ್ಯಕಲ್ಪ (ಪು)=ಮೊದಲು ಹೇಳಿದ ಪ್ರಧಾನವಿಧಿ. ಅನುಕಲ್ಪ (ಪು)=ಮುಖ್ಯವು ಇಲ್ಲದಾಗ ಹೇಳಿದ ಗೌಣವಿಧಿ.

೭೪೯. ಉಪಾಕರಣ (ನ)=ಉಪನಯನಪೂರ್ವಕವಾಗಿ ವೇದಪಾಠದ ಆರಂಭ. ಪಾದಗ್ರಹಣ, ಅಭಿವಾದನ (ನ)=ಕಾಲಮುಟ್ಟಿ ವಿಧಿವತ್ತಾಗಿ ನಮಸ್ಕರಿಸುವುದು.

೭೫೦. ಭಿಕ್ಷು, ಪರಿವ್ರಾಜ್, ಕರ್ಮಂದಿನ್, ಪಾರಾಶರಿನ್, ಮಸ್ಕರಿನ್ (ಪು)=ಸಂನ್ಯಾಸಿ. ತಪಸ್ವಿನ್, ತಾಪಸ, ಪಾರಿಕಾಂಕ್ಷಿನ್, ವಾಚಂಯಮ, ಮುನಿ (ಪು)=ತಪಸ್ವಿ. ಭಿಕ್ಷು ಮೊದಲಾದ ಹತ್ತು ಶಬ್ದಗಳು ಸಂನ್ಯಾಸಿ ವಾಚಕಗಳೆಂದು ಕೆಲವರು.

೭೫೧. ದಾಂತ (ಪು)=ತಪಸ್ಸಿನ ಕಷ್ಟವನ್ನು ಸಹಿಸಿಕೊಳ್ಳುವವನು. ವರ್ಣಿನ್, ಬ್ರಹ್ಮಚಾರಿನ್ (ಪು)=ಬ್ರಹ್ಮಚಾರಿ. ಋಷಿ, ಸತ್ಯವಚಸ್ (ಪು)=ಋಷಿ. ಸ್ನಾತಕ, ಆಪ್ಲುತವ್ರತಿನ್ (ಪು)=ವೇದವ್ರತವನ್ನು ಸಮಾಪ್ತಿಗೊಳಿಸಿ ಇನ್ನೂ ಆಶ್ರಮಾಂತರವನ್ನು ಸ್ವೀಕರಿಸದೆ ಇರತಕ್ಕವನು.

೭೫೨-೭೫೩. ಯತಿನ್, ಯತಿ (ಪು)=ಇಂದ್ರಿಯಗಳನ್ನು ಜಯಿಸಿದವನು. ಸ್ಥಂಡಿಲ ಶಾಯಿನ್, ಸ್ಥಾಂಡಿಲ (ಪು)=ವ್ರತಕ್ಕಾಗಿ ಬರಿಯ ನೆಲದಮೇಲೆ ಮಲಗತಕ್ಕವನು. ವಿರಜಸ್ತ

ಸ್ಥಾಂಡಿಲಶ್ಚಾಥ ವಿರಜಸ್ತಮಸಃ ಸ್ಯುರ್ದ್ವಯಾತಿಗಾಃ ।
ಪವಿತ್ರಃ ಪ್ರಯತಃ ಪೂತಃ ಪಾಷಂಡಾಸ್ಸರ್ವಲಿಂಗಿನಃ ॥ ೭೫೩
ಪಾಲಾಶೋ ದಂಡ ಆಷಾಢೋ ವ್ರತೇ ರಾಂಭಸ್ತು ವೈಣವಃ ।
ಅಸ್ತ್ರೀ ಕಮಂಡಲುಃ ಕುಂಡೀ ವ್ರತಿನಾಮಾಸನಂ ಬೃಸೀ ॥ ೭೫೪
ಅಜಿನಂ ಚರ್ಮ ಕೃತ್ತಿಃ ಸ್ತ್ರೀ ಭೈಕ್ಷಂ ಭಿಕ್ಷಾಕದಂಬಕಮ್ ।
ಸ್ವಾಧ್ಯಾಯಸ್ಸ್ಯಾಜ್ಜಪಸ್ಸುತ್ಯಾಭಿಷವಸ್ಸವನಂ ಚ ಸಾ ॥ ೭೫೫
ಸರ್ವೈನಸಾಮಪಧ್ವಂಸಿ ಜಪ್ಯಂ ತ್ರಿಷ್ವಘಮರ್ಷಣಮ್ ।
ದರ್ಶಶ್ಚ ಪೌರ್ಣಮಾಸಶ್ಚ ಯಾಗೌ ಪಕ್ಷಾಂತಯೋಃ ಪೃಥಕ್ ॥ ೭೫೬
ಶರೀರಸಾಧನಾಪೇಕ್ಷಂ ನಿತ್ಯಂ ಯತ್ಕರ್ಮ ತದ್ ಯಮಃ ।
ನಿಯಮಸ್ತು ಸ ಯತ್ಕರ್ಮ ನಿತ್ಯಮಾಗಂತುಸಾಧನಮ್ ॥ ೭೫೭

ಮಸ್ (ಪು)=ರಜಸ್ತಮೋಗುಣಗಳನ್ನು ದಾಟಿದ ಸಾತ್ವಿಕ. ಪವಿತ್ರ, ಪ್ರಯತ, ಪೂತ (ಪು)=ಪರಿಶುದ್ಧ. ಪಾಷಂಡ (ಪಾಖಂಡ), ಸರ್ವಲಿಂಗಿನ್ (ಪು)=ವೇದಬಾಹ್ಯವಾದ ಮತವನ್ನು ನಂಬಿದವನು.

೭೫೪. ಆಷಾಢ (ಪು)=ಬ್ರಹ್ಮಚರ್ಯವ್ರತದಲ್ಲಿ ಹಿಡಿಯುವ ಮುತ್ತುಗದ ದಂಡ. ರಾಂಭ (ಪು)=ವ್ರತಸಮಯದಲ್ಲಿ ಹಿಡಿಯುವ ಬಿದಿರಿನ ದಂಡ. ಕಮಂಡಲು (ಪು. ನ), ಕುಂಡೀ (ಸ್ತ್ರೀ)=ವ್ರತನಿಷ್ಠರ ಜಲಪಾತ್ರೆ. ಬೃಸೀ (ಸ್ತ್ರೀ)=ವ್ರತನಿಷ್ಠರು ಕುಳಿತುಕೊಳ್ಳುವ ಆಸನ.

೭೫೫. ಅಜಿನ, ಚರ್ಮನ್ (ನ), ಕೃತ್ತಿ (ಸ್ತ್ರೀ)=ಚರ್ಮ. ಭೈಕ್ಷ (ನ)= ಭಿಕ್ಷೆಗಳ ಸಮೂಹ. ಸ್ವಾಧ್ಯಾಯ, ಜಪ (ಪು)=ವೇದಪಾಠ. ಸುತ್ಯಾ (ಸ್ತ್ರೀ), ಅಭಿಷವ (ಪು), ಸವನ (ನ)=ಸೋಮಲತೆಯಿಂದ ರಸವನ್ನು ಹಿಂಡುವುದು.

೭೫೬. ಅಘಮರ್ಷಣ (ಪು. ಸ್ತ್ರೀ. ನ) (-ಸ್ತ್ರೀ. ಅಘಮರ್ಷಣೀ)=ಸಕಲಪಾಪಗಳನ್ನು ಪರಿಹರಿಸುವ ಮಂತ್ರವಿಶೇಷ. ದರ್ಶ (ಪು)=ಅಮಾವಾಸ್ಯೆಯಲ್ಲಿ ಮಾಡಬೇಕಾದ ಯಾಗ. ಪೌರ್ಣಮಾಸ (ಪು)=ಹುಣ್ಣಿಮೆಯಲ್ಲಿ ಮಾಡಬೇಕಾದ ಯಾಗ.

೭೫೭. ಯಮ (ಪು)=ಯಾವಜ್ಜೀವವೂ ಮಾಡಬೇಕಾದ ಶರೀರಸಾಧ್ಯವಾದ ಕರ್ಮ - 'ಅಹಿಂಸಾ ಸತ್ಯಾಸ್ತೇಯ ಬ್ರಹ್ಮಚರ್ಯಾಪರಿಗ್ರಹಾ ಯಮಾಃ' (ಪಾತಂ- ಸೂತ್ರ. ೨.೩೦). ನಿಯಮ (ಪು)=ನಿಮಿತ್ತವಿಶೇಷಗಳಿಂದ ಆಗಾಗ ಮಾಡಬೇಕಾದ ಕರ್ಮ—'ಶೌಚ ಸಂತೋಷತಪಃ ಸ್ವಾಧ್ಯಾಯೇಶ್ವರಪ್ರಣಿಧಾನಾನಿ ನಿಯಮಾಃ' (ಪಾತಂ. ಸೂತ್ರ ೨.೩೨).

ಕ್ಷೌರಂ ತು ಭದ್ರಾಕರಣಂ ಮುಂಡನಂ ವಪನಂ ತಥಾ ।
ಉಪವೀತಂ ಯಜ್ಞಸೂತ್ರಂ ಪ್ರೋದ್ಧೃತೇ ದಕ್ಷಿಣೇ ಕರೇ ॥ ೭೫೮
ಪ್ರಾಚೀನಾವೀತಮನ್ಯಸ್ಮಿನ್ನಿವೀತಂ ಕಂಠಲಂಬಿತಮ್ ।
ಅಂಗುಲ್ಯಗ್ರೇ ತೀರ್ಥಂ ದೈವಂ ಸ್ವಲ್ಪಾಂಗುಲ್ಯೋರ್ಮೂಲೇ ಕಾಯಮ್ ॥ ೭೫೯
ಮಧ್ಯೇಽಙ್ಗುಷ್ಠಾಂಗುಲ್ಯೋಃ ಪಿತ್ರ್ಯಂ ಮೂಲೇ ತ್ವಂಗುಷ್ಠಸ್ಯ ಬ್ರಾಹ್ಮಮ್ ।
ಸ್ಯಾದ್ಬ್ರಹ್ಮಭೂಯಂ ಬ್ರಹ್ಮತ್ವಂ ಬ್ರಹ್ಮಸಾಯುಜ್ಯಮಿತ್ಯಪಿ ॥ ೭೬೦
ದೇವಭೂಯಾದಿಕಂ ತದ್ವತ್ ಕೃಚ್ಛ್ರಂ ಸಾಂತಪನಾದಿಕಮ್ ।
ಸಂನ್ಯಾಸವತ್ಯನಶನೇ ಪುಮಾನ್ ಪ್ರಾಯೋಽಥ ವೀರಹಾ ॥ ೭೬೧

---

೭೫೮. ಕ್ಷೌರ, ಭದ್ರಾಕರಣ, ಮುಂಡನ, ವಪನ (ನ)=ಕ್ಷೌರ. ಉಪವೀತ (ನ) ಬಲಗೈಯನ್ನು ಹೊರಗೆ ಚಾಚಿ ಎಡಹೆಗಲಿನಮೇಲೆ ಬರುವಂತೆ ಧರಿಸಿದ ಜನಿವಾರ.

೭೫೯. ಪ್ರಾಚೀನಾವೀತ (ನ)=ಎಡಗೈಯನ್ನು ಹೊರಗೆ ಚಾಚಿ ಬಲಹೆಗಲಿನ ಮೇಲೆ ಬರುವಂತೆ ಧರಿಸಿದ ಜನಿವಾರ. ನಿವೀತ (ನ)=ಕೊರಳಲ್ಲಿ ಮಾಲಾಕಾರವಾಗಿ ಧರಿಸಿದ ಜನಿವಾರ. ದೈವ (ನ)=ದೇವತೀರ್ಥ-ಬೆರಳುಗಳ ತುದಿಯಲ್ಲಿರುವ ತೀರ್ಥ (ಇದರಿಂದ ದೇವತರ್ಪಣವನ್ನು ಮಾಡತಕ್ಕದ್ದು. ಕಾಯ (ನ)=ಪ್ರಜಾಪತಿದೇವತಾಕವಾದ ತೀರ್ಥ-ಕಿರಿಬೆರಳು ಮತ್ತು ಅನಾಮಿಕೆಗಳ ಮೂಲದಲ್ಲಿರುವ ತೀರ್ಥ (ಇದರಿಂದ ಋಷಿತರ್ಪಣವನ್ನು ಮಾಡತಕ್ಕದ್ದು.)

೭೬೦. ಪಿತ್ರ್ಯ (ನ)=ಪಿತೃತೀರ್ಥ-ಅಂಗುಷ್ಠ ಮತ್ತು ತರ್ಜನೀ ಬೆರಳುಗಳ ಮಧ್ಯದಲ್ಲಿರುವ ತೀರ್ಥ (ಇದರಿಂದ ಪಿತೃತರ್ಪಣವನ್ನು ಮಾಡತಕ್ಕದ್ದು.) ಬ್ರಾಹ್ಮ (ನ)=ಬ್ರಹ್ಮತೀರ್ಥ-ಅಂಗುಷ್ಠದ ಮೂಲದಲ್ಲಿರುವ ತೀರ್ಥ(ಇದರಿಂದ ಬ್ರಹ್ಮತರ್ಪಣವನ್ನು ಮಾಡತಕ್ಕದ್ದು. ಬ್ರಹ್ಮಭೂಯ (ನ)—ಬ್ರಹ್ಮತ್ವ, ಬ್ರಹ್ಮಸಾಯುಜ್ಯ (ನ)=ಬ್ರಹ್ಮವಾಗುವುದು, ಸಾಯುಜ್ಯ ಮೋಕ್ಷ.

೭೬೧-೭೬೨. ದೇವಭೂಯ, ದೇವತ್ವ, ದೇವಸಾಯುಜ್ಯ (ನ)=ದೇವನಾಗುವುದು, ದೇವನಲ್ಲಿ ಸೇರಿಕೊಳ್ಳುವುದು. ಕೃಚ್ಛ್ರ (ನ)=ಸಾಂತಪನ ಚಾಂದ್ರಾಯಣ ಮುಂತಾದ ಪ್ರಾಯಶ್ಚಿತ್ತ. ಪ್ರಾಯ (ಪು)=ಸರ್ವಸಂಗತ್ಯಾಗಪೂರ್ವಕವಾಗಿ ಮರಣಪರ್ಯಂತ ಮಾಡುವ ಉಪವಾಸ. ವೀರಹನ್, ನಷ್ಟಾಗ್ನಿ (ಪು)=ಅಗ್ನಿಹೋತ್ರವನ್ನು ಬಿಟ್ಟವನು. ಕುಹನಾ (ಸ್ತ್ರೀ)=ಧನಾದಿಲೋಭದಿಂದ ನಟಿಸುವ ಧ್ಯಾನಮೌನಾದ್ಯಾಚರಣೆ. ವ್ರಾತ್ಯ, ಸಂಸ್ಕಾರಹೀನ

ನಷ್ಟಾಗ್ನಿಃ ಕುಹನಾ ಲೋಭಾನ್ಮಿಥ್ಯೇರ್ಯಾಪಥಕಲ್ಪನಾ ।
ವ್ರಾತ್ಯಸ್ಸಂಸ್ಕಾರಹೀನಸ್ಸ್ಯಾದಸ್ವಾಧ್ಯಾಯೋ ನಿರಾಕೃತಿಃ ॥ ೭೬೨
ಧರ್ಮಧ್ವಜೀ ಲಿಂಗವೃತ್ತಿರವಕೀರ್ಣೀ ಕ್ಷತವ್ರತಃ ।
ಸುಪ್ತೇ ಯಸ್ಮಿನ್ನಸ್ತಮೇತಿ ಸುಪ್ತೇ ಯಸ್ಮಿನ್ನುದೇತಿ ಚ ॥ ೭೬೩
ಅಂಶುಮಾನಭಿನಿರ್ಮುಕ್ತಾಭ್ಯುದಿತೌ ಚ ಯಥಾಕ್ರಮಮ್ ।
ಪರಿವೇತ್ತಾನುಜೋಽನೂಢೇ ಜ್ಯೇಷ್ಠೇ ದಾರಪರಿಗ್ರಹಾತ್ ॥ ೭೬೪
ಪರಿವಿತ್ತಿಸ್ತು ತಜ್ಜ್ಯಾಯಾನ್ ವಿವಾಹೋಪಯಮೌ ಸಮೌ ।
ತಥಾ ಪರಿಣಯೋದ್ವಾಹೋಪಯಮಾಃ ಪಾಣಿಪೀಡನಮ್ ॥ ೭೬೫
ವ್ಯವಾಯೋ ಗ್ರಾಮ್ಯಧರ್ಮೋ ಮೈಥುನಂ ನಿಧುವನಂ ರತಮ್ ।
ತ್ರಿವರ್ಗೋ ಧರ್ಮಕಾಮಾರ್ಥೈಶ್ಚತುರ್ವರ್ಗಃ ಸಮೋಕ್ಷಕೈಃ ॥ ೭೬೬
ಸಬಲೈಸ್ತೈಶ್ಚತುರ್ಭದ್ರಂ ಜನ್ಯಾಸ್ಸ್ನಿಗ್ಧಾ ವರಸ್ಯ ಯೇ ॥

ಇತಿ ಬ್ರಹ್ಮವರ್ಗಃ

(ಪು)=ಉಪನಯನಾದಿ ಸಂಸ್ಕಾರಹೀನ. ಅಸ್ವಾಧ್ಯಾಯ, ನಿರಾಕೃತಿ (ಪು)=ವೇದಾಭ್ಯಾಸಮಾಡದವನು.

೭೬೩-೭೬೪. ಧರ್ಮಧ್ವಜಿನ್, ಲಿಂಗವೃತ್ತಿ (ಪು)=ಜೀವನಾರ್ಥವಾಗಿ ಧಾರ್ಮಿಕ ವೇಷವನ್ನು ಧರಿಸಿದವನು. ಅವಕೀರ್ಣಿನ್, ಕ್ಷತವ್ರತ (ಪು)=ವ್ರತಭ್ರಷ್ಟ. ಅಭಿನಿರ್ಮುಕ್ತ (ಪು)=ಸೂರ್ಯನು ಮುಳುಗುವಾಗ ನಿದ್ರಿಸತಕ್ಕವನು. ಅಭ್ಯುದಿತ (ಪು)=ಸೂರ್ಯನು ಹುಟ್ಟುವಾಗ ನಿದ್ರಿಸತಕ್ಕವನು. ಪರಿವೇತ್ತೃ (ಪು)=ಅಣ್ಣನು ಮದುವೆಯಾಗದಿರುವಾಗ ಮದುವೆಯಾದ ತಮ್ಮ.

೭೬೫. ಪರಿವಿತ್ತಿ (ಪು)=ಪರಿವೇತ್ತೃವಿನ ಅಣ್ಣ. ವಿವಾಹ, ಉಪಯಮ, ಪರಿಣಯ, ಉದ್ವಾಹ, ಉಪಯಾಮ (ಪು), ಪಾಣಿಪೀಡನ (ನ)=ಮದುವೆ.

೭೬೬-೭೬೭. ವ್ಯವಾಯ, ಗ್ರಾಮ್ಯಧರ್ಮ (ಪು), ಮೈಥುನ, ನಿಧುವನ, ರತ (ನ)=ಸಂಭೋಗ. ತ್ರಿವರ್ಗ (ಪು)=ಧರ್ಮಾರ್ಥಕಾಮಗಳೆಂಬ ಮೂರು ಪುರುಷಾರ್ಥಗಳು. ಚತುರ್ವರ್ಗ (ಪು)=ಧರ್ಮಾರ್ಥಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳು. ಚತುರ್ಭದ್ರ (ನ)=ಸಮಾನಬಲಗಳಾದ ಚತುರ್ವರ್ಗಗಳು. ಜನ್ಯ (ಪು)=ವರನ ಮಿತ್ರ. (ವಧುವಿನ ಗೆಳತಿಯೂ ಆಗಬಹುದು. ಆಗ ಜನ್ಯಾ ಎಂಬುದು ಸ್ತ್ರೀಲಿಂಗ).

೮. ಕ್ಷತ್ರಿಯವರ್ಗ

ಮೂರ್ಧಾಭಿಷಿಕ್ತೋ ರಾಜನ್ಯೋ ಬಾಹುಜಃ ಕ್ಷತ್ರಿಯೋ ವಿರಾಟ್ ॥ ೭೬೭
ರಾಜಾ ರಾಟ್ ಪಾರ್ಥಿವಕ್ಷ್ಮಾಭೃನ್ನೃಪಭೂಪಮಹೀಕ್ಷಿತಃ ।
ರಾಜಾ ತು ಪ್ರಣತಾಶೇಷಸಾಮಂತಸ್ಸ್ಯಾ ದಧೀಶ್ವರಃ ॥ ೭೬೮
ಚಕ್ರವರ್ತೀ ಸಾರ್ವಭೌಮೋ ನೃಪೋಽನ್ಯೋ ಮಂಡಲೇಶ್ವರಃ ।
ಯೇನೇಷ್ಟಂ ರಾಜಸೂಯೇನ ಮಂಡಲಸ್ಯೇಶ್ವರಶ್ಚ ಯಃ ॥ ೭೬೯
ಶಾಸ್ತಿ ಯಶ್ಚಾಜ್ಞಯಾ ರಾಜ್ಞಸ್ಸ ಸಮ್ರಾಡಥ ರಾಜಕಮ್ ।
ರಾಜನ್ಯಕಂ ಚ ನೃಪತಿಕ್ಷತ್ರಿಯಾಣಾಂ ಗಣೇ ಕ್ರಮಾತ್ ॥ ೭೭೦
ಮಂತ್ರೀ ಧೀಸಚಿವೋಽಮಾತ್ಯೋಽನ್ಯೇ ಕರ್ಮಸಚಿವಾಸ್ತತಃ ।
ಮಹಾಮಾತ್ರಾಃ ಪ್ರಧಾನಾನಿ ಪುರೋಧಾಸ್ತು ಪುರೋಹಿತಃ ॥ ೭೭೧

ಕ್ಷತ್ರಿಯವರ್ಗ

೭೬೭-೭೬೮. ಮೂರ್ಧಾಭಿಷಿಕ್ತ, ರಾಜನ್ಯ ಬಾಹಜ, ಕ್ಷತ್ರಿಯ, ವಿರಾಜ್ (ಪು)=ಕ್ಷತ್ರಿಯ ಜಾತಿಯವನು. ರಾಜನ್, ರಾಜ್, ಪಾರ್ಥಿವ, ಕ್ಷ್ಮಾಭೃತ್, ನೃಪ, ಭೂಪ, ಮಹೀಕ್ಷಿತ್ (ಪು)=ರಾಜ. ಅಧೀಶ್ವರ (ಪು)=ಅನೇಕ ಸಾಮಂತರಾಜರನ್ನು ಗೆದ್ದು ವಶಪಡಿಸಿಕೊಂಡಿರುವ ರಾಜ.

೭೬೯-೭೭೦. ಚಕ್ರವರ್ತಿನ್, ಸಾರ್ವಭೌಮ (ಪು)=ಸಮುದ್ರಪರ್ಯಂತವಾದ ಭೂಮಿಗೆ ಒಡೆಯ, ಮಂಡಲೇಶ್ವರ (ಪು)=ಒಂದು ಪ್ರಾಂತದ ಒಡೆಯ, ಮಾಂಡಲಿಕ. ಸಮ್ರಾಜ್ (ಪು)=ರಾಜಸೂಯ ಯಾಗವನ್ನು ಮಾಡಿ ಅನೇಕ ರಾಜರುಗಳ ಮೇಲೆ ಅಧಿಕಾರವನ್ನು ನಡೆಸುವ ರಾಜ. ರಾಜಕ (ನ)=ರಾಜರ ಗುಂಪು. ರಾಜನ್ಯಕ (ನ)=ಕ್ಷತ್ರಿಯರ ಗುಂಪು.

೭೭೧. ಮಂತ್ರಿನ್, ಧೀಸಚಿವ, ಆಮಾತ್ಯ (ಪು)=ರಾಜಕಾರ್ಯದ ಆಲೋಚನೆಯನ್ನು ಹೇಳತಕ್ಕವನು, ಮಂತ್ರಿ. ಕರ್ಮಸಚಿವ= ಕಾರ್ಯವನ್ನು ಜಾರಿಗೆ ತರುವ ಸಚಿವ. ಮಹಾಮಾತ್ರ (ಪು), ಪ್ರಧಾನ[1] (ನ)=ರಾಜನಿಗೆ ಸಹಾಯಕನಾದ ಮುಖ್ಯಾಧಿಕಾರಿ. ಪುರೋಧಸ್, ಪುರೋಹಿತ (ಪು)=ಪುರೋಹಿತ.

---

[1] ಪ್ರಧಾನ ಶಬ್ದವು ಪುಲ್ಲಿಂಗದಲ್ಲಿಯೇ ಇದೆ.

ದ್ರಷ್ಟರಿ ವ್ಯವಹಾರಾಣಾಂ ಪ್ರಾಡ್ವಿವಾಕಾಕ್ಷದರ್ಶಕೌ ।
ಪ್ರತೀಹಾರೋ ದ್ವಾರಪಾಲದ್ವಾಃಸ್ಥದ್ವಾಃಸ್ಥಿತದರ್ಶಕಾಃ ॥ ೭೭೨
ರಕ್ಷಿವರ್ಗಸ್ತ್ವನೀಕಸ್ಥೋಽಥಾಧ್ಯಕ್ಷಾಧಿಕೃತೌ ಸಮೌ ।
ಸ್ಥಾಯುಕೋಽಧಿಕೃತೋ ಗ್ರಾಮೇ ಗೋಪೋ ಗ್ರಾಮೇಷು ಭೂರಿಷು ॥ ೭೭೩
ಭೌರಿಕಃ ಕನಕಾಧ್ಯಕ್ಷೋ ರೂಪ್ಯಾಧ್ಯಕ್ಷಸ್ತು ನೈಷ್ಕಿಕಃ ।
ಅಂತಃಪುರೇ ತ್ವಧಿಕೃತಃ ಸ್ಯಾದಂತರ್ವಂಶಿಕೋ ಜನಃ ॥ ೭೭೪
ಸೌವಿದಲ್ಲಾಃ ಕಂಚುಕಿನಃ ಸ್ಥಾಪತ್ಯಾಸ್ಸೌವಿದಾಶ್ಚ ತೇ ।
ಷಂಢೋ ವರ್ಷವರಸ್ತುಲ್ಯೌ ಸೇವಕಾರ್ಥ್ಯನುಜೀವಿನಃ ॥ ೭೭೫
ವಿಷಯಾನಂತರೋ ರಾಜಾ ಶತ್ರುರ್ಮಿತ್ರಮತಃ ಪರಮ್ ।
ಉದಾಸೀನಃ ಪರತರಃ ಪಾರ್ಷ್ಣಿಗ್ರಾಹಸ್ತು ಪೃಷ್ಠತಃ ॥ ೭೭೬

---

೭೭೨. ಪ್ರಾಡ್ವಿವಾಕ, ಅಕ್ಷದರ್ಶಕ (ಪು)=ನ್ಯಾಯಾಧಿಕಾರಿ. ಪ್ರತೀಹಾರ, ದ್ವಾರಪಾಲ, ದ್ವಾಃಸ್ಥ, ದ್ವಾಃಸ್ಥಿತ, ದರ್ಶಕ (ಪು)=ಬಾಗಿಲು ಕಾಯುವವನು.

೭೭೩. ರಕ್ಷಿವರ್ಗ, ಅನೀಕಸ್ಥ=ಅಂಗರಕ್ಷಕ. ಅಧ್ಯಕ್ಷ, ಅಧಿಕೃತ, (ಪು)=ಅಧಿಕಾರಿ. ಸ್ಥಾಯುಕ (ಪು)=ಗ್ರಾಮಾಧಿಕಾರಿ. ಗೋಪ (ಪು)=ಅನೇಕ ಗ್ರಾಮಗಳ ಅಧಿಕಾರಿ.

೭೭೪. ಭೌರಿಕ, ಕನಕಾಧ್ಯಕ್ಷ (ಪು)=ಖಜಾನೆಯ ಅಧಿಕಾರಿ. ರೂಪ್ಯಾಧ್ಯಕ್ಷ, ನೈಷ್ಕಿಕ (ಪು)=ಟಂಕಸಾಲೆಯ ಅಧಿಕಾರಿ. ಅಂತರ್ವಂಶಿಕ (ಪು)=ಅಂತಃಪುರಾಧಿಕಾರಿ.

೭೭೫. ಸೌವಿದಲ್ಲ, ಕಂಚುಕಿನ್, ಸ್ಥಾಪತ್ಯ, ಸೌವಿದ (ಪು)=ಅಂತಃಪುರದ ಕಾವಲುಗಾರ., ಷಂಢ (ಶಂಢ), ವರ್ಷವರ (ಪು)=ನಪುಂಸಕನಾದ ಅಂತಃಪುರಸೇವಕ. ಸೇವಕ, ಅರ್ಥಿನಂ, ಅನುಜೀವಿನ್ (ಪು)=ಸೇವಕ.

೭೭೬. ಶತ್ರು (ಪು)=ತನ್ನ ರಾಜ್ಯದ ಪಕ್ಕದಲ್ಲಿರುವ ರಾಜ್ಯದ ದೊರೆ. ಇವನು ಪ್ರಾಕೃತ ಶತ್ರು. ಮಿತ್ರ (ನ)=ಪ್ರಾಕೃತಶತ್ರುವಿನ ಆಚೆಯ ರಾಜ್ಯದ ದೊರೆ. ಇವನು ಪ್ರಾಕೃತಮಿತ್ರ. ಉದಾಸೀನ (ಪು)=ಪ್ರಾಕೃತಮಿತ್ರನ ಆಚೆಯ ರಾಜ್ಯದ ದೊರೆ. ಪಾರ್ಷ್ಣಿಗ್ರಾಹ (ಪು)=ದಿಗ್ವಿಜಯಾರ್ಥವಾಗಿ ಹೊರಟ ರಾಜನ ಹಿಂದುಗಡೆ ಇರತಕ್ಕ ಶತ್ರು ಅಥವಾ ಮಿತ್ರ.

೭೭೭-೭೭೮. ರಿಪು, ವೈರಿನ್, ಸಪತ್ನ, ಅರಿ, ದ್ವಿಷತ್, ದ್ವೇಷಣ, ದುರ್ಹೃದ್, ದ್ವಿಷ್, ವಿಪಕ್ಷ, ಅಹಿತ, ಅಮಿತ್ರ, ದಸ್ಯು, ಶಾತ್ರವ, ಶತ್ರು, ಅಭಿಘಾತಿನ್, ಪರ, ಅರಾತಿ, ಪ್ರತ್ಯರ್ಥಿನ್, ಪರಿಪಂಥಿನ್ (ಪು)=ವೈರಿ. ಸ್ನಿಗ್ಧ, ವಯಸ್ಯ, ಸವಯಸ್ (ಪು)=ಸಮಾನ ವಯಸ್ಸುಳ್ಳವನು, ಸ್ನೇಹಿತ. ಮಿತ್ರ (ನ), ಸಖಿ, ಸುಹೃದ್ (ಪು)=ಗೆಳೆಯ, ಸ್ನೇಹಿತ.

ರಿಪೌ ವೈರಿಸಪತ್ನಾರಿದ್ವಿಷದ್ದ್ವೇಷಣದುರ್ಹೃದಃ ।
ದ್ವಿಡ್ವಿಪಕ್ಷಾಹಿತಾಮಿತ್ರದಸ್ಯುಶಾತ್ರವಶತ್ರವಃ ॥ ೭೭೭
ಅಭಿಘಾತಿಪರಾರಾತಿಪ್ರತ್ಯರ್ಥಿಪರಿಪಂಥಿನಃ ।
ಸ್ನಿಗ್ಧೋ ವಯಸ್ಯಃ ಸವಯಾ ಅಥ ಮಿತ್ರಂ ಸಖಾ ಸುಹೃತ್ ॥ ೭೭೮
ಸಖ್ಯಂ ಸಾಪ್ತಪದೀನಂ ಸ್ಯಾದನುರೋಧೋಽನುವರ್ತನಮ್ ।
ಯಥಾರ್ಹವರ್ಣಃ ಪ್ರಣಿಧಿರಪಸರ್ಪಶ್ಚರಃ ಸ್ಪಶಃ ॥ ೭೭೯
ಚಾರಶ್ಚ ಗೂಢಪುರುಷಶ್ಚಾಪ್ತಪ್ರತ್ಯಯಿತೌ ಸಮೌ ।
ಸಾಂವತ್ಸರೋ ಜ್ಯಾತಿಷಿಕೋ ದೈವಜ್ಞಗಣಕಾವಪಿ ॥ ೭೮೦
ಸ್ಯುರ್ಮೌಹೂರ್ತಿಕಮೌಹೂರ್ತಜ್ಞಾನಿಕಾರ್ತಾಂತಿಕಾ ಅಪಿ ।
ತಾಂತ್ರಿಕೋ ಜ್ಞಾತಸಿದ್ಧಾಂತಸ್ಸತ್ರೀ ಗೃಹಪತಿಸ್ಸಮೌ ॥ ೭೮೧
ಲಿಪಿಕರೋಽಕ್ಷರಚಣೋಽಕ್ಷರಚುಂಚುಶ್ಚ ಲೇಖಕೇ ।
ಲಿಖಿತಾಕ್ಷರವಿನ್ಯಾಸೇ ಲಿಪಿರ್ಲಿಬಿರುಭೇ ಸ್ತ್ರಿಯೌ ॥ ೭೮೨

೭೭೯-೭೮೦. ಸಖ್ಯ, ಸಾಪ್ತಪದೀನ (ನ)=ಸ್ನೇಹ. ಅನುರೋಧ (ಪು), ಅನುವರ್ತನ (ನ)=ಅನ್ಯರ ಇಷ್ಟದಂತೆ ವರ್ತಿಸುವುದು. ಯಥಾರ್ಹವರ್ಣ, ಪ್ರಣಿಧಿ, ಅಪಸರ್ಪ, ಚರ, ಸ್ಪಶ, ಚಾರ, ಗೂಢಪುರುಷ (ಪು)=ಗೂಢಚಾರ. ಆಪ್ತ, ಪ್ರತ್ಯಯಿತ (ಪು)=ವಿಶ್ವಾಸಪಾತ್ರ.

೭೮೦-೭೮೧. ಸಾಂವತ್ಸರ, ಜ್ಯೌತಿಷಿಕ, ದೈವಜ್ಞ, ಗಣಕ, ಮೌಹೂರ್ತಿಕ, ಮೌಹೂರ್ತ, ಜ್ಞಾನಿನ್, ಕಾರ್ತಾಂತಿಕ (ಪು)=ಜ್ಯೋತಿಃಶಾಸ್ತ್ರವನ್ನು ಬಲ್ಲವನು, ಜೋಯಿಸ. ತಾಂತ್ರಿಕ, ಜ್ಞಾತ ಸಿದ್ಧಾಂತ (ಪು)=ಶಾಸ್ತ್ರಜ್ಞ. ಸತ್ರಿನ್, ಗೃಹಪತಿ (ಪು)=ದಾನಧರ್ಮಗಳನ್ನು ಮಾಡುವ ಗೃಹಸ್ಥ.

೭೮೨. ಲಿಪಿಕರ[1]ರ, ಅಕ್ಷರಚಣ, ಅಕ್ಷರಚುಂಚು, ಲೇಖಕ (ಪು)=ಬರೆಯುವವನು. ಲಿಪಿ, ಲಿಬಿ (ಸ್ತ್ರೀ)=ಬರೆಹ, ಲೇಖನ.

೭೮೩. ಸಂದೇಶಹರ, ದೂತ (ಪು)=ಹೇಳಿಕೆಯನ್ನು ಒಯ್ಯುವವನು (Messenger). ದೌತ್ಯ (ನ)=ದೂತನ ಧರ್ಮ ; ದೂತನ ಕರ್ತವ್ಯ. ಅಧ್ವನೀನ, ಅಧ್ವಗ, ಅಧ್ವನ್ಯ, ಪಾಂಥ, ಪಥಿಕ (ಪು)=ದಾರಿಗ, ಪ್ರಯಾಣಿಕ.

---

1 ಲಿಪಿಕಾರ, ಲಿಪಿಂಕರ ಎಂಬ ಶಬ್ದಾಂತರಗಳೂ ಉಂಟು.

ಸ್ಯಾತ್ ಸಂದೇಶಹರೋ ದೂತೋ ದೌತ್ಯಂ ತದ್ಭಾವಕರ್ಮಣೀ ।
ಅಧ್ವನೀನೋऽಧ್ವಗೋऽಧ್ವನ್ಯಃ ಪಾಂಥಃ ಪಥಿಕ ಇತ್ಯಪಿ ॥ ೭೮೩
ಸ್ವಾಮ್ಯಮಾತ್ಯಸುಹೃತ್ಕೋಶರಾಷ್ಟ್ರದುರ್ಗಬಲಾನಿ ಚ ।
ರಾಜ್ಯಾಂಗಾನಿ ಪ್ರಕೃತಯಃ ಪೌರಾಣಾಂ ಶ್ರೇಣಯೋऽಪಿ ಚ ॥ ೭೮೪
ಸಂಧಿರ್ನಾ ವಿಗ್ರಹೋ ಯಾನಮಾಸನಂ ದ್ವೈಧಮಾಶ್ರಯಃ ।
ಷಡ್ಗುಣಾಶ್ಯಕ್ತಯಸ್ತಿಸ್ರಃ ಪ್ರಭಾವೋತ್ಸಾಹಮಂತ್ರಜಾಃ ॥ ೭೮೫
ಕ್ಷಯಸ್ಸ್ಥಾನಂ ಚ ವೃದ್ಧಿಶ್ಚ ತ್ರಿವರ್ಗೋ ನೀತಿವೇದಿನಾಮ್ ।
ಸ ಪ್ರತಾಪಃ ಪ್ರಭಾವಶ್ಚ ಯತ್ತೇಜಃ ಕೋಶದಂಡಜಮ್ ॥ ೭೮೬

---

೭೮೪. ಸ್ವಾಮಿನ್ (ಪು)=ರಾಜ, ಅಮಾತ್ಯ (ಪು)=ಮಂತ್ರಿ, ಸುಹೃದ್ (ಪು)=ಮಿತ್ರ, ಕೋಶ (ಕೋಷ) (ಪು)=ಭಂಡಾರ, ರಾಷ್ಟ್ರ (ನ)=ರಾಜ್ಯ, ದುರ್ಗ (ಪು)=ಕೋಟೆ, ಬಲ (ನ)=ಸೈನ್ಯ—ಈ ಏಳು ವಸ್ತುಗಳಿಗೆ ರಾಜ್ಯಾಂಗ (ನ), ಪ್ರಕೃತಿ (ಸ್ತ್ರೀ)=ರಾಜ್ಯಾಂಗಗಳೆಂದೂ ಪ್ರಕೃತಿಗಳೆಂದೂ ಹೆಸರು. ಪೌರಾಣಾಂ ಶ್ರೇಣಯಃ (ಸ್ತ್ರೀ)=ಪ್ರಜೆಗಳ ಸಮುದಾಯಗಳಿಗೂ ಪ್ರಕೃತಿಯೆಂದು ಹೆಸರು. ಪ್ರಜೆಗಳೂ ಸೇರಿ ಅಷ್ಟಾಂಗ ರಾಜ್ಯ ಎಂಬ ವ್ಯವಹಾರವೂ ಉಂಟು.

೭೮೫. ಸಂಧಿ (ಪು)=ಶತ್ರುವಿನೊಡನೆ ಮಾಡಿಕೊಳ್ಳುವ ಒಂದು ವ್ಯವಸ್ಥೆ, ಸಂಧಾನ. ವಿಗ್ರಹ (ಪು)=ಯುದ್ಧ. ಯಾನ (ನ)= ದಂಡೆತ್ತಿಹೋಗುವುದು. ಆಸನ (ನ)=ಸಮಯಪ್ರತೀಕ್ಷೆಯಿಂದ ಯುದ್ಧಮಾಡದೆ ಸುಮ್ಮನಿರುವುದು. ದ್ವೈಧ (ನ)=ಯಾವ ಪಕ್ಷಕ್ಕೆ ಸೇರಿದ್ದಾನೆ ಎಂಬುದನ್ನು ತೋರಿಸಿಕೊಳ್ಳದೆ ಮಧ್ಯವರ್ತಿಯಂತೆ ನಡೆದುಕೊಳ್ಳುವುದು. ಆಶ್ರಯ (ಪು)=ಬಲಶಾಲಿಯನ್ನು ಆಶ್ರಯಿಸುವುದು. ಇವು ಷಡ್ಗುಣಾಃ=ರಾಜನೀತಿಯ ಆರು ಗುಣಗಳು. ಶಕ್ತಯಸ್ತಿಸ್ರಃ =ಮುಂದೆ ಹೇಳತಕ್ಕವು ರಾಜನೀತಿಯಲ್ಲಿರಬೇಕಾದ ಮೂರು ಶಕ್ತಿಗಳು. ಯಾವುವೆಂದರೆ : ಪ್ರಭಾವ ಶಕ್ತಿ (ಸ್ತ್ರೀ)=ಕೋಶದಂಡಗಳ ಪ್ರಾಬಲ್ಯ. ಇದಕ್ಕೆ ಪ್ರಭುಶಕ್ತಿ ಎಂದೂ ಹೆಸರು. ಉತ್ಸಾಹಶಕ್ತಿ=ಕಾರ್ಯವನ್ನು ಸಾಧಿಸುವೆನೆಂಬ ಉತ್ಸಾಹ. ಮಂತ್ರಜಶಕ್ತಿ=ಸರಿಯಾದ ಮಂತ್ರಾಲೋಚನೆಯಿಂದ ಬಂದ ವಿವೇಚನಾಶಕ್ತಿ.

೭೮೬. ಕ್ಷಯ (ಪು)=ಶತ್ರುಗಳಿಗಿಂತ ತಾನು ಕಡಿಮೆಯಾಗಿರುವುದು, ಸ್ಥಾನ (ನ)= ಶತ್ರುವಿಗೆ ಸಮಬಲನಾಗಿರುವುದು, ವೃದ್ಧಿ (ಸ್ತ್ರೀ)=ಶತ್ರುವಿಗಿಂತ ಅಧಿಕನಾಗಿರುವುದು- ಈ ಮೂರು ತ್ರಿವರ್ಗ (ಪು)=ರಾಜನೀತಿಯನ್ನು ಬಲ್ಲವರಿಗೆ ತ್ರಿವರ್ಗವೆನಿಸುತ್ತವೆ. ಪ್ರತಾಪ, ಪ್ರಭಾವ (ಪು)=ಕೋಶದಂಡಗಳ ಬಲದಿಂದುಂಟಾಗುವ ತೇಜಸ್ಸು.

ಸಾಮದಾನೇ ಭೇದದಂಡಾವಿತ್ಯುಪಾಯಚತುಷ್ಟಯಮ್ ।
ಸಾಹಸಂ ತು ದಮೋ ದಂಡಸ್ಸಾಮ ಸಾಂತ್ವಮಥೋ ಸಮೌ ॥ ೭೮೭
ಭೇದೋಪಜಾಪಾವುಪಧಾ ಧರ್ಮಾದ್ಯೈರ್ಯತ್ಪರೀಕ್ಷಣಮ್ ।
ಪಂಚ ತ್ರಿಷ್ವಷಡಕ್ಷೀಣೋ ಯಸ್ತೃತೀಯಾದ್ಯಗೋಚರಃ ॥ ೭೮೮
ವಿವಿಕ್ತವಿಜನಚ್ಛನ್ನನಿಶ್ಶಲಾಕಾಸ್ತಥಾ ರಹಃ ।
ರಹಶ್ಚೋಪಾಂಶು ಚಾಲಿಂಗೇ ರಹಸ್ಯಂ ತದ್ಭವೇ ತ್ರಿಷು ॥ ೭೮೯
ಸಮೌ ವಿಸ್ರಂಭವಿಶ್ವಾಸೌ ಭ್ರೇಷೋ ಭ್ರಂಶೋ ಯಥೋಚಿತಾತ್ ।
ಅಭ್ರೇಷನ್ಯಾಯಕಲ್ಪಾಸ್ತು ದೇಶರೂಪಂ ಸಮಂಜಸಮ್ ॥ ೭೯೦

---

೭೮೭. ಸಾಮನ್, ದಾನ (ನ), ಭೇದ, ದಂಡ (ಪು)=ಈ ನಾಲ್ಕು ಉಪಾಯ ಚತುಷ್ಟಯ ವೆನಿಸಿಕೊಳ್ಳುತ್ತವೆ. ಸಾಹಸ (ನ), ದಮ, ದಂಡ (ಪು)=ಬಲಪ್ರಯೋಗ. ಸಾಮನ್, ಸಾಂತ್ವ (ನ)=ಸಾಮೋಪಾಯ.

೭೮೮. ಭೇದ, ಉಪಜಾಪ (ಪು)=ಒಡಕು ಹುಟ್ಟಿಸುವುದು. ಉಪಧಾ (ಸ್ತ್ರೀ)=ಧರ್ಮಾರ್ಥ ಕಾಮಗಳ ನೆವದಿಂದ ರಾಜನು ತನ್ನ ಮಂತ್ರಿಗಳನ್ನು ಪರೀಕ್ಷಿಸುವುದು. ಅಷಡಕ್ಷೀಣ (ಪು. ಸ್ತ್ರೀ. ನ-ವಿ. ನಿಘ್ನ)= ಮೂರನೆಯವನಿಗೆ ತಿಳಿಯದ ಇಬ್ಬರ ಮಂತ್ರಾಲೋಚನೆ-ರಹಸ್ಯವಾದ ಆಲೋಚನೆ.

೭೮೯. ವಿವಿಕ್ತ, ವಿಜನ, ಛನ್ನ, ನಿಶ್ಶಲಾಕ (ಪು. ಸ್ತ್ರೀ. ನ- ವಿ. ನಿಘ್ನ) ರಹಸ್ (ನ), ರಹಸ್, ಉಪಾಂಶು (ಅವ್ಯಯ)=ಏಕಾಂತಸ್ಥಳ. ರಹಸ್ಯ (ಪು. ಸ್ತ್ರೀ. ನ-ವಿ. ನಿಘ್ನ)=ಏಕಾಂತ ದಲ್ಲಿ ನಡೆದದ್ದು.

೭೯೦. ವಿಸ್ರಂಭ, ವಿಶ್ವಾಸ (ಪು)=ನಂಬಿಕೆ. ಭ್ರೇಷ, ಭ್ರಂಶ (ಪು)=ಔಚಿತ್ಯದಿಂದ ತಪ್ಪುವುದು, ಔಚಿತ್ಯದ ಕೊರತೆ. ಅಭ್ರೇಷ, ನ್ಯಾಯ, ಕಲ್ಪ (ಪು), ದೇಶರೂಪ, ಸಮಂಜಸ[1] (ನ)=ಸರಿ, ಔಚಿತ್ಯ.

೭೯೧. ಯುಕ್ತ, ಔಪಯಿಕ, ಲಭ್ಯ, ಭಜಮಾನ, ಅಭಿನೀತ, ನ್ಯಾಯ್ಯ (ಪು.ಸ್ತ್ರೀ.ನ-ವಿ. ನಿಘ್ನ) (-ಸ್ತ್ರೀ. ಔಪಯಿಕೀ)=ಯುಕ್ತ, ನ್ಯಾಯಪ್ರಾಪ್ತ. ಸಂಪ್ರಧಾರಣಾ (ಸ್ತ್ರೀ), ಸಮರ್ಥನ (ನ)=ಇದು ಸರಿಯೆಂಬ ನಿಶ್ಚಯ.

---

[1] ದೇಶರೂಪ, ಸಮಂಜಸ ಶಬ್ದಗಳು ಯುಕ್ತ, ಉಚಿತ—ಎಂಬ ಅರ್ಥದಲ್ಲಿ ವಿಶೇಷ್ಯನಿಘ್ನಗಳಾಗಿ ತ್ರಿಲಿಂಗಗಳಲ್ಲಿಯೂ ಇರುತ್ತವೆ.

ಯುಕ್ತಮೌಪಯಿಕಂ ಲಭ್ಯಂ ಭಜಮಾನಾಭಿನೀತವತ್ ।
ನ್ಯಾಯ್ಯಂ ಚ ತ್ರಿಷು ಷಟ್ ಸಂಪ್ರಧಾರಣಾ ತು ಸಮರ್ಥನಮ್ ॥ ೭೯೧
ಅವವಾದಸ್ತು ನಿರ್ದೇಶೋ ನಿದೇಶಶ್ಶಾಸನಂ ಚ ಸಃ ।
ಶಿಷ್ಟಿಶ್ಚಾಜ್ಞಾ ಚ ಸಂಸ್ಥಾ ತು ಮರ್ಯಾದಾ ಧಾರಣಾ ಸ್ಥಿತಿಃ ॥ ೭೯೨
ಆಗೋಽಪರಾಧೋ ಮಂತುಶ್ಚ ಸಮೇ ತೂದ್ದಾನಬಂಧನೇ ।
ದ್ವಿಪಾದ್ಯೋ ದ್ವಿಗುಣೋ ದಂಡೋ ಭಾಗಧೇಯಃ ಕರೋ ಬಲಿಃ ॥ ೭೯೩
ಘಟ್ಟಾದಿದೇಯಂ ಶುಲ್ಕೋಽಸ್ತ್ರೀ ಪ್ರಾಭೃತಂ ತು ಪ್ರದೇಶನಮ್ ।
ಉಪಾಯನಮುಪಗ್ರಾಹ್ಯಮುಪಹಾರಸ್ತಥೋಪದಾ ॥ ೭೯೪
ಯೌತಕಾದಿ ತು ಯದ್ದೇಯಂ ಸುದಾಯೋ ಹರಣಂ ಚ ತತ್ ।
ತತ್ಕಾಲಸ್ತು ತದಾತ್ವಂ ಸ್ಯಾದುತ್ತರಃ ಕಾಲ ಆಯತಿಃ ॥ ೭೯೫

---

೭೯೨. ಅವವಾದ, ನಿರ್ದೇಶ, ನಿದೇಶ, (ಪು), ಶಾಸನ (ನ), ಶಿಷ್ಟಿ, ಆಜ್ಞಾ (ಸ್ತ್ರೀ)=ಅಪ್ಪಣೆ. ಸಂಸ್ಥಾ, ಮರ್ಯಾದಾ, ಧಾರಣಾ, ಸ್ಥಿತಿ (ಸ್ತ್ರೀ)=ನ್ಯಾಯಮಾರ್ಗಸ್ಥಿತಿ, ಮರ್ಯಾದೆ.

೭೯೩. ಆಗಸ್ (ನ), ಅಪರಾಧ, ಮಂತು (ಪು)=ತಪ್ಪು. ಉದ್ದಾನ, ಬಂಧನ (ನ)=ಕಟ್ಟುವುದು (Arrest). ದ್ವಿಪಾದ್ಯ (ಪು)=ವಿಹಿತವಾದ್ದಕ್ಕಿಂತ ಎರಡರಷ್ಟು ದಂಡನೆ. ಭಾಗಧೇಯ, ಕರ, ಬಲಿ (ಪು)=ರಾಜನಿಗೆ ಕೊಡಬೇಕಾದ ತೆರ, ಕಂದಾಯ.

೭೯೪. ಶುಲ್ಕ (ಪು. ನ)=ಸುಂಕದ ಕಟ್ಟೆ ಮೊದಲಾದ್ದರಲ್ಲಿ ಕೊಡಬೇಕಾದ ಸುಂಕ. ಪ್ರಾಭೃತ, ಪ್ರದೇಶನ, ಉಪಾಯನ, ಉಪಗ್ರಾಹ್ಯ (ನ), ಉಪಹಾರ (ಪು), ಉಪದಾ (ಸ್ತ್ರೀ)=ಕಾಣಿಕೆ.

೭೯೫. ಯೌತಕ[1] (ನ), ಸುದಾಯ (ಪು), ಹರಣ (ನ)=ಮದುವೆಯಲ್ಲಿ ಕೊಡತಕ್ಕ ಬಳುವಳಿ. ತತ್ಕಾಲ (ಪು), ತದಾತ್ವ (ನ)=ಪ್ರಕೃತವಾದ ಕಾಲ, ವರ್ತಮಾನಕಾಲ. ಆಯತಿ (ಸ್ತ್ರೀ)=ಮುಂದಿನ ಕಾಲ, ಭವಿಷ್ಯತ್ಕಾಲ.

೭೯೬. ಸಾಂದೃಷ್ಟಿಕ (ನ)=ತತ್ಕಾಲದಲ್ಲಿ ಆಗುವ ಫಲ. ಉದರ್ಕ (ಪು)=ಮುಂದೆ ಆಗುವ ಫಲ. ಅದೃಷ್ಟ (ನ)=ಬೆಂಕಿ, ನೀರು ಮುಂತಾದವುಗಳಿಂದ ಅನಿರೀಕ್ಷಿತವಾಗಿ ಸಂಭವಿಸುವ ಭಯ. ದೃಷ್ಟ (ನ)=ರಾಜರಿಗೆ ಸ್ವಪಕ್ಷ ಪರಪಕ್ಷಗಳಿಂದ ಸಂಭವಿಸುವ ಭಯ.

---

[2] ಯುತಕ, ಯೌತುಕ (ನ) ಎಂಬ ರೂಪಾಂತರಗಳೂ ಇವೆ.

ಸಾಂದೃಷ್ಟಿಕಂ ಫಲಂ ಸದ್ಯಃ ಉದರ್ಕಃ ಫಲಮುತ್ತರಮ್ ।
ಅದೃಷ್ಟಂ ವಹ್ನಿತೋಯಾದಿ ದೃಷ್ಟಂ ಸ್ವಪರಚಕ್ರಜಮ್ ॥ ೭೯೬
ಮಹೀಭುಜಾಮಹಿಭಯಂ ಸ್ವಪಕ್ಷಪ್ರಭವಂ ಭಯಮ್ ।
ಪ್ರಕ್ರಿಯಾ ತ್ವಧಿಕಾರಸ್ಸ್ಯಾಚ್ಚಾಮರಂ ತು ಪ್ರಕೀರ್ಣಕಮ್ ॥ ೭೯೭
ನೃಪಾಸನಂ ತು ಯದ್ಭದ್ರಾಸನಂ ಸಿಂಹಾಸನಂ ತು ತತ್ ।
ಹೈಮಂ ಛತ್ರಂ ತ್ವಾತಪತ್ರಂ ರಾಜ್ಞಸ್ತು ನೃಪಲಕ್ಷ್ಮ ತತ್ ॥ ೭೯೮
ಭದ್ರಕುಂಭಃ ಪೂರ್ಣಕುಂಭೋ ಭೃಂಗಾರಃ ಕನಕಾಲುಕಾ ।
ನಿವೇಶಃ ಶಿಬಿರಂ ಷಂಢೇ ಸಜ್ಜನಂ ತೂಪರಕ್ಷಣಮ್ ॥ ೭೯೯
ಹಸ್ತ್ಯಶ್ವರಥಪಾದಾತಂ ಸೇನಾಂಗಂ ಸ್ಯಾಚ್ಚತುಷ್ಟಯಮ್ ।
ದಂತೀ ದಂತಾವಲೋ ಹಸ್ತೀ ದ್ವಿರದೋಽನೇಕಪೋ ದ್ವಿಪಃ ॥ ೮೦೦

---

೭೯೭. ಅಹಿಭಯ (ನ)=ಸ್ವಪಕ್ಷದಿಂದ ಸಂಭವಿಸುವ ಭಯ. ಪ್ರಕ್ರಿಯಾ (ಸ್ತ್ರೀ), ಅಧಿಕಾರ (ಪು)=ಅಧಿಕಾರ (Power). ಚಾಮರ,[1] ಪ್ರಕೀರ್ಣಕ (ನ)=ಚಾಮರ.

೭೯೮. ನೃಪಾಸನ, ಭದ್ರಾಸನ (ನ)=ರಾಜನ ಗದ್ದುಗೆ. ಸಿಂಹಾಸನ (ನ)=ಸುವರ್ಣಭೂಷಿತವಾದ ರಾಜಪೀಠ. ಛತ್ರ, ಆತಪತ್ರ (ನ)=ಕೊಡೆ, ಛತ್ರಿ. ನೃಪಲಕ್ಷ್ಮನ್ (ನ)=ರಾಜಚಿಹ್ನೆಯೆನಿಸಿದ ಕೊಡೆ, ಶ್ವೇತಚ್ಛತ್ರ.

೭೯೯. ಭದ್ರಕುಂಭ, ಪೂರ್ಣಕುಂಭ (ಪು)=ಪೂರ್ಣಕಲಶ. ಭೃಂಗಾರ (ಪು), ಕನಕಾಲುಕಾ=ಚಿನ್ನದ ಗಿಂಡಿ. ನಿವೇಶ (ಪು), ಶಿಬಿರ (ನ)=ಸೈನ್ಯದ ಬಿಡಾರ. ಸಜ್ಜನ, ಉಪರಕ್ಷಣ (ನ)=ಬಿಡಾರದ ಸುತ್ತಲೂ ಇರುವ ಕಾವಲು, ಪಹರೆ.

೮೦೦-೮೦೧. ಸೇನಾಂಗ (ನ)=ಆನೆ ಕುದುರೆ ರಥ ಕಾಲಾಳು ಎಂಬ ನಾಲ್ಕು ಬಗೆಯ ಸೇನೆ. ದಂತಿನ್, ದಂತಾವಲ, ಹಸ್ತಿನ್, ದ್ವಿರದ, ಅನೇಕಪ, ದ್ವಿಪ, ಮತಂಗಜ, ಗಜ, ನಾಗ, ಕುಂಜರ, ವಾರಣ, ಕರಿನ್, ಇಭ, ಸ್ತಂಬೇರಮ, ಪದ್ಮಿನ್.[1] (ಪು)=ಆನೆ. ಯೂಥನಾಥ, ಯೂಥಪ (ಪು)=ಸಲಗ.

---

[1] ಚಮರ (ಪು) ಚಾಮರಾ (ಸ್ತ್ರೀ) ಎಂಬ ರೂಪಾಂತರಗಳೂ ಇವೆ.

ಮತಂಗಜೋ ಗಜೋ ನಾಗಃ ಕುಂಜರೋ ವಾರಣಃ ಕರೀ ।
ಇಭಃ ಸ್ತಂಬೇರಮಃ ಪದ್ಮೀ ಯೂಥನಾಥಸ್ತು ಯೂಥಪಃ ॥ ೮೦೧
ಮದೋತ್ಕಟೋ ಮದಕಲಃ ಕಲಭಃ ಕರಿಶಾವಕಃ ।
ಪ್ರಭಿನ್ನೋ ಗರ್ಜಿತೋ ಮತ್ತಸ್ಸಮಾವುದ್ವಾಂತನಿರ್ಮದೌ ॥ ೮೦೨
ಹಾಸ್ತಿಕಂ ಗಜತಾ ವೃಂದೇ ಕರಿಣೀ ಧೇನುಕಾ ವಶಾ ।
ಗಂಡಃ ಕಟೋ ಮದೋ ದಾನಂ ವಮಥುಃ ಕರಶೀಕರಃ ॥ ೮೦೩
ಕುಂಭೌ ತು ಪಿಂಡೌ ಶಿರಸಸ್ತಯೋರ್ಮಧ್ಯೇ ವಿದುಃ ಪುಮಾನ್ ।
ಅವಗ್ರಹೋ ಲಲಾಟಂ ಸ್ಯಾದಿಷೀಕಾ ತ್ವಕ್ಷಿಕೂಟಕಮ್ ॥ ೮೦೪
ಅಪಾಂಗದೇಶೋ ನಿರ್ಯಾಣಂ ಕರ್ಣಮೂಲಂ ತು ಚೂಲಿಕಾ ।
ಅಧಃ ಕುಂಭಸ್ಯ ವಾಹಿತ್ಥಂ ಪ್ರತಿಮಾನಮಧೋಽಸ್ಯ ಯತ್ ॥ ೮೦೫

---

೮೦೨. ಮದೋತ್ಕಟ, ಮದಕಲ (ಪು)=ಮದಿಸಿದ ಆನೆ. ಕಲಭ, ಕರಿಶಾವಕ (ಪು)=ಆನೆಯ ಮರಿ. ಪ್ರಭಿನ್ನ, ಗರ್ಜಿತ, ಮತ್ತ (ಪು)=ಮದೋದಕವನ್ನು ಸುರಿಸುತ್ತಿರುವ ಆನೆ. ಉದ್ವಾಂತ, ನಿರ್ಮದ (ಪು)=ಮದವಿಳಿದ ಆನೆ.

೮೦೩. ಹಾಸ್ತಿಕ (ನ),ಗಜತಾ (ಸ್ತ್ರೀ)=ಆನೆಗಳ ಗುಂಪು. ಕರಿಣೀ, ಧೇನುಕಾ, ವಶಾ (ಸ್ತ್ರೀ)=ಹೆಣ್ಣಾನೆ. ಗಂಡ, ಕಟ (ಪು)=ಆನೆಯ ಕೆನ್ನೆ. ಮದ (ಪು), ದಾನ (ನ)=ಮದೋದಕ. ವಮಥು, ಕರಶೀಕರ (ಪು)=ಸೊಂಡಿಲಿನಿಂದ ಬರುವ ತುಂತುರು.

೮೦೪. ಕುಂಭ (ಪು)=ಆನೆಯ ತಲೆಯ ಕುಂಭ. ವಿದು (ಪು)=ಆನೆಯ ಎರಡು ಕುಂಭಗಳ ಮಧ್ಯಭಾಗ. ಅವಗ್ರಹ (ಪು)=ಆನೆಯ ಹಣೆ. ಇಷೀಕಾ (ಈಷಿಕಾ) (ಸ್ತ್ರೀ)=ಆನೆಯ ಕಣ್ಣುಗುಡ್ಡೆ.

೮೦೫. ನಿರ್ಯಾಣ (ನ)=ಆನೆಯ ಕಡೆಗಣ್ಣು. ಚೂಲಿಕಾ (ಸ್ತ್ರೀ)=ಆನೆಯ ಕಿವಿಯ ಬುಡ. ವಾಹಿತ್ಥ (ನ)=ಕುಂಭಸ್ಥಳದ ಕೆಳಭಾಗ. ಪ್ರತಿಮಾನ (ನ)=ವಾಹಿತ್ಥದ ಕೆಳಭಾಗ.

---

[1] ಸಿಂಧುರಃ ಸಾಮಜಃ ಕುಂಭೀ ಮಾತಂಗಶ್ಚ ಮದಾವಲಃ-ಎಂದು ಅಧಿಕ ಪಾಠವಿದೆ-ಕುಂಭಿನ್ (ಪು).

ಆಸನಂ ಸ್ಕಂಧದೇಶಸ್ಸ್ಯಾತ್ ಪದ್ಮಕಂ ಬಿಂದುಜಾಲಕಮ್ ।
ಪಕ್ಷಭಾಗಃ ಪಾರ್ಶ್ವಭಾಗೋ ದಂತಭಾಗಸ್ತು ಯೋಽಗ್ರತಃ ॥ ೮೦೬
ದ್ವೌ ಪೂರ್ವಪಶ್ಚಾಜ್ಜಂಘಾದಿದೇಶೌ ಗಾತ್ರಾವರೇ ಕ್ರಮಾತ್ ।
ತೋತ್ರಂ ವೈಣುಕಮಾಲಾನಂ ಬಂಧಸ್ತಂಭೇಽಥ ಶೃಂಖಲಾ ॥ ೮೦೭
ಅಂದುಕೋ ನಿಗಡೋಽಸ್ತ್ರೀ ಸ್ಯಾದಂಕುಶೋಽಸ್ತ್ರೀ ಸೃಣಿಃ ಸ್ತ್ರಿಯಾಮ್ ।
ದೂಷ್ಯಾ ಕಕ್ಷ್ಯಾ ವರತ್ರಾ ಸ್ಯಾತ್ಕಲ್ಪನಾ ಸಜ್ಜನಾ ಸಮೇ ॥ ೮೦೮
ಪ್ರವೇಣ್ಯಾಸ್ತರಣಂ ವರ್ಣಃ ಪರಿಸ್ತೋಮಃ ಕುಥೋ ದ್ವಯೋಃ ।
ವೀತಂ ತ್ವಸಾರಂ ಹಸ್ತ್ಯಶ್ವಂ ವಾರೀ ತು ಗಜಬಂಧನೀ ॥ ೮೦೯
ಘೋಟಕೇ ವೀತಿತುರಗತುರಂಗಾಶ್ವತುರಂಗಮಾಃ ।
ವಾಜಿವಾಹಾರ್ವಗಂಧರ್ವಹಯಸೈಂಧವಸಪ್ತಯಃ ॥ ೮೧೦

---

೮೦೬. ಆಸನ (ನ)=ಆನೆಯ ಹೆಗಲು. ಪದ್ಮಕ, ಬಿಂದು ಜಾಲಕ (ನ)=ಪ್ರಾಯದ ಆನೆಯ ಮೈಮೇಲೆ ಕಾಣಿಸುವ ಪದ್ಮಾಕಾರದ ಚಿಹ್ನೆ. ಪಕ್ಷಭಾಗ (ಪು)=ಆನೆಯ ಪಕ್ಕೆ. ದಂತಭಾಗ (ಪು)=ಆನೆಯ ಮುಂಭಾಗ.

೮೦೭-೮೦೮. ಗಾತ್ರ (ನ)=ಆನೆಯ ಕೆಳಮೈಯಲ್ಲಿ ಮುಂಭಾಗ. ಅವರ (ನ)=ಆನೆಯ ಕೆಳಮೈಯಲ್ಲಿ ಹಿಂಭಾಗ. ತೋತ್ರ, ವೈಣುಕ (ನ)=ಆನೆಯನ್ನು ಹೊಡೆಯುವ ಕೋಲು. ಆಲಾನ (ನ)=ಆನೆಯನ್ನು ಕಟ್ಟುವ ಕಂಭ. ಶೃಂಖಲಾ (ಸ್ತ್ರೀ), ಅಂದುಕ (ಪು), ನಿಗಡ (ಪು.ನ)=ಕಟ್ಟಿಹಾಕುವ ಸರಪಳಿ. ಅಂಕುಶ (ಪು.ನ) ಸೃಣಿ[1] (ಸ್ತ್ರೀ)=ಅಂಕುಶ. ದೂಷ್ಯಾ, ಕಕ್ಷ್ಯಾ, ವರತ್ರಾ (ಸ್ತ್ರೀ)=ಆನೆಯ ಸೊಂಟಕ್ಕೆ ಕಟ್ಟುವ ಚರ್ಮದ ಪಟ್ಟಿ. ಕಲ್ಪನಾ, ಸಜ್ಜನಾ (ಸ್ತ್ರೀ)=ಹತ್ತುವುದಕ್ಕಾಗಿ ಆನೆಯನ್ನು ಸಜ್ಜುಗೊಳಿಸುವುದು.

೮೦೯. ಪ್ರವೇಣೀ (ಸ್ತ್ರೀ), ಆಸ್ತರಣ (ನ),ವರ್ಣ, ಪರಿಸ್ತೋಮ (ಪು), ಕುಥ[2] (ಪು. ಸ್ತ್ರೀ)=ಆನೆಯ ಮೇಲೆ ಹಾಸುವ ಚಿತ್ರವರ್ಣದ ಕಂಬಳಿ. ವೀತ (ನ)=ದುರ್ಬಲವಾದ ಆನೆ ಅಥವಾ ಕುದುರೆ. ವಾರೀ, ಗಜಬಂಧನೀ (ಸ್ತ್ರೀ)=ಆನೆಗಳನ್ನು ಕಟ್ಟುವ ಸ್ಥಳ ; ಖೆಡ್ಡ.

೮೧೦. ಘೋಟಕ, ವೀತಿ (ಪ್ರೀತಿ) ತುರಗ, ತುರಂಗ, ಅಶ್ವ, ತುರಂಗಮ, ವಾಜಿನ್, ವಾಹ, ಅರ್ವನ್, ಗಂಧರ್ವ, ಹಯ, ಸೈಂಧವ, ಸಪ್ತಿ (ಪು)=ಕುದುರೆ.

---

[1] ಸೃಣಿ ಎಂಬ ಶಬ್ದವು ಪುಲ್ಲಿಂಗದಲ್ಲಿಯೂ ಪ್ರಯುಕ್ತವಾಗಿದೆ : 'ಆರಕ್ಷಮಗ್ನಮವಮತ್ಯ ಸೃಣಿಂ ಶಿತಾಗ್ರಂ-ಮಾಘ. ೫—೫. ಅಂಕುಶೋಽಸ್ತ್ರೀ ಸೃಣಿರ್ದ್ವಯೋಃ' ಇತ್ಯಮರಃ- ಮಲ್ಲಿನಾಥವ್ಯಾಖ್ಯಾ.
[2] ಇದು ನಪುಂಸಕದಲ್ಲಿಯೂ ಇದೆ.

ಆಜಾನೇಯಾಃ ಕುಲೀನಾಸ್ಸ್ಯುರ್ವಿನೀತಾಃ ಸಾಧುವಾಹಿನಃ ।
ವನಾಯುಜಾಃ ಪಾರಸೀಕಾಃ ಕಾಂಬೋಜಾ ಬಾಹ್ಲಿಕಾ ಹಯಾಃ ॥ ೮೧೧
ಯಯುರಶ್ವೋಽಶ್ವಮೇಧೀಯೋ ಜವನಸ್ತು ಜವಾಧಿಕಃ ।
ಪೃಷ್ಠ್ಯಃ ಸ್ಥೌರೀ ಸಿತಃ ಕರ್ಕೋ ರಥ್ಯೋ ವೋಢಾ ರಥಸ್ಯ ಯಃ ॥ ೮೧೨
ಬಾಲಃ ಕಿಶೋರೋ ವಾಮ್ಯಶ್ವಾ ವಡವಾ ವಾಡವಂ ಗಣೇ ।
ತ್ರಿಷ್ವಾಶ್ವೀನಂ ಯದಶ್ವೇನ ದಿನೇನೈಕೇನ ಗಮ್ಯತೇ ॥ ೮೧೩
ಕಶ್ಯಂ ತು ಮಧ್ಯಮಶ್ವಾನಾಂ ಹೇಷಾ ಹ್ರೇಷಾ ಚ ನಿಸ್ವನಃ ।
ನಿಗಾಲಸ್ತು ಗಲೋದ್ದೇಶೇ ಬೃಂದೇ ತ್ವಾಶ್ವೀಯಮಾಶ್ವವತ್ ॥ ೮೧೪
ಆಸ್ಕಂದಿತಂ ಧೌರಿತಕಂ ರೇಚಿತಂ ವಲ್ಗಿತಂ ಪ್ಲುತಮ್ ।
ಗತಯೋಽಮೂಃ ಪಂಚ ಧಾರಾಃ ಘೋಣಾತು ಪ್ರೋಥಮಸ್ತ್ರಿಯಾಮ್ ॥ ೮೧೫

---

೮೧೧. ಆಜಾನೇಯ (ಪು)=ಜಾತಿಯ ಕುದುರೆ. ವಿನೀತ (ಪು)=ಪಳಗಿದ ಕುದುರೆ. ವನಾಯುಜ, ಪಾರಸೀಕ, ಕಾಂಬೋಜ, ಬಾಹ್ಲಿಕ (ಪು)=ವನಾಯು ಮುಂತಾದ ಬೇರೆ ಬೇರೆ ದೇಶದಲ್ಲಿ ಜನಿಸಿದ ಕುದುರೆಗಳು.

೮೧೨. ಯಯು (ಪು)=ಅಶ್ವಮೇಧಯಾಗಕ್ಕೆ ಯೋಗ್ಯವಾದ ಕುದುರೆ. ಜವನ (ಪು)=ವೇಗಶಾಲಿಯಾದ ಕುದುರೆ. ಪೃಷ್ಠ್ಯ, ಸ್ಥೌರಿನ್ (ಪು)=ಹೊರೆಯನ್ನು ಹೊರಬಲ್ಲ ಕುದುರೆ. ಕರ್ಕ (ಪು)=ಬಿಳಿಯ ಕುದುರೆ. ರಥ್ಯ (ಪು)=ರಥವನ್ನು ಎಳೆಯುವ ಕುದುರೆ.

೮೧೩. ಬಾಲ, ಕಿಶೋರ (ಪು)=ಕುದುರೆಮರಿ. ವಾಮೀ, ಅಶ್ವಾ, ವಡವಾ (ಸ್ತ್ರೀ)=ಹೆಣ್ಣು ಕುದುರೆ. ವಾಡವ (ನ)=ಹೆಣ್ಣು ಕುದುರೆಗಳ ಗುಂಪು. ಆಶ್ವೀನ (ಪು. ಸ್ತ್ರೀ.ನ)=ಕುದುರೆಯು ಒಂದು ದಿನದಲ್ಲಿ ಹೋಗಿ ಸೇರಬಹುದಾದ ಸ್ಥಳ.

೮೧೪. ಕಶ್ಯ (ನ)=ಕುದುರೆಯ ಬೆನ್ನಿನ ಮಧ್ಯಭಾಗ, ಚಾಟಿಯಿಂದ ಹೊಡೆಯುವ ಸ್ಥಳ. ಹೇಷಾ, ಹ್ರೇಷಾ (ಸ್ತ್ರೀ)=ಕುದುರೆಯ ಕೆನೆಯುವಿಕೆ. ನಿಗಾಲ (ಪು)=ಕುದುರೆಯ ಕತ್ತಿನ ಸಮೀಪಭಾಗ. ಆಶ್ವೀಯ, ಅಶ್ವ (ನ)=ಕುದುರೆಗಳ ಸಮೂಹ.

೮೧೫. ಆಸ್ಕಂದಿತ ಮುಂತಾದ ಐದು ಶಬ್ದಗಳು ಕುದುರೆಯ ಗತಿವಿಶೇಷದ ವಾಚಕಗಳು : ಆಸ್ಕಂದಿತ (ನ)=ಕುಪ್ಪಳಿಸುತ್ತ ಓಡುವುದು. ಧೌರಿತಕ, (ಧೋರಿತಕ) (ನ)=ನವಿಲಿನಂತೆ ಒಲೆಯುತ್ತ ಓಡುವುದು. ರೇಚಿತ (ನ)=ಮಧ್ಯಮವೇಗದಿಂದ ಓಡುವುದು. ವಲ್ಗಿತ (ನ)=ದೇಹದ ಮುಂಭಾಗವನ್ನು ಮೇಲೆತ್ತಿ ತಲೆಯನ್ನು ತಗ್ಗಿಸಿ ಓಡುವುದು. ಪ್ಲುತ

ಕವಿಕಾ ತು ಖಲೀನೋಽಸ್ತ್ರೀ ಶಫಂ ಕ್ಲೀಬೇ ಖುರಃ ಪುಮಾನ್ ।
ಪುಚ್ಛೋಽಸ್ತ್ರೀ ಲೂಮಲಾಂಗೂಲೇ ವಾಲಹಸ್ತಶ್ಚ ವಾಲಧಿಃ ॥ ೮೧೬
ತ್ರಿಷೂಪಾವೃತ್ತಲುಠಿತೌ ಪರಾವೃತ್ತೇ ಮುಹುರ್ಭುವಿ ।
ಯಾನೇ ಚಕ್ರಿಣಿ ಯುದ್ಧಾರ್ಥೇ ಶತಾಂಗಸ್ಸ್ಯಂದನೋ ರಥಃ ॥ ೮೧೭
ಅಸೌ ಪುಷ್ಯರಥಶ್ಚಕ್ರಯಾನಂ ನ ಸಮರಾಯ ಯತ್ ।
ಕರ್ಣೀರಥಃ ಪ್ರವಹಣಂ ಡಯನಂ ಚ ಸಮಂ ತ್ರಯಮ್ ॥ ೮೧೮
ಕ್ಲೀಬೇಽನಶ್ಶಕಟೋಽಸ್ತ್ರೀ ಸ್ಯಾದ್ಗಂತ್ರೀ ಕಂಬಲಿವಾಹ್ಯಕಮ್ ।
ಶಿಬಿಕಾ ಯಾಪ್ಯಯಾನಂ ಸ್ಯಾದ್ದೋಲಾ ಪ್ರೇಂಖಾದಿಕಾ ಸ್ತ್ರಿಯಾಮ್ ॥ ೮೧೯
ಉಭೌ ತು ದ್ವೈ ಪವೈಯಾಘ್ರೌ ದ್ವೀಪಿಚರ್ಮಾವೃತೇ ರಥೇ ।
ಪಾಂಡುಕಂಬಲಸಂವೀತಃ ಸ್ಯಂದನಃ ಪಾಂಡುಕಂಬಲೀ ॥ ೮೨೦

(ನ)=ಅತಿವೇಗದಿಂದ ಹಕ್ಕಿಯಂತೆ ನೇರವಾಗಿ ಓಡುವುದು. ಧಾರಾ (ಸ್ತ್ರೀ)=ಕುದುರೆಯ ಎಲ್ಲಾ ಬಗೆಯ ಓಟ. ಘೋಣಾ (ಸ್ತ್ರೀ), ಪ್ರೋಥ (ಪು.ನ)=ಕುದುರೆಯ ಮೂಗು.

೮೧೬. ಕವಿಕಾ (ಸ್ತ್ರೀ), ಖಲೀನ (ಪು.ನ)=ಕಡಿವಾಣ. ಶಫ (ನ), ಖುರ (ಪು)=ಗೊರಸು. ಪುಚ್ಛ(ಪು. ನ). ಲೂಮ, ಲಾಂಗೂಲ (ನ)=ಬಾಲ. ವಾಲಹಸ್ತ, ವಾಲಧಿ (ಪು)=ಕೂದಲಿಂದ ಕೂಡಿದ ಬಾಲದ ತುದಿ.

೮೧೭. ಉಪಾವೃತ್ತ, ಲುಠಿತ, ಪರಾವೃತ್ತ (ಪು. ಸ್ತ್ರೀ. ನ- ವಿ. ನಿಘ್ನ)=ಆಯಾಸ ಪರಿಹಾರಕ್ಕಾಗಿ ನೆಲದಲ್ಲಿ ಹೊರಳಾಡಿದ ಕುದುರೆ. ಶತಾಂಗ, ಸ್ಯಂದನ, ರಥ(ಪು)=ಯುದ್ಧೋಪಯೋಗಿಯಾದ ರಥ.

೮೧೮. ಪುಷ್ಯರಥ (ಪುಷ್ಪರಥ) (ಪು)=ವಿಹಾರಾರ್ಥವಾದ ರಥ. ಕರ್ಣೀರಥ (ಪು), ಪ್ರವಹಣ, ಡಯನ (ನ)=ಪಲ್ಲಕ್ಕಿ, ಮೇನಾ.

೮೧೯. ಅನಸ್ (ನ), ಶಕಟ (ಪು.ನ)=ಬಂಡಿ, ಗಾಡಿ. ಗಂತ್ರೀ, ಕಂಬಲಿವಾಹ್ಯಕ (ನ)=ಎತ್ತುಗಳಿಂದ ಎಳೆಯಲ್ಪಡುವ ಬಂಡಿ. ದೋಲಾ, ಪ್ರೇಂಖಾ[1] (ಸ್ತ್ರೀ)=ಉಯ್ಯಾಲೆ, ತೂಗುಮಂಚ.

೮೨೦-೮೨೧. ದ್ವೈಪ, ವೈಯಾಘ್ರ (ಪು)=ಹುಲಿಯ ಚರ್ಮವನ್ನು ಹೊದಿಸಿದ ರಥ. ಪಾಂಡುಕಂಬಲಿನ್ (ಪು)=ಬಿಳಿಯ ಕಂಬಳಿಯನ್ನು ಹೊದಿಸಿದ ರಥ. ಕಾಂಬಲ (ಪು)=ಕಂಬಳಿ

---

1 ಪ್ರೇಂಖ (ಪು) ಎಂಬ ರೂಪವೂ ಉಂಟು.

ರಥೇ ಕಾಂಬಲವಾಸ್ತ್ರಾದ್ಯಾಃ ಕಂಬಲಾದಿಭಿರಾವೃತೇ ।
ತ್ರಿಷು ದ್ವೈಪಾದಯೋ ರಥ್ಯಾ ರಥಕಟ್ಯಾ ರಥವ್ರಜೇ ॥ ೮೨೧
ಧೂಃ ಸ್ತ್ರೀ ಕ್ಲೀಬೇ ಯಾನಮುಖಂ ಸ್ಯಾದ್ರಥಾಂಗಮಪಸ್ಕರಃ ।
ಚಕ್ರಂ ರಥಾಂಗಂ ತಸ್ಯಾಂತೇ ನೇಮಿಃ ಸ್ತ್ರೀ ಸ್ಯಾತ್ಪ್ರಧಿಃ ಪುಮಾನ್ ॥ ೮೨೨
ಪಿಂಡಿಕಾ ನಾಭಿರಕ್ಷಾಗ್ರಕೀಲಕೇ ತು ದ್ವಯೋರಣಿಃ ।
ರಥಗುಪ್ತಿರ್ವರೂಥೋ ನಾ ಕೂಬರಸ್ತು ಯುಗಂಧರಃ ॥ ೮೨೩
ಅನುಕರ್ಷೋ ದಾರ್ವಧಸ್ಸ್ಥಂ ಪ್ರಾಸಂಗೋ ನಾ ಯುಗಾಂತರಮ್ ।
ಸರ್ವಂ ಸ್ಯಾದ್ವಾಹನಂ ಯಾನಂ ಯುಗ್ಯಂ ಪತ್ರಂ ಚ ಧೋರಣಮ್ ॥ ೮೨೪
ಪರಂಪರಾವಾಹನಂ ಯತ್ತದ್ವೈನೀತಕಮಸ್ತ್ರಿಯಾಮ್ ।
ಆಧೋರಣಾ ಹಸ್ತಿಪಕಾ ಹಸ್ತ್ಯಾರೋಹಾ ನಿಷಾದಿನಃ ॥ ೮೨೫

ಯನ್ನು ಹೊದಿಸಿದ ರಥ. ಹೀಗೆಯೇ ವಾಸ್ತ್ರ, ಚಾರ್ಮಣ, ಕ್ಷೌಮ, ದೌಕೂಲ ಮೊದಲಾದ ಶಬ್ದಗಳು ವಸ್ತ್ರಾದಿಗಳನ್ನು ಹೊದಿಸಿದ ರಥವನ್ನು ಬೋಧಿಸುತ್ತವೆ. ದ್ವೈಪಾದಿ ಶಬ್ದಗಳು ವಿಶೇಷ್ಯನಿಘ್ನವಾಗಿ ಮೂರು ಲಿಂಗಗಳಲ್ಲಿಯೂ ವರ್ತಿಸುತ್ತವೆ. ಉದಾ: ದ್ವೈಪಃ ರಥಃ, ದ್ವೈಪೀ ರಥಕಟ್ಯಾ, ದ್ವೈಪಂ ಸ್ಯಂದನಂ (-ಸ್ತ್ರೀ. ಪಾಂಡುಕಂಬಲಿನೀ. ಉಳಿದವು ಸ್ತ್ರೀಲಿಂಗದಲ್ಲಿ ಈಕಾರಾಂತಗಳು.) ರಥ್ಯಾ, ರಥಕಟ್ಯಾ (ಸ್ತ್ರೀ), ರಥವ್ರಜ (ಪು)=ರಥಗಳ ಸಮೂಹ.

೮೨೨. ಧುರ್ (ಸ್ತ್ರೀ), ಯಾನಮುಖ (ನ)=ರಥದ ಮುಂಭಾಗ, ಮೂತಿ. ಅಪಸ್ಕರ (ಪು)=ಅಚ್ಚು ಬಳೆ ಮುಂತಾದ ರಥಾವಯವ. ಚಕ್ರ, ರಥಾಂಗ (ನ)=ರಥದ ಚಕ್ರ, ಗಾಲಿ. ನೇಮಿ (ಸ್ತ್ರೀ), ಪ್ರಧಿ (ಪು)=ಗಾಲಿಯ ತುದಿಯಲ್ಲಿ ಸುತ್ತಲೂ ಇರುವ ಬಳೆ, ಹಳಿ (Tyre of a wheel).

೮೨೩. ಪಿಂಡಿಕಾ, ನಾಭಿ (ಸ್ತ್ರೀ)=ಚಕ್ರದ ಮಧ್ಯದಲ್ಲಿ ಅಚ್ಚನ್ನು ಸೇರಿಸುವ ತೂಬು, ಕುಂಬ. ಅಣಿ (ಪು. ಸ್ತ್ರೀ)=ಕೀಲು, ಕಡಾಣಿ. ರಥಗುಪ್ತಿ (ಸ್ತ್ರೀ), ವರೂಥ (ಪು)=ರಥದ ಸುತ್ತಲೂ ಇರುವ ರಕ್ಷಣಾರ್ಥವಾದ ಆವರಣ. ಕೂಬರ, ಯುಗಂಧರ (ಪು)= ನೊಗವನ್ನು ಹೇರುವ ಮೂಕಿ.

೮೨೪. ಅನುಕರ್ಷ (ಪು)=ಮೂಕಿಮರ. ಪ್ರಾಸಂಗ (ಪು)=ಹೋರಿಯನ್ನು ಪಳಗಿಸುವಾಗ ಕಟ್ಟತಕ್ಕ ನೊಗ (ಇದು ರಥದ ನೊಗವಲ್ಲ). ವಾಹನ, ಯಾನ, ಯುಗ್ಯ, ಪತ್ರ, ಧೋರಣ (ನ)=ಸಾಮಾನ್ಯವಾಗಿ ವಾಹನ.

ನಿಯಂತಾ ಪ್ರಾಜಿತಾ ಯಂತಾ ಸೂತಃ ಕ್ಷತ್ತಾ ಚ ಸಾರಥಿಃ ।
ಸವ್ಯೇಷ್ಠೃದಕ್ಷಿಣಸ್ಥೌ ಚ ಸಂಜ್ಞಾ ರಥಕುಟುಂಬಿನಃ ॥ ೮೨೬
ರಥಿನಸ್ಸ್ಯಂದನಾರೋಹಾ ಅಶ್ವಾರೋಹಾಸ್ತು ಸಾದಿನಃ ।
ಭಟಾ ಯೋಧಾಶ್ಚ ಯೋದ್ಧಾರಸ್ಸೇನಾರಕ್ಷಾಸ್ತು ಸೈನಿಕಾಃ ॥ ೮೨೭
ಸೇನಾಯಾಂ ಸಮವೇತಾ ಯೇ ಸೈನ್ಯಾಸ್ತೇ ಸೈನಿಕಾಶ್ಚ ತೇ ।
ಬಲಿನೋ ಯೇ ಸಹಸ್ರೇಣ ಸಾಹಸ್ರಾಸ್ತೇ ಸಹಸ್ರಿಣಃ ॥ ೮೨೮
ಪರಿಧಿಸ್ಥಃ ಪರಿಚರಃ ಸೇನಾನೀರ್ವಾಹಿನೀಪತಿಃ ।
ಕಂಚುಕೋ ವಾರಬಾಣೋಽಸ್ತ್ರೀ ಯತ್ತು ಮಧ್ಯೇ ಸಕಂಚಕಾಃ ॥ ೮೨೯
ಬಧ್ನಂತಿ ತತ್ಸಾರಸನಮಧಿಕಾಂಗೋಽಥ ಶೀರ್ಷಕಮ್ ।
ಶೀರ್ಷಣ್ಯಂ ಚ ಶಿರಸ್ತ್ರೇಽಥ ತನುತ್ರಂ ವರ್ಮ ದಂಶನಮ್ ॥ ೮೩೦

---

೮೨೫. ವೈನೀತಕ (ಪು.ನ)=ಪರಂಪರೆಯಿಂದ ಸಾಗಿಸುವ ವಾಹನ-ಎಂದರೆ ರಥ, ಪಲ್ಲಕ್ಕಿ ಮೊದಲಾದ್ದು. ಕುದುರೆ, ಪಲ್ಲಕ್ಕಿ ಹೊರುವವರು—ಮೊದಲಾದವರಿಂದ ಇದು ಭಾರವನ್ನು ಸಾಗಿಸುತ್ತದೆ. (ಕುದುರೆ, ಆನೆ ಮೊದಲಾದ ಪ್ರಾಣಿಗಳು ನೇರವಾದ ವಾಹನ) ಆಧೋರಣ, ಹಸ್ತಿಪಕ, ಹಸ್ತ್ಯಾರೋಹ, ನಿಷಾದಿನ್ (ಪು)=ಮಾವುತ, ಮಾವಟಿಗ.

೮೨೬. ನಿಯಂತೃ, ಪ್ರಾಜಿತೃ, ಯಂತೃ, ಸೂತ, ಕ್ಷತ್ತೃ, ಸಾರಥಿ, ಸವ್ಯೇ[1]ಷ್ಠೃ, ದಕ್ಷಿಣಸ್ಥ, ರಥಕುಟುಂಬಿನ್ (ಪು)=ಸಾರಥಿ.

೮೨೭.ರಥಿನ್, ಸ್ಯಂದನಾರೋಹ (ಪು)=ರಥಿಕ. ಅಶ್ವಾರೋಹ, ಸಾದಿನ್ (ಪು)=ಕುದುರೆ ಸವಾರ. ಭಟ, ಯೋಧ, ಯೋದ್ಧೃ (ಪು)=ಯುದ್ಧಮಾಡುವವನು. ಸೇನಾರಕ್ಷ, ಸೈನಿಕ (ಪು)=ಸೇನೆಯನ್ನು ಕಾಯುವ ಪಹರೆಯವನು.

೮೨೮. ಸೈನ್ಯ, ಸೈನಿಕ (ಪು)=ಸೈನ್ಯಕ್ಕೆ ಸೇರಿದವನು. ಸಾಹಸ್ರ, ಸಹಸ್ರಿನ್ (ಪು)=ಒಂದು ಸಾವಿರ ಸೈನಿಕರನ್ನುಳ್ಳವನು.

೮೨೯-೮೩೦. ಪರಿಧಿಸ್ಥ, ಪರಿಚರ (ಪು)=ಅಂಗರಕ್ಷಕ. ಸೇನಾನೀ, ವಾಹಿನೀಪತಿ (ಪು)=ಸೇನಾಪತಿ. ಕಂಚುಕ (ಪು), ವಾರಬಾಣ (ವಾರವಾಣ) (ಪು. ನ)=ಯುದ್ಧೋಪಯೋಗಿ ಯಾದ ನಿಲುವಂಗಿ. ಸಾರಸನ (ನ), ಅಧಿಕಾಂಗ (ಅಧಿಪಾಂಗ) (ಪು)=ನಡುಕಟ್ಟು (Belt).

---

1 ಸವ್ಯೇಷ್ಠ ಎಂಬ ಅಕಾರಾಂತವೂ ಇದೆ.

ಉರಶ್ಛದಃ ಕಂಕಟಕೋ ಜಗರಃ ಕವಚೋಽಸ್ತ್ರಿಯಾಮ್ ।
ಆಮುಕ್ತಃ ಪ್ರತಿಮುಕ್ತಶ್ಚ ಪಿನದ್ಧಶ್ಚಾಪಿನದ್ಧವತ್ ॥ ೮೩೧
ಸನ್ನದ್ಧೋ ವರ್ಮಿತಸ್ಸಜ್ಜೋ ದಂಶಿತೋ ವ್ಯೂಢಕಂಕಟಃ ।
ತ್ರಿಷ್ವಾಮುಕ್ತಾದಯೋ ವರ್ಮಭೃತಾಂ ಕಾವಚಿಕಂ ಗಣೇ ॥ ೮೩೨
ಪದಾತಿಪತ್ತಿಪದಗಪಾದಾತಿಕಪದಾಜಯಃ ।
ಪದ್ಗಶ್ಚ ಪದಿಕಶ್ಚಾಥ ಪಾದಾತಂ ಪತ್ತಿಸಂಹತಿಃ ॥ ೮೩೩
ಶಸ್ತ್ರಾಜೀವೇ ಕಾಂಡಪೃಷ್ಠಾಯುಧೀಯಾಯುಧಿಕಾಸ್ಸಮಾಃ ।
ಕೃತಹಸ್ತಸ್ಸು ಪ್ರಯೋಗವಿಶಿಖಃ ಕೃತಪುಂಖವತ್ ॥ ೮೩೪
ಅಪರಾದ್ಧಪೃಷತ್ಕೋಽಸೌ ಲಕ್ಷ್ಯಾದಶ್ಚ್ಯುತಸಾಯಕಃ ।
ಧನ್ವೀ ಧನುಷ್ಮಾನ್ ಧಾನುಷ್ಕೋ ನಿಷಂಗ್ಯಸ್ತ್ರೀ ಧನುರ್ಧರಃ ॥ ೮೩೫

ಶೀರ್ಷಕ, ಶೀರ್ಷಣ್ಯ, ಶಿರಸ್ತ್ರ (ನ)=ಶಿರಸ್ತ್ರಾಣ (Helmet) ; ಟೋಪಿ ; ರುಮಾಲು. ತನುತ್ರ, ವರ್ಮನ್, ದಂಶನ (ನ), ಉರಶ್ಛದ, ಕಂಕಟಕ, ಜಗರ (ಪು) (ಪು.ನ)=ಎದೆಯ ರಕ್ಷಣಾಕವಚ.

೮೩೧-೮೩೨. ಆಮುಕ್ತ, ಪ್ರತಿಮುಕ್ತ; ಪಿನದ್ಧ, ಅಪಿನದ್ಧ (ಪು. ಸ್ತ್ರೀ. ನ-ವಿ. ನಿಘ್ನ)=ಧರಿಸಲ್ಪಟ್ಟ ವಸ್ತ್ರಕವಚ ಮುಂತಾದ್ದು. ಸಂನದ್ಧ, ವರ್ಮಿತ, ಸಜ್ಜ, ದಂಶಿತ, ವ್ಯೂಢಕಂಕಟ (ಪು. ಸ್ತ್ರೀ. ನ-ವಿ. ನಿಘ್ನ)=ಕವಚಾದಿಗಳನ್ನು ಧರಿಸಿ ಸಿದ್ಧನಾದವನು. ಕಾವಚಿಕ (ನ)=ಕವಚಧಾರಿಗಳ ಸಮೂಹ.

೮೩೩. ಪದಾತಿ, ಪತ್ತಿ, ಪದಗ, ಪಾದಾತಿಕ, ಪದಾಜಿ, ಪದ್ಗ, ಪದಿಕ (ಪು)=ಕಾಲಾಳು. ಪಾದಾತ (ನ)=ಕಾಲಾಳುಗಳ ಸಮೂಹ.

೮೩೪. ಮುಂದೆ ೮೪೪ನೆಯ ಶ್ಲೋಕದಲ್ಲಿ ಹೇಳಿದ 'ಸಾಂಯುಗೀನ' ಶಬ್ದದವರೆಗೆ ಹೇಳುವ ಶಬ್ದಗಳು ಅರ್ಥಾನುಸಾರವಾಗಿ ಮೂರು ಲಿಂಗಗಳಲ್ಲಿಯೂ ಇರುತ್ತವೆ. ಶಸ್ತ್ರಾಜೀವ, ಕಾಂಡಪೃಷ್ಠ, ಆಯುಧೀಯ, ಆಯುಧಿಕ (ಪು) (-ಸ್ತ್ರೀ. ಶಸ್ತ್ರಾಜೀವೀ)=ಆಯುಧವನ್ನು ಧರಿಸಿ ಅದರಿಂದ ಜೀವಿಸತಕ್ಕವನು. ಕೃತಹಸ್ತ, ಕೃತಪುಂಖ (ಪು)=ಅಸ್ತ್ರಪ್ರಯೋಗದಲ್ಲಿ ನುರಿತವನು.

೮೩೫. ಅಪರಾದ್ಧಪೃಷತ್ಕ (ಪು)=ಗುರಿತಪ್ಪಿ ಹೊಡೆಯುವವನು. ಧನ್ವಿನ್, ಧನುಷ್ಮತ್, ಧಾನುಷ್ಕ, ನಿಷಂಗಿನ್, ಅಸ್ತ್ರಿನ್, ಧನುರ್ಧರ (ಪು) (-ಸ್ತ್ರೀ. ಧನ್ವಿನೀ, ಧನುಷ್ಮತೀ, ಧಾನುಷ್ಕೀ, ನಿಷಂಗಿನೀ, ಅಸ್ತ್ರಿಣೀ)=ಧನುಸ್ಸನ್ನು ಹಿಡಿದವನು.

ಸ್ಯಾತ್ಕಂಡವಾಂಸ್ತು ಕಾಂಡೀರಶ್ಶಾಕ್ತೀಕಶ್ಶಕ್ತಿಹೇತಿಕಃ ।
ಯಾಷ್ಟೀಕಪಾರಶ್ವಧಿಕೌ ಯಷ್ಟಿಪರ್ಶ್ವಧಹೇತಿಕೌ ॥ ೮೩೬
ನೈಸ್ತ್ರಿಂಶಿಕೋಽಸಿಹೇತಿಸ್ಸ್ಯಾತ್ಸಮೌ ಪ್ರಾಸಿಕಕೌಂತಿಕೌ ।
ಚರ್ಮೀ ಫಲಕಪಾಣಿಃ ಸ್ಯಾತ್ ಪಾತಕೀ ವೈಜಯಂತಿಕಃ ॥ ೮೩೭
ಅನುಪ್ಲವಸ್ಸಹಾಯಶ್ಚಾನುಚರೋಽಭಿಚರಸ್ಸಮಾಃ ।
ಪುರೋಗಾಗ್ರೇಸರಪ್ರಷ್ಠಾಗ್ರತಸ್ಸರಪುರಸ್ಸರಾಃ ॥ ೮೩೮
ಪುರೋಗಮಃ ಪುರೋಗಾಮೀ ಮಂದಗಾಮೀ ತು ಮಂಥರಃ ।
ಜಂಘಾಲೋಽತಿಜವಸ್ತುಲ್ಯೌ ಜಂಘಾಕರಿಕಜಾಂಘಿಕೌ ॥ ೮೩೯
ತರಸ್ವೀ ತ್ವರಿತೋ ವೇಗೀ ಪ್ರಜವೀ ಜವನೋ ಜವಃ ।
ಜಯ್ಯೋ ಯಶ್ಶಕ್ಯತೇ ಜೇತುಂ ಜೇಯೋ ಜೇತವ್ಯಮಾತ್ರಕೇ ॥ ೮೪೦

---

೮೩೬. ಕಾಂಡವತ್, ಕಾಂಡೀರ (ಪು) (-ಸ್ತ್ರೀ. ಕಾಂಡವತೀ)=ಬಾಣಧಾರಿ. ಶಾಕ್ತೀಕ (ಪು) (-ಸ್ತ್ರೀ. ಶಾಕ್ತೀಕೀ)=ಶಕ್ತಿಯೆಂಬ ಆಯುಧವನ್ನು ಹಿಡಿದವನು. ಯಾಷ್ಟೀಕ (ಪು) (-ಸ್ತ್ರೀ. ಯಾಷ್ಟೀಕಿ)=ದೊಣ್ಣೆಯನ್ನು ಆಯುಧವಾಗಿ ಹಿಡಿದವನು. ಪಾರಶ್ವಧಿಕ (ಪು) (-ಸ್ತ್ರೀ. ಪಾರಶ್ವಧಿಕೀ)=ಕೊಡಲಿಯನ್ನು ಆಯುಧವಾಗಿ ಹಿಡಿದವನು.

೮೩೭. ನೈಸ್ತ್ರಿಂಶಿಕ (ಪು) (- ಸ್ತ್ರೀ. ನೈಸ್ತ್ರಿಂಶಿಕೀ)= ಕತ್ತಿಯನ್ನು ಹಿಡಿದವನು. ಪ್ರಾಸಿಕ (ಪು) (-ಸ್ತ್ರೀ. ಪ್ರಾಸಿಕೀ)=ಪ್ರಾಸವನ್ನು ಹಿಡಿದವನು. ಕೌಂತಿಕ (ಪು) (-ಸ್ತ್ರೀ. ಕೌಂತಿಕೀ)=ಕುಂತಾಯುಧಧಾರಿ. ಚರ್ಮಿನ್ (ಪು) (-ಸ್ತ್ರೀ. ಚರ್ಮಿಣೀ)=ಗುರಾಣಿಯನ್ನು ಹಿಡಿದವನು. ಪತಾಕಿನ್, ವೈಜಯಂತಿಕ (ಪು) (-ಸ್ತ್ರೀ. ಪತಾಕಿನೀ)=ಬಾವುಟವನ್ನು ಹಿಡಿದವನು.

೮೩೮-೮೩೯. ಅನುಪ್ಲವ, ಸಹಾಯ, ಅನುಚರ, ಅಭಿಸರ (ಪು) (-ಸ್ತ್ರೀ. ಅನುಚರೀ)=ನೆರವು ನೀಡಲು ಜೊತೆಯಲ್ಲಿ ಬರತಕ್ಕವನು. ಪುರೋಗ, ಅಗ್ರೇಸರ, ಪ್ರಷ್ಠ, ಅಗ್ರತಃಸರ, ಪುರಃಸರ, ಪುರೋಗಮ, ಪುರೋಗಾಮಿನ್ (ಪು) (-ಸ್ತ್ರೀ. ಅಗ್ರೇಸರೀ, ಅಗ್ರತಃಸರೀ, ಪುರಃಸರೀ, ಪುರೋಗಾಮಿನೀ)=ಮುಂದುಗಡೆ ಹೋಗತಕ್ಕವನು. ಮಂದಗಾಮಿನ್, ಮಂಥರ (ಪು) (-ಸ್ತ್ರೀ. ಮಂದಗಾಮಿನೀ)= ಮೆಲ್ಲಗೆ ಹೋಗತಕ್ಕವನು.

೮೩೯-೮೪೦. ಜಂಘಾಲ, ಅತಿಜವ (ಪು)=ಬೇಗನೆ ನಡೆಯತಕ್ಕವನು. ಜಂಘಾಕರಿಕ, ಜಾಂಘಿಕ (ಪು) (-ಸ್ತ್ರೀ. ಜಾಂಘಿಕೀ)=ಜಂಘಾಬಲದಿಂದ ಜೀವಿಸತಕ್ಕವನು, ಸುದ್ದಿಗಾರ, ದೂತವೃತ್ತಿಯವನು. ತರಸ್ವಿನ್, ತ್ವರಿತ, ವೇಗಿನ್, ಪ್ರಜವಿನ್, ಜವನ, ಜವ (ಪು)

ಜೈತ್ರಸ್ತು ಜೇತಾ ಯೋ ಗಚ್ಛತ್ಯಲಂ ವಿದ್ವಿಷತಃ ಪ್ರತಿ ।
ಸೋऽಭ್ಯಮಿತ್ರ್ಯೋऽಭ್ಯಮಿತ್ರೀಯೋऽಪ್ಯಭ್ಯಮಿತ್ರೀಣ ಇತ್ಯಪಿ ॥ ೮೪೧
ಊರ್ಜಸ್ವಲಸ್ಸ್ಯಾ ದೂರ್ಜಸ್ವೀ ಯ ಊರ್ಜಾತಿಶಯಾನ್ವಿತಃ ।
ಸ್ಯಾದುರಸ್ವಾನುರಸಿಲೋ ರಥಿಕೋ ರಥಿನೋ ರಥೀ ॥ ೮೪೨
ಕಾಮಂಗಾಮ್ಯನುಕಾಮೀನೋ ಹ್ಯತ್ಯಂತೀನಸ್ತಥಾ ಭೃಶಮ್ ।
ಶೂರೋ ವೀರಶ್ಚ ವಿಕ್ರಾಂತೋ ಜೇತಾ ಜಿಷ್ಣುಶ್ಚ ಜಿತ್ವರಃ ॥ ೮೪೩
ಸಾಂಯುಗೀನೋ ರಣೇ ಸಾಧುಃ ಶಾಸ್ತ್ರಾಜೀವಾದಯಸ್ತ್ರಿಷು ।
ಧ್ವಜಿನೀ ವಾಹಿನೀ ಸೇನಾ ಪೃತನಾನೀಕಿನೀ ಚಮೂಃ ॥ ೮೪೪
ವರೂಥಿನೀ ಬಲಂ ಸೈನ್ಯಂ ಚಕ್ರಂ ಚಾನೀಕಮಸ್ತ್ರಿಯಾಮ್ ।
ವ್ಯೂಹಸ್ತು ಬಲವಿನ್ಯಾಸೋ ಭೇದಾ ದಂಡಾದಯೋ ಯುಧಿ ॥ ೮೪೫

(-ಸ್ತ್ರೀ. ತರಸ್ವಿನೀ, ವೇಗಿನೀ, ಪ್ರಜವಿನೀ)=ವೇಗಶಾಲಿ, ಚುರುಕಿನ ಕೆಲಸಗಾರ (Sharp Active). ಜಯ್ಯ (ಪು)=ಗೆಲ್ಲಲು ಶಕ್ಯನಾದವನು. ಜೇಯ (ಪು)=ಗೆಲ್ಲಲ್ಪಡತಕ್ಕವನು.

೮೪೧. ಜೈತ್ರ, ಜೇತೃ (ಪು) (-ಸ್ತ್ರೀ. ಜೈತ್ರೀ, ಜೇತ್ರೀ)=ಜಯಶಾಲಿ. ಅಭ್ಯಮಿತ್ರ್ಯ, ಅಭ್ಯಮಿತ್ರೀಯ, ಅಭ್ಯಮಿತ್ರೀಣ (ಪು)=ಶತ್ರುಗಳಮೇಲೆ ದಂಡೆತ್ತಿ ಹೋಗತಕ್ಕವನು.

೮೪೨. ಊರ್ಜಸ್ವಲ, ಊರ್ಜಸ್ವಿನ್ (ಪು) (-ಸ್ತ್ರೀ. ಊರ್ಜಸ್ವಿನೀ)=ಅತ್ಯಂತ ಬಲಶಾಲಿ. ಉರಸ್ವತ್, ಉರಸಿಲ (ಪು) (-ಸ್ತ್ರೀ. ಉರಸ್ವತೀ)=ವಿಶಾಲವಾದ ಎದೆಯುಳ್ಳವನು ; ಎದೆಗಾರ, ಧೀರ. ರಥಿಕ, ರಥಿನ, ರಥಿನ (ರಥಿರ), ರಥಿನ್ (ಪು) (-ಸ್ತ್ರೀ. ರಥಿನೀ)=ರಥಾರೂಢ ; ರಥದ ಒಡೆಯ.

೮೪೩. ಅನುಕಾಮೀನ (ಪು)=ಇಷ್ಟಬಂದಂತೆ ಸಂಚರಿಸತಕ್ಕವನು. ಅತ್ಯಂತೀನ (ಪು)=ಅತಿಯಾಗಿ ತಿರುಗತಕ್ಕವನು. ಶೂರ, ವೀರ, ವಿಕ್ರಾಂತ (ಪು)=ಶೂರ, ಜೇತೃ, ಜಿಷ್ಣು, ಜಿತ್ವರ (ಪು)=(-ಸ್ತ್ರೀ, ಜೇತ್ರೀ, ಜಿತ್ವರೀ)= ಜಯಶೀಲ, ಜಯವನ್ನು ಪಡೆಯತಕ್ಕವನು.

೮೪೪. ಸಾಂಯುಗೀನ (ಪು)=ಯುದ್ಧದಲ್ಲಿ ನಿಪುಣ. `ಶಸ್ತ್ರಾಜೀವ' ಶಬ್ದದಿಂದ ಇದುವರೆಗೆ ಹೇಳಿದ ಶಬ್ದಗಳು ಮೂರು ಲಿಂಗಗಳಲ್ಲಿಯೂ ವರ್ತಿಸುತ್ತವೆ.

೮೪೪-೮೪೫. ಧ್ವಜಿನೀ, ವಾಹಿನೀ, ಸೇನಾ, ಪೃತನಾ, ಅನೀಕಿನೀ, ಚಮೂ, ವರೂಥಿನೀ (ಸ್ತ್ರೀ), ಬಲ, ಸೈನ್ಯ, ಚಕ್ರ, (ನ), ಅನೀಕ (ಪು.ನ)=ಸೇನೆ. ವ್ಯೂಹ, ಬಲವಿನ್ಯಾಸ (ಪು)=ಯುದ್ಧದಲ್ಲಿ ಸೇನೆಯನ್ನು ನಿಲ್ಲಿಸುವ ವಿಧಾನ. ದಂಡ ಮೊದಲಾದವು ವ್ಯೂಹಭೇದಗಳು :

ಪ್ರತ್ಯಾಸಾರೋ ವ್ಯೂಹಪಾರ್ಷ್ಣಿಃ ಸೈನ್ಯಪೃಷ್ಠೇ ಪ್ರತಿಗ್ರಹಃ ।
ಏಕೇಭೈಕರಥತ್ರ್ಯ ಶ್ವಾ ಪತ್ತಿಃ ಪಂಚಪದಾತಿಕಾ ॥ ೮೪೬
ಪತ್ತ್ಯಂಗೈಸ್ತ್ರಿಗುಣ್ಯೈಃ ಸರ್ವೈಃ ಕ್ರಮಾದಾಖ್ಯಾ ಯಥೋತ್ತರಮ್ ।
ಸೇನಾಮುಖಂ ಗುಲ್ಮಗಣೌ ವಾಹಿನೀ ಪೃತನಾ ಚಮೂಃ ॥ ೮೪೭
ಅನೀಕಿನೀ ದಶಾನೀಕಿನ್ಯೋಽಕ್ಷೌಹಿಣ್ಯಥ ಸಂಪದಿ ।
ಸಂಪತ್ತಿಶ್ರೀಶ್ಚ ಲಕ್ಷ್ಮೀಶ್ಚ ವಿಪತ್ತ್ಯಾಂ ವಿಪದಾಪದೌ ॥ ೮೪೮

ದಂಡವ್ಯೂಹ, ಪದ್ಮವ್ಯೂಹ, ಚಕ್ರವ್ಯೂಹ - ಹೀಗೆಯೇ ಭೋಗ, ಮಂಡಲ, ಅಸಂಹತ, ಶಕಟ, ಮಕರ, ಪತಾಕಾ, ಸರ್ವತೋಭದ್ರ, ದುರ್ಜಯ ಇತ್ಯಾದಿ.

೮೪೬. ಪ್ರತ್ಯಾಸಾರ, ವ್ಯೂಹಪಾರ್ಷ್ಣಿ (ಪು)=ವ್ಯೂಹದ ಹಿಂಭಾಗದಲ್ಲಿ ರಕ್ಷಣಾರ್ಥವಾಗಿರುವ ಸೇನೆ. (Second line of Defence). ಪ್ರತಿಗ್ರಹ (ಪು)=ಕಾದಿರಿಸಿದ ಸೇನೆ (Reserve). ಪತ್ತಿ (ಸ್ತ್ರೀ)=ಒಂದು ಆನೆ, ಒಂದು ರಥ, ಮೂರು ಕುದುರೆ, ಐದು ಕಾಲಾಳುಗಳಿರುವ ಪಡೆ.

೮೪೭. ಸೇನಾಮುಖ[1] (ನ)=ಮೂರು ಪತ್ತಿಗಳಿರುವ ಪಡೆ. ಗುಲ್ಮ

[1]ಸೇನೆ	ಪತ್ತಿ	ಸೇನಾಮುಖ	ಗುಲ್ಮ	ಗಣ	ವಾಹಿನೀ	ಪೃತನಾ	ಚಮೂ	ಅನೀಕಿನೀ	ಅಕ್ಷೌಹಿಣೀ
೧. ಆನೆ	೧	೩	೯	೨೭	೮೧	೨೪೩	೭೨೯	೨೧೮೭	೨೧೮೭೦
೨. ರಥ	೧	೩	೯	೨೭	೮೧	೨೪೩	೭೨೯	೨೧೮೭	೨೧೮೭೦
೩. ಕುದುರೆ	೩	೯	೨೭	೮೧	೨೪೩	೭೨೯	೨೧೮೭	೬೫೬೧	೬೫೬೧೦
೪. ಕಾಲಾಳು	೫	೧೫	೪೫	೧೩೫	೪೦೫	೧೨೧೫	೩೬೪೫	೧೦೯೩೫	೧೦೯೩೫೦
ಒಟ್ಟು	೧೦	೩೦	೯೦	೨೭೦	೮೧೦	೨೪೩೦	೭೨೯೦	೨೧,೮೭೦	೨,೧೮,೭೦೦

(ಪು)=ಮೂರು ಸೇನಾಮುಖಗಳು. ಗಣ (ಪು)=ಮೂರು ಗುಲ್ಮಗಳು. ವಾಹಿನೀ (ಸ್ತ್ರೀ)=ಮೂರು ಗಣಗಳು. ಪೃತನಾ (ಸ್ತ್ರೀ)=ಮೂರು ವಾಹಿನಿಗಳು. ಚಮೂ (ಸ್ತ್ರೀ)=ಮೂರು ಪೃತನೆಗಳು.

೮೪೮. ಅನೀಕಿನೀ (ಸ್ತ್ರೀ)=ಮೂರು ಚಮೂಗಳು. ಅಕ್ಷೌಹಿಣೀ (ಸ್ತ್ರೀ)=ಹತ್ತು ಅನೀಕಿನಿಗಳು. ಸಂಪದ್, ಸಂಪತ್ತಿ, ಶ್ರೀ, ಲಕ್ಷ್ಮೀ (ಸ್ತ್ರೀ)=ಸಂಪತ್ತು. ವಿಪತ್ತಿ, ವಿಪದ್, ಆಪದ್ (ಸ್ತ್ರೀ)=ಆಪತ್ತು.

ಆಯುಧಂ ತು ಪ್ರಹರಣಂ ಶಸ್ತ್ರಮಸ್ತ್ರಮಥಾಸ್ತ್ರಿಯೌ ।
ಧನುಶ್ಚಾಪೌ ಧನ್ವಶರಾಸನಕೋದಂಡಕಾರ್ಮುಕಮ್ ॥ ೮೪೯
ಇಷ್ವಾಸೋಽಪ್ಯಥ ಕರ್ಣಸ್ಯ ಕಾಲಪೃಷ್ಠಂ ಶರಾಸನಮ್ ।
ಕಪಿಧ್ವಜಸ್ಯ ಗಾಂಡೀವಗಾಂಡಿವೌ ಪನ್ನಪುಂಸಕೌ ॥ ೮೫೦
ಕೋಟಿರಸ್ಯಾಟನೀ ಗೋಧೇ ತಲೇ ಜ್ಯಾಘಾತವಾರಣೇ ।
ಲಸ್ತಕಸ್ತು ಧನುರ್ಮಧ್ಯಂ ಮೌರ್ವೀ ಜ್ಯಾ ಶಿಂಜಿನೀ ಗುಣಃ ॥ ೮೫೧
ಸ್ಯಾತ್ ಪ್ರತ್ಯಾಲೀಢಮಾಲೀಢಮಿತ್ಯಾದಿ ಸ್ಥಾನಪಂಚಕಮ್ ।
ಲಕ್ಷ್ಯಂ ಲಕ್ಷ್ಯಂ ಶರವ್ಯಂ ಚ ಶರಾಭ್ಯಾಸ ಉಪಾಸನಮ್ ॥ ೮೫೨
ಪೃಷತ್ಕಬಾಣವಿಶಿಖಾ ಅಜಿಹ್ಮಗಖಗಾಶುಗಾಃ ।
ಕಲಂಬಮಾರ್ಗಣಶರಾಃ ಪತ್ರೀ ರೋಪ ಇಷುರ್ದ್ವಯೋಃ ॥ ೮೫೩

೮೪೯-೮೫೦. ಆಯುಧ, ಪ್ರಹರಣ, ಶಸ್ತ್ರ, ಅಸ್ತ್ರ (ನ)=ಆಯುಧ. ಧನುಸ್[1], ಚಾಪ (ಪು.ನ)= ಧನ್ವನ್, ಶರಾಸನ, ಕೋದಂಡ, ಕಾರ್ಮುಕ (ನ), ಇಷ್ವಾಸ (ಪು)=ಬಿಲ್ಲು, ಕಾಲಪೃಷ್ಠ=ಕರ್ಣನ ಧನುಸ್ಸು ಗಾಂಡೀವ, ಗಾಂಡಿವ (ಪು. ನ)=ಅರ್ಜುನನ ಧನುಸ್ಸು.

೮೫೧. ಕೋಟಿ, ಅಟನೀ (ಸ್ತ್ರೀ)= ಬಿಲ್ಲಿನ ತುದಿ. ಗೋಧಾ (ಸ್ತ್ರೀ), ತಲ (ನ)=ಬಿಲ್ಲಿನ ಹೆದೆಯಿಂದ ಪೆಟ್ಟಾಗದಂತೆ ಕೈಗೆ ಹಾಕಿಕೊಳ್ಳುವ ಚರ್ಮದ ಚೀಲ. ಲಸ್ತಕ (ಪು)=ಧನುಸ್ಸಿನ ಮಧ್ಯಭಾಗ, ಧನುಸ್ಸನ್ನುಹಿಡಿಯುವ ಸ್ಥಳ. ಮೌರ್ವೀ, ಜ್ಯಾ, ಶಿಂಜಿನೀ (ಸ್ತ್ರೀ), ಗುಣ (ಪು)=ಹೆದೆ, ನಾರಿ (Bow-string).

೮೫೨. ಪ್ರತ್ಯಾಲೀಢ ಮೊದಲಾದವು ಧನುರ್ಧಾರಿಯು ನಿಲ್ಲುವ ಐದು ವಿಧಾನಗಳು : ೧. ಪ್ರತ್ಯಾಲೀಢ (ನ)=ಎಡಗಾಲನ್ನು ಮುಂದಿಟ್ಟು ಬಲಗಾಲನ್ನು ಬಗ್ಗಿಸಿ ನಿಲ್ಲುವುದು. ೨. ಆಲೀಢ (ನ)=ಬಲಗಾಲನ್ನು ಮುಂದಿಟ್ಟು ಎಡಗಾಲನ್ನು ಬಗ್ಗಿಸಿ ನಿಲ್ಲುವುದು. ೩. ವೈಶಾಖ (ನ)=ಎರಡುಕಾಲುಗಳನ್ನೂ ದೂರಕ್ಕೆ ಅಗಲಿಸಿ ನಿಲ್ಲುವುದು. ೪. ಸಮಪದ(ನ)=ಎರಡು ಕಾಲುಗಳ್ನೂ ಸಮರೀತಿಯಲ್ಲಿಟ್ಟುನಿಲ್ಲುವುದು. ೫. ಮಂಡಲ (ನ)=ಕಾಲುಗಳನ್ನು ತೋರಣ ದಂತೆ ಬಾಗಿಸಿ ನಿಲ್ಲುವುದು. ಲಕ್ಷ್ಯ, ಲಕ್ಷ, ಶರವ್ಯ (ನ)=ಗುರಿ. ಶರಾಭ್ಯಾಸ (ಪು), ಉಪಾಸನ (ನ)=ಬಾಣ ಪ್ರಯೋಗದ ಅಭ್ಯಾಸ.

೮೫೩. ಪೃಷತ್ಕ, ಬಾಣ, ವಿಶಿಖ, ಅಜಿಹ್ಮಗ, ಖಗ, ಆಶುಗ, ಕಲಂಬ, ಮಾರ್ಗಣ, ಶರ, ಪತ್ರಿನ್, ರೋಪ (ಪು), ಇಷು (ಪು.ಸ್ತ್ರೀ)=ಬಾಣ.

---

[1] ಧನು (ಪು) ಎಂಬ ಉಕಾರಾಂತವೂ ಧನೂ (ಸ್ತ್ರೀ) ಎಂಬ ಊಕಾರಾಂತವೂ ಇವೆ.

ಪ್ರಕ್ಷ್ವೇಡನಾಸ್ತು ನಾರಾಚಾಃ ಪಕ್ಷೋ ವಾಜಸ್ತ್ರಿಷೂತ್ತರೇ ।
ನಿರಸ್ತಃ ಪ್ರಹಿತೇ ಬಾಣೇ ವಿಷಾಕ್ತೇ ದಿಗ್ಧಲಿಪ್ತಕೌ ॥ ೮೫೪
ತೂಣೋಪಾಸಂಗತೂಣೀರನಿಷಂಗಾ ಇಷುಧಿರ್ದ್ವಯೋಃ ।
ತೂಣ್ಯಾಂ ಖಡ್ಗೇ ತು ನಿಸ್ತ್ರಿಂಶಚಂದ್ರಹಾಸಾಸಿರಿಷ್ಟಯಃ ॥ ೮೫೫
ಕೌಕ್ಷೇಯಕೋ ಮಂಡಲಾಗ್ರಃ ಕರಪಾಲಃ ಕೃಪಾಣವತ್ ।
ತ್ಸರುಃ ಖಡ್ಗಾದಿಮುಷ್ಟೌ ಸ್ಯಾನ್ಮೇಖಲಾ ತನ್ನಿಬಂಧನಮ್ ॥ ೮೫೬
ಫಲಕೋಽಸ್ತ್ರೀ ಫಲಂ ಚರ್ಮ ಸಂಗ್ರಾಹೋ ಮುಷ್ಟಿರಸ್ಯ ಯಃ ।
ದ್ರುಘಣೋ ಮುದ್ಗರಘನೌ ಸ್ಯಾದೀಲೀ ಕರವಾಲಿಕಾ ॥ ೮೫೭
ಭಿಂದಿಪಾಲಃ ಸೃಗಸ್ತುಲ್ಯೌ ಪರಿಘಃ ಪರಿಘಾತನಃ ।
ದ್ವಯೋಃ ಕುಠಾರಃ ಸ್ವಧಿತಿಃ ಪರಶುಶ್ಚ ಪರಶ್ವಧಃ ॥ ೮೫೮

---

೮೫೪. ಪ್ರಕ್ಷ್ವೇಡನ, ನಾರಾಚ (ಪು)=ಎಲ್ಲವೂ ಲೋಹಮಯವಾಗಿರುವ ದೀರ್ಘವಾದ ಬಾಣ. ಪಕ್ಷ, ವಾಜ (ಪು)=ಬಾಣದ ರೆಕ್ಕೆ. ಮುಂದೆ 'ಲಿಪ್ತಕ' ಶಬ್ದವರೆಗೆತ್ರಿಲಿಂಗಗಳು. ನಿರಸ್ತ=ಪ್ರಯೋಗಿಸಲ್ಪಟ್ಟ ಬಾಣ. ವಿಷಾಕ್ತ, ದಿಗ್ಧ, ಲಿಪ್ತಕ, (ಸ್ತ್ರೀ. ಲಿಪ್ತಿಕಾ)= ವಿಷವನ್ನು ಬಳಿದ ಬಾಣ.

೮೫೫-೮೫೬. ತೂಣ, ಉಪಾಸಂಗ, ತೂಣೀರ, ನಿಷಂಗ (ಪು), ಇಷುಧಿ (ಪು. ಸ್ತ್ರೀ), ತೂಣೀ (ಸ್ತ್ರೀ)=ಬತ್ತಳಿಕೆ. ಖಡ್ಗ, ನಿಸ್ತ್ರಿಂಶ, ಚಂದ್ರಹಾಸ, ಅಸಿ, ರಿಷ್ಟಿ,[1] ಕೌಕ್ಷೇಯಕ, ಮಂಡಲಾಗ್ರ, ಕರಪಾಲ (ಕರವಾಲ) ಕೃಪಾಣ (ಪು)=ಕತ್ತಿ. ತ್ಸರು (ಪು)=ಆಯುಧಗಳ ಹಿಡಿ. ಮೇಖಲಾ (ಸ್ತ್ರೀ)=ಕತ್ತಿಯನ್ನು ಸಿಕ್ಕಿಸಿಕೊಳ್ಳುವ ಚರ್ಮದ ಪಟ್ಟಿ (Sword-belt).

೮೫೭. ಫಲಕ (ಪು. ನ), ಫಲ, ಚರ್ಮನ್ (ನ)=ಗುರಾಣಿ. ಸಂಗ್ರಾಹ (ಪು)=ಗುರಾಣಿಯ ಹಿಡಿ. ದ್ರುಘಣ, ಮುದ್ಗರ, ಘನ (ಪು)=ಕಬ್ಬಿಣದ ಗುದಿಗೆಯಂತಹ ಆಯುಧ. ಈಲೀ, ಕರವಾಲಿಕಾ (ಕರಪಾಲಿಕಾ) (ಸ್ತ್ರೀ)=ಬಾಗಿರುವ ಕತ್ತಿ, ಕುಡಗೋಲು.

೮೫೮. ಭಿಂದಿಪಾಲ, ಸೃಗ (ಪು)=ಕಲ್ಲನ್ನು ಎಸೆಯುವ ಸಾಧನ, ಕವಣೆ ; ನಾಳಿಕಾಸ್ತ್ರ. ಪರಿಘ, ಪರಿಘಾತನ (ಪು)=ಕಬ್ಬಿಣದ ಕಟ್ಟುಹಾಕಿರುವ ದೊಣ್ಣೆ. ಕುಠಾರ (ಪು. ನ), ಸ್ವಧಿತಿ, ಪರಶು, ಪರಶ್ವಧ (ಪು)=ಕೊಡಲಿ.

---

1 ಋಷ್ಟಿ ಎಂಬ ರೂಪಾಂತರವೂ ಇದೆ.

*

ಸ್ಯಾಚ್ಛಸ್ತ್ರೀ ಚಾಸಿಪುತ್ರೀ ಚ ಛುರಿಕಾ ಚಾಸಿಧೇನುಕಾ ।
ವಾ ಪುಂಸಿ ಶಲ್ಯಂ ಶಂಕುರ್ನಾ ಸರ್ವಲಾ ತೋಮರೋಽಸ್ತ್ರಿಯಾಮ್ ॥ ೮೫೯
ಪ್ರಾಸಸ್ತು ಕುಂತಃ ಕೋಣಸ್ತು ಸ್ತ್ರಿಯಃ ಪಾಲ್ಯಶ್ರಿಕೋಟಯಃ ।
ಸರ್ವಾಭಿಸಾರಸ್ಸರ್ವೌಘಸ್ಸರ್ವಸನ್ನಹನಾರ್ಥಕಃ ॥ ೮೬೦
ಲೋಹಾಭಿಸಾರೋ ಽಸ್ತ್ರಭೃತಾಂ ರಾಜ್ಞಾಂ ನೀರಾಜನಾವಿಧಿಃ ।
ಯತ್ಸೇನಯಾಭಿಗಮನಮರೌ ತದಭಿಷೇಣನಮ್ ॥ ೮೬೧
ಯಾತ್ರಾ ವ್ರಜ್ಯಾಭಿನಿರ್ಯಾಣಂ ಪ್ರಸ್ಥಾನಂ ಗಮನಂ ಗಮಃ ।
ಸ್ಯಾದಾಸಾರಃ ಪ್ರಸರಣಂ ಪ್ರಚಕ್ರಂ ಚಲಿತಾರ್ಥಕಮ್ ॥ ೮೬೨
ಅಹಿತಾನ್ಪ್ರತ್ಯಭೀತಸ್ಯ ರಣೇ ಯಾನಮಭಿಕ್ರಮಃ ।
ವೈತಾಲಿಕಾ ಬೋಧಕರಾಶ್ಚಾಕ್ರಿಕಾ ಘಾಂಟಿಕಾರ್ಥಕಾಃ ॥ ೮೬೩

---

೮೫೯. ಶಸ್ತ್ರೀ, ಅಸಿಪುತ್ರೀ, ಛುರಿಕಾ, ಅಸಿಧೇನುಕಾ (ಸ್ತ್ರೀ)=ಚೂರಿ. ಶಲ್ಯ (ಪು. ನ), ಶಂಕು (ಪು)=ಬಾಣದ ಅಗ್ರಭಾಗ. ಸರ್ವಲಾ (ಶರ್ವಲಾ) (ಸ್ತ್ರೀ), ತೋಮರ (ಪು. ನ)=ಗಡಾರಿಯಂತಹ ಆಯುಧವಿಶೇಷ.

೮೬೦. ಪ್ರಾಸ, ಕುಂತ (ಪು)=ಈಟಿ, ಭಲ್ಲೆ. ಕೋಣ (ಪು), ಪಾಲಿ, ಅಶ್ರಿ, ಕೋಟಿ (ಸ್ತ್ರೀ)= ಹರಿತವಾದ ಅಗ್ರಭಾಗ. ಸರ್ವಾಭಿಸಾರ, ಸರ್ವೌಘ (ಪು), ಸರ್ವಸಂನಹನ (ನ)=ಸರ್ವಸಿದ್ಧತೆ.

೮೬೧. ಲೋಹಾಭಿಸಾರ (ಪು)=ಯುದ್ಧಕ್ಕೆ ಹೊರಡುವಾಗ ಶಸ್ತ್ರವಾಹನಾದಿಗಳನ್ನು ಪೂಜಿಸುವುದು ; ಯುದ್ಧಕ್ಕೆ ಹೊರಡುವಾಗ ರಕ್ಷಾರ್ಥವಾಗಿ ರಾಜರಿಗೆ ಆರತಿಯನ್ನು ನಿವಾಳಿಸುವುದು. ಅಭಿಷೇಣನ (ನ)=ದಂಡೆತ್ತಿಹೋಗುವುದು ; ದಂಡಯಾತ್ರೆ.

೮೬೨. ಯಾತ್ರಾ, ವ್ರಜ್ಯಾ (ಸ್ತ್ರೀ), ಅಭಿನಿರ್ಯಾಣ, ಪ್ರಸ್ಥಾನ, ಗಮನ (ನ) ಗಮ (ಪು)=ಪ್ರಯಾಣ. ಆಸಾರ (ಪು), ಪ್ರಸರಣ (ನ)=ಸರ್ವತ್ರ ವ್ಯಾಪಿಸುವುದು. ಪ್ರಚಕ್ರ, ಚಲಿತ (ನ)=ಚಲಿಸಿದ ಸೇನೆ.

೮೬೩. ಅಭಿಕ್ರಮ (ಪು)=ಭಯವಿಲ್ಲದೆ ಆಕ್ರಮಿಸುವುದು. ವೈತಾಲಿಕ, ಬೋಧಕರ (ಪು)=ಬೆಳಗ್ಗೆ ರಾಜರನ್ನು ಎಚ್ಚರಗೊಳಿಸುವ ಸ್ತುತಿಪಾಠಕ. ಚಾಕ್ರಿಕ, ಘಾಂಟಿಕ (ಪು)=ಘಂಟೆಯನ್ನು ಹೊಡೆದು ಹೊತ್ತನ್ನು ತಿಳಿಸತಕ್ಕವನು.

ಸ್ಯುರ್ಮಾಗಧಾಸ್ತು ಮಗಧಾ ವಂದಿನಃ ಸ್ತುತಿಪಾಠಕಾಃ ।
ಸಂಶಪ್ತಕಾಸ್ತು ಸಮಯಾತ್ಸಂಗ್ರಾಮಾದನಿವರ್ತಿನಃ ॥ ೮೬೪
ರೇಣುರ್ದ್ವಯೋಃ ಸ್ತ್ರಿಯಾಂ ಧೂಲಿಃ ಪಾಂಸುರ್ನಾ ನ ದ್ವಯೋ ರಜಃ ।
ಚೂರ್ಣೇ ಕ್ಷೋದಸ್ಸಮುತ್ಪಿಂಜಪಿಂಜಲೌ ಭೃಶಮಾಕುಲೇ ॥ ೮೬೫
ಪತಾಕಾ ವೈಜಯಂತೀ ಸ್ಯಾತ್ಕೇತನಂ ಧ್ವಜಮಸ್ತ್ರಿಯಾಮ್ ।
ಸಾ ವೀರಾಶಂಸನಂ ಯುದ್ಧಭೂಮಿರ್ಯಾತಿಭಯಪ್ರದಾ ॥ ೮೬೬
ಅಹಂ ಪೂರ್ವಮಹಂ ಪೂರ್ವ ಮಿತ್ಯಹಂಪೂರ್ವಿಕಾ ಸ್ತ್ರಿಯಾಮ್ ।
ಆಹೋಪುರುಷಿಕಾ ದರ್ಪಾದ್ಯಾ ಸ್ಯಾತ್ಸಂಭಾವನಾತ್ಮನಿ ॥ ೮೬೭
ಅಹಮಹಮಿಕಾ ತು ಸಾ ಸ್ಯಾತ್ಪರಸ್ಪರಂ ಯೋ ಭವತ್ಯಹಂಕಾರಃ ।
ದ್ರವಿಣಂ ತರಸ್ಸಹೋಬಲಶೌರ್ಯಾಣಿ ಸ್ಥಾಮ ಶುಷ್ಮಂ ಚ ॥ ೮೬೮
ಶಕ್ತಿಃ ಪರಾಕ್ರಮಪ್ರಾಣೌ ವಿಕ್ರಮಸ್ತ್ವತಿಶಕ್ತಿತಾ ।
ವೀರಪಾನಂ ತು ಯತ್ಪಾನಂ ವೃತ್ತೇ ಭಾವಿನಿ ವಾ ರಣೇ ॥ ೮೬೯

---

೮೬೪. ಮಾಗಧ, ಮಗಧ (ಪು)=ವಂಶಾವಳಿಯನ್ನು ಪಠಿಸತಕ್ಕವನು. ವಂದಿನ್, ಸ್ತುತಿಪಾಠಕ (ಪು)=ಹೊಗಳು ಭಟ. ಸಂಶಪ್ತಕ (ಪು)=ಹಿಮ್ಮೆಟ್ಟುವುದಿಲ್ಲವೆಂದು ಶಪಥವನ್ನು ಮಾಡಿ ಯುದ್ಧಕ್ಕೆ ನಿಂತವನು.

೮೬೫. ರೇಣು (ಪು. ಸ್ತ್ರೀ), ಧೂಲಿ (ಸ್ತ್ರೀ), ಪಾಂಸು (ಪು), ರಜಸ್ (ನ)= ಧೂಳಿ. ಚೂರ್ಣ, ಕ್ಷೋದ (ಪು)=ಪ್ರಯತ್ನದಿಂದ ಮಾಡಿದ ಪುಡಿ. ಸಮುತ್ಪಿಂಜ, ಪಿಂಜಲ[1] (ಪು)=ಬಹಳ ಕಳವಳಗೊಂಡವನು, ಉದ್ವಿಗ್ನನಾದವನು ; ಸಿಕ್ಕಾಪಟ್ಟೆ ಕೆದರಿಹೋದದ್ದು.

೮೬೬. ಪತಾಕಾ, ವೈಜಯಂತೀ (ಸ್ತ್ರೀ), ಕೇತನ (ನ),ಧ್ವಜ (ಪು. ನ)=ಬಾವುಟ. ವೀರಾಶಂಸನ (ನ)=ಭೀಕರವಾದ ರಣರಂಗ.

೮೬೭. ಅಹಂಪೂರ್ವಿಕಾ (ಸ್ತ್ರೀ)=ನಾನು ಮುಂದೆಂದು ಉತ್ಸಾಹದಿಂದ ಮಾಡುವ ಕೆಲಸ. ಆಹೋಪುರುಷಿಕಾ (ಸ್ತ್ರೀ)=ನನಗೆ ಸಮಾನರಿಲ್ಲವೆಂಬ ಅಹಂಭಾವ.

೮೬೮-೮೬೯. ಅಹಮಹಮಿಕಾ (ಸ್ತ್ರೀ)=ನಾನು ಗಟ್ಟಿಗ ನಾನುಗಟ್ಟಿಗ ಎಂಬ ಅನ್ಯೋನ್ಯವಾದ ಅಹಂಕಾರ. ದ್ರವಿಣ, ತರಸ್, ಸಹಸ್, ಬಲ, ಶೌರ್ಯ, ಸ್ಥಾಮನ್, ಶುಷ್ಮ (ನ),

---

1 ಉತ್ಪಿಂಜಲ ಎಂಬ ರೂಪವೂ ಇದೆ.

ಯುದ್ಧಮಾಯೋಧನಂ ಜನ್ಯಂ ಪ್ರಧನಂ ಪ್ರವಿದಾರಣಮ್ ।
ಮೃಧಮಾಸ್ಕಂದನಂ ಸಂಖ್ಯಂ ಸಮೀಕಂ ಸಾಂಪರಾಯಿಕಮ್ ॥ ೮೭೦
ಅಸ್ತ್ರಿಯಾಂ ಸಮರಾನೀಕರಣಾಃ ಕಲಹವಿಗ್ರಹೌ ।
ಸಂಪ್ರಹಾರಾಭಿಸಂಪಾತಕಲಿಸಂಸ್ಫೋಟಸಂಯುಗಾಃ ॥ ೮೭೧
ಅಭ್ಯಾಮರ್ದಸಮಾಘಾತಸಂಗ್ರಾಮಾಭ್ಯಾಗಮಾಹವಾಃ ।
ಸಮುದಾಯಃ ಸ್ತ್ರಿಯಃ ಸಂಯತ್ ಸಮಿತ್ಯಾಜಿಸಮಿದ್ಯುಧಃ ॥ ೮೭೨
ನಿಯುದ್ಧಂ ಬಾಹುಯುದ್ಧೇಽಥ ತುಮುಲಂ ರಣಸಂಕುಲೇ ।
ಕ್ಷ್ವೇಡಾ ತು ಸಿಂಹನಾದಸ್ಸ್ಯಾತ್ ಕರಿಣಾಂ ಘಟನಾ ಘಟಾ ॥ ೮೭೩
ಕ್ರಂದನಂ ಯೋಧಸಂರಾವೋ ಬೃಂಹಿತಂ ಕರಿಗರ್ಜಿತಮ್ ।
ವಿಸ್ಫಾರೋ ಧನುಷಸ್ಸ್ವನಃ ಪಟಹಾಡಂಬರೌ ಸಮೌ ॥ ೮೭೪

ಶಕ್ತಿ (ಸ್ತ್ರೀ), ಪರಾಕ್ರಮ, ಪ್ರಾಣ (ಪು)=ಶಕ್ತಿ, ಬಲ, ವಿಕ್ರಮ (ಪು)= ಅತಿಯಾದ ಶಕ್ತಿ. ವೀರಪಾನ (ವೀರಪಾಣ) (ನ)=ಯುದ್ಧದ ಆರಂಭದಲ್ಲಿ ಅಥವಾ ಕೊನೆಯಲ್ಲಿ ವೀರರು ಮಾಡುವ ಪಾನ.

೮೭೦-೮೭೨. ಯುದ್ಧ, ಆಯೋಧನ, ಜನ್ಯ, ಪ್ರಧನ, ಪ್ರವಿದಾರಣ, ಮೃಧ, ಆಸ್ಕಂದನ, ಸಂಖ್ಯ, ಸಮೀಕ, ಸಾಂಪರಾಯಿಕ (ನ),ಸಮರ, ಅನೀಕ, ರಣ (ಪು. ನ), ಕಲಹ, ವಿಗ್ರಹ, ಸಂಪ್ರಹಾರ, ಅಭಿಸಂಪಾತ, ಕಲಿ, ಸಂಸ್ಫೋಟ, ಸಂಯುಗ, ಅಭ್ಯಾಮರ್ದ, ಸಮಾಘಾತ, ಸಂಗ್ರಾಮ, ಅಭ್ಯಾಗಮ, ಆಹವ, ಸಮುದಾಯ (ಸಮವಾಯ) (ಪು), ಸಂಯತ್, ಸಮಿತಿ, ಆಜಿ, ಸಮಿಧ್, ಯುಧ್ (ಸ್ತ್ರೀ)=ಯುದ್ಧ.

೮೭೩. ನಿಯುದ್ಧ (ನ)=ಬಾಹುಯುದ್ಧ, ಕುಸ್ತಿ. ತುಮುಲ, ರಣಸಂಕುಲ (ನ)=ಗದ್ದಲದ ಯುದ್ಧ ; ಭೀಕರ ಯುದ್ಧ. ಕ್ಷ್ವೇಡಾ (ಸ್ತ್ರೀ), ಸಿಂಹನಾದ (ಪು)=ವೀರಗರ್ಜನೆ. ಘಟನಾ, ಘಟಾ (ಸ್ತ್ರೀ)=ಆನೆಗಳ ಹಿಂಡು.

೮೭೪. ಕ್ರಂದನ (ನ), ಯೋಧಸಂರಾವ (ಪು)=ವೀರರ ಬೊಬ್ಬೆ. ಬೃಂಹಿತ (ನ)=ಆನೆಯ ಘೀಂಕಾರ. ವಿಸ್ಫಾರ (ಪು)=ಧನುಸ್ಸಿನ ಝುಂಕಾರ. ಪಟಹ, ಆಡಂಬರ (ಪು)=ಯುದ್ಧದಲ್ಲಿ ಬಾರಿಸುವ ತಮಟೆ.

ಪ್ರಸಭಂ ತು ಬಲಾತ್ಕಾರೋ ಹಠೋಽಥ ಸ್ಖಲಿತಂ ಛಲಮ್ ।
ಅಜನ್ಯಂ ಕ್ಲೀಬಮುತ್ಪಾತ ಉಪಸರ್ಗಸ್ಸಮಂ ತ್ರಯಮ್ ॥ ೮೭೫
ಮೂರ್ಛಾ ತು ಕಶ್ಮಲಂ ಮೋಹೋಽಪ್ಯವಮರ್ದಸ್ತು ಪೀಡನಮ್ ।
ಅಭ್ಯವಸ್ಕಂದನಂ ತ್ವಭ್ಯಾಸಾದನಂ ವಿಜಯೋ ಜಯಃ ॥ ೮೭೬
ವೈರಶುದ್ಧಿಃ ಪ್ರತೀಕಾರೋ ವೈರನಿರ್ಯಾತನಂ ಚ ಸಾ ।
ಪ್ರದ್ರಾವೋದ್ದ್ರಾವಸಂದ್ರಾವಸಂದಾವಾ ವಿದ್ರವೋ ದ್ರವಃ ॥ ೮೭೭
ಅಪಕ್ರಮೋಽಪಯಾನಂ ಚ ರಣೇ ಭಂಗಃ ಪರಾಜಯಃ ।
ಪರಾಜಿತಪರಾಭೂತೌ ತ್ರಿಷು ನಷ್ಟತಿರೋಹಿತೌ ॥ ೮೭೮
ಪ್ರಮಾಪಣಂ ನಿಬರ್ಹಣಂ ನಿಕಾರಣಂ ನಿಶಾರಣಮ್ ।
ಪ್ರವಾಸನಂ ಪರಾಸನಂ ನಿಷೂದನಂ ನಿಹಿಂಸನಮ್ ॥ ೮೭೯
ನಿರ್ವಾಸನಂ ಸಂಜ್ಞಪನಂ ನಿರ್ಗ್ರಂಥನಮಪಾಸನಮ್ ।
ನಿಸ್ತರ್ಹಣಂ ನಿಹನನಂ ಕ್ಷಣನಂ ಪರಿವರ್ಜನಮ್ ॥ ೮೮೦
ನಿರ್ವಾಪಣಂ ವಿಶಸನಂ ಮಾರಣಂ ಪ್ರತಿಘಾತನಮ್ ।
ಉದ್ವಾಸನಪ್ರಮಥನಕ್ರಥನೋಜ್ಜಾಸನಾನಿ ಚ ॥ ೮೮೧

---

೮೭೫. ಪ್ರಸಭ (ನ), ಬಲಾತ್ಕಾರ, ಹಠ (ಪು)=ಬಲಾತ್ಕಾರ. ಸ್ಖಲಿತ, ಛಲ (ನ)=ನಿಯಮೋಲ್ಲಂಘನೆ. ಅಜನ್ಯ (ನ), ಉತ್ಪಾತ, ಉಪಸರ್ಗ (ಪು)=ಅನಿಷ್ಟಸೂಚಕವಾದ ಶಕುನ.

೮೭೬. ಮೂರ್ಛಾ (ಸ್ತ್ರೀ), ಕಶ್ಮಲ (ನ), ಮೋಹ (ಪು)=ಎಚ್ಚರದಪ್ಪುವುದು. ಅವಮರ್ದ (ಪು), ಪೀಡನ (ನ)=ಪೀಡೆ. ಅಭ್ಯವಸ್ಕಂದನ, ಅಭ್ಯಾಸಾದನ (ನ)=ಮುತ್ತಿಗೆ, ಶತ್ರುಬಲದ ಆಕ್ರಮಣ. ವಿಜಯ, ಜಯ (ಪು)=ಜಯ.

೮೭೭-೮೭೮. ವೈರಶುದ್ಧಿ (ಸ್ತ್ರೀ), ಪ್ರತೀಕಾರ, (ಪು), ವೈರನಿರ್ಯಾತನ (ನ)=ಸೇಡು ತೀರಿಸಿಕೊಳ್ಳುವುದು. ಪ್ರದ್ರಾವ, ಉದ್ರಾವ, ಸಂದ್ರಾವ, ಸಂದಾವ, ವಿದ್ರವ, ದ್ರವ, ಅಪಕ್ರಮ (ಪು), ಅಪಯಾನ (ನ)= ಸೋತುಓಡಿಹೋಗುವುದು. ಪರಾಜಯ (ಪು)=ಸೋಲು. ಪರಾಜಿತ, ಪರಾಭೂತ (ಪು)=ಸೋತವನು. ನಷ್ಟ, ತಿರೋಹಿತ (ಪು)=ಅಡಗಿದವನು ; ಕಾಣೆಯಾದವನು.

೮೭೯-೮೮೩. ಪ್ರಮಾಪಣ, ನಿಬರ್ಹಣ, ನಿಕಾರಣ, ನಿಶಾರಣ, ಪ್ರವಾಸನ, ಪರಾಸನ, ನಿಷೂದನ, ನಿಹಿಂಸನ, ನಿರ್ವಾಸನ, ಸಂಜ್ಞಪನ, ನಿರ್ಗ್ರಂಥನ, ಅಪಾಸನ, ನಿಸ್ತರ್ಹಣ,

ಆಲಂಭಪಿಂಜವಿಶರಘಾತೋನ್ಮಾಥವಧಾ ಅಪಿ ।
ಸ್ಯಾತ್ ಪಂಚತಾ ಕಾಲಧರ್ಮೋ ದಿಷ್ಟಾಂತಃ ಪ್ರಲಯೋಽತ್ಯಯಃ ॥ ೭೭೨
ಅಂತೋ ನಾಶೋ ದ್ವಯೋರ್ಮೃತ್ಯುರ್ಮರಣಂ ನಿಧನೋಽಸ್ತ್ರಿಯಾಂ ।
ಪರಾಸುಃ ಪ್ರಾಪ್ತಪಂಚತ್ವಪರೇತಪ್ರೇತಸಂಸ್ಥಿತಾಃ ॥ ೭೭೩
ಮೃತಪ್ರಮೀತೌ ತ್ರಿಷ್ವೇತೇ ಚಿತಾ ಚಿತ್ಯಾ ಚಿತಿಃ ಸ್ತ್ರಿಯಾಮ್ ।
ಕಬಂಧೋಽಸ್ತ್ರೀ ಕ್ರಿಯಾಯುಕ್ತಮಪಮೂರ್ಧಕಲೇವರಮ್ ॥ ೭೭೪
ಶ್ಮಶಾನಂ ಸ್ಯಾತ್ ಪಿತೃವನಂ ಕುಣಪಶ್ಶವಮಸ್ತ್ರಿಯಾಮ್ ।
ಪ್ರಗ್ರಹೋಪಗ್ರಹೌ ಬಂದ್ಯಾಂ ಕಾರಾ ಸ್ಯಾತ್ ಬಂಧನಾಲಯೇ ॥ ೭೭೫
ಪುಂಸಿ ಭೂಮ್ನ್ಯಸವಃ ಪ್ರಾಣಾಶ್ಚೈವಂ ಜೀವೋಽಸುಧಾರಣಮ್ ।
ಆಯುರ್ಜೀವಿತಕಾಲೋ ನಾ ಜೀವಾತುರ್ಜೀವನೌಷಧಮ್ ॥ ೭೭೬

ಇತಿ ಕ್ಷತ್ರಿಯವರ್ಗಃ

ನಿಹನನ, ಕ್ಷಣನ, ಪರಿವರ್ಜನ, ನಿರ್ವಾಪಣ, ವಿಶಸನ, ಮಾರಣ, ಪ್ರತಿಘಾತನ, ಉದ್ವಾಸನ, ಪ್ರಮಥನ, ಕ್ರಥನ, ಉಜ್ಜಾಸನ (ನ), ಆಲಂಭ, ಪಿಂಜ, ವಿಶರ, ಘಾತ, ಉನ್ಮಾಥ, ವಧ (ಪು)=ಕೊಲ್ಲುವುದು, ವಧೆ.

೭೭೨-೭೭೩. ಪಂಚತಾ (ಸ್ತ್ರೀ), ಕಾಲಧರ್ಮ, ದಿಷ್ಟಾಂತ, ಪ್ರಲಯ, ಅತ್ಯಯ, ಅಂತ, ನಾಶ (ಪು),ಮೃತ್ಯು, (ಪು. ಸ್ತ್ರೀ), ಮರಣ (ನ), ನಿಧನ (ಪು. ನ)=ಸಾವು.

೭೭೩-೭೭೪. ಮೃತ, ಪ್ರಮೀತ(ಪು. ಸ್ತ್ರೀ. ನ-ವಿ. ನಿಘ್ನ)=ಸತ್ತವನು. ಚಿತಾ, ಚಿತ್ಯಾ, ಚಿತಿ (ಸ್ತ್ರೀ)=ಚಿತೆ. ಕಬಂಧ (ಪು. ನ)=ತಲೆಯಿಲ್ಲದೆ ಚಲಿಸುತ್ತಿರುವ ದೇಹ, ರುಂಡ.

೭೭೫. ಶ್ಮಶಾನ, ಪಿತೃವನ (ನ)=ಶ್ಮಶಾನ. ಕುಣಪ, ಶವ (ಪು. ನ)=ಹೆಣ. ಪ್ರಗ್ರಹ, ಉಪಗ್ರಹ, (ಪು), ಬಂದೀ (ಸ್ತ್ರೀ)=ಸೆರೆ. ಕಾರಾ (ಸ್ತ್ರೀ), ಬಂಧನಾಲಯ (ಪು)=ಸೆರೆಮನೆ.

೭೭೬. ಅಸು, ಪ್ರಾಣ (ಪು. ನಿತ್ಯಬಹುವಚನ)=ಪ್ರಾಣ. ಜೀವ (ಪು), ಅಸುಧಾರಣ (ನ)=ಬದುಕಿರುವುದು. ಆಯುಸ್ (ನ), ಜೀವಿತಕಾಲ (ಪು)=ಬದುಕಿರುವ ಕಾಲ. ಜೀವಾತು (ಪು), ಜೀವನೌಷಧ (ನ)=ಬದುಕಿಸುವ ಔಷಧ.

೯. ವೈಶ್ಯವರ್ಗಃ

ಊರವ್ಯಾ ಊರುಜಾ ಅರ್ಯಾ ವೈಶ್ಯಾ ಭೂಮಿಸ್ಪೃಶೋ ವಿಶಃ ।
ಆಜೀವೋ ಜೀವಿಕಾ ವಾರ್ತಾ ವೃತ್ತಿರ್ವರ್ತನಜೀವನೇ ॥ ೮೮೭
ಸ್ತ್ರಿಯಾಂ ಕೃಷಿಃ ಪಾಶುಪಾಲ್ಯಂ ವಾಣಿಜ್ಯಂ ಚೇತಿ ವೃತ್ತಯಃ ।
ಸೇವಾ ಶ್ವವೃತ್ತಿರನೃತಂ ಕೃಷಿರುಂಛಶಿಲಂ ತ್ವೃತಮ್ ॥ ೮೮೮
ದ್ವೇ ಯಾಚಿತಾಯಾಚಿತಯೋರ್ಯಥಾಸಂಖ್ಯಂ ಮೃತಾಮೃತೇ ।
ಸತ್ಯಾನೃತಂ ವಣಿಗ್ಭಾವಃ ಸ್ಯಾದೃಣಂ ಪರ್ಯುದಂಚನಮ್ ॥ ೮೮೯
ಉದ್ಧಾರೋಽರ್ಥ ಪ್ರಯೋಗಸ್ತು ಕುಸೀದಂ ವೃದ್ಧಿಜೀವಿಕಾ ।
ಯಾಚ್ಞಯಾಪ್ತಂ ಯಾಚಿತಕಂ ನಿಮಯಾದಾಪಮಿತ್ಯಕಮ್ ॥ ೮೯೦

ವೈಶ್ಯವರ್ಗ

೮೮೭. ಊರವ್ಯ, ಊರುಜ, ಅರ್ಯ, ವೈಶ್ಯ, ಭೂಮಿಸ್ಪೃಶ್, ವಿಶ್ (ಪು)=ವೈಶ್ಯ. ಆಜೀವ (ಪು), ಜೀವಿಕಾ, ವಾರ್ತಾ, ವೃತ್ತಿ (ಸ್ತ್ರೀ), ವರ್ತನ, ಜೀವನ (ನ)=ಜೀವನೋಪಾಯ.

೮೮೮. ಕೃಷಿ (ಸ್ತ್ರೀ)=ಬೇಸಾಯ. ಪಾಶುಪಾಲ್ಯ (ನ)=ಪಶುಪಾಲನೆ. ವಾಣಿಜ್ಯ (ನ)=ಮಾರಾಟ—ಇವು ಮೂರು ವೈಶ್ಯರ ಜೀವನೋಪಾಯಗಳು. ಸೇವಾ, ಶ್ವವೃತ್ತಿ (ಸ್ತ್ರೀ)=ಸೇವೆ. ಅನೃತ (ನ), ಕೃಷಿ (ಸ್ತ್ರೀ)=ಬೇಸಾಯ. ಉಂಛಶಿಲ[1], ಋತ (ನ)=ಬಿದ್ದ ಕಾಳುಗಳನ್ನು ಆರಿಸಿ ಜೀವಿಸುವುದು.

೮೮೯-೮೯೦. ಯಾಚಿತ, ಮೃತ (ನ)=ಬೇಡಿತಂದದ್ದು. ಅಯಾಚಿತ, ಅಮೃತ (ನ)=ಬೇಡದೆ ತಾನಾಗಿ ಪ್ರಾಪ್ತವಾದದ್ದು. ಸತ್ಯಾನೃತ (ನ), ವಣಿಗ್ಭಾವ (ಪು)=ವ್ಯಾಪಾರ, ಮಾರಾಟ. ಋಣ, ಪರ್ಯುದಂಚನ (ನ), ಉದ್ಧಾರ (ಪು)= ಸಾಲ. ಅರ್ಥಪ್ರಯೋಗ

---

[1] ಉಂಛ (ಪು. ನ)=ಬೀದಿಯಲ್ಲಿ ಬಿದ್ದ ಕಾಳನ್ನು ಆರಿಸಿಕೊಳ್ಳುವುದು. ಶಿಲ (ನ)=ಹೊಲದಲ್ಲಿ ಉದುರಿದ ಕಾಳು, ತೆನೆಗಳನ್ನು ಆರಿಸಿಕೊಳ್ಳುವುದು. ಇವುಗಳಲ್ಲಿ ವಿಶೇಷ ಭೇದವಿಲ್ಲ. ಆದ್ದರಿಂದ ಉಂಛಶಿಲ ಎಂದು ಒಂದೇ ಪದವಾಗಿ ಪ್ರಯೋಗಿಸುವುದೂ ಉಂಟು.

ಋತಮುಂಛಲಶಿಲಂ ಜ್ಞೇಯಮಮೃತಂ ಸ್ಯಾದಯಾಚಿತಮ್ ।
ಮೃತಂ ತು ಯಾಚಿತಂ ಭೈಕ್ಷಂ ಪ್ರಮೃತಂ ಕರ್ಷಣಂ ಸ್ಮೃತಮ್ ॥
ಸತ್ಯಾನೃತಂ ತು ವಾಣಿಜ್ಯಂ ತೇನ ಚೈವಾಪಿ ಜೀವ್ಯತೇ ।
ಸೇವಾ ಶ್ವವೃತ್ತಿರಾಖ್ಯಾತಾ ತಸ್ಮಾತ್ತಾಂ ಪರಿವರ್ಜಯೇತ್ ॥

—ಮನು ೪-೪, ೫.

ಉತ್ತಮರ್ಣಾಧಮರ್ಣೌ ದ್ವೌ ಪ್ರಯೋಕ್ತೃಗ್ರಾಹಕೌ ಕ್ರಮಾತ್ ।
ಕುಸೀದಿಕೋ ವಾರ್ಧುಷಿಕೋ ವೃದ್ಧ್ಯಾಜೀವಶ್ಚ ವಾರ್ಧುಷಿಃ ॥ ೪೯೧
ಕ್ಷೇತ್ರಾಜೀವಃ ಕರ್ಷಕಶ್ಚ ಕೃಷಕಶ್ಚ ಕೃಷೀವಲಃ ।
ಕ್ಷೇತ್ರಂ ವ್ರೈಹೇಯಶಾಲೇಯಂ ವ್ರೀಹಿಶಾಲ್ಯುದ್ಭವೋಚಿತಮ್ ॥ ೪೯೨
ಯವ್ಯಂ ಯವಕ್ಯಂ ಷಷ್ಟಿಕ್ಯಂ ಯವಾದಿಭವನಂ ಹಿ ಯತ್ ।
ತಿಲ್ಯತೈಲೀನವನ್ಮಾಷೋಮಾಣುಭಂಗಾದ್ದ್ವಿರೂಪತಾ ॥ ೪೯೩
ಮೌದ್ಗೀನಕೌದ್ರವೀಣಾದಿ ಶೇಷಧಾನ್ಯೋದ್ಭವೋಚಿತಮ್ ।
ಬೀಜಾಕೃತಂ ತೂಪ್ತಕೃಷ್ಟಂ ಸೀತ್ಯಂ ಕೃಷ್ಟಂ ಚ ಹಲ್ಯವತ್ ॥ ೪೯೪

(ಪು),ಕುಸೀದ (ನ), ವೃದ್ಧಿ ಜೀವಿಕಾ (ಸ್ತ್ರೀ)=ಬಡ್ಡಿಯ ಹಣದಿಂದ ಜೀವಿಸುವುದು. ಯಾಚಿತಕ (ನ)=ಯಾಚಿಸಿ ತಂದದ್ದು. ಆಪಮಿತ್ಯಕ (ನ)=ವಿನಿಮಯ ಮಾಡಿ ಸಂಪಾದಿಸಿದ್ದು (Received by barter or exchange).

೪೯೧. ಮುಂದೆ ೪೯೬ನೆಯ ಶ್ಲೋಕದಲ್ಲಿ ಖಾರೀಕ ಶಬ್ದದವರೆಗಿನವು ಅರ್ಥಾನುರೋಧವಾಗಿ ತ್ರಿಲಿಂಗಗಳು. ಉತ್ತಮರ್ಣ (ಪು)=ಸಾಲ ಕೊಟ್ಟವನು. ಅಧಮರ್ಣ (ಪು)= ಸಾಲ ತೆಗೆದುಕೊಂಡವನು. ಕುಸೀದಿಕ, ವಾರ್ಧುಷಿಕ, ವೃಧ್ಯಾಜೀವ, ವಾರ್ಧುಷಿ (ಪು)=ಬಡ್ಡಿಯಿಂದ ಜೀವಿಸತಕ್ಕವನು.

೪೯೨. ಕ್ಷೇತ್ರಾಜೀವ, ಕರ್ಷಕ, ಕೃಷಕ, ಕೃಷೀವಲ (ಪು) (=ಸ್ತ್ರೀ, ಕರ್ಷಿಕಾ, ಕೃಷಿಕಾ) ಬೇಸಾಯದಿಂದ ಜೀವಿಸತಕ್ಕವನು. ವ್ರೈಹೇಯ, ಶಾಲೇಯ (ನ) (ಸ್ತ್ರೀ. ವ್ರೈಹೇಯೀ, ಶಾಲೇಯೀ)= ಬತ್ತವು ಬೆಳೆಯುವ ಗದ್ದೆ. ವ್ರೀಹಿ, ಶಾಲಿ- ಎಂಬಿವು ಬತ್ತದ ಅಂತರ್ಭೇದಗಳು.

೪೯೩. ಯವ್ಯ. ಯವಕ್ಯ, ಷಷ್ಟಿಕ್ಯ (ನ)=ಕ್ರಮವಾಗಿ ಮೂರು ಬಗೆಯ ಧಾನ್ಯಗಳನ್ನು ಬೆಳೆಯುವ ಕ್ಷೇತ್ರ. (ಯವ, ಯವಕ=ಜವೆಗೋಧಿಯ ಭೇದ. ಷಷ್ಟಿಕ=೬೦ ದಿನಗಳಲ್ಲಿ ಫಲವನ್ನು ಕೊಡುವ ಒಂದು ಜಾತಿಯ ಭತ್ತ.) ತಿಲ್ಯ, ತೈಲೀನ (ನ)=ಎಳ್ಳಿನ ಹೊಲ. ಮಾಷ್ಯ, ಮಾಷೀಣ (ನ)=ಉದ್ದಿನ ಹೊಲ. ಉಮ್ಯ, ಔಮೀನ (ನ)=ಅಗಸೆ ಬೆಳೆಯುವ ಹೊಲ. ಅಣವ್ಯ, ಅಣವೀನ (ನ)=ಸಣ್ಣ ಬತ್ತ ಬೆಳೆಯುವ ಗದ್ದೆ. ಭಂಗ್ಯ, ಭಾಂಗೀನ (ನ)=ಸೆಣಬು ಬೆಳೆಯುವ ಕ್ಷೇತ್ರ.

೪೯೪. ಮೌದ್ಗೀನ (ನ)=ಹೆಸರು ಹೊಲ. ಕೌದ್ರವೀಣ (ನ)=ಹಾರಕದ ಹೊಲ. ಹೀಗೆಯೇ ಗೌಧೂಮೀನ= ಗೋಧಿಯ ಹೊಲ, ಕೌಲಿತ್ಥೀನ= ಹುರುಳಿ ಹೊಲ, ಚಾಣಕೀನ

ತ್ರಿಗುಣಾಕೃತಂ ತೃತೀಯಾಕೃತಂ ತ್ರಿಹಲ್ಯಂ ತ್ರಿಸೀತ್ಯಮಪಿ ತಸ್ಮಿನ್ ।
ದ್ವಿಗುಣಾಕೃತೇ ತು ಸರ್ವಂ ದ್ವಿಪೂರ್ವಂ ಶಂಬಾಕೃತಮಪೀಹ ॥ ೮೯೫
ದ್ರೋಣಾಢಕಾದಿ ವಾಪಾದೌ ದ್ರೌಣಿಕಾಢಕಿಕಾದಯಃ ।
ಖಾರೀವಾಪಸ್ತು ಖಾರೀಕ ಉತ್ತಮರ್ಣಾದಯಸ್ತ್ರಿಷು ॥ ೮೯೬
ಪುನ್ನಪುಂಸಕಯೋರ್ವಪ್ರಃ ಕೇದಾರಃ ಕ್ಷೇತ್ರಮಸ್ಯ ತು ।
ಕೈದಾರಕಂ ಸ್ಯಾತ್ ಕೈದಾರ್ಯಂ ಕ್ಷೈತ್ರಂ ಕೈದಾರಿಕಂ ಗಣೇ ॥ ೮೯೭
ಲೋಷ್ಟಾನಿ ಲೇಷ್ಟವಃ ಪುಂಸಿ ಕೋಟಿಶೋ ಲೋಷ್ಟಭೇದನಃ ।
ಪ್ರಾಜನಂ ತೋದನಂ ತೋತ್ರಂ ಖನಿತ್ರಮವದಾರಣಮ್ ॥ ೮೯೮

=ಕಡಲೆಯ ಹೊಲ ಮುಂತಾದ ಶಬ್ದಗಳು. ಬೀಜಾಕೃತ, ಉಪ್ತಕೃಷ್ಟ (ನ)=ಉತ್ತು ಬಿತ್ತನೆಮಾಡಿದ ಹೊಲ. ಸೀತ್ಯ, ಕೃಷ್ಟ, ಹಲ್ಯ (ನ)=ಉತ್ತ ಭೂಮಿ.

೮೯೫. ತ್ರಿಗುಣಾಕೃತ, ತೃತೀಯಾಕೃತ, ತ್ರಿಹಲ್ಯ, ತ್ರಿಸೀತ್ಯ (ನ)=ಮೂರು ಸಾರಿ ಉತ್ತ ಭೂಮಿ. ದ್ವಿಗುಣಾಕೃತ, ದ್ವಿತೀಯಾಕೃತ, ದ್ವಿಹಲ್ಯ, ದ್ವಿಸೀತ್ಯ, ಶಂಬಾಕೃತ (ನ)=ಎರಡು ಸಾರಿ ಉತ್ತ ಭೂಮಿ.

೮೯೬. ದ್ರೌಣಿಕ (ನ)=ಒಂದು ದ್ರೋಣ[1] ಪರಿಮಾಣದ ಧಾನ್ಯವನ್ನು ಬಿತ್ತಬಹುದಾದ ಹೊಲ ; ಒಂದು ದ್ರೋಣವು ಹಿಡಿಸುವಂತಹ ಪಾತ್ರೆ ; ಒಂದು ದ್ರೋಣಧಾನ್ಯವನ್ನು ಬೇಯಿಸಬಹುದಾದ ಪಾತ್ರೆ. ಹೀಗೆಯೇ ಆಢಕಿಕ, ಪ್ರಾಸ್ಥಿಕ, ಕೌಡವಿಕ (-ಸ್ತ್ರೀ. ದ್ರೌಣಿಕೀ) ಇತ್ಯಾದಿ. ಖಾರೀಕ[2] (ನ)=ಒಂದು ಖಾರಿಯನ್ನು ಬಿತ್ತಬಹುದಾದಹೊಲ ಇತ್ಯಾದಿ.

೮೯೭. ವಪ್ರ (ಪು. ನ), ಕೇದಾರ (ಪು), ಕ್ಷೇತ್ರ (ನ)=ಹೊಲ, ಗದ್ದೆ. ಕೈದಾರಕ, ಕೈದಾರ್ಯ, ಕ್ಷೈತ್ರ, ಕೈದಾರಿಕ (ನ)=ಹೊಲದ ಸಮೂಹ, ಗದ್ದೆಯ ಸಮೂಹ.

೮೯೮. ಲೋಷ್ಟ (ನ), ಲೇಷ್ಟು (ಪು)= ಮಣ್ಣು ಹೆಂಟೆ. ಕೋಟಿಶ, ಲೋಷ್ಟಭೇದನ (ಪು)=ಹೆಂಟೆಯನ್ನು ಒಡೆಯುವ ಕೊಡತಿ. ಪ್ರಾಜನ, ತೋದನ, ತೋತ್ರ (ನ)=ಎತ್ತುಗಳನ್ನು ಹೊಡೆಯುವ ಕೋಲು, ಚಾಟಿ. ಖನಿತ್ರ, ಅವದಾರಣ (ನ)=ಗುದ್ದಲಿ.

---

[1] ದ್ರೋಣ ಮುಂತಾದ ಶಬ್ದಗಳ ಅರ್ಥವನ್ನು ೯೭೫ನೆಯ ಶ್ಲೋಕದ ಕೆಳಗೆ ಬರೆದಿದೆ.

[2] ಖಾರೀ ಶಬ್ದವು ಮಾತ್ರ ಈ ಶ್ಲೋಕದಲ್ಲಿ ಹೇಳಿದ ಮೇಲ್ಕಂಡ ಎಲ್ಲ ಅರ್ಥಗಳಲ್ಲಿಯೂ ಖಾರೀಕ ಎಂಬ ಒಂದೇ ರೂಪವನ್ನು ಪಡೆಯುತ್ತದೆ. (ಸ್ತ್ರೀ. ಖಾರೀಕಾ). ದ್ರೋಣ ಶಬ್ದಕ್ಕೆ ದ್ರೌಣ (ಸ್ತ್ರೀ.ದ್ರೌಣೀ) ಎಂಬ ರೂಪಾಂತರವೂ ಇದೆ. ವಾಪ (ಪು) ಎಂಬ ಶಬ್ದಕ್ಕೆ ಬಿತ್ತುವ ಹೊಲ ಎಂದರ್ಥ. ದ್ರೋಣವಾಪ, ಖಾರೀವಾಪ, ಆಢಕವಾಪ (ಪು) ಇತ್ಯಾದಿ ರೂಪಾಂತರಗಳನ್ನೂ ಮಾಡಿಕೊಳ್ಳಬಹುದು.

ದಾತ್ರಂ ಲವಿತ್ರಮಾಬಂಧೋ ಯೋತ್ರಂ ಯೋಕ್ತ್ರಮಥೋ ಫಲಮ್ ।
ನಿರೀಷಂ ಕುಟಕಂ ಫಾಲಃ ಕೃಷಕೋ ಲಾಂಗಲಂ ಹಲಮ್ ॥ ೮೯೯
ಗೋದಾರಣಂ ಚ ಸೀರೋಽಥ ಶಮ್ಯಾ ಸ್ತ್ರೀ ಯುಗಕೀಲಕಃ ।
ಈಷಾ ಲಾಂಗಲದಂಡಸ್ಸ್ಯಾತ್ ಸೀತಾ ಲಾಂಗಲಪದ್ಧತಿಃ ॥ ೯೦೦
ಪುಂಸಿ ಮೇಧಿಃ ಖಲೇ ದಾರು ನ್ಯಸ್ತಂ ಯತ್ಪಶುಬಂಧನೇ ।
ಆಶುರ್ವ್ರೀಹಿಃ ಪಾಟಲಸ್ಸ್ಯಾಚ್ಛಿತಶೂಕಯವೌ ಸಮೌ ॥ ೯೦೧
ತೋಕ್ಮಸ್ತು ತತ್ರ ಹರಿತೇ ಕಲಾಯಸ್ತು ಸತೀನಕಃ ।
ಹರೇಣುಖಂಡಿಕೌ ಚಾಸ್ಮಿನ್ ಕೋರದೂಷಸ್ತು ಕೋದ್ರವಃ ॥ ೯೦೨
ಮಂಗಲ್ಯಕೋ ಮಸೂರೋಽಥ ಮಕುಷ್ಠಕಮಯುಷ್ಠಕೌ ।
ವನಮುದ್ಗೇ ಸರ್ಷಪೇ ತು ದ್ವೌ ತಂತುಭಕದಂಬಕೌ ॥ ೯೦೩

೮೯೯-೯೦೦. ದಾತ್ರ, ಲವಿತ್ರ (ನ)=ಕುಡಗೋಲು, ಕೊಯ್ಯುವ ಸಾಧನ. ಆಬಂಧ (ಪು), ಯೋತ್ರ, ಯೋಕ್ತ್ರ (ನ)=ಪಶುಗಳನ್ನು ಕಟ್ಟುವ ಹಗ್ಗ, ಕಣ್ಣಿ, ಫಲ, ನಿರೀಷ, (ನಿರೀಶ) ಕುಟಕ, (ಕೂಟಕ) (ನ), ಫಾಲ, ಕೃಷಕ (ಪು)=ನೇಗಿಲಿನ ತುದಿಯಲ್ಲಿರುವ ಲೋಹಭಾಗ, ಗುಳ. ಲಾಂಗಲ, ಹಲ, ಗೋದಾರಣ (ನ), ಸೀರ (ಪು)=ನೇಗಿಲು. ಶಮ್ಯಾ (ಸ್ತ್ರೀ), ಯುಗಕೀಲಕ (ಪು)=ನೇಗಿಲಿನ ಕಣ್ಣಿಗೆ ತಗುಲಿಸುವ ಮೊಳೆ. ಈಷಾ (ಈಶಾ) (ಸ್ತ್ರೀ)=ನೇಗಿಲಿನ ಮರ. ಸೀತಾ, ಲಾಂಗಲಪದ್ಧತಿ (ಸ್ತ್ರೀ)=ನೇಗಿಲು ಗೀಚಿದ ಸಾಲು.

೯೦೧. ಮೇಧಿ (ಪು)=ಕಣದಲ್ಲಿ ಹೂಡಿರುವ ಮೇಟಿಕಂಭ. ಆಶು, ವ್ರೀಹಿ, ಪಾಟಲ (ಪು)=ಕೆಂಪು ಬತ್ತ. ಶಿತ (ಸಿತ) ಶೂಕ, ಯವ (ಪು)= ಯವಧಾನ್ಯ (Barley).

೯೦೨. ತೋಕ್ಮ (ಪು)=ಪಕ್ವವಾಗದ ಯವಧಾನ್ಯ. ಕಲಾಯ, ಸತೀನಕ, ಹರೇಣು, ಖಂಡಿಕ (ಪು)=ಬಟಾಣಿ ; ನೆಲಗಡಲೆ. ಕೋರದೂಷ, ಕೋದ್ರವ (ಪು)=ಹಾರಕಧಾನ್ಯ.

೯೦೩. ಮಂಗಲ್ಯಕ, ಮಸೂರ (ಪು)=ಒಂದು ಬಗೆಯ ಧಾನ್ಯ; ವ್ರೀಹಿಭೇದ. ಮಕುಷ್ಠಕ, ಮಯುಷ್ಠಕ, ವನಮುದ್ಗ (ಪು)=ಕಾಡುಹೆಸರು. ಸರ್ಷಪ, ತಂತುಭ, ಕದಂಬಕ (ಪು)=ಸಾಸವೆ.

ಸಿದ್ಧಾರ್ಥಸ್ತ್ವೇಷ ಧವಲೋ ಗೋಧೂಮಃ ಸುಮನಸ್ಸಮೌ ।
ಸ್ಯಾದ್ಯಾವಕಸ್ತು ಕುಲ್ಮಾಷಶ್ಚಣಕೋ ಹರಿಮಂಥಕಃ ॥ ೯೦೪
ದ್ವೌತಿಲೇ ತಿಲಪಿಂಜಶ್ಚ ತಿಲಪೇಜಶ್ಚ ನಿಷ್ಫಲೇ ।
ಕ್ಷವಃ ಕ್ಷುತಾಭಿಜನನೋ ರಾಜಿಕಾ ಕೃಷ್ಣಿಕಾಸುರೀ ॥ ೯೦೫
ಸ್ತ್ರಿಯೌ ಕಂಗುಪ್ರಿಯಂಗೂ ದ್ವೇ ಅತಸೀ ಸ್ಯಾದುಮಾ ಕ್ಷುಮಾ ।
ಮಾತುಲಾನೀ ತು ಭಂಗಾಯಾಂ ವ್ರೀಹಿಭೇದಸ್ತ್ವಣುಃ ಪುಮಾನ್ ॥ ೯೦೬
ಕಿಂಶಾರುಸ್ಸಸ್ಯಶೂಕಂ ಸ್ಯಾತ್ಕಣಿಶಂ ಸಸ್ಯಮಂಜರೀ ।
ಧಾನ್ಯಂ ವ್ರೀಹಿಸ್ಸ್ತಂಬಕರಿಸ್ಸ್ತಂಬೋ ಗುಚ್ಛಸ್ತೃಣಾದಿನಃ ॥ ೯೦೭
ನಾಲೀ ನಾಲಂ ಚ ಕಾಂಡೋಽಸ್ಯ ಪಲಾಲೋಽಸ್ತ್ರೀ ಸ ನಿಷ್ಫಲಃ ।
ಕಡಂಗರೋ ಬುಸಂ ಕ್ಲೀಬೇ ಧಾನ್ಯತ್ವಚಿ ತುಷಃ ಪುಮಾನ್ ॥ ೯೦೮

---

೯೦೪. ಸಿದ್ಧಾರ್ಥ (ಪು)=ಬಿಳಿಯ ಸಾಸಿವೆ. ಗೋಧೂಮ, ಸುಮನ (ಪು)=ಗೋಧಿ. ಯಾವಕ, ಕುಲ್ಮಾಷ[1] (ಪು)=ಅಲಸಂದಿ. ಚಣಕ, ಹರಿಮಂಥಕ (ಪು)=ಕಡಲೆ.

೯೦೫. ತಿಲಪಿಂಜ, ತಿಲಪೇಜ (ಪು)=ಜಳ್ಳಾದ ಎಳ್ಳು. ಕ್ಷವ, ಕ್ಷುತಾ (ಧಾ) ಭಿಜನನ (ಪು), ರಾಜಿಕಾ, ಕೃಷ್ಣಿಕಾ, ಆಸುರೀ (ಸ್ತ್ರೀ)=ಕರಿಯ ಸಾಸವೆ.

೯೦೬. ಕಂಗು, ಪ್ರಿಯಂಗು (ಸ್ತ್ರೀ)=ನವಣೆ. ಅತಸೀ, ಉಮಾ, ಕ್ಷುಮಾ (ಸ್ತ್ರೀ)=ಅಗಸೆ. ಮಾತುಲಾನೀ, ಭಂಗಾ (ಸ್ತ್ರೀ)=ಸೆಣಬು. ಅಣು (ಪು)=ಸಣ್ಣ ಭತ್ತ, ಜೀರಿಗೆಸಂಬಾರ.

೯೦೭. ಕಿಂಶಾರು (ಪು), ಸಸ್ಯಶೂಕ (ನ)=ಧಾನ್ಯದ ಮುಳ್ಳು. ಕಣಿಶ (ನ), ಸಸ್ಯಮಂಜರೀ (ಸ್ತ್ರೀ)=ತೆನೆ. ಧಾನ್ಯ, ವ್ರೀಹಿ, ಸ್ತಂಬಕರಿ (ಪು)=ಯಾವುದಾದರೂ ಧಾನ್ಯ. ಸ್ತಂಬ, ಗುಚ್ಛ (ಗುತ್ಸ) (ಪು)=ಹುಲ್ಲು ಮುಂತಾದವುಗಳ ಬುಡ, ಗಡ್ಡೆ ; ಪೊದೆ.

೯೦೮. ನಾಲೀ (ನಾಡೀ), ನಾಲ (ನ), ಕಾಂಡ (ಪು)=ಹುಲ್ಲು ಮುಂತಾದವುಗಳ ಕಾಂಡ, ದಂಟು. ಪಲಾಲ (ಪು. ನ)=ಧಾನ್ಯವನ್ನು ಕಿತ್ತಮೇಲೆ ಉಳಿದ ಕಾಂಡ, ಹುಲ್ಲು. ಕಡಂಗರ (ಪು), ಬುಸ (ನ)=ಬೂಸ, ತೌಡು. ತುಷ (ಪು)=ಧಾನ್ಯದ ಸಿಪ್ಪೆ, ಹೊಟ್ಟು.

೯೦೯. ಶೂಕ (ಪು. ನ)=ಚೂಪಾದ ವಸ್ತು, ಮುಳ್ಳು. ಶಮೀ, ಶಿಂಬಾ (ಸ್ತ್ರೀ)=ಉದ್ದವಾದ ಬೀಜಕೋಶ (Pod). ಋದ್ಧ, ಆವಸಿತ (ನ. ವಿ. ನಿಘ್ನ)=ಒಕ್ಕಿದ ಧಾನ್ಯ, ತುಳಿಸಿದ

---

[1] ಕುಲ್ಮಾಷ (ಪು)=ಅರ್ಧಬೆಂದಿರುವ ಯಾವುದಾದರೂ ಧಾನ್ಯ ಎಂಬ ಅರ್ಥವೂ ಇದೆ.

ಶೂಕೋऽಸ್ತ್ರೀಶ್ಲಕ್ಷ್ಣ ತೀಕ್ಷ್ಣಾಗ್ರೇ ಶಮೀ ಶಿಂಬಾ ತ್ರಿಷೂತ್ತರೇ ।
ಋದ್ಧಮಾವಸಿತಂ ಧಾನ್ಯಂ ಪೂತಂ ತು ಬಹುಲೀಕೃತಮ್॥ ೯೦೯
ಮಾಷಾದಯಶ್ಶಮೀಧಾನ್ಯೇ ಶೂಕಧಾನ್ಯೇ ಯವಾದಯಃ ।
ಶಾಲಯಃ ಕಲಮಾದ್ಯಾಶ್ಚ ಷಷ್ಟಿಕಾದ್ಯಾಶ್ಚ ಪುಂಸ್ಯಮೀ ॥ ೯೧೦
ತೃಣಧಾನ್ಯಾನಿ ನೀವಾರಾಃ ಸ್ತ್ರೀ ಗವೇಧುರ್ಗವೇಧುಕಾ ।
ಅಯೋऽಗ್ರಂ ಮುಸಲೋऽಸ್ತ್ರೀ ಸ್ಯಾದುದೂಖಲಮುಲೂಖಲಮ್ ॥ ೯೧೧
ಪ್ರಸ್ಫೋಟನಂ ಶೂರ್ಪಮಸ್ತ್ರೀ ಚಾಲನೀ ತಿತಉಃ ಪುಮಾನ್ ।
ಸ್ಯೂತಪ್ರಸೇವೌ ಕಂಡೋಲಪಿಟೌ ಕಟಕಿಲಿಂಜಕೌ ॥ ೯೧೨
ಸಮಾನೌ ರಸವತ್ಯಾಂ ತು ಪಾಕಸ್ಥಾನಮಹಾನಸೇ ।
ಪೌರೋಗವಸ್ತದಧ್ಯಕ್ಷಸ್ಸೂಪಕಾರಾಸ್ತು ವಲ್ಲವಾಃ ॥ ೯೧೩

ಧಾನ್ಯ. ಪೂತ, ಬಹುಲೀಕೃತ (ನ. ವಿ. ನಿಘ್ನ)=ತೂರಿದ ಧಾನ್ಯ, ಶುದ್ಧಪಡಿಸಿದ ಧಾನ್ಯ.

೯೧೦. ಶಮೀಧಾನ್ಯ (ನ)=ಉದ್ದು, ಹೆಸರು, ಕಡಲೆ ಮೊದಲಾದ ಬೀಜ ಕೋಶವಿರುವ ಧಾನ್ಯ. ಶೂಕಧಾನ್ಯ (ನ)=ಭತ್ತ, ಗೋಧಿ ಮೊದಲಾದ ಮುಳ್ಳಿರುವ ಧಾನ್ಯ. ಕಲಮ (ಪು), ಷಷ್ಟಿಕ (ಪು)=ಮೊದಲಾದವು ಶಾಲಿ (ಪು)=ಬತ್ತ ಎನ್ನಲ್ಪಡುತ್ತವೆ. ಇವು ಪುಲ್ಲಿಂಗಗಳು.

೯೧೧. ತೃಣಧಾನ್ಯ (ನ), ನೀವಾರ (ಪು)=ತಾನಾಗಿ ಬೆಳೆದ ಬತ್ತ, ನವಣೆ ಮುಂತಾದ ಹುಲ್ಲುಧಾನ್ಯ. ಗವೇಧು, ಗವೇಧುಕಾ (ಸ್ತ್ರೀ)=ತಾನಾಗಿ ಬೆಳೆದ ಕಾಡುಗೋಧಿ. ಅಯೋಗ್ರ (ನ), ಮುಸಲ (ಪು. ನ)=ಒನಕೆ. ಉದೂಖಲ, ಉಲೂಖಲ (ನ)=ಒರಳು.[1]

೯೧೨. ಪ್ರಸ್ಫೋಟನ (ನ), ಶೂರ್ಪ (ಪು. ನ)= ಮೊರ. ಚಾಲನೀ (ಸ್ತ್ರೀ), ತಿತಉ (ಪು)= ಜರಡಿ, ವಂದರಿ. ಸ್ಯೂತ,[2] ಪ್ರಸೇವ (ಪು)=ಚೀಲ. ಕಂಡೋಲ, ಪಿಟ (ಪು)=ಬುಟ್ಟಿ, ಮಂಕರಿ. ಕಟ, ಕಿಲಿಂಜಕ (ಪು)=ಚಾಪೆ.

೯೧೩-೯೧೪. ರಸವತೀ (ಸ್ತ್ರೀ), ಪಾಕಸ್ಥಾನ, ಮಹಾನಸ[3] (ನ)=ಅಡಿಗೆಮನೆ. ಭಕ್ಷಕಾರ ಶಬ್ದವರೆಗೆ ಮುಂದಿನವು ಅರ್ಥಾನುಸಾರವಾಗಿ ಮೂರು ಲಿಂಗಗಳಲ್ಲಿರುತ್ತವೆ. ಪೌರೋಗವ

---

[1] ಇಲ್ಲಿ ಪಾಠವಿಶೇಷ-ಘುರಟ್ಟಶ್ಚಕ್ರಿಕಾಯಂತ್ರೇ ಪಟ್ಟಃ ಸ್ಯಾತ್ ಪೇಷಣಾಶ್ಮನಿ = ಘುರಟ್ಟ (ಪು)=ಬೀಸುವ ಕಲ್ಲು. ಪಟ್ಟ (ಪು)=ರುಬ್ಬುವ ಗುಂಡು; ಅರೆಯುವ ಕಲ್ಲು.

[2] ಸ್ಯೋನ (ಪು) ಎಂಬ ಶಬ್ದಾಂತರವೂ ಇದೆ.

[3] ಮಹಾನಸ.ಶಬ್ದವು ಪುಲ್ಲಿಂಗದಲ್ಲಿಯೂ ಇದೆ.

ಆರಾಲಿಕಾ ಆಂಧಸಿಕಾಸ್ಸೂದಾ ಔದನಿಕಾ ಗುಣಾಃ ।
ಆಪೂಪಿಕಃ ಕಾಂದವಿಕೋ ಭಕ್ಷ್ಯಕಾರ ಇಮೇ ತ್ರಿಷು ॥ ೯೧೪
ಅಶ್ಮಂತಮುದ್ಧಾನಮಧಿಶ್ರಯಣೀ ಚುಲ್ಲಿರಂತಿಕಾ ।
ಅಂಗಾರಧಾನಿಕಾಂಗಾರಶಕಟ್ಯಪಿ ಹಸಂತ್ಯಪಿ ॥ ೯೧೫
ಹಸನ್ಯಪ್ಯಥ ನ ಸ್ತ್ರೀ ಸ್ಯಾದಂಗಾರೋಽಲಾತಮುಲ್ಮುಕಮ್ ।
ಕ್ಲೀಬೇಂಽಬರೀಷಂ ಭ್ರಾಷ್ಟ್ರೋ ನಾ ಕಂದುರ್ವಾ ಸ್ವೇದನೀ ಸ್ತ್ರಿಯಾಂ ॥ ೯೧೬
ಅಲಿಂಜರಸ್ಸ್ಯಾನ್ಮಣಿಕಃ ಕರ್ಕರ್ಯಾಲುರ್ಗಲಂತಿಕಾ ।
ಪಿಠರಃ ಸ್ಥಾಲ್ಯುಖಾ ಕುಂಡಂ ಕಲಶಸ್ತು ತ್ರಿಷು ದ್ವಯೋಃ ॥ ೯೧೭
ಘಟಃ ಕುಟನಿಪಾವಸ್ತ್ರೀ ಶರಾವೋ ವರ್ಧಮಾನಕಃ ।
ಋಜೀಷಂ ಪಿಷ್ಟಪಚನಂ ಕಂಸೋಽಸ್ತ್ರೀ ಪಾನಭಾಜನಮ್ ॥ ೯೧೮

(ಪು) (-ಸ್ತ್ರೀ. ಪೌರೋಗವೀ)=ಅಡಿಗೆಮನೆಯ ಅಧಿಕಾರಿ. ಸೂಪಕಾರ, ವಲ್ಲವ, ಆರಾಲಿಕ, ಆಂಧಸಿಕ, ಸೂದ, ಔದನಿಕ, ಗುಣ (ಪು -ಸ್ತ್ರೀ. ಸೂಪಕಾರೀ, ಆರಾಲಿಕೀ, ಆಂಧಸಿಕೀ, ಔದನಿಕೀ)=ಅಡಿಗೆಮಾಡತಕ್ಕವನು. ಆಪೂಪಿಕ, ಕಾಂದವಿಕ, ಭಕ್ಷ (ಕ್ಷ್ಯ) ಕಾರ (ಪು.) (ಸ್ತ್ರೀ. ಆಪೂಪಿಕೀ, ಕಾಂದವಿಕೀ, ಭಕ್ಷಕಾರೀ)= ಭಕ್ಷ್ಯಗಳನ್ನು ಮಾಡತಕ್ಕವನು.

೯೧೫-೯೧೬. ಅಶ್ಮಂತ, ಉದ್ಧಾನ (ನ), ಅಧಿಶ್ರಯಣೀ, ಚುಲ್ಲಿ, ಅಂತಿಕಾ (ಸ್ತ್ರೀ)=ಒಲೆ. ಅಂಗಾರಧಾನಿಕಾ, ಅಂಗಾರಶಕಟೀ, ಹಸಂತೀ, ಹಸನೀ (ಸ್ತ್ರೀ)=ಅಗ್ಗಿಷ್ಟಿಕೆ. ಅಂಗಾರ (ಪು. ನ)=ಕೆಂಡ. ಅಲಾತ, ಉಲ್ಮುಕ (ನ)=ಕೊಳ್ಳಿ. ಅಂಬರೀಷ (ನ), ಭ್ರಾಷ್ಟ್ರ (ಪು)=ಬಾಣಲಿ. ಕಂದು (ಪು. ಸ್ತ್ರೀ), ಸ್ವೇದನೀ (ಸ್ತ್ರೀ)=ಕಡಾಯಿ, ಹಂಡೆ.

೯೧೭-೯೧೮. ಅಲಿಂಜರ, ಮಣಿಕ (ಪು)=ಗುಡಾಣ, ಬಾನಿ. ಕರ್ಕರೀ, ಆಲು, ಗಲಂತಿಕಾ (ಸ್ತ್ರೀ)=ಹೂಜಿ. ಪಿಠರ (ಪು), ಸ್ಥಾಲೀ, ಉಖಾ (ಸ್ತ್ರೀ), ಕುಂಡ (ನ)=ಅನ್ನಮಾಡುವ ಪಾತ್ರೆ, ಚರಿಗೆ ಇತ್ಯಾದಿ. ಕಲಶ (ಪು. ಸ್ತ್ರೀ. ನ) (-ಸ್ತ್ರೀ. ಕಲಶೀ), ಘಟ (ಪು. ಸ್ತ್ರೀ) (-ಸ್ತ್ರೀ. ಘಟೀ), ಕುಟ, ನಿಪ (ಪು)=ಗಡಿಗೆ ; ತಂಬಿಗೆ. ಶರಾವ (ಪು. ಸ್ತ್ರೀ) ವರ್ಧಮಾನಕ (ಪು)=ಮುಚ್ಚಳ ; ತಟ್ಟೆ (Plate). ಋಜೀಷ, ಪಿಷ್ಟಪಚನ (ನ)=ಕಾವಲಿ, ತವ. ಕಂಸ (ಪು. ನ), ಪಾನಭಾಜನ (ನ)=ಲೋಟ, ಬಟ್ಟಲು.

೯೧೯. ಕುತೂ (ಸ್ತ್ರೀ)=ಚರ್ಮದ ಎಣ್ಣೆ ಪಾತ್ರೆ. ಕುತುಪ (ಪು)=ಚರ್ಮದ ಚಿಕ್ಕಪಾತ್ರೆ. ಆವಪನ, ಭಾಂಡ, ಪಾತ್ರ, ಅಮತ್ರ, ಭಾಜನ (ನ)=ಸಾಮಾನ್ಯವಾಗಿ ಎಲ್ಲ ಬಗೆಯ ಪಾತ್ರೆ.

ಕುತೂಃ ಕೃತ್ತಿಸ್ನೇಹಪಾತ್ರೇ ಸೈವಾಲ್ಪಾ ಕುತುಪಃ ಪುಮಾನ್ ।
ಸರ್ವಮಾವಪನಂ ಭಾಂಡಂ ಪಾತ್ರಾಮತ್ರೇ ಚ ಭಾಜನಮ್ ॥ ೬೧೯
ದರ್ವೀ ಕಂಭಿಃ ಖಜಾಕಾ ಚ ಸ್ಯಾತ್ತರ್ದೂರ್ದಾರುಹಸ್ತಕಃ ।
ಅಸ್ತ್ರೀ ಶಾಕಂ ಹರಿತಕಂ ಶಿಗ್ರುರಸ್ಯ ತು ನಾಡಿಕಾ ॥ ೬೨೦
ಕಲಂಬಶ್ಚ ಕಡಂಬಶ್ಚ ವೇಶವಾರ ಉಪಸ್ಕರಃ ।
ತಿಂತಿಡೀಕಂ ಚ ಚುಕ್ರಂ ಚ ವೃಕ್ಷಾಮ್ಲಮಥ ವೇಲ್ಲಜಮ್ ॥ ೬೨೧
ಮರೀಚಂ ಕೋಲಕಂ ಕೃಷ್ಣಮೂಷಣಂ ಧರ್ಮಪತ್ತನಮ್ ।
ಜೀರಕೋ ಜರಣೋಽಜಾಜೀ ಕಣಾ ಕೃಷ್ಣೇ ತು ಜೀರಕೇ ॥ ೬೨೨
ಸುಷವೀ ಕಾರವೀ ಪೃಥ್ವೀ ಪೃಥುಃ ಕಾಲೋಪಕುಂಚಿಕಾ ।
ಆರ್ದ್ರಕಂ ಶೃಂಗವೇರಂ ಸ್ಯಾದಥ ಛತ್ರಾ ವಿತುನ್ನಕಂ ॥ ೬೨೩

೬೨೦-೬೨೧. ದರ್ವೀ, ಕಂಬಿ ಖಜಾಕಾ (ಸ್ತ್ರೀ)=ಸೌಟು. ತರ್ದೂ,[1] (ತಂಡೂ), ದಾರುಹಸ್ತಕ (ಪು)=ಮರದ ಸೌಟು, ಮರದ ಹಿಡಿಯಿರುವ ಸಟ್ಟುಗ. ಶಾಕ (ಪು.ನ), ಹರಿತಕ (ನ), ಶಿಗ್ರು (ಪು)=ಸೊಪ್ಪು ; ತರಕಾರಿ, ಕಾಯಿಪಲ್ಯ. ನಾಡಿಕಾ (ಸ್ತ್ರೀ), ಕಲಂಬ, ಕಡಂಬ (ಪು)=ಸೊಪ್ಪಿನ ದಂಟು. ವೇಶವಾರ (ವೇಸವಾರ), ಉಪಸ್ಕರ (ಪು)=ಸಂಬಾರದ ಪುಡಿ ; ಒಗ್ಗರಣೆ,

೬೨೧-೬೨೨. ತಿಂತಿ[2] ಡೀಕ, ಚುಕ್ರ, ವೃಕ್ಷಾಮ್ಲ (ನ)=ಹುಣಿಸೆ ಹಣ್ಣು. ವೇಲ್ಲಜ, ಮರೀಚ, (ಮರಿಚ), ಕೋಲಕ, ಕೃಷ್ಣ, ಊಷಣ, ಧರ್ಮಪತ್ತನ (ನ)=ಮೆಣಸು.

೬೨೨-೬೨೩. ಜೀರಕ, ಜರಣ (ಪು), ಅಜಾಜೀ, ಕಣಾ (ಸ್ತ್ರೀ)=ಜೀರಿಗೆ. ಸುಷವೀ, ಕಾರವೀ, ಪೃಥ್ವೀ, ಪೃಥು, ಕಾಲಾ, ಉಪಕುಂಚಿಕಾ (ಸ್ತ್ರೀ)=ಕರಿಜೀರಿಗೆ.

೬೨೩-೬೨೪. ಆರ್ದ್ರಕ, ಶೃಂಗವೇರ (ನ)=ಹಸಿಶುಂಠಿ. ಛತ್ರಾ (ಸ್ತ್ರೀ), ವಿತುನ್ನಕ, ಕುಸ್ತುಂಬುರು, ಧಾನ್ಯಾಕ[3] (ನ)=ಕೊತ್ತುಂಬರಿ, ಧನಿಯ. ಶುಂಠೀ (ಸ್ತ್ರೀ), ಮಹೌಷಧ (ನ), ವಿಶ್ವ (ಸ್ತ್ರೀ. ನ), ನಾಗರ, ವಿಶ್ವಭೇಷಜ (ನ)=ಒಣಶುಂಠಿ.

---

[1] ತರ್ದೂ ಶಬ್ದವು ಸ್ತ್ರೀಲಿಂಗವೆಂದು ಕೆಲವರು.
[2] ತಿಂತ್ರಿಣೀ, ತಿಂತಿಣೀ (ಸ್ತ್ರೀ) ಎಂಬ ರೂಪಗಳೂ ಉಂಟು.
[3] ಧನ್ಯಾಕವೆಂದೂ ಇದೆ.

ಕುಸ್ತುಂಬುರು ಚ ಧಾನ್ಯಾಕಮಥ ಶುಂಠೀ ಮಹೌಷಧಮ್ ।
ಸ್ತ್ರೀನಪುಂಸಕಯೋರ್ವಿಶ್ವಂ ನಾಗರಂ ವಿಶ್ವಭೇಷಜಮ್ ॥ ೯೨೪
ಆರನಾಲಕಸೌವೀರಕುಲ್ಮಾಷಾಭಿಷುತಾನಿ ಚ ।
ಅವಂತಿಸೋಮಧಾನ್ಯಾಮ್ಲಕುಂಜಲಾನಿ ಚ ಕಾಂಜಿಕೇ ॥ ೯೨೫
ಸಹಸ್ರವೇಧಿ ಜತುಕಂ ಬಾಹ್ಲೀಕಂ ಹಿಂಗು ರಾಮಠಮ್ ।
ತತ್ಪತ್ರೀ ಕಾರವೀ ಪೃಥ್ವೀ ಬಾಷ್ಪಿಕಾ ಕಬರೀ ಪೃಥುಃ ॥ ೯೨೬
ನಿಶಾಖ್ಯಾ ಕಾಂಚನೀ ಪೀತಾ ಹರಿದ್ರಾ ವರವರ್ಣಿನೀ ।
ಸಾಮುದ್ರಂ ಯತ್ತು ಲವಣಮಕ್ಷೀವಂ ವಶಿರಂ ಚ ತತ್ ॥ ೯೨೭
ಸೈಂಧವೋಽಸ್ತ್ರೀ ಶೀತಶಿವಂ ಮಾಣಿಮಂಥಂ ಚ ಸಿಂಧುಜೇ ।
ರೌಮಕಂ ವಸುಕಂ ಪಾಕ್ಯಂ ಬಿಡಂ ಚ ಕೃತಕೇ ದ್ವಯಮ್ ॥ ೯೨೮
ಸೌವರ್ಚಲೇಽಕ್ಷರುಚಕೇ ತಿಲಕಂ ತತ್ರ ಮೇಚಕೇ ।
ಮತ್ಸ್ಯಂಡೀ ಫಾಣಿತಂ ಖಂಡವಿಕಾರೇ ಶರ್ಕರಾ ಸಿತಾ ॥ ೯೨೯

---

೯೨೫. ಆರನಾಲಕ, ಸೌವೀರ, ಕುಲ್ಮಾಷ, ಅಭಿಷುತ, ಅವಂತಿಸೋಮ, ಧಾನ್ಯಾಮ್ಲ, ಕುಂಜಲ, ಕಾಂಜಿಕ (ನ)=ಅನ್ನದ ಹುಳಿಗಂಜಿ (ಒಂದು ಬಗೆಯ ಮದ್ಯವಿರಬಹುದು.)

೯೨೬. ಸಹಸ್ರವೇಧಿನ್, ಜತುಕ, ಬಾಹ್ಲೀಕ, ಹಿಂಗು, ರಾಮಠ (ನ)=ಹಿಂಗು. ತತ್ಪತ್ರೀ (ತ್ವಕ್ಪತ್ರೀ), ಕಾರವೀ, ಪೃಥ್ವೀ, ಬಾಷ್ಪಿಕಾ, ಕಬರೀ, ಪೃಥು (ಸ್ತ್ರೀ)=ಹಿಂಗಿನ ಮರ.

೯೨೭. ನಿಶಾಖ್ಯಾ, ಕಾಂಚನೀ, ಪೀತಾ, ಹರಿದ್ರಾ, ವರವರ್ಣಿನೀ (ಸ್ತ್ರೀ)=ಅರಿಶಿಣ. ಅಕ್ಷೀವ, ವಶಿರ (ವಸಿರ) (ನ)=ಸಮುದ್ರದಲ್ಲಿ ಹುಟ್ಟಿದ ಉಪ್ಪು.ಲವಣ (ನ)=ಉಪ್ಪು.

೯೨೮. ಸೈಂಧವ (ಪು. ನ), ಶೀತಶಿವ, ಮಾಣಿಮಂಥ (ಮಾಣಿಬಂಧ.), ಸಿಂಧುಜ (ನ)=ಸೈಂಧವ ಲವಣ. ರೌಮಕ, ವಸುಕ (ವಸ್ತುಕ) (ನ)=ಚೌಳುಪ್ಪು. ಪಾಕ್ಯ, ಬಿಡ (ನ)=ಅಡಿಗೆಗೋಸ್ಕರ ಸ್ವಚ್ಛಪಡಿಸಿದ ಉಪ್ಪು (Table=salt).

೯೨೯. ಸೌವರ್ಚಲ, ಅಕ್ಷ, ರುಚಕ (ನ)=ಸೌವರ್ಚಲವಣ, ಅಡಿಗೆ ಸೋಡ. ತಿಲಕ (ನ)=ಕಪ್ಪಾದ ಸೌವರ್ಚಲವಣ. ಮತ್ಸ್ಯಂಡೀ (ಸ್ತ್ರೀ)=ಕಲ್ಲುಸಕ್ಕರೆ. ಫಾಣಿತ (ನ)=ಕಾಕಂಬಿ, ಜೋನಿಬೆಲ್ಲ. ಶರ್ಕರಾ, ಸಿತಾ (ಸ್ತ್ರೀ)=ಸಕ್ಕರೆ.

೯೩೦. ಕೂರ್ಚಿಕಾ (ಸ್ತ್ರೀ)=ಹಾಲಿನಗಿಣ್ಣು. ರಸಾಲಾ, ಮಾರ್ಜಿತಾ (ಸ್ತ್ರೀ)=ಮೊಸರಿಗೆ ಜೇನು, ಸಕ್ಕರೆ, ಶುಂಠಿ, ಮೆಣಸು, ಪಚ್ಚಕರ್ಪೂರಗಳನ್ನು ಸೇರಿಸಿ ಮಾಡಿದ ಮಿಶ್ರಣ. ತೇಮನ,

ಕೂರ್ಚಿಕಾ ಕ್ಷೀರವಿಕೃತಿಸ್ಸ್ಯಾದ್ರಸಾಲಾ ತು ಮಾರ್ಜಿತಾ ।
ಸ್ಯಾತ್ತೇಮನಂ ತು ನಿಷ್ಠಾನಂ ತ್ರಿಲಿಂಗಾ ವಾಸಿತಾವಧೇಃ ॥ ೬೩೦
ಶೂಲಾಕೃತಂ ಭಟಿತ್ರಂ ಚ ಶೂಲ್ಯಮುಖ್ಯಂ ತು ಪೈಠರಮ್ ।
ಪ್ರಣೀತಮುಪಸಂಪನ್ನಂ ಪ್ರಯಸ್ತಂ ಸ್ಯಾತ್ಸುಸಂಸ್ಕೃತಮ್ ॥ ೬೩೧
ಸ್ಯಾತ್ಪಿಚ್ಛಿಲಂ ತು ವಿಜಿಲಂ ಸಂಮೃಷ್ಟಂ ಶೋಧಿತಂ ಸಮೇ ।
ಚಿಕ್ಕಣಂ ಮಸೃಣಂ ಸ್ನಿಗ್ಧಂ ತುಲ್ಯೇ ಭಾವಿತವಾಸಿತೇ ॥ ೬೩೨
ಆಪಕ್ವಂ ಪೌಲಿರಭ್ಯೂಷೋ ಲಾಜಾಃ ಪುಂಭೂಮ್ನಿ ಚಾಕ್ಷತಾಃ ।
ಪೃಥುಕಃ ಸ್ಯಾಚ್ಚಿಪಿಟಕೋ ಧಾನಾ ಭೃಷ್ಟಯವೇ ಸ್ತ್ರಿಯಃ ॥ ೬೩೩
ಪೂಪೋಽಪೂಪಃ ಪಿಷ್ಟಕಃ ಸ್ಯಾತ್ ಕರಂಭೋ ದಧಿಸಕ್ತವಃ ।
ಭಿಸ್ಸಾ ಸ್ತ್ರೀ ಭಕ್ತಮಂಧೋಽನ್ನ ಮೋದನೋಽಸ್ತ್ರೀ ಸ ದೀದಿವಿಃ ॥ ೬೩೪

ನಿಷ್ಠಾನ (ನ)=ಮಜ್ಜಿಗೆ ಹುಳಿ ; ಪಳಿದ್ಯ. ೬೩೨ನೆಯ ಶ್ಲೋಕದ ವಾಸಿತ ಶಬ್ದದವರೆಗೆ ಇರುವ ಮುಂದಿನ ಶಬ್ದಗಳು ವಿಶೇಷ್ಯನಿಘ್ನಗಳಾಗಿ ತ್ರಿಲಿಂಗಗಳಾಗುತ್ತವೆ.

೬೩೧-೬೩೨. ಶೂಲಾಕೃತ, ಭಟಿತ್ರ, ಶೂಲ್ಯ (ನ)=ಸಲಾಕಿಗೆ ಚುಚ್ಚಿಬೇಯಿಸಿದ್ದು. ಉಖ್ಯ, ಪೈಠರ(ನ)=ಮಡಿಕೆ ಮುಂತಾದ ಪಾತ್ರೆಯಲ್ಲಿ ಬೇಯಿಸಿದ್ದು. ಪ್ರಣೀತ, ಉಪಸಂಪನ್ನ (ನ)=ಚೆನ್ನಾಗಿ ಪಕ್ವಮಾಡಿದ್ದು. ಪ್ರಯಸ್ತ, ಸುಸಂಸ್ಕೃತ (ನ)=ಸಂಬಾರ ಉಪ್ಪು ಮುಂತಾದ್ದನ್ನು ಸೇರಿಸಿ ರುಚಿಕರವಾಗಿ ಮಾಡಿದ್ದು. ಪಿಚ್ಛಿಲ, ವಿಜಿಲ (ನ)=ಜಿಡ್ಡಿನಿಂದ ಕೂಡಿ ನುಣ್ಣಗಿರುವ ಹಲ್ವ ಮುಂತಾದ್ದು. ಸಂಮೃಷ್ಟ, ಶೋಧಿತ (ನ)=ಶೋಧಿಸಲ್ಪಟ್ಟದ್ದು. ಚಿಕ್ಕಣ, ಮಸೃಣ, ಸ್ನಿಗ್ಧ (ನ)=ಜಿಡ್ಡಿನಿಂದ ಮಾಡಿದ್ದು ; ನುಣುಪಾದ್ದು. ಭಾವಿತ, ವಾಸಿತ (ನ)=ಹಿಂಗು ಮುಂತಾದುದರ ವಾಸನೆ ಬರುವಂತೆ ಮಾಡಿದ್ದು :

೬೩೩. ಆಪಕ್ವ (ನ), ಪೌಲಿ, ಅಭ್ಯೂಷ (ಪು)=ಹುರಿಗಾಳು ; ಉಸಳಿ. ಲಾಜ, ಅಕ್ಷತ (ಪು. ನಿತ್ಯ ಬಹುವಚನ)=ಅರಳು, (ಅಖಂಡವಾದ ಅಕ್ಕಿ ಎಂದು ಕೆಲವರು) ಪೃಥುಕ, ಚಿಪಿಟಕ (ಪು)=ಅವಲಕ್ಕಿ. ಧಾನಾ (ಸ್ತ್ರೀ. ನಿತ್ಯಬಹುವಚನ)=ಹುರಿದ ಯವಧಾನ್ಯ ; ಪುರಿ.

೬೩೪. ಪೂಪ, ಅಪೂಪ, ಪಿಷ್ಟಕ (ಪು)=ಹಿಟ್ಟಿನಿಂದ ಮಾಡಿದ ದೋಸೆ, ಹೋಳಿಗೆ, ಶಾವಿಗೆ ಮೊದಲಾದ ಭಕ್ಷ್ಯ. ಕರಂಭ (ಪು)=ಮೊಸರನ್ನೂ ಹಿಟ್ಟನ್ನೂ ಕಲಸಿ ಮಾಡಿದ ಹುರಿಹಿಟ್ಟು. ಭಿಸ್ಸಾ(ಸ್ತ್ರೀ) ,ಭಕ್ತ, ಅಂಧಸ್, ಅನ್ನ(ನ), ಓದನ(ಪು. ನ) ದೀದಿವಿ(ಪು)=ಅನ್ನ.

೬೩೫. ಭಿಸ್ಸಟಾ, ದಗ್ಧಿಕಾ (ಸ್ತ್ರೀ)=ಸೀದ ಅನ್ನ, ಚರುಕಲು. ಮಂಡ (ಪು. ನ)=ಕೆನೆ. ಮಾಸರ, ಆಚಾಮ, ನಿಸ್ರಾವ (ಪು)=ಅನ್ನವನ್ನು ಬಸಿದು ತೆಗೆದ ಗಂಜಿ, ತಿಳಿ.

ಭಿಸ್ಸಟಾ ದಗ್ಧಿಕಾ ಸರ್ವರಸಾಗ್ರೇ ಮಂಡಮಸ್ತ್ರಿಯಾಮ್ ।
ಮಾಸರಾಚಾಮನಿಸ್ರಾವಾ ಮಂಡೇ ಭಕ್ತಸಮುದ್ಭವೇ ॥ ೯೩೫
ಯವಾಗೂರುಷ್ಣಿಕಾ ಶ್ರಾಣಾ ವಿಲೇಪೀ ತರಲಾ ಚ ಸಾ ।
ಗವ್ಯಂ ತ್ರಿಷು ಗವಾಂ ಸರ್ವಂ ಗೋವಿಟ್‌ಗೋಮಯಮಸ್ತ್ರಿಯಾಮ್ ॥ ೯೩೬
ತತ್ತು ಶುಷ್ಕಂ ಕರೀಷೋಽಸ್ತ್ರೀ ದುಗ್ಧಂ ಕ್ಷೀರಂ ಪಯಸ್ಸಮಮ್ ।
ಪಯಸ್ಯಮಾಜ್ಯದಧ್ಯಾದಿ ದ್ರಪ್ಸಂ ದಧಿ ಘನೇತರತ್ ॥ ೯೩೭
ಘೃತಮಾಜ್ಯಂ ಹವಿಸ್ಸರ್ಪಿರ್ನವನೀತಂ ನವೋದ್ಧೃತಮ್ ।
ತತ್ತು ಹೈಯಂಗವೀನಂ ಯತ್ ಹ್ಯೋಗೋದೋಹೋದ್ಭವಂ ಘೃತಂ ॥ ೯೩೮
ದಂಡಾಹತಂ ಕಾಲಶೇಯಮರಿಷ್ಟಮಪಿ ಗೋರಸಃ ।
ತಕ್ರಂ ಹ್ಯುದಶ್ವಿನ್ಮಥಿತಂ ಪಾದಾಂಬ್ವರ್ಧಾಂಬು ನಿರ್ಜಲಮ್ ॥ ೯೩೯

---

೯೩೬. ಯವಾಗೂ, ಉಷ್ಣಿಕಾ, ಶ್ರಾಣಾ, ವಿಲೇಪೀ, ತರಲಾ (ಸ್ತ್ರೀ)=ಗಂಜಿ, ಅಂಬಲಿ. ಗವ್ಯ (ಪು. ಸ್ತ್ರೀ. ನ)=ಗೋವಿಗೆ ಸಂಬಂಧಿಸಿದ ವಸ್ತು- ಹಾಲು ಮುಂತಾದ್ದು. ಗೋವಿಷ್ (ಸ್ತ್ರೀ), ಗೋಮಯ (ಪು. ನ)=ಹಸುವಿನ ಸಗಣಿ.

೯೩೭. ಕರೀಷ (ಪು.ನ)=ಬೆರಣಿ. ದುಗ್ಧ, ಕ್ಷೀರ, ಪಯಸ್ (ನ)=ಹಾಲು. ಪಯಸ್ಯ (ನ)=ಹಾಲಿನಿಂದಾಗುವ ತುಪ್ಪ, ಮೊಸರು ಮುಂತಾದ್ದು. ದ್ರಪ್ಸ(ನ)=ಗಟ್ಟಿಯಲ್ಲದ ಮೊಸರು.

೯೩೮. ಘೃತ, ಆಜ್ಯ, ಹವಿಸ್, ಸರ್ಪಿಸ್ (ನ)=ತುಪ್ಪ. ನವನೀತ (ನ)=ಬೆಣ್ಣೆ. ಹೈಯಂಗವೀನ (ನ)=ನಿನ್ನೆ ಕರೆದ ಹಸುವಿನಿಂದಾದ ತುಪ್ಪ.[1]

೯೩೯. ದಂಡಾಹತ, ಕಾಲಶೇಯ, ಅರಿಷ್ಟ (ನ), ಗೋರಸ (ಪು)=ಕಡೆದ ಮೊಸರು, ಮಜ್ಜಿಗೆ. ತಕ್ರ (ನ)=ಕಾಲುಭಾಗ ನೀರು ಸೇರಿಸಿದ ಮಜ್ಜಿಗೆ. ಉದಶ್ವಿತ್ (ನ)=ಅರ್ಧಭಾಗ ನೀರು ಸೇರಿಸಿದ ಮಜ್ಜಿಗೆ. ಮಥಿತ (ನ)=ನೀರನ್ನು ಸೇರಿಸದೆ ಕಡೆದ ಮಜ್ಜಿಗೆ.

೯೪೦. ಮಸ್ತು (ನ)=ಮೊಸರಿನ ಕೆನೆ ; ಮೊಸರಿನಿಂದ ಸ್ರವಿಸಿದ ನೀರು. ಪೀಯೂಷ[1] (ಪು)=ಆಗತಾನೆ ಕರದೆ ಹಾಲು. ಅಶನಾಯಾ, ಬುಭುಕ್ಷಾ, ಕ್ಷುಧ್ (ಸ್ತ್ರೀ)=ಹಸಿವು. ಗ್ರಾಸ, ಕವಲ (ಪು)=ತುತ್ತು.

---

[1] ಬೆಣ್ಣೆ ಎಂದು ಕೆಲವರು.

ಮಂಡಂ ದಧಿಭವಂ ಮಸ್ತು ಪೀಯೂಷೋಽಭಿನವಂ ಪಯಃ ।
ಅಶನಾಯಾ ಬುಭುಕ್ಷಾ ಕ್ಷುದ್ಗ್ರಾಸಸ್ತು ಕವಲಃ ಪುಮಾನ್ ॥ ೯೪೦
ಸಪೀತಿಃ ಸ್ತ್ರೀ ತುಲ್ಯಪಾನಂ ಸಗ್ಧಿಃ ಸ್ತ್ರೀ ಸಹಭೋಜನಮ್ ।
ಉದನ್ಯಾ ತು ಪಿಪಾಸಾ ತೃಟ್ತರ್ಷೋ ಜಗ್ಧಿಸ್ತು ಭೋಜನಮ್ ॥ ೯೪೧
ಜೇಮನಂ ಲೇಹ ಆಹಾರೋ ನಿಘಸೋ ನ್ಯಾದ ಇತ್ಯಪಿ ।
ಸೌಹಿತ್ಯಂ ತರ್ಪಣಂ ತೃಪ್ತಿಃ ಫೇಲಾ ಭುಕ್ತಸಮುಜ್ಝಿತಮ್ ॥ ೯೪೨
ಕಾಮಂ ಪ್ರಕಾಮಂ ಪರ್ಯಾಪ್ತಂ ನಿಕಾಮೇಷ್ಟಂ ಯಥೇಪ್ಸಿತಮ್ ।
ಗೋಪೇ ಗೋಪಾಲಗೋಸಂಖ್ಯಗೋಧುಗಾಭೀರವಲ್ಲವಾಃ ॥ ೯೪೩
ಹೋಮಹಿಷ್ಯಾದಿಕಂ ಪಾದಬಂಧನಂ ದ್ವೌ ಗವೀಶ್ವರೇ ।
ಗೋಮಾನ್ ಗೋಮೀ ಗೋಕುಲಂ ತು ಗೋಧನಂ ಸ್ಯಾದ್ಗವಾಂ ವ್ರಜೇ ॥ ೯೪೪

೯೪೧-೯೪೨. ಸಪೀತಿ (ಸ್ತ್ರೀ), ತುಲ್ಯಪಾನ (ನ)=ಜನರ ಜೊತೆಯಲ್ಲಿ ಪಾನಮಾಡುವುದು. ಸಗ್ಧಿ (ಸ್ತ್ರೀ), ಸಹಭೋಜನ (ನ)=ಜನರ ಜೊತೆಯಲ್ಲಿ ಊಟಮಾಡುವುದು. ಉದನ್ಯಾ, ಪಿಪಾಸಾ, ತೃಷ್[2] (ಸ್ತ್ರೀ), ತರ್ಷ (ಪು)=ಬಾಯಾರಿಕೆ. ಜಗ್ಧಿ (ಸ್ತ್ರೀ), ಭೋಜನ, ಜೇಮನ (ನ), ಲೇಹ, ಆಹಾರ, ನಿಘಸ, ನ್ಯಾದ (ಪು)=ಊಟ, ತಿನ್ನುವುದು.

೯೪೨-೯೪೩. ಸೌಹಿತ್ಯ, ತರ್ಪಣ (ನ), ತೃಪ್ತಿ (ಸ್ತ್ರೀ)=ತೃಪ್ತಿ. ಫೇಲಾ (ಸ್ತ್ರೀ)=ಎಂಜಲು, ತಿಂದುಬಿಟ್ಟದ್ದು. ಕಾಮ, ಪ್ರಕಾಮ, ಪರ್ಯಾಪ್ತ, ನಿಕಾಮ, ಇಷ್ಟ (ನ. ಕ್ರಿಯಾವಿಶೇಷಣ), ಯಥೇಪ್ಸಿತ (ನ. ಅವ್ಯಯೀಭಾವ)=ಯಥೇಷ್ಟವಾಗಿ, ಸ್ವೇಚ್ಛೆಯಾಗಿ. ಗೋಪ, ಗೋಪಾಲ, ಗೋಸಂಖ್ಯ ಗೋದುಹ್, ಆಭೀರ, ವಲ್ಲವ (ಪು)=ದನ ಕಾಯುವವನು, ಗೊಲ್ಲ.

೯೪೪. ಪಾದಬಂಧನ (ನ)=ಹಸು ಎಮ್ಮೆ ಮುಂತಾದ ಕಾಲ್ನಡೆ. 'ಯಾದವಂ ಧನಂ' ಎಂದು ಪಾಠಾಂತರ ಉಂಟು. ಆ ಪಕ್ಷದಲ್ಲಿ, ಯಾದವಧನ (ನ)=ಹಸು ಎಮ್ಮೆ ಮುಂತಾದ ಕಾಲ್ನಡೆ. ಗವೀಶ್ವರ, ಗೋಮತ್, ಗೋಮಿನ್ (ಪು)=ದನಗಳ ಒಡೆಯ. ಗೋಕುಲ, ಗೋಧನ (ನ)=ಹಸುಗಳ ಮಂದೆ.

---

[1] ಇದು ನಪುಂಸಕಲಿಂಗದಲ್ಲಿಯೂ ಇದೆ. ಪೇಯೂಷ ಎಂಬ ರೂಪಾಂತರವೂ ಇದೆ.
[2] ತೃಷಾ (ಸ್ತ್ರೀ) ಎಂಬ ರೂಪಾಂತರವೂ ಇದೆ.

ತ್ರಿಷ್ವಾಶಿತಂಗವೀನಂ ತದ್ಗಾವೋ ಯತ್ರಾಶಿತಾಃ ಪುರಾ ।
ಉಕ್ಷಾ ಭದ್ರೋ ಬಲೀವರ್ದ ಋಷಭೋ ವೃಷಭೋ ವೃಷಃ ॥ ೯೪೫
ಅನಡ್ವಾನ್ ಸೌರಭೇಯೋ ಗೌರುಕ್ಷ್ಣಾಂ ಸಂಹತಿರೌಕ್ಷಕಮ್ ।
ಗವ್ಯಾ ಗೋತ್ರಾ ಗವಾಂ ವತ್ಸಧೇನ್ವೋರ್ವಾತ್ಸಕಧೈನುಕೇ ॥ ೯೪೬
ಉಕ್ಷಾ ಮಹಾನ್ ಮಹೋಕ್ಷಸ್ಸ್ಯಾತ್ ವೃದ್ಧೋಕ್ಷಸ್ತು ಜರದ್ಗವಃ ।
ಉತ್ಪನ್ನ ಉಕ್ಷಾ ಜಾತೋಕ್ಷಸ್ಸದ್ಯೋಜಾತಸ್ತು ತರ್ಣಕಃ ॥ ೯೪೭
ಶಕೃತ್ಕರಿಸ್ತು ವತ್ಸಃ ಸ್ಯಾದ್ದಮ್ಯವತ್ಸತರೌ ಸಮೌ ।
ಆರ್ಷಭ್ಯ ಷ್ಷಂಡತಾಯೋಗ್ಯಷ್ಷಂಡೋ ಗೋಪತಿರಿಟ್ಚರಃ ॥ ೯೪೮
ಕೂಚರಃ ಶೃಂಗಹೀನೋಽಸೌ ಕಕುದೋಽಸ್ತ್ರಿ ಕಕುಚ್ಚ ಸಾ ।
ಸ್ಕಂಧಪ್ರದೇಶೋಽಸ್ಯವಹಸ್ಸಾಸ್ನಾ ತು ಗಲಕಂಬಲಃ ॥ ೯೪೯

೯೪೫- ೯೪೬. ಆಶಿತಂಗವೀನ (ನ)=ಹಸುಗಳನ್ನು ಮೇಯಿಸಿದ ಸ್ಥಳ. ಉಕ್ಷನ್, ಭದ್ರ, ಬಲೀವರ್ದ, ಋಷಭ, ವೃಷಭ, ವೃಷ, ಅನಡುಹ್, ಸೌರಭೇಯ, ಗೋ (ಪು)=ಎತ್ತು. ಔಕ್ಷಕ (ನ)=ಎತ್ತುಗಳ ಗುಂಪು. ಗವ್ಯಾ, ಗೋತ್ರಾ (ಸ್ತ್ರೀ)=ಗೋವುಗಳ ಸಮೂಹ (ಗೋ ಎಂದರೆ ಎತ್ತು ಅಥವಾ ಹಸು). ವಾತ್ಸಕ (ನ)=ಕರುಗಳ ಹಿಂಡು. ಧೈನುಕ (ನ)=ಧೇನುಗಳ ಹಿಂಡು (ಧೇನು=ಹಸು, ಹೊಸದಾಗಿ ಈದ ಹಸು).

೯೪೭. ಮಹೋಕ್ಷ (ಪು)=ದೊಡ್ಡ ಎತ್ತು. ವೃದ್ಧೋಕ್ಷ, ಜರದ್ಗವ (ಪು)=ಮುದಿ ಎತ್ತು. ಜಾತೋಕ್ಷ (ಪು)=ಹೊರೆಯನ್ನೆಳೆಯಲು ತಕ್ಕ ವಯಸ್ಸನ್ನು ಪಡೆದ ಹೋರಿ, ಬಾಯಿಗೂಡಿದ ಹೋರಿ. ತರ್ಣಕ (ಪು)=ಆಗತಾನೆ ಹುಟ್ಟಿದ ಕರು.

೯೪೮. ಶಕೃತ್ಕರಿ, ವತ್ಸ (ಪು)=ಕರು. ದಮ್ಯ, ವತ್ಸತರ (ಪು)=ತಿದ್ದುವುದಕ್ಕೆ ಅರ್ಹವಾದ ವಯಸ್ಸಿನ ಹೋರಿ. ಆರ್ಷಭ್ಯ (ಪು)=ವಯಸ್ಸಿಗೆ ಬಂದ ಹೋರಿ. ಷಂಡ, ಗೋಪತಿ, ಇಟ್ಚರ (ಪು)=ಗೂಳಿ, ಬಸವ.

೯೪೯. ಕೂಚರ (ಪು)=ಕೊಂಬಿಲ್ಲದ ಎತ್ತು. ಕಕುದ (ಪು.ನ),ಕಕುದ್ (ಸ್ತ್ರೀ)=ಎತ್ತಿನ ಹಿಣಿಲು (Hump). ವಹ (ಪು)=ಎತ್ತಿನ ಹೆಗಲು. ಸಾಸ್ನಾ (ಸ್ತ್ರೀ), ಗಲಕಂಬಲ (ಪು)=ಗಂಗೆ ದೊಗಲು.

ಸ್ಯಾನ್ನಸ್ತಿತಸ್ತು ನಸ್ಯೋತಃ ಪ್ರಷ್ಠವಾಡ್ಯುಗಪಾರ್ಶ್ವಗಃ ।
ಯುಗಾದೀನಾಂ ತು ವೋಢಾರೋ ಯುಗ್ಯಪ್ರಾಸಂಗ್ಯಶಾಕಟಾಃ ॥ ೯೫೦
ಖನತಿ ತೇನ ತದ್ವೋಢಾಽಸ್ಯೇದಂ ಹಾಲಿಕಸೈರಿಕೌ ।
ಧೂರ್ವಹೇ ಧುರ್ಯಧೌರೇಯಧುರೀಣಾಸ್ಸಧುರಂಧರಾಃ ॥ ೯೫೧
ಉಭಾವೇಕಧುರೀಣೈಕಧುರಾವೇಕಧುರಾವಹೇ ।
ಸ ತು ಸರ್ವಧುರೀಣೋ ಯೋ ಭವೇತ್ಸರ್ವಧುರಾವಹಃ ॥ ೯೫೨
ಮಾಹೇಯೀ ಸೌರಭೇಯೀ ಗೌರುಸ್ರಾ ಮಾತಾ ಚ ಶೃಂಗಿಣೀ ।
ಅರ್ಜುನ್ಯಘ್ನ್ಯಾರೋಹಿಣೀ ಸ್ಯಾದುತ್ತಮಾ ಗೋಷು ನೈಚಕೀ ॥ ೯೫೩
ವರ್ಣಾದಿಭೇದಾತ್ಸಂಜ್ಞಾಸ್ಸ್ಯುಃ ಶಬಲೀ ಧವಲಾದಯಃ ।
ದ್ವಿಹಾಯನೀ ದ್ವಿವರ್ಷಾ ಗೌರೇಕಾಬ್ದಾ ತ್ವೇಕಹಾಯನೀ ॥ ೯೫೪

---

೯೫೦. ನಸ್ತಿತ, ನಸ್ಯೋತ (ಪು)=ಮೂಗುದಾಣ ಹಾಕಿದ ಎತ್ತು. ಪ್ರಷ್ಠವಾಹ್, ಯುಗಪಾರ್ಶ್ವಗ (ಪು)=ತಿದ್ದಲ್ಪಡುತ್ತಿರುವ ಎತ್ತು. ಯುಗ್ಯ (ಪು)=ನೊಗವನ್ನೆಳೆಯುವ ಎತ್ತು,—ಕುದುರೆ. ಪ್ರಾಸಂಗ್ಯ (ಪು)=ಪಳಗಿಸುವುದಕ್ಕಾಗಿ ಕಟ್ಟಿದ ನೊಗವನ್ನೆಳೆಯುವ ಹೋರಿ. ಶಾಕಟ (ಪು)=ಗಾಡಿಯೆನ್ನೆಳೆಯುವ ಎತ್ತು, ಕುದುರೆ.

೯೫೧. ಹಾಲಿಕ, ಸೈರಿಕ (ಪು)=ನೇಗಿಲಿನಿಂದ ಹೂಡುವವನು ; ನೇಗಿಲನ್ನು ಹೊರುವವನು, —ಎಳೆಯುವವನು; ನೇಗಿಲಿಗೆ ಸಂಬಂಧಿಸಿದವನು. ಧೂರ್ವಹ, ಧುರ್ಯ, ಧೌರೇಯ, ಧುರೀಣ, ಧುರಂಧರ (ಪು)=ಭಾರವನ್ನೆಳೆಯುವ ಎತ್ತು ಮೊದಲಾದ್ದು.

೯೫೨. ಏಕಧುರೀಣ, ಏಕಧುರ, ಏಕಧುರಾವಹ (ಪು)=ಬಂಡಿ ಎಳೆಯುವುದು, ನೇಗಿಲಿನಿಂದ ಹೂಡುವುದು, ಗೋಣಿಯನ್ನು ಹೊರುವುದು—ಮುಂತಾದ ಯಾವುದಾದರೊಂದು ಕಾರ್ಯದಲ್ಲಿ ಪರಿಣತವಾದ ಎತ್ತು. ಸರ್ವಧುರೀಣ, ಸರ್ವಧುರಾವಹ (ಪು)=ಎಲ್ಲಾ ಬಗೆಯ ಭಾರವನ್ನೆಳೆಯುವುದರಲ್ಲಿಯೂ ಪರಿಣತವಾದ ಎತ್ತು (ಧೂರ್ವಹ, ಏಕಧುರೀಣ ಮುಂತಾದ ಶಬ್ದಗಳನ್ನು ಕುದುರೆ ಮೊದಲಾದ ಪ್ರಾಣಿಗಳಿಗೂ ಮನುಷ್ಯನಿಗೂ ಯಥಾಯೋಗ್ಯವಾಗಿ ಅನ್ವಯಿಸಿಕೊಳ್ಳಬಹುದು.)

೯೫೩. ಮಾಹೇಯೀ, ಸೌರಭೇಯೀ, ಗೋ, ಉಸ್ರಾ, ಮಾತೃ, ಶೃಂಗಿಣೀ, ಅರ್ಜುನೀ, ಅಘ್ನ್ಯಾ, ರೋಹಿಣೀ (ಸ್ತ್ರೀ)=ಹಸು, ಆಕಳು. ನೈಚಿಕೀ (ಸ್ತ್ರೀ)=ಉತ್ತಮವಾದ ಹಸು.

೯೫೪. ಬಣ್ಣ ಮುಂತಾದವುಗಳ ಭೇದದಿಂದ ಶಬಲೀ, ಧವಲಾ, ಕೃಷ್ಣಾ, ಪಿಂಗಾಕ್ಷೀ,

ಚತುರಬ್ದಾ ಚತುರ್ಹಾಯಣ್ಯೇವಂ ತ್ರ್ಯಬ್ದಾ ತ್ರಿಹಾಯಣೀ ।
ವಶಾ ವಂಧ್ಯಾವತೋಕಾ ತು ಸ್ರವದ್ಗರ್ಭಾಥ ಸಂಧಿನೀ ॥ ೯೫೫
ಆಕ್ರಾಂತಾ ವೃಷಭೇಣಾಥ ವೇಹದ್ಗರ್ಭೋಪಘಾತಿನೀ ।
ಕಾಲೋಪಸರ್ಯಾ ಪ್ರಜನೇ ಪ್ರಷ್ಠೌಹೀ ಬಾಲಗರ್ಭಿಣೀ ॥ ೯೫೬
ಸ್ಯಾದಚಂಡೀ ತು ಸುಕರಾ ಬಹುಸೂತಿಃ ಪರೇಷ್ಟುಕಾ ।
ಚಿರಸೂತಾ ಬಷ್ಕಯಣೀ ಧೇನುಸ್ಸ್ಯಾನ್ನವಸೂತಿಕಾ ॥ ೯೫೭
ಸುವ್ರತಾ ಸುಖಸಂದೋಹ್ಯಾ ಪೀನೋಧ್ನೀ ಪೀವರಸ್ತನೀ ।
ದ್ರೋಣಕ್ಷೀರಾ ದ್ರೋಣದುಗ್ಧಾ ಧೇನುಷ್ಯಾ ಬಂಧಕೇ ಸ್ಥಿತಾ ॥ ೯೫೮

ಲಂಬಕರ್ಣೀ (ಸ್ತ್ರೀ) ಮುಂತಾದ ಸಂಜ್ಞೆಗಳುಂಟಾಗುತ್ತವೆ. ದ್ವಿಹಾಯನೀ, ದ್ವಿವರ್ಷಾ (ಸ್ತ್ರೀ)=ಎರಡು ವರ್ಷದ ಹಸು. ಏಕಾಬ್ದಾ, ಏಕಹಾಯನೀ (ಸ್ತ್ರೀ)=ಒಂದು ವರ್ಷದ ಹೆಣ್ಣುಕರು.

೯೫೫. ಚತುರಬ್ದಾ, ಚತುರ್ಹಾಯಣೀ (ಸ್ತ್ರೀ)=ನಾಲ್ಕು ವರ್ಷದ ಹಸು. ತ್ರ್ಯಬ್ದಾ, ತ್ರಿಹಾಯಣೀ (ಸ್ತ್ರೀ)=ಮೂರು ವರ್ಷದ ಹಸು. ವಶಾ, ವಂಧ್ಯಾ (ಸ್ತ್ರೀ)=ಬಂಜೆಯಾದ ಹಸು. ಅವತೋಕಾ, ಸ್ರವದ್ಗರ್ಭಾ (ಸ್ತ್ರೀ)=ಕಂದಹಾಕುವ ಹಸು, ಗರ್ಭಸ್ರಾವವಾಗುವ ಹಸು. ಸಂಧಿನೀ (ಸ್ತ್ರೀ)=ಗೂಳಿಹಾರಿದ ಹಸು.

೯೫೬. ವೇಹತ್, ಗರ್ಭೋಪಘಾತಿನೀ (ಸ್ತ್ರೀ)=ಸತ್ತ ಕರುವನ್ನು ಹಾಕಿದ ಹಸು. ಉಪಸರ್ಯಾ (ಸ್ತ್ರೀ)=ನೆಸೆಗೆ ಬಂದ ಹಸು. ಗೂಳಿಗೆ ಬಂದ ಹಸು. ಪ್ರಷ್ಠೌಹೀ, ಬಾಲಗರ್ಭಿಣೀ (ಸ್ತ್ರೀ)=ಪ್ರಥಮಗರ್ಭವನ್ನು ಧರಿಸಿದ ಹಸು. ಚೊಚ್ಚಲು ಹಸು.

೯೫೭. ಅಚಂಡೀ, ಸುಕರಾ (ಸ್ತ್ರೀ)=ಸಾಧುವಾದ ಹಸು. ಬಹುಸೂತಿ, ಪರೇಷ್ಟುಕಾ (ಸ್ತ್ರೀ)=ಹಲವು ಸಾರಿ ಈದ ಹಸು. ಚಿರಸೂತಾ, ಬಷ್ಕಯಣೀ (ಸ್ತ್ರೀ)=ಕರುಹಾಕಿ ಬಹುದಿನಗಳು ಕಳೆದಿರುವ ಹಸು. ಧೇನು, ನವಸೂತಿಕಾ (ಸ್ತ್ರೀ)=ಹೊಸದಾಗಿ ಕರುಹಾಕಿದ ಹಸು.

೯೫೮. ಸುವ್ರತಾ, ಸುಖಸಂದೋಹ್ಯಾ (ಸ್ತ್ರೀ)=ತೊಂದರೆಪಡಿಸದೆ ಹಾಲುಕೊಡುವ ಹಸು, ಪೀನೋಧ್ನೀ, ಪೀವರಸ್ತನೀ (ಸ್ತ್ರೀ)=ದೊಡ್ಡ ಕೆಚ್ಚಲುಳ್ಳದ್ದು. ದ್ರೋಣಕ್ಷೀರಾ, ದ್ರೋಣದುಗ್ಧಾ (ಸ್ತ್ರೀ)=ಒಂದು ದ್ರೋಣದಷ್ಟು ಹಾಲನ್ನು ಕೊಡುವ ಹಸು. ಧೇನುಷ್ಯಾ (ಸ್ತ್ರೀ)=ಸಾಲಗಾರನ ಬಂಧನದಲ್ಲಿರುವ ಹಸು, ದೊಡ್ಡಿಯಲ್ಲಿರುವ ಹಸು.

ಸಮಾಂಸಮೀನಾ ಸಾ ಯೈವ ಪ್ರತಿವರ್ಷಂ ಪ್ರಸೂಯತೇ ।
ಊಧಸ್ತು ಕ್ಲೀಬಮಾಪೀನಂ ಸಮೌ ಶಿವಕಕೀಲಕೌ ॥ ೯೫೯
ನ ಪುಂಸಿ ದಾಮ ಸಂದಾನಂ ಪಶುರಜ್ಜುಸ್ತು ದಾಮನೀ ।
ವೈಶಾಖಮಂಥಮಂಥಾನಮಂಥಾನೋ ಮಂಥದಂಡಕೇ ॥ ೯೬೦
ಕುಟರೋ ದಂಡವಿಷ್ಕಂಭೋ ಮಂಥನೀ ಗರ್ಗರೀ ಸಮೇ ।
ಉಷ್ಟ್ರೇ ಕ್ರಮೇಲಕಮಯಮಹಾಂಗಾಃ ಕರಭಶ್ಶಿಶುಃ ॥ ೯೬೧
ಕರಭಾಃ ಸ್ಯುಶ್ಶೃಂಖಲಕಾ ದಾರವೈಃ ಪಾದಬಂಧನೈಃ ।
ಅಜಾ ಛಾಗೀ ಸ್ತಭಚ್ಛಾಗವಸ್ತಚ್ಛಗಲಕಾ ಅಜೇ ॥ ೯೬೨
ಮೇಢ್ರೋರಭ್ರೋರಣೋರ್ಣಾಯುರ್ಮೇಷವೃಷ್ಣಯ ಏಡಕೇ ।
ಉಷ್ಟ್ರೋರಭ್ರಾಜವೃಂದೇ ಸ್ಯಾದೌಷ್ಟ್ರಕೌರಭ್ರಕಾಜಕಮ್ ॥ ೯೬೩

---

೯೫೯. ಸಮಾಂಸಮೀನಾ (ಸ್ತ್ರೀ)=ಪ್ರತಿವರ್ಷವೂ ಈಯುವ ಹಸು, ವರ್ಷಗಂದಿ. ಊಧಸ್, ಆಪೀನ (ನ)= ಕೆಚ್ಚಲು. ಶಿವಕ, ಕೀಲಕ (ಪು)=ದನಗಳನ್ನು ಕಟ್ಟುವ ಗೂಟ.

೯೬೦. ಧಾಮನ್ (ಸ್ತ್ರೀ. ನ), ಸಂದಾನ (ನ)=ಹಾಲು ಕರೆಯುವಾಗ ಕಾಲಿಗೆ ಕಟ್ಟುವ ಹಗ್ಗ ; ಯಾವುದಾದರೂ ಹಗ್ಗ. ದಾಮನೀ (ಸ್ತ್ರೀ)=ದನಗಳನ್ನು ಕಟ್ಟುವ ಹಗ್ಗ, ಕಣ್ಣಿ. ವೈಶಾಖ, ಮಂಥ, ಮಂಥಾನ, ಮಂಥನ್, ಮಂಥದಂಡಕ (ಪು)=ಕಡೆಗೋಲು.

೯೬೧. ಕುಟರ (ಕುಠರ), ದಂಡವಿಷ್ಕಂಭ (ಪು)=ಕಡೆಗೋಲನ್ನು ಕಟ್ಟುವ ಕಂಭ. ಮಂಥನೀ, ಗರ್ಗರೀ (ಸ್ತ್ರೀ)=ಕಡೆಯುವ ಪಾತ್ರೆ. ಉಷ್ಟ್ರ, ಕ್ರಮೇಲಕ, ಮಯ, ಮಹಾಂಗ (ಪು)=ಒಂಟೆ. ೯೬೨. ಕರಭ (ಪು)=ಒಂಟೆಯ ಮರಿ. ಶೃಂಖಲಕ (ಪು)=ಮರದ ಕಾಲ್ಕಟ್ಟನ್ನು ಹಾಕಿರುವ ಒಂಟೆ ಮರಿ. ಅಜಾ, ಛಾಗೀ (ಸ್ತ್ರೀ)=ಹೆಣ್ಣುಮೇಕೆ. ಸ್ತಭ (ತುಭ, ಶುಭ),ಛಾಗ, ವಸ್ತ (ಬಸ್ತ)ಛಗಲಕ, ಅಜ (ಪು)=ಗಂಡುಮೇಕೆ, ಹೋತ.

೯೬೩. ಮೇಢ್ರ, ಉರಭ್ರ, ಉರಣ, ಊರ್ಣಾಯುಸ್, ಮೇಷ, ವೃಷ್ಣಿ, ಏಡಕ (ಪು)=ಕುರಿ. ಔಷ್ಟ್ರಕ (ನ)=ಒಂಟೆಗಳ ಗುಂಪು. ಔರಭ್ರಕ (ನ)=ಕುರಿಗಳ ಮಂದೆ. ಆಜಕ (ನ)=ಮೇಕೆಗಳ ಹಿಂಡು.

ಚಕ್ರೀವಂತಸ್ತು ಬಾಲೇಯಾ ರಾಸಭಾ ಗರ್ದಭಾಃ ಖರಾಃ ।
ವೈದೇಹಕಸ್ಸಾರ್ಥವಾಹೋ ನೈಗಮೋ ವಾಣಿಜೋ ವಣಿಕ್ ॥ ೯೬೪
ಪಣ್ಯಾಜೀವೋ ಹ್ಯಾಪಣಿಕಃ ಕ್ರಯವಿಕ್ರಯಕಶ್ಚ ಸಃ ।
ವಿಕ್ರೇತಾ ಸ್ಯಾದಿಕ್ರಯಿಕಃ ಕ್ರಾಯಕಃ ಕ್ರಯಿಕಸ್ಸಮೌ ॥ ೯೬೫
ವಾಣಿಜ್ಯಂ ತು ವಣಿಜ್ಯಾ ಸ್ಯಾನ್ಮೂಲ್ಯಂ ವಸ್ನೋಽಪ್ಯವಕ್ರಯಃ ।
ನೀವೀ ಪರಿಪಣೋ ಮೂಲಧನಂ ಲಾಭೋಽಧಿಕಂ ಫಲಮ್ ॥ ೯೬೬
ಪರಿದಾನಂ ಪರೀವರ್ತೋ ನೈಮೇಯನಿಮಯಾವಪಿ ।
ಪುಮಾನುಪನಿಧಿರ್ನ್ಯಾಸಃ ಪ್ರತಿದಾನಂ ತದರ್ಪಣಮ್ ॥ ೯೬೭
ಕ್ರಯೇ ಪ್ರಸಾರಿತಂ ಕ್ರಯ್ಯಂ ಕ್ರೇಯಂ ಕ್ರೇತವ್ಯಮಾತ್ರಕೇ ।
ವಿಕ್ರೇಯಂ ಪಣಿತವ್ಯಂ ಚ ಪಣ್ಯಂ ಕ್ರಯ್ಯಾದಯಸ್ತ್ರಿಷು ॥ ೯೬೮

೯೬೪-೯೬೫. ಚಕ್ರೀವತ್, ಬಾಲೇಯ, ರಾಸಭ, ಗರ್ದಭ, ಖರ (ಪು)=ಕತ್ತೆ. ವೈದೇಹಕ, ಸಾರ್ಥವಾಹ, ನೈಗಮ, ವಾಣಿಜ, ವಣಿಜ್, ಪಣ್ಯಾಜೀವ, ಆಪಣಿಕ, ಕ್ರಯ ವಿಕ್ರಯಕ (ಪು)=ವರ್ತಕ, ವಾಣಿಜ್ಯವೃತ್ತಿಯವನು. ವಿಕ್ರೇತೃ, ವಿಕ್ರಯಿಕ (ಪು)= ಮಾರು ವವನು. (Sales man) ಕ್ರಾಯಕ, ಕ್ರಯಿಕ (ಪು)=ಕೊಳ್ಳುವವನು.

೯೬೬. ವಾಣಿಜ್ಯ (ನ), ವಣಿಜ್ಯಾ (ಸ್ತ್ರೀ)=ವರ್ತಕತನ, ಮಾರಾಟ. ಮೂಲ್ಯ (ನ), ವಸ್ನ, ಅವಕ್ರಯ (ಪು)=ಬೆಲೆ. ನೀವೀ (ಸ್ತ್ರೀ), ಪರಿಪಣ (ಪು), ಮೂಲಧನ (ನ)=ಬಂಡವಾಳ. ಲಾಭ (ಪು)=ಲಾಭ, ನಫೆ.

೯೬೭. ಪರಿದಾನ (ನ), ಪರೀವರ್ತ, ನೈಮೇಯ, ನಿಮಯ (ಪು)=ಅದಲುಬದಲು, ವಿನಿಮಯ. ಉಪನಿಧಿ, ನ್ಯಾಸ (ಪು)=ರಕ್ಷಣಾರ್ಥವಾಗಿ ಇನ್ನೊಬ್ಬರ ಬಳಿಯಲ್ಲಿ ಇಡುವುದು. ಪ್ರತಿದಾನ (ನ)=ತನ್ನಲ್ಲಿ ರಕ್ಷಣಾರ್ಥವಾಗಿ ಇಟ್ಟಿದ್ದನ್ನು ಹಿಂದಕ್ಕೆ ಕೊಡುವುದು.

೯೬೮. ಕ್ರಯ್ಯದಿಂದ ಪಣ್ಯದವರೆಗಿನ ಶಬ್ದಗಳು ವಿಶ್ಯೇಷ್ಯನಿಘ್ನಗಳಾಗಿ ಮೂರು ಲಿಂಗ ಗಳಲ್ಲಿಯೂ ಇರುತ್ತವೆ. ಕ್ರಯ್ಯ (ನ)=ಜನರು ಕೊಳ್ಳಲೆಂದು ಅಂಗಡಿಯಲ್ಲಿ ಇಟ್ಟದ್ದು. ಕ್ರೇಯ, ಕ್ರೇತವ್ಯ (ನ)=ಕೊಳ್ಳಲು ಅರ್ಹವಾದದ್ದು. ವಿಕ್ರೇಯ, ಪಣಿತವ್ಯ, ಪಣ್ಯ (ನ)=ಮಾರುವ ಸರಕು.

---

[1] ದಶಾಂತಗಳಾದ ಏಕಾದಶ, ದ್ವಾದಶ ಮುಂತಾದವೂ ಸಂಖ್ಯೇಯವನ್ನು ಬೋಧಿಸುತ್ತವೆ.

ಕ್ಲೀಬೇ ಸತ್ಯಾಪನಂ ಸತ್ಯಂಕಾರಸ್ಸತ್ಯಾಕೃತಿಃ ಸ್ತ್ರಿಯಾಮ್ ।
ವಿಪಣೋ ವಿಕ್ರಯಃ ಸಂಖ್ಯಾಃ ಸಂಖ್ಯೇಯೇ ಹ್ಯಾದಶ ತ್ರಿಷು ॥ ೯೬೯
ವಿಂಶತ್ಯಾದ್ಯಾಸ್ಸದೈಕತ್ವೇ ಸರ್ವಾಸ್ಸಂಖ್ಯೇಯಸಂಖ್ಯಯೋಃ ।
ಸಂಖ್ಯಾರ್ಥೇ ದ್ವಿಬಹುತ್ವೇ ಸ್ತಸ್ತಾಸು ಚಾನವತೇಃ ಸ್ತ್ರಿಯಃ ॥ ೯೭೦
ಪಂಕ್ತೇಶ್ಶತಸಹಸ್ರಾದಿ ಕ್ರಮಾದ್ದಶಗುಣೋತ್ತರಮ್ ।
ಯೌತವಂ ಧ್ರುವಯಂ ಪಾಯ್ಯಮಿತಿ ಮಾನಾರ್ಥಕಂ ತ್ರಯಮ್ ॥ ೯೭೧

---

೯೬೯. ಸತ್ಯಾಪನ (ನ), ಸತ್ಯಂಕಾರ (ಪು), ಸತ್ಯಾಕೃತಿ (ಸ್ತ್ರೀ)=ಒಪ್ಪಂದ, ಕರಾರು, ಮಾತು ಕೊಡುವುದು. ವಿಪಣ, ವಿಕ್ರಯ (ಪು)=ಮಾರುವಿಕೆ. ಏಕಶಬ್ದದಿಂದ ದಶಶಬ್ದದವರೆಗಿರುವ' ಸಂಖ್ಯಾಶಬ್ದಗಳು ಸಂಖ್ಯೇಯವನ್ನೂ ಬೋಧಿಸುತ್ತವೆ. ಎಂದರೆ ಸಂಖ್ಯೆಯಿಂದ ಪರಿಚ್ಛಿನ್ನವಾದ ವಸ್ತುವನ್ನು ಬೋಧಿಸುತ್ತವೆ. ಅವು ವಿಶೇಷ್ಯನಿಘ್ನಗಳಾಗಿ ಮೂರು ಲಿಂಗಗಳಲ್ಲಿಯೂ ವರ್ತಿಸು ತ್ತವೆ : ಉದಾ : ಏಕಃ ಪುರುಷಃ, ಏಕಾ ಸ್ತ್ರೀ, ಏಕಂ ಪುಸ್ತಕಂ.

೯೭೦. ವಿಂಶತಿ (ಇಪ್ಪತ್ತು) ಶಬ್ದದಿಂದ ನವತಿ (ತೊಂಬತ್ತು) ಎಂಬ ಶಬ್ದದವರೆಗೆ ಇರುವ ಸಂಖ್ಯಾಶಬ್ದಗಳು ಸಂಖ್ಯೆ ಮತ್ತು ಸಂಖ್ಯೇಯ ಇವೆರಡನ್ನೂ ಬೋಧಿಸುತ್ತವೆ. ಅವು ಏಕವಚನದಲ್ಲಿದ್ದು ನಿತ್ಯಸ್ತ್ರೀಲಿಂಗಗಳಾಗಿರುತ್ತವೆ. ಉದಾ . ವಿಂಶತಿಃ ಪುರುಷಾಃ, ಪುರುಷಾಣಾಂ ವಿಂಶತಿಃ, ವಿಂಶತ್ಯಾ ಪುರುಷೈಃ. ಈ ವಿಂಶತ್ಯಾದಿಗಳು ಕೇವಲ ಸಂಖ್ಯಾವಾಚಕಗಳಾಗಿದ್ದಾಗ ದ್ವಿವಚನ ಬಹುವಚನಗಳೂ ಬರಬಹುದು. ಉದಾ . ಸ್ತ್ರೀಣಾಂ ವಿಂಶತಿಃ (ಹೆಂಗಸರ ಇಪ್ಪತ್ತು), ಸ್ತ್ರೀಣಾಂ ವಿಂಶತೀ (ಹೆಂಗಸರ ಎರಡು ಇಪ್ಪತ್ತು) (ನಲವತ್ತು), ಸ್ತ್ರೀಣಾಂ ವಿಂಶತಯಃ (ಹೆಂಗಸರ ಅನೇಕ ಇಪ್ಪತ್ತುಗಳು (ಅರವತ್ತು, ಎಂಬತ್ತು- ಇತ್ಯಾದಿ).[1]

೯೭೧. ಪಂಕ್ತಿ (ಸ್ತ್ರೀ)= ಹತ್ತು. ಈ ಸಂಖ್ಯೆಯಿಂದ ಕ್ರಮವಾಗಿ ಹತ್ತರಷ್ಟು ಹೆಚ್ಚಿಸುತ್ತ ಹೋದರೆ ಶತ, ಸಹಸ್ರ, ಅಯುತ (ದಶಸಹಸ್ರ), ಲಕ್ಷ (ನ), ಕೋಟಿ (ಸ್ತ್ರೀ) ಮುಂತಾದ ಸಂಖ್ಯೆಗಳಾಗುತ್ತವೆ. ಯೌತವ, ದ್ರುತಯ, ಪಾಯ್ಯ, ಮಾನ (ನ)=ಅಳತೆ.

---

[1] ವಿಂಶತಿ = ಇಪ್ಪತ್ತು. ತ್ರಿಂಶತ್=ಮೂವತ್ತು. ಚತ್ವಾರಿಂಶತ್= ನಲವತ್ತು. ಪಂಚಾಶತ್= ಐವತ್ತು, ಷಷ್ಟಿ=ಅರುವತ್ತು. ಸಪ್ತತಿ=ಎಪ್ಪತ್ತು. ಅಶೀತಿ=ಎಂಬತ್ತು. ನವತಿ=ತೊಂಬತ್ತು. ಏಕವಿಂಶತಿ, ಪಂಚತ್ರಿಂಶತ್ ಮುಂತಾದವೂ ಸ್ತ್ರೀಲಿಂಗದಲ್ಲಿಯೂ ಏಕವಚನದಲ್ಲಿಯೂ ಇರುತ್ತವೆ.

ಮಾನಂ ತುಲಾಂಗುಲಿಪ್ರಸ್ಥೈರ್ಗುಂಜಾಃ ಪಂಚಾದ್ಯಮಾಷಕಃ ।
ತೇ ಷೋಡಶಾಕ್ಷಃ ಕರ್ಷೋಽಸ್ತ್ರೀ ಪಲಂ ಕರ್ಷಚತುಷ್ಟಯಮ್ ॥ ೯೭೨
ಸುವರ್ಣಬಿಸ್ತೌ ಹೇಮ್ನೋಽಕ್ಷೇ ಕುರುಬಿಸ್ತಸ್ತು ತತ್ಪಲೇ ।
ತುಲಾ ಸ್ತ್ರಿಯಾಂ ಪಲಶತಂ ಭಾರಃ ಸ್ಯಾದ್ವಿಂಶತಿಸ್ತುಲಾಃ ॥ ೯೭೩
ಆಚಿತೋ ದಶ ಭಾರಾಸ್ಸ್ಯುಶ್ಶಾಕಟೋ ಭಾರ ಆಚಿತಃ ।
ಕಾರ್ಷಾಪಣಃ ಕಾರ್ಷಿಕಸ್ಸ್ಯಾತ್ಕಾರ್ಷಿಕೇ ತಾಮ್ರಿಕೇ ಪಣಃ ॥ ೯೭೪
ಅಸ್ತ್ರಿಯಾಮಾಢಕದ್ರೋಣೌ ಖಾರೀ ವಾಹೋ ನಿಕುಂಚಕಃ ।
ಕುಡವಃ ಪ್ರಸ್ಥ ಇತ್ಯಾದ್ಯಾಃ ಪರಿಮಾಣಾರ್ಥಕಾಃ ಪೃಥಕ್ ॥ ೯೭೫

---

೯೭೨. ಮಾನವು (ಅಳತೆ) ತುಲಾ, ಅಂಗುಲಿ, ಪ್ರಸ್ಥ ಎಂದು ಮೂರು ವಿಧವಾಗಿರುತ್ತದೆ. ೧. ತುಲಾ=ತೂಗುವುದು. ೨. ಅಂಗುಲಿ=ಅಂಗುಲ ಇತ್ಯಾದಿ ಉದ್ದದ ಅಳತೆ. ೩. ಪ್ರಸ್ಥ= ಕೊಳಗ ಮೊದಲಾದ ಸಾಧನಗಳಿಂದ ಅಳೆಯುವುದು.

ಗುಂಜಾ (ಸ್ತ್ರೀ)=ಒಂದು ಗುಲಗಂಜಿ ತೂಕ, ಸುಮಾರು ೨ ಗ್ರೇನು. ಮಾಷಕ (ಪು)=ಐದು ಗುಂಜಿಗಳ ತೂಕ. ಅಕ್ಷ (ಪು), ಕರ್ಷ (ಪು. ನ)=ಹದಿನಾರು ಮಾಷಕಗಳು. ಪಲ (ನ)=ನಾಲ್ಕು ಕರ್ಷಗಳು.

೯೭೩. ಸುವರ್ಣ, ಬಿಸ್ತ (ಪು)=ಒಂದು ಕರ್ಷತೂಕದ ಚಿನ್ನ. ಕುರುಬಿಸ್ತ (ಪು)=ಒಂದು ಪಲತೂಕದ ಚಿನ್ನ. ತುಲಾ (ಸ್ತ್ರೀ)=ನೂರು ಪಲಗಳ ತೂಕ. ಭಾರ (ಪು)=ಇಪ್ಪತ್ತು ತುಲೆಗಳು.

೯೭೪. ಆಚಿತ (ಪು)=ಹತ್ತು ಭಾರಗಳು. ಶಾಕಟ (ಪು)=ಒಂದು ಗಾಡಿ ಹೇರು, ಹತ್ತು ಭಾರಗಳ ತೂಕ (ಸುಮಾರು ೧೨೦ ಮಣ). ಕಾರ್ಷಾಪಣ (ಪು)=ಒಂದು ಕರ್ಷ ತೂಕದ ಬೆಳ್ಳಿಯ ನಾಣ್ಯ. ಪಣ (ಪು)=ಒಂದು ಕರ್ಷತೂಕದ ತಾಮ್ರದ ನಾಣ್ಯ (ಹದಿನಾರು ಪಣಗಳಿಗೆ ಒಂದು ಕಾರ್ಷಾಪಣ, ಈ ಶಬ್ದಗಳು ನಾಣ್ಯಗಳನ್ನೂ ಅವುಗಳ ತೂಕವನ್ನೂ ಬೋಧಿಸುತ್ತವೆ).[1]

೯೭೫. ಆಢಕ ಮುಂತಾದವು ಬೇರೆ ಬೇರೆ ಅಳತೆಯ ಹೆಸರುಗಳು. ಅವುಗಳ ಕ್ರಮ ಹೀಗೆ : ನಿಕುಂಚಕ (ಪು)=ಒಂದು ಮುಷ್ಟಿ, ಚಟಾಕು. ಕುಡವ (ಪು)=ನಾಲ್ಕು ಚಟಾಕು, ಒಂದು ಪಾವು. ಪ್ರಸ್ಥ (ಪು)=ನಾಲ್ಕು ಕುಡವಗಳು, ಒಂದು ಸೇರು. ಆಢಕ (ಪು. ನ)=ನಾಲ್ಕು ಸೇರು. ದ್ರೋಣ (ಪು.ನ)=ಎಂಟು ಆಢಕ, ಮೂವತ್ತೆರಡು ಸೇರು. ಖಾರೀ (ಸ್ತ್ರೀ)=ಮೂರು ದ್ರೋಣ,

[1] ಗುಂಜಾದಿಗಳು ತುಲಾಮಾನಗಳು. ಅಂಗುಲಿಮಾನಗಳಾದ ಹಸ್ತ ಮುಂತಾದವು ಮನುಷ್ಯವರ್ಗ ದಲ್ಲಿ ಹೇಳಲ್ಪಟ್ಟಿವೆ. ಮುಂದೆ ಹೇಳುವ ಆಢಕಾದಿಗಳು ಪ್ರಸ್ಥಮಾನಗಳು.

ಭಾಗಸ್ತುರೀಯಃ ಪಾದಸ್ಸ್ಯಾತ್ ಅಂಶಭಾಗೌ ತು ವಂಟಕೇ ।
ದ್ರವ್ಯಂ ವಿತ್ತಂ ಸ್ವಾಪತೇಯಂ ರಿಕ್ಥಮೃಕ್ಥಂ ಧನಂ ವಸು ॥ ೯೭೬
ಹಿರಣ್ಯಂ ದ್ರವಿಣಂ ದ್ಯುಮ್ನಮರ್ಥರೈವಿಭವಾ ಅಪಿ ।
ಸ್ಯಾತ್ಕೋಶಶ್ಚ ಹಿರಣ್ಯಂ ಚ ಹೇಮರೂಪ್ಯೇ ಕೃತಾಕೃತೇ ॥ ೯೭೭
ತಾಭ್ಯಾಂ ಯದನ್ಯತ್ತತ್ಕುಪ್ಯಂ ರೂಪ್ಯಂ ತದ್ದ್ವಯಮಾಹತಮ್ ।
ಗಾರುತ್ಮತಂ ಮರಕತಮಶ್ಮಗರ್ಭೋ ಹರಿನ್ಮಣಿಃ ॥ ೯೭೮
ಶೋಣರತ್ನಂ ಲೋಹಿತಕಃ ಪದ್ಮರಾಗೋಽಥ ಮೌಕ್ತಿಕಮ್ ।
ಮುಕ್ತಾಥ ವಿದ್ರುಮಃ ಪುಂಸಿ ಪ್ರವಾಲಂ ಪುನ್ನಪುಂಸಕಮ್ ॥ ೯೭೯
ರತ್ನಂ ಮಣಿರ್ದ್ವಯೋರಶ್ಮಜಾತೌ ಮುಕ್ತಾದಿಕೇಽಪಿ ಚ ।
ಸ್ವರ್ಣಂ ಸುವರ್ಣಂ ಕನಕಂ ಹಿರಣ್ಯಂ ಹೇಮ ಹಾಟಕಮ್ ॥ ೯೮೦
ತಪನೀಯಂ ಶಾತಕುಂಭಂ ಗಾಂಗೇಯಂ ಭರ್ಮಕರ್ಬುರಮ್ ।
ಚಾಮೀಕರಂ ಜಾತರೂಪಂ ಮಹಾರಜತಕಾಂಚನೇ ॥ ೯೮೧

ತೊಂಬತ್ತಾರು ಸೇರು. ವಾಹ (ಪು)=ನಾಲ್ಕು ಖಾರಿ,[1] ಮುನ್ನೂರೆಂಬತ್ತುನಾಲ್ಕು ಸೇರು.

೯೭೬-೯೭೭. ಪಾದ (ಪು)=ನಾಲ್ಕನೆಯ ಒಂದು ಭಾಗ. ಅಂಶ, ಭಾಗ, ವಂಟಕ (ಪು)=ಒಂದು ಭಾಗ, ಏಕಾಂಶ. ದ್ರವ್ಯ, ವಿತ್ತ, ಸ್ವಾಪತೇಯ, ರಿಕ್ಥ, ಋಕ್ಥ, ಧನ, ವಸು, ಹಿರಣ್ಯ, ದ್ರವಿಣ, ದ್ಯುಮ್ನ (ನ), ಅರ್ಥ, ರೈ, ವಿಭವ (ಪು)=ಧನ, ಹಣ. ಕೋಶ (ಪು), ಹಿರಣ್ಯ (ನ)=ಚಿನ್ನ ಅಥವಾ ಬೆಳ್ಳಿಯ ಗಟ್ಟಿ, ಅಥವಾ ಇವುಗಳಿಂದ ಮಾಡಿದ ನಾಣ್ಯ, ಒಡವೆ.

೯೭೮ ಕುಪ್ಯ (ನ)=ಚಿನ್ನಬೆಳ್ಳಿಗಳಿಗಿಂತ ಅತಿರಿಕ್ತವಾದ ತಾಮ್ರಾದಿ ಲೋಹ. ರೂಪ್ಯ (ನ)=ಮುದ್ರೆ ಹೊಡೆದ ಚಿನ್ನ ಅಥವಾ ಬೆಳ್ಳಿಯ ನಾಣ್ಯ. ಗಾರುತ್ಮತ, ಮರಕತ (ನ), ಅಶ್ಮಗರ್ಭ, ಹರಿನ್ಮಣಿ (ಪು)=ಪಚ್ಚೆ (Emerald).

೯೭೯. ಶೋಣರತ್ನ (ನ), ಲೋಹಿತಕ, ಪದ್ಮರಾಗ (ಪು)=ಕೆಂಪು (Ruby). ಮೌಕ್ತಿಕ (ನ), ಮುಕ್ತಾ (ಸ್ತ್ರೀ)=ಮುತ್ತು. ವಿದ್ರುಮ (ಪು), ಪ್ರವಾಲ (ಪು. ನ)=ಹವಳ.

೯೮೦-೯೮೨. ರತ್ನ (ನ), ಮಣಿ (ಪು. ಸ್ತ್ರೀ)= ಶಿಲಾಜಾತಿಯ ಮರಕತಾದಿಗಳಿಗೂ ಮುತ್ತು ಹವಳ ಮುಂತಾದ ಬೆಲೆಬಾಳುವ ವಸ್ತುಗಳಿಗೂ ಸಾಮಾನ್ಯವಾದ ಹೆಸರು. ಸ್ವರ್ಣ,

---

[1] ಇವೆಲ್ಲವೂ ವ್ಯಾಖ್ಯಾನಕಾರರ ಮಾತಿನಿಂದ ಊಹಿಸಿ ಬರೆದವು. ವ್ಯವಹಾರವು ಲುಪ್ತವಾಗಿರುವುದರಿಂದ ನಿಷ್ಕೃಷ್ಟವಾದ ಅಳತೆಯನ್ನು ಹೇಳಲು ಸಾಧ್ಯವಿಲ್ಲ.

ರುಕ್ಮಂ ಕಾರ್ತಸ್ವರಂ ಜಾಂಬೂನದಮಷ್ಟಾಪದೋಽಸ್ತ್ರಿಯಾಮ್ ।
ಅಲಂಕಾರಸುವರ್ಣಂ ಯಚ್ಛೃಂಗೀಕನಕಮಿತ್ಯದಃ ॥ ೯೮೨
ದುರ್ವರ್ಣಂ ರಜತಂ ರೂಪ್ಯಂ ಖರ್ಜೂರಂ ಶ್ವೇತಮಿತ್ಯಪಿ ।
ರೀತಿಃ ಸ್ತ್ರಿಯಾಮಾರಕೂಟೋ ನ ಸ್ತ್ರಿಯಾಮಥ ತಾಮ್ರಕಮ್ ॥ ೯೮೩
ಶುಲ್ಬಂ ಮ್ಲೇಚ್ಛಮುಖಂ ದ್ವ್ಯಷ್ಟವರಿಷ್ಠೋದುಂಬರಾಣಿ ಚ ।
ಲೋಹೋಽಸ್ತ್ರೀ ಶಸ್ತ್ರಕಂ ತೀಕ್ಷ್ಣಂ ಪಿಂಡಂ ಕಾಲಾಯಸಾಯಸೀ ॥ ೯೮೪
ಅಶ್ಮಸಾರೋಽಥ ಮಂಡೂರಂ ಶಿಂಘಾಣಮಪಿ ತನ್ಮಲೇ ।
ಸರ್ವಂ ಚ ತೈಜಸಂ ಲೋಹಂ ವಿಕಾರಸ್ತ್ವಯಸಃ ಕುಶೀ ॥ ೯೮೫
ಕ್ಷಾರಃ ಕಾಚೋಽಥ ಚಪಲೋ ರಸಸ್ಸೂತಶ್ಚ ಪಾರದೇ ।
ಗವಲಂ ಮಾಹಿಷಂ ಶೃಂಗಮಭ್ರಕಂ ಗಿರಿಜಾಮಲೇ ॥ ೯೮೬

ಸುವರ್ಣ, ಕನಕ, ಹಿರಣ್ಯ, ಹೇಮನ್, ಹಾಟಕ, ತಪನೀಯ, ಶಾತಕುಂಭ, ಗಾಂಗೇಯ, ಭರ್ಮನ್, ಕರ್ಬುರ, ಚಾಮೀಕರ, ಜಾತರೂಪ, ಮಹಾರಜತ, ಕಾಂಚನ, ರುಕ್ಮ, ಕಾರ್ತಸ್ವರ, ಜಾಂಬೂನದ (ನ), ಅಷ್ಟಾಪದ (ಪು. ನ)=ಚಿನ್ನ. ಶೃಂಗೀ[1]ಕನಕ (ನ)=ಒಡವೆಗೆ ಉಪಯೋಗಿಸುವ ಚಿನ್ನ.

೯೮೪-೯೮೫. ದುರ್ವರ್ಣ, ರಜತ, ರೂಪ್ಯ, ಖರ್ಜೂರ, ಶ್ವೇತ (ನ)=ಬೆಳ್ಳಿ. ರೀತಿ (ಸ್ತ್ರೀ), ಆರಕೂಟ[2] (ಪು. ನ)=ಹಿತ್ತಾಳೆ. ತಾಮ್ರಕ, ಶುಲ್ಬ, ಮ್ಲೇಚ್ಛಮುಖ, ದ್ವ್ಯಷ್ಟ, ವರಿಷ್ಠ, ಉದುಂಬರ[3] (ನ)=ತಾಮ್ರ.

೯೮೪-೯೮೫. ಲೋಹ (ಪು.ನ) ಶಸ್ತ್ರಕ, ತೀಕ್ಷ್ಣ, ಪಿಂಡ, ಕಾಲಾಯಸ, ಅಯಸ್ (ನ), ಅಶ್ಮಸಾರ (ಪು)=ಕಬ್ಬಿಣ. ಮಂಡೂರ, ಶಿಂಘಾಣ (ನ)=ಕಬ್ಬಿಣದ ಕಿಟ್ಟ. ತೈಜಸ, ಲೋಹ (ನ)=ಎಲ್ಲ ಬಗೆಯ ಲೋಹ (Metal in general). ಕುಶೀ (ಸ್ತ್ರೀ)=ನೇಗಿಲಿನ ಕಬ್ಬಿಣದ ಗುಳ ; ಕಬ್ಬಿಣದ ಸಾಮಾನು ; ಉಕ್ಕು.

೯೮೬. ಕ್ಷಾರ, ಕಾಚ (ಪು)=ಗಾಜು. ಚಪಲ, ರಸ, ಸೂತ, ಪಾರದ (ಪು)=ಪಾದರಸ. ಗವಲ (ನ)=ಕೋಣದ ಕೊಂಬು. ಅಭ್ರಕ, ಗಿರಿಜ, ಅಮಲ (ನ)=ಅಭ್ರಕ.

---

[1] ಶೃಂಗೀ, ಶೃಂಗಿ (ಸ್ತ್ರೀ) ಎಂಬ ಶಬ್ದಾಂತರಗಳೂ ಇದೇ ಅರ್ಥದಲ್ಲಿ ಉಂಟು.
[2] ಪಿತ್ತಲ (ನ) ಎಂಬ ಶಬ್ದವೂ ಇದೆ. [3] ಔದುಂಬರ (ನ) ಎಂಬ ರೂಪಾಂತರವೂ ಉಂಟು.

ಸ್ರೋತೋಂಜನಂ ತು ಸೌವೀರಂ ಕಾಪೋತಾಂಜನಯಾಮುನೇ ।
ತುತ್ಥಾಂಜನಂ ಶಿಖಿಗ್ರೀವಂ ವಿತುನ್ನಕಮಯೂರಕೇ ॥ ೯೮೭
ಕರ್ಪರೀ ದಾರ್ವಿಕಾ ಕ್ವಾಥೋದ್ಭವಂ ತುತ್ಥಂ ರಸಾಂಜನಮ್ ।
ರಸಗರ್ಭಂ ತಾರ್ಕ್ಷ್ಯಶೈಲಂ ಗಂಧಾಶ್ಮನಿ ತು ಗಂಧಕಃ ॥ ೯೮೮
ಸೌಗಂಧಿಕಶ್ಚ ಚಕ್ಷುಷ್ಯಾಕುಲಾಲ್ಯೌ ತು ಕುಲತ್ಥಿಕಾ ।
ರೀತಿಪುಷ್ಪಂ ಪುಷ್ಪಕೇತು ಪೌಷ್ಪಕಂ ಕುಸುಮಾಜಂನಮ್ ॥ ೯೮೯
ಪಿಂಜರಂ ಪೀತನಂ ತಾಲಮಾಲಂ ಚ ಹರಿತಾಲಕೇ ।
ಗೈರೇಯಮರ್ಥ್ಯಂ ಗಿರಿಜಮಶ್ಮಜಂ ಚ ಶಿಲಾಜತು ॥ ೯೯೦
ಬೋಲಗಂಧರಸಪ್ರಾಣ ಪಿಂಡಗೋಪರಸಾಸ್ಸಮಾಃ ।
ಡಿಂಡೀರೋಽಬ್ಧಿ ಕಫಃ ಫೇನಸ್ಸಿಂದೂರಂ ನಾಗಸಂಭವಮ್ ॥ ೯೯೧
ನಾಗಸೀಸಕಯೋಗೇಷ್ಟವಪ್ರಾಣಿ ತ್ರಪು ಪಿಚ್ಚಟಮ್ ।
ರಂಗವಂಗೇ ಅಥ ಪಿಚುಸ್ತೂಲೋಽಥ ಕಮಲೋತ್ತರಮ್ ॥ ೯೯೨

೯೮೭-೯೮೯. ಸ್ರೋತೋಂಜನ, ಸೌವೀರ, ಕಾಪೋತಾಂಜನ, ಯಾಮುನ (ನ)=ಸೌವೀರಾಂಜನ, 'ಸುರ್ಮಾ' (Antimony). ತುತ್ಥಾಂಜನ, ಶಿಖಿಗ್ರೀವ, ವಿತುನ್ನಕ, ಮಯೂರಕ =ಮೈಲುತುತ್ತ. (ನ). ಕರ್ಪರೀ (ಸ್ತ್ರೀ) ಕರ್ಪರೀ ದಾರ್ವಿಕಾ (ಸ್ತ್ರೀ) ತುತ್ಥ, ರಸಾಂಜನ, ರಸಗರ್ಭ, ತಾರ್ಕ್ಷ್ಯಶೈಲ (ನ)=ಮರದರಿಸಿನದ ಕಷಾಯದಲ್ಲಿ ಭಾವಿಸಿ ಮಾಡಿದ ತುತ್ಥ. ರಸಾಂಜನ, ಗಂಧಾಶ್ಮನ್, ಗಂಧಕ, ಸೌಗಂಧಿಕ (ಪು)=ಗಂಧಕ. ಚಕ್ಷುಷ್ಯಾ, ಕುಲಾಲೀ, ಕುಲತ್ಥಿಕಾ (ಸ್ತ್ರೀ)=ಕಣ್ಣಿಗೆ ಹಚ್ಚುವ ಒಂದು ಬಗೆಯ ಅಂಜನ. ರೀತಿಪುಷ್ಪ, ಪುಷ್ಪಕೇತು, ಪೌಷ್ಪಕ, ಕುಸುಮಾಂಜನ (ನ)=ಹಿತ್ತಾಳೆಯನ್ನು ಕರಗಿಸುವಾಗ ಹುಟ್ಟುವ ಒಂದು ವಸ್ತು, ಕುಸುಮಾಂಜನ.

೯೯೦. ಪಿಂಜರ, ಪೀತನ, ತಾಲ, ಆಲ, ಹರಿತಾಲಕ (ನ)=ಹರಿದಳ. ಗೈರೇಯ, ಅರ್ಥ್ಯ, ಗಿರಿಜ, ಅಶ್ಮಜ, ಶಿಲಾಜತು (ನ)=ಶಿಲಾಜಿತು.

೯೯೧. ಬೋಲ, ಗಂಧರಸ, ಪ್ರಾಣ, ಪಿಂಡ, ಗೋಪ, ರಸ (ಪು)=ಬಾಣಂತಿ ಬಾಳು, ಒಂದು ಬಗೆಯ ಸುಗಂಧದ್ರವ್ಯ. ಡಿಂಡೀರ (ಹಿಂಡೀರ) ಅಬ್ಧಿಕಫ, ಫೇನ (ಪು)=ಸಮುದ್ರ ನಾಲಗೆ, ಸಮುದ್ರ ನೊರೆ. ಸಿಂದೂರ, ನಾಗಸಂಭವ (ನ)=ಸಿಂದೂರ, ಚಂದ್ರ.

೯೯೨-೯೯೩. ನಾಗ, ಸೀಸಕ, ಯೋಗೇಷ್ಟ, ವಪ್ರ (ನ)=ಸೀಸ. ತ್ರಪು, ಪಿಚ್ಚಟ, ರಂಗ, ವಂಗ (ನ)=ತವರ. ಪಿಚು, ತೂಲ (ಪು)=ಹತ್ತಿ. ಕಮಲೋತ್ತರ, ಕುಸುಂಭ, ವಹ್ನಿಶಿಖ,

ಸ್ಯಾತ್ಕುಸುಂಭಂ ವಹ್ನಿಶಿಖಂ ಮಹಾರಜನಮಿತ್ಯಪಿ ।
ಮೇಷಕಂಬಲ ಊರ್ಣಾಯುಃ ಶಶೋರ್ಣಂ ಶಶಲೋಮನಿ ॥ ೯೯೩
ಮಧು ಕ್ಷೌದ್ರಂ ಮಾಕ್ಷಿಕಾದಿ ಮಧೂಚ್ಛಿಷ್ಟಂ ತು ಸಿಕ್ಥಕಮ್ ।
ಮನಶ್ಶಿಲಾ ಮನೋಗುಪ್ತಾ ಮನೋಹ್ವಾ ನಾಗಜಿಹ್ವಿಕಾ ॥ ೯೯೪
ನೈಪಾಲೀ ಕುನಟೀ ಗೋಲಾ ಯವಕ್ಷಾರೋ ಯವಾಗ್ರಜಃ ।
ಪಾಕ್ಯೋಽಥ ಸರ್ಜಿಕಾಕ್ಷಾರಃ ಕಾಪೋತಸ್ಸುಖವರ್ಚಕಃ ॥ ೯೯೫
ಸೌವರ್ಚಲಂ ಸ್ಯಾದ್ರುಚಕಂ ತ್ವಕ್‌ಕ್ಷೀರೀ ವಂಶರೋಚನಾ ।
ಶಿಗ್ರುಜಂ ಶ್ವೇತಮರಿಚಂ ಮೋರಟಂ ಮೂಲಮೈಕ್ಷವಮ್ ॥ ೯೯೬
ಗ್ರಂಥಿಕಂ ಪಿಪ್ಪಲೀಮೂಲಂ ಚಟಕಾಶಿರ ಇತ್ಯಪಿ ।
ಗೋಲೋಮೀ ಭೂತಕೇಶೋ ನಾ ಪತ್ರಾಂಗಂ ರಕ್ತಚಂದನಮ್ ॥ ೯೯೭
ತ್ರಿಕಟು ತ್ರ್ಯೂಷಣಂ ವ್ಯೋಷಂ ತ್ರಿಫಲಾ ತು ಫಲತ್ರಿಕಮ್ ।

ಇತಿ ವೈಶ್ಯವರ್ಗಃ

ಮಹಾರಜನ (ನ)=ಕುಸುಬೆ ಹೂ. ಮೇಷಕಂಬಲ, ಊರ್ಣಾಯು (ಪು)=ಕುರಿಯ ಉಣ್ಣೆಯಿಂದ ನೆಯ್ದ ಕಂಬಳಿ,-ಶಾಲು. ಶಶೋರ್ಣ (ನ)=ಮೊಲದ ಕೂದಲು ; ಮೊಲದ ಕೂದಲಿಂದಾದ ಬಟ್ಟೆ.

೯೯೪-೯೯೬. ಮಧು, ಕ್ಷೌದ್ರ, ಮಾಕ್ಷಿಕ (ನ) (ಹೀಗೆಯೇ ಭ್ರಾಮರ, ವಾಟಕ, ಪೌತಿಕ) (ನ)=ಜೇನುತುಪ್ಪ. ಮಧೂಚ್ಛಿಷ್ಟ, ಸಿಕ್ಥಕ (ನ)=ಜೇನು ಮೇಣ. ಮನಶ್ಶಿಲಾ, ಮನೋಗುಪ್ತಾ, ಮನೋಹ್ವಾ, ನಾಗಜಿಹ್ವಿಕಾ, ನೈಪಾಲೀ, ಕುನಟೀ, ಗೋಲಾ (ಸ್ತ್ರೀ)=ಮಣಿಶಿಲೆ. ಯವಕ್ಷಾರ, ಯವಾಗ್ರಜ, ಪಾಕ್ಯ (ಪು)=ಯವಕ್ಷಾರ. ಸರ್ಜಿಕಾಕ್ಷಾರ, ಕಾಪೋತ, ಸುಖವರ್ಚಕ (ಪು), ಸೌವರ್ಚಲ, ರುಚಕ (ನ)=ಸರ್ಜಿಕಾಕ್ಷಾರ (Natron)ತ್ವಕ್‌ಕ್ಷೀರೀ, ವಂಶರೋಚನಾ (ಸ್ತ್ರೀ)=ತವಕ್ಷೀರ. ಶಿಗ್ರುಜ, ಶ್ವೇತಮರಿಚ (ನ)=ನುಗ್ಗೆಬೀಜ. ಮೋರಟ (ನ)=ಕಬ್ಬಿನ ಬೇರು.

೯೯೭. ಗ್ರಂಥಿಕ, ಚಟಕಾಶಿರಸ್ (ನ)=ಹಿಪ್ಪಲಿಬೇರು. ಗೋಲೋಮೀ (ಸ್ತ್ರೀ), ಭೂತಕೇಶ (ಪು)=ಜಟಾಮಾಂಸಿ. ಪತ್ರಾಂಗ, ರಕ್ತಚಂದನ (ನ)=ರಕ್ತಚಂದನ.

೯೯೮. ತ್ರಿಕಟು, ತ್ರ್ಯೂಷಣ, ವ್ಯೋಷ (ನ)=ಶುಂಠಿ, ಹಿಪ್ಪಲಿ, ಮೆಣಸು-ಇವುಗಳ ಸಂಘಾತ. ತ್ರಿಫಲಾ (ಸ್ತ್ರೀ), ಫಲತ್ರಿಕ (ನ)=ಅಳಲೆಕಾಯಿ, ತಾರೆಕಾಯಿ, ನೆಲ್ಲಿಕಾಯಿ-ಇವುಗಳ ಸಂಘಾತ.

೧೦. ಶೂದ್ರವರ್ಗಃ

ಶೂದ್ರಾಶ್ಚಾವರವರ್ಣಾಶ್ಚ ವೃಷಲಾಶ್ಚ ಜಘನ್ಯಜಾಃ ॥ ೯೯೮
ಆಚಂಡಾಲಾತ್ತು ಸಂಕೀರ್ಣಾ ಅಂಬಷ್ಠಕರಣಾದಯಃ ।
ಶೂದ್ರಾವಿಶೋಸ್ತು ಕರಣೋಽಂಬಷ್ಠೋ ವೈಶ್ಯಾದ್ವಿಜನ್ಮನೋಃ ॥ ೯೯೯
ಶೂದ್ರಾಕ್ಷತ್ರಿಯಯೋರುಗ್ರೋ ಮಾಗಧಃ ಕ್ಷತ್ರಿಯಾವಿಶೋಃ ।
ಮಾಹಿಷ್ಯೋಽರ್ಯಾಕ್ಷತ್ರಿಯಯೋಃ ಕ್ಷತ್ತಾರ್ಯಾಶೂದ್ರಯೋಸ್ಸುತಃ ॥ ೧೦೦೦
ಬ್ರಾಹ್ಮಣ್ಯಾಂ ಕ್ಷತ್ರಿಯಾತ್ಸೂತಸ್ತಸ್ಯಾಂ ವೈದೇಹಕೋ ವಿಶಃ ।
ರಥಕಾರಸ್ತು ಮಾಹಿಷ್ಯಾತ್ಕರಣ್ಯಾಂ ಯಸ್ಯ ಸಂಭವಃ ॥ ೧೦೦೧
ಸ್ಯಾಚ್ಚಂಡಾಲಸ್ತು ಜನಿತೋ ಬ್ರಾಹ್ಮಣ್ಯಾಂ ವೃಷಲೇನ ಯಃ ।
ಕಾರುಶ್ಶಿಲ್ಪೀ ಸಂಹತೈಸ್ತೈರ್ದ್ವಯೋಶ್ಶ್ರೇಣಿಸ್ಸಜಾತಿಭಿಃ ॥ ೧೦೦೨

ಶೂದ್ರವರ್ಗ

ಸೂಚನೆ - ೧೧೧೮ನೆಯ ಶ್ಲೋಕದ ಲುಬ್ಧಕ ಶಬ್ದದವರೆಗೆ ಶೂದ್ರಾದಿ ಜಾತಿವಾಚಕ ಶಬ್ದಗಳು ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿಯೂ ಚೋರಾದಿ ಯೌಗಿಕ ಶಬ್ದಗಳು ಮೂರು ಲಿಂಗಗಳಲ್ಲಿಯೂ ಇರುತ್ತವೆ. ಪ್ರಸಿದ್ಧವಾದ ಕೆಲವು ಸ್ತ್ರೀಲಿಂಗ ರೂಪಗಳನ್ನು ಅಲ್ಲಲ್ಲಿ ತೋರಿಸಿದೆ. ಉಳಿದ ಶಬ್ದಗಳ ಸ್ತ್ರೀಲಿಂಗ ರೂಪಗಳನ್ನು ವ್ಯಾಕರಣ ಶಾಸ್ತ್ರದಿಂದ ತಿಳಿದು ಕೊಳ್ಳಬೇಕು.

೯೯೮-೯೯೯. ಶೂದ್ರ, ಅವರವರ್ಣ, ವೃಷಲ, ಜಘನ್ಯಜ (-ಸ್ತ್ರೀ. ಶೂದ್ರಾ, ವೃಷಲೀ) =ಶೂದ್ರ. ಸಂಕೀರ್ಣ=ಅಂಬಷ್ಠ ಕರಣಾದಿ ಸಂಕರ ಜಾತಿಯವನು. ಕರಣ=ವೈಶ್ಯನಿಂದ ಶೂದ್ರ ಸ್ತ್ರೀಯಲ್ಲಿ ಜನಿಸಿದವನು. ಅಂಬಷ್ಠ=ಬ್ರಾಹ್ಮಣನಿಂದ ವೈಶ್ಯಸ್ತ್ರೀಯಲ್ಲಿ ಜನಿಸಿದವನು.

೧೦೦೦. ಉಗ್ರ=ಶೂದ್ರಸ್ತ್ರೀಯಲ್ಲಿ ಕ್ಷತ್ರಿಯನಿಂದ ಜನಿಸಿದವನು. ಮಾಗಧ=ಕ್ಷತ್ರಿಯ ಸ್ತ್ರೀಯಲ್ಲಿ ವೈಶ್ಯನಿಂದ ಜನಿಸಿದವನು. ಮಾಹಿಷ್ಯ=ವೈಶ್ಯಸ್ತ್ರೀಯಲ್ಲಿ ಕ್ಷತ್ರಿಯನಿಂದ ಜನಿಸಿ ದವನು. ಕ್ಷತ್ತೃ=ಕ್ಷತ್ರಿಯ ಸ್ತ್ರೀ[1]ಯಲ್ಲಿ ಶೂದ್ರನಿಂದ ಜನಿಸಿದವನು.

---

[1] ಮೂಲದಲ್ಲಿ 'ಕ್ಷತ್ತಾರ್ಯಾಶೂದ್ರಯೋಃ ಸುತಃ' ಎಂದಿದೆ. ಮನುಸ್ಮೃತಿ (೧೦-೧೨) ಮುಂತಾದ ಗ್ರಂಥಗಳ ಆಧಾರದಿಂದ ಅರ್ಯಾ ಶಬ್ದಕ್ಕೆ ಕ್ಷತ್ರಿಯ ಸ್ತ್ರೀ ಎಂದು ಅರ್ಥವನ್ನು ಮಾಡಿದೆ.

ಕುಲಕಃ ಸ್ಯಾತ್ಕುಲಶ್ರೇಷ್ಠೀ ಮಾಲಾಕಾರಸ್ತು ಮಾಲಿಕಃ ।
ಕುಂಭಕಾರಃ ಕುಲಾಲಃ ಸ್ಯಾತ್ಪಲಗಂಡಸ್ತು ಲೇಪಕಃ ॥ ೧೦೦೩
ತಂತುವಾಯಃ ಕುವಿಂದಸ್ಸ್ಯಾತ್ತುನ್ನವಾಯಸ್ತು ಸೌಚಿಕಃ ।
ರಂಗಾಜೀವಶ್ಚಿತ್ರಕಾರಃ ಶಸ್ತ್ರ ಮಾರ್ಜೋಽಸಿಧಾವಕಃ ॥ ೧೦೦೪
ಪಾದೂಕೃಚ್ಚರ್ಮಕಾರಸ್ಸ್ಯಾತ್ ವ್ಯೋಕಾರೋ ಲೋಹಕಾರಕಃ ।
ನಾಡಿಂಧಮಃ ಸ್ವರ್ಣಕಾರಃ ಕಲಾದೋ ರುಕ್ಮಕಾರಕಃ ॥ ೧೦೦೫
ಸ್ಯಾಚ್ಛಾಂಖಿಕಃ ಕಾಂಬವಿಕಶ್ಶೌಲ್ಬಿಕಸ್ತಾಮ್ರಕುಟ್ಟಕಃ ।
ತಕ್ಷಾ ತು ವರ್ಧಕಿಸ್ತ್ವಷ್ಟಾ ರಥಕಾರಶ್ಚ ಕಾಷ್ಠತಟ್ ॥ ೧೦೦೬
ಗ್ರಾಮಾಧೀನೋ ಗ್ರಾಮತಕ್ಷಃ ಕೌಟತಕ್ಷೋಽನಧೀನಕಃ ।
ಕ್ಷುರೀ ಮುಂಡೀ ದಿವಾಕೀರ್ತಿನಾಪಿತಾಂತಾವಸಾಯಿನಃ ॥ ೧೦೦೭

೧೦೦೧. ಸೂತ=ಬ್ರಾಹ್ಮಣ ಸ್ತ್ರೀಯಲ್ಲಿ ಕ್ಷತ್ರಿಯನಿಂದ ಹುಟ್ಟಿದವನು. ವೈದೇಹಕ = ಬ್ರಾಹ್ಮಣ ಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿದವನು. ರಥಕಾರ=ಕರಣಸ್ತ್ರೀಯಲ್ಲಿ ಮಾಹಿಷ್ಯನಿಂದ ಹುಟ್ಟಿದವನು.

೧೦೦೨. ಚಂಡಾಲ (-ಸ್ತ್ರೀ. ಚಂಡಾಲೀ)=ಶೂದ್ರನಿಂದ ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿದವನು. ಕಾರು, ಶಿಲ್ಪಿನ್=ಕೆತ್ತನೆ ಮುಂತಾದ ಕೈಗೆಲಸವನ್ನು ಮಾಡತಕ್ಕವನು. ಶ್ರೇಣಿ (ಪು. ಸ್ತ್ರೀ)=ಶಿಲ್ಪಿಗಳ ಸಮೂಹ.

೧೦೦೩. ಕುಲಕ, ಕುಲಶ್ರೇಷ್ಠಿನ್=ಶಿಲ್ಪಿಸಂಘದಲ್ಲಿ ಮುಖ್ಯನಾದವನು, ಸೇರೆಗಾರ, 'ಮೇಸ್ತ್ರಿ'. ಮಾಲಾಕಾರ, ಮಾಲಿಕ (ಸ್ತ್ರೀ. ಮಾಲಾಕಾರೀ, ಮಾಲಿಕಾ)=ಹೂವಾಡಿಗ. ಕುಂಭಕಾರ, ಕುಲಾಲ (ಪು)=ಕುಂಬಾರ. ಪಲಗಂಡ, ಲೇಪಕ (ಪು)=ಸುಣ್ಣ ಬಳಿಯುವವನು, ಬಣ್ಣ ಹಚ್ಚುವವನು.

೧೦೦೪. ತಂತುವಾಯ, ಕುವಿಂದ ಬಟ್ಟೆಯನ್ನು ನೇಯುವವನು. ತುನ್ನವಾಯ, ಸೌಚಿಕ= ಹೊಲಿಗೆಯವನು, ದರ್ಜಿ. ರಂಗಾಜೀವ, ಚಿತ್ರಕಾರ=ಚಿತ್ರಗಾರ. ಶಸ್ತ್ರಮಾರ್ಜ, ಅಸಿಧಾವಕ=ಸಾಣೆ ಹಿಡಿಯುವವನು.

೧೦೦೫. ಪಾದೂಕೃತ್, ಚರ್ಮಕಾರ=ಚಮ್ಮಾರ. ವ್ಯೋಕಾರ, ಲೋಹಕಾರಕ=ಕಬ್ಬಿಣದ ಕೆಲಸಗಾರ. ನಾಡಿಂಧಮ, ಸ್ವರ್ಣಕಾರ, ಕಲಾದ, ರುಕ್ಮಕಾರಕ=ಅಕ್ಕಸಾಲೆ.

ನಿರ್ಣೇಜಕಸ್ಸ್ಯಾದ್ರಜಕಶ್ಶೌಂಡಿಕೋ ಮಂಡಹಾರಕಃ ।
ಜಾಬಾಲಸ್ಸ್ಯಾದಜಾಜೀವೋ ದೇವಾಜೀವಸ್ತು ದೇವಲಃ ॥ ೧೦೦೮
ಸ್ಯಾನ್ಮಾಯಾ ಶಾಂಬರೀ ಮಾಯಾಕಾರಸ್ತು ಪ್ರಾತಿಹಾರಿಕಃ ।
ಶೈಲಾಲಿನಸ್ತು ಶೈಲೂಷಾ ಜಾಯಾಜೀವಾಃ ಕೃಶಾಶ್ವಿನಃ ॥ ೧೦೦೯
ಭಾರತಾ ಇತ್ಯಪಿ ನಟಾಶ್ಚಾರಣಾಸ್ತು ಕುಶೀಲವಾಃ ।
ಮಾರ್ದಂಗಿಕಾ ಮೌರಜಿಕಾಃ ಪಾಣಿವಾದಾಸ್ತು ಪಾಣಿಘಾಃ ॥ ೧೦೧೦
ವೇಣುಧ್ಮಾಸ್ಸ್ಯುರ್ವೈಣವಿಕಾಃ ವೀಣಾವಾದಾಸ್ತು ವೈಣಿಕಾಃ ।
ಜೀವಾಂತಕಶ್ಶಾಕುನಿಕೋ ದ್ವೌ ವಾಗುರಿಕಜಾಲಿಕೌ ॥ ೧೦೧೧

೧೦೦೬. ಶಾಂಖಿಕ, ಕಾಂಬವಿಕ=ಶಂಖ, ಚಿಪ್ಪುಗಳನ್ನೂ ಅವುಗಳಿಂದಾದ ವಸ್ತುಗಳನ್ನೂ ಮಾರುವವನು. ಶೌಲ್ಬಿಕ, ತಾಮ್ರಕುಟ್ಟಕ=ತಾಮ್ರದ ಕೆಲಸದವನು. ತಕ್ಷನ್, ವರ್ಧಕಿ, ತ್ವಷ್ಟೃ, ರಥಕಾರ, ಕಾಷ್ಠತಕ್ಷ್=ಬಡಗಿ.

೧೦೦೭. ಗ್ರಾಮತಕ್ಷ=ಗ್ರಾಮಕ್ಕೆ ಅಧೀನನಾದ ಬಡಗಿ, ಊರ ಬಡಗಿ. ಕೌಟತಕ್ಷ=ತನ್ನ ಗುಡಿಸಲಲ್ಲಿಯೇ ಕೆಲಸಮಾಡುವ ಸ್ವತಂತ್ರನಾದ ಬಡಗಿ. ಕ್ಷುರಿನ್, ಮುಂಡಿನ್, ದಿವಾಕೀರ್ತಿ, ನಾಪಿತ, ಅಂತಾವಸಾಯಿನ್=ಕ್ಷೌರಿಕ.

೧೦೦೮. ನಿರ್ಣೇಜಕ, ರಜಕ (-ಸ್ತ್ರೀ. ನಿರ್ಣೇಜಿಕಾ, ರಜಿಕಾ ; ರಜಕೀ=ಅಗಸನ ಹೆಂಡತಿ)=ಅಗಸ. ಶೌಂಡಿಕ, ಮಂಡಹಾರಕ=ಹೆಂಡದ ಕೆಲಸದವನು. ಜಾಬಾಲ, ಅಜಾಜೀವ=ಕುರಿಮೇಕೆಗಳನ್ನು ಕಾಯುವವನು, ಕುರುಬ. ದೇವಾಜೀವ (ದೇವಾಜೀವಿನ್), ದೇವಲ=ದೇವಪೂಜೆಯಿಂದ ಜೀವಿಸುವವನು.

೧೦೦೯. ಮಾಯಾ, ಶಾಂಬರೀ (ಸ್ತ್ರೀ)=ಇಂದ್ರಜಾಲ ಮುಂತಾದ ಮಾಯೆ. ಮಾಯಾಕಾರ, ಪ್ರಾತಿಹಾರಿಕ=ಇಂದ್ರ ಜಾಲಮಾಡುವವನು, ಜಾದುಗಾರ.

೧೦೦೯-೧೦೧೦. ಶೈಲಾಲಿನ್, ಶೈಲೂಷ, ಜಾಯಾಜೀವ, ಕೃಶಾಶ್ವಿನ್, ಭಾರತ (ಭರತ), ನಟ (-ಸ್ತ್ರೀ. ಶೈಲೂಷೀ, ನಟೀ)=ನಟ. ಚಾರಣ, ಕುಶೀಲವ=ಗಾಯಕ, ಸ್ತುತಿಪಾಠಕ. ಮಾರ್ದಂಗಿಕ, ಮೌರಜಿಕ=ಮೃದಂಗದವನು. ಪಾಣಿವಾದ, ಪಾಣಿಘ=ಕೈತಾಳ ಹಾಕುವವನು.

೧೦೧೧. ವೇಣುಧ್ಮಾ, ವೈಣವಿಕ=ಕೊಳಲನ್ನು ಊದುವವನು. ವೀಣಾವಾದ, ವೈಣಿಕ (-ಸ್ತ್ರೀ. ವೈಣಿಕೀ)=ವೀಣೆಯನ್ನು ನುಡಿಸುವವನು. ಜೀವಾಂತಕ, ಶಾಕುನಿಕ (ಪು)=ಹಕ್ಕಿಯ ಬೇಟೆಗಾರ. ವಾಗುರಿಕ, ಜಾಲಿಕ (ಪು)=ಬಲೆಯಿಂದ ಮೃಗಗಳನ್ನು ಹಿಡಿಯುವವನು : ಜಾಲಗಾರ.

ವೈತಂಸಿಕಃ ಕೌಟಕಶ್ಚ ಮಾಂಸಿಕಶ್ಚ ಸಮಂ ತ್ರಯಮ್ ।
ಭೃತಕೋ ಭೃತಿಭುಕ್ಕರ್ಮಕರೋ ವೈತನಿಕೋಽಪಿ ಸಃ ॥ ೧೦೧೨
ವಾರ್ತಾವಹೋ ವೈವಧಿಕೋ ಭಾರವಾಹಸ್ತು ಭಾರಿಕಃ ।
ವಿವರ್ಣಃ ಪಾಮರೋ ನೀಚಃ ಪ್ರಾಕೃತಶ್ಚ ಪೃಥಗ್ಜನಃ ॥ ೧೦೧೩
ನಿಹೀನೋಽಪಸದೋ ಜಾಲ್ಮಃ ಕ್ಷುಲ್ಲಕಶ್ಚೇತರಶ್ಚ ಸಃ ।
ಭೃತ್ಯೇ ದಾಸೇರದಾಸೇಯದಾಸಗೋಪ್ಯ ಕಚೇಟಕಾಃ ॥ ೧೦೧೪
ನಿಯೋಜ್ಯಕಿಂಕರಪ್ರೇಷ್ಯಭುಜಿಷ್ಯಪರಿಚಾರಕಾಃ ।
ಪರಾಚಿತಪರಿಸ್ಕಂದಪರಜಾತಪರ್ಯೆಧಿತಾಃ ॥ ೧೦೧೫
ಮಂದಸ್ತುಂದಪರಿಮೃಜ ಆಲಸ್ಯಃ ಶೀತಕೋಽಲಸೋಽನುಷ್ಣಃ ।
ದಕ್ಷೇ ತು ಚತುರಪೇಶಲಪಟವಃ ಸೂತ್ಥಾನ ಉಷ್ಣಶ್ಚ ॥ ೧೦೧೬

೧೦೧೨. ವೈತಂಸಿಕ, ಕೌಟಕ, ಮಾಂಸಿಕ=ಮಾಂಸವನ್ನು ಮಾರುವವನು. ಭೃತಕ, ಭೃತಿಭುಜ್, ಕರ್ಮಕರ, ವೈತನಿಕ=ಸಂಬಳದಿಂದ ಜೀವಿಸುವವನು, ನೌಕರ.

೧೦೧೩. ವಾರ್ತಾವಹ, ವೈವಧಿಕ=ಸರಕನ್ನು ಹೊತ್ತುಕೊಂಡು ಹೋಗಿ ಮಾರತಕ್ಕವನು. ಭಾರವಾಹ, ಭಾರಿಕ= ಹೊರೆ ಹೊರುವವನು.

೧೦೧೩-೧೦೧೫. ವಿವರ್ಣ, ಪಾಮರ, ನೀಚ, ಪ್ರಾಕೃತ, ಪೃಥಗ್ಜನ, ನಿಹೀನ, ಅಪಸದ, ಜಾಲ್ಮ, ಕ್ಷುಲ್ಲಕ, ಇತರ=ನೀಚ, ಅಲ್ಪಮನುಷ್ಯ. ಭೃತ್ಯ, ದಾಸೇರ, ದಾಸೇಯ, ದಾಸ, ಗೋಪ್ಯಕ, ಚೇಟಕ, ನಿಯೋಜ್ಯ, ಕಿಂಕರ, ಪ್ರೇಷ್ಯ, ಭುಜಿಷ್ಯ, ಪರಿಚಾರಕ (-ಸ್ತ್ರೀ. ದಾಸೀ, ಚೇಟಿಕಾ, ಕಿಂಕರೀ, ಪರಿಚಾರಿಕಾ)=ಸೇವಕ. ಪರಾಜಿತ, ಪರಿಸ್ಕಂದ, ಪರಜಾತ, ಪರ್ಯೆಧಿತ=ಅನ್ಯರ ಪೋಷಣೆಯಲ್ಲಿ ಬೆಳೆದ ಸೇವಕ.

೧೦೧೬. ಮಂದ, ತುಂದಪರಿಮೃಜ, ಆಲಸ್ಯ, ಶೀತಕ, ಅಲಸ, ಅನುಷ್ಣ=ಸೋಮಾರಿ. ದಕ್ಷ, ಚತುರ, ಪೇಶಲ, ಪಟು, ಸೂತ್ಥಾನ, ಉಷ್ಣ=ಕಾರ್ಯದಕ್ಷ, ಚುರುಕು ಬುದ್ಧಿಯವನು.

೧೦೧೭. ಚಂಡಾಲ, ಪ್ಲವ, ಮಾತಂಗ ದಿವಾಕೀರ್ತಿ, ಜನಂಗಮ, ನಿಷಾದ, ಶ್ವಪಚ, ಅಂತೇವಾಸಿನ್, ಚಾಂಡಾಲ, ಪುಲ್ಕಸ=ಹೊಲೆಯ.

೧೦೧೮. ಕಿರಾತ, ಶಬರ, ಪುಲಿಂದ, ಮ್ಲೇಚ್ಛಜಾತಿ (—ಸ್ತ್ರೀ. ಕಿರಾತೀ, ಶಬರೀ, ಪುಲಿಂದೀ)=ಬೇರೆ ಬೇರೆ ಮ್ಲೇಚ್ಛ ಜಾತಿಯವನು. ವ್ಯಾಧ, ಮೃಗವಧಾಜೀವ, ಮೃಗಯು, ಲುಬ್ಧಕ (ಪು)=ಬೇಟೆಗಾರ, ಬೇಡ.

ಚಂಡಾಲಪ್ಲವಮಾತಂಗದಿವಾಕೀರ್ತಿಜನಂಗಮಾಃ ।
ನಿಷಾದಶ್ವಪಚಾವಂತೇವಾಸಿಚಾಂಡಾಲಪುಲ್ಕಸಾಃ ॥ ೧೦೧೭
ಭೇದಾಃ ಕಿರಾತಶಬರಪುಲಿಂದಾ ಮ್ಲೇಚ್ಛಜಾತಯಃ ।
ವ್ಯಾಧೋ ಮೃಗವಧಾಜೀವೋ ಮೃಗಯುರ್ಲುಬ್ಧಕೋಽಪಿ ಸಃ ॥ ೧೦೧೮
ಕೌಲೇಯಕಸ್ಸಾರಮೇಯಃ ಕುಕ್ಕುರೋ ಮೃಗದಂಶಕಃ ।
ಶುನಕೋ ಭಷಕಶ್ಶ್ವಾಸ್ಯಾದಲರ್ಕಸ್ತು ಸ ಯೋಗಿತಃ ॥ ೧೦೧೯
ಶ್ವಾ ವಿಶ್ವಕದ್ರುರ್ಮೃಗಯಾಕುಶಲಸ್ಸರಮಾ ಶುನೀ ।
ವಿಟ್ಚರಸ್ಸೂಕರೋ ಗ್ರಾಮ್ಯೋ ವರ್ಕರಸ್ತರುಣಃ ಪಶುಃ ॥ ೧೦೨೦
ಆಚ್ಛೋದನಂ ಮೃಗವ್ಯಂ ಸ್ಯಾದಾಖೇಟೋ ಮೃಗಯಾ ಸ್ತ್ರಿಯಾಮ್ ।
ದಕ್ಷಿಣಾರುರ್ಲುಬ್ಧಯೋಗಾದ್ದಕ್ಷಿಣೇರ್ಮಾ ಕುರಂಗಕಃ ॥ ೧೦೨೧
ಚೋರೈಕಾಗಾರಿಕಸ್ತೇನದಸ್ಯುತಸ್ಕರಮೋಷಕಾಃ ।
ಪ್ರತಿರೋಧಿಪರಾಸ್ಕಂದಿಪಾಟಚ್ಚರಮಲಿಮ್ಲುಚಾಃ ॥ ೧೦೨೨
ಚೌರಿಕಾ ಸ್ತೈನ್ಯಚೌರ್ಯೇ ಚ ಸ್ತೇಯಂ ಲೋಪ್ತ್ರಂ ತು ತದ್ಧನಮ್ ।
ವಿತಂಸಸ್ತೂಪಕರಣಂ ಬಂಧನೇ ಮೃಗಪಕ್ಷಿಣಾಮ್ ॥ ೧೦೨೩

೧೦೧೯. ಕೌಲೇಯಕ, ಸಾರಮೇಯ, ಕುಕ್ಕುರ, ಮೃಗದಂಶಕ, ಶುನಕ, ಭಷಕ, ಶ್ವನ್ (ಪು)=ನಾಯಿ. ಅಲರ್ಕ (ಪು)=ಹುಚ್ಚುನಾಯಿ.

೧೦೨೦. ವಿಶ್ವಕದ್ರು(ಪು)=ಬೇಟೆನಾಯಿ. ಸರಮಾ, ಶುನೀ (ಸ್ತ್ರೀ)=ಹೆಣ್ಣುನಾಯಿ. ವಿಟ್‌ಚರ (ಪು)=ಊರುಹಂದಿ. ವರ್ಕರ (ಪು)=ಪ್ರಾಯಕಾಲದ ಪಶು.

೧೦೨೧. ಆಚ್ಛೋದನ, ಮೃಗವ್ಯ (ನ), ಆಖೇಟ (ಪು), ಮೃಗಯಾ(ಸ್ತ್ರೀ)=ಬೇಟೆ. ದಕ್ಷಿಣೇರ್ಮನ್ (ಪು)=ಬೇಡನ ಬಾಣದಿಂದ ಬಲಗಡೆ ಗಾಯಹೊಂದಿದ ಜಿಂಕೆ.

೧೦೨೨. ಚೋರ (ಚೌರ), ಐಕಾಗಾರಿಕ, ಸ್ತೇನ, ದಸ್ಯು, ತಸ್ಕರ, ಮೋಷಕ, ಪ್ರತಿರೋಧಿನ್, ಪರಾಸ್ಕಂದಿನ್, ಪಾಟಚ್ಚರ, ಮಲಿಮ್ಲುಚ (ಪು)=ಕಳ್ಳ.

೧೦೨೩. ಚೌರಿಕಾ (ಸ್ತ್ರೀ), ಸ್ತೈನ್ಯ, ಚೌರ್ಯ, ಸ್ತೇಯ (ನ)=ಕಳ್ಳತನ. ಲೋಪ್ತ್ರ (ನ)=ಕದ್ದ ವಸ್ತು. ವಿತಂಸ (ವೀತಂಸ) (ಪು)=ಮೃಗಪಕ್ಷಿಗಳನ್ನು ಹಿಡಿಯುವ ಸಾಧನ.

ಉನ್ಮಾಥಃ ಕೂಟಯಂತ್ರಂ ಸ್ಯಾತ್ ವಾಗುರಾ ಮೃಗಬಂಧಿನೀ ।
ಶುಲ್ಬಂ ವರಾಟಕಃ ಸ್ತ್ರೀ ತು ರಜ್ಜುಸ್ತ್ರಿಷು ವಟೀ ಗುಣಃ ॥ ೧೦೨೪
ಉದ್ಘಾಟನಂ ಘಟೀಯಂತ್ರಂ ಸಲಿಲೋದ್ವಾಹನಂ ಪ್ರಹೇಃ ।
ಪುಂಸಿ ವೇಮಾ ವಾಯದಂಡಸ್ಸೂತ್ರಾಣಿ ನರಿ ತಂತವಃ ॥ ೧೦೨೫
ವಾಣಿರ್ವ್ಯೂತಿಃ ಸ್ತ್ರಿಯೌ ತುಲ್ಯೇ ಪುಸ್ತಂ ಲೇಪ್ಯಾದಿಕರ್ಮಣಿ ।
ಪಾಂಚಾಲಿಕಾ ಪುತ್ರಿಕಾ ಸ್ಯಾದ್ವಸ್ತ್ರದಂತಾದಿಭಿಃ ಕೃತಾ ॥ ೧೦೨೬
ಪಿಟಕಃ ಪೇಟಕಃ ಪೇಟಾ ಮಂಜೂಷಾಥ ವಿಹಂಗಿಕಾ ।
ಭಾರಯಷ್ಟಿಸ್ತದಾಲಂಬಿ ಶಿಕ್ಯಂ ಕಾಚೋಽಥ ಪಾದುಕಾ ॥ ೧೦೨೭
ಪಾದೂರುಪಾನತ್ ಸ್ತ್ರೀ ಸೈವಾನುಪದೀನಾ ಪದಾಯತಾ ।
ನಧ್ರೀ ವಧ್ರೀ ವರತ್ರಾ ಸ್ಯಾದಶ್ವಾದೇಸ್ತಾಡನೀ ಕಶಾ ॥ ೧೦೨೮

೧೦೨೪. ಉನ್ಮಾಥ (ಪು), ಕೂಟಯಂತ್ರ (ನ)=ಪ್ರಾಣಿಗಳನ್ನು ಹಿಡಿಯುವ ಬೋನು. ವಾಗುರಾ, ಮೃಗಬಂಧಿನೀ (ಸ್ತ್ರೀ)=ಮೃಗಗಳನ್ನು ಹಿಡಿಯುವ ಬಲೆ. ಶುಲ್ಬ (ನ), ವರಾಟಕ (ಪು), ರಜ್ಜು (ಸ್ತ್ರೀ), ವಟೀ (ಸ್ತ್ರೀ. ಪು. ನ (ಪು. ನ. ವಟ), ಗುಣ (ಪು)=ಹಗ್ಗ, ಹುರಿ.

೧೦೨೫. ಉದ್ಘಾಟನ, ಘಟೀಯಂತ್ರ (ನ)=ನೀರನ್ನೆತ್ತುವ ರಾಟೆ, ಏತ. ವೇಮನ್, ವಾಯದಂಡ (ಪು)=ನೇಯುವ ಕೋಲು, ತಾಕುಹಲಗೆ (A loom). ಸೂತ್ರ (ನ), ತಂತು (ಪು)=ನೂಲು.

೧೦೨೬. ವಾಣಿ, ವ್ಯೂತಿ (ಸ್ತ್ರೀ)=ನೆಯ್ಗೆ. ಪುಸ್ತ (ನ)=ಬಳಿದು ಮೆತ್ತುವುದು ; ಮಣ್ಣು ಮರ ಬಟ್ಟೆ ಇವುಗಳಿಂದ ಮಾಡುವ ಬೊಂಬೆ ಮುಂತಾದ ಕೈಗೆಲಸ. ಪಾಂಚಾಲಿಕಾ, ಪುತ್ರಿಕಾ (ಸ್ತ್ರೀ)=ಬೊಂಬೆ.

೧೦೨೭-೧೦೨೮. ಪಿಟಕ, ಪೇಟಕ (ಪು), ಪೇಟಾ, ಮಂಜೂಷಾ (ಸ್ತ್ರೀ)=ಪೆಟ್ಟಿಗೆ. ವಿಹಂಗಿಕಾ, ಭಾರಯಷ್ಟಿ (ಸ್ತ್ರೀ)=ಭಾರವನ್ನು ತೂಗುಹಾಕುವ ಅಡ್ಡೆ. ಶಿಕ್ಯ (ನ), ಕಾಚ (ಪು)=ಭಾರವನ್ನು ತುಂಬಿ ತೂಗಿಹಾಕುವ ಹಗ್ಗದ ಶಿಕ್ಕೆ. ಪಾದುಕಾ, ಪಾದೂ, ಉಪಾನಹ್ (ಸ್ತ್ರೀ)=ಪಾದರಕ್ಷೆ. ಅನುಪದೀನಾ (ಸ್ತ್ರೀ)=ಕಾಲಿನ ಅಳತೆಗೆ ತಕ್ಕದ್ದಾದ ಪಾದರಕ್ಷೆ. ನಧ್ರೀ, ವಧ್ರೀ, ವರತ್ರಾ (ಸ್ತ್ರೀ)=ಚರ್ಮದ ಪಟ್ಟಿ, 'ಬಾರು'. ಕಶಾ (ಸ್ತ್ರೀ)=ಕುದುರೆ ಮೊದಲಾದ್ದನ್ನು ಹೊಡೆವ ಚಾಟಿ.

ಚಾಂಡಾಲಿಕಾ ತು ಕಂಡೋಲವೀಣಾ ಚಂಡಾಲವಲ್ಲಕೀ ।
ನಾರಾಚೀ ಸ್ಯಾದೇಷಣಿಕಾ ಶಾಣಸ್ತು ನಿಕಷಃ ಕಷಃ ॥ ೧೦೨೯
ವೃಶ್ಚನಃ ಪತ್ರಪರಶುರೀಷಿಕಾ ತೂಲಿಕಾ ಸಮೇ ।
ತೈಜಸಾವರ್ತನೀ ಮೂಷಾ ಭಸ್ತ್ರಾ ಚರ್ಮಪ್ರಸೇವಿಕಾ ॥ ೧೦೩೦
ಆಸ್ಫೋಟನೀ ವೇಧನಿಕಾ ಕೃಪಾಣೀ ಕರ್ತರೀ ಸಮೇ ।
ವೃಕ್ಷಾದನೀ ವೃಕ್ಷಭೇದೀ ಟಂಕಃ ಪಾಷಾಣದಾರಣಃ ॥ ೧೦೩೧
ಕ್ರಕಚೋಽಸ್ತ್ರೀ ಕರಪತ್ರಮಾರಾ ಚರ್ಮಪ್ರಭೇದಿಕಾ ।
ಸೂರ್ಮಿಃಸ್ಥೂಣಾಯಃ ಪ್ರತಿಮಾ ಶಿಲ್ಪಂ ಕರ್ಮ ಕಲಾದಿಕಮ್ ॥ ೧೦೩೨
ಪ್ರತಿಮಾನಂ ಪ್ರತಿಬಿಂಬಂ ಪ್ರತಿಮಾ ಪ್ರತಿಯಾತನಾ ಪ್ರತಿಚ್ಛಾಯಾ ।
ಪ್ರತಿಕೃತಿರರ್ಚಾ ಪುಂಸಿ ಪ್ರತಿನಿಧಿರುಪಮೋಪಮಾನಂ ಸ್ಯಾತ್ ॥ ೧೦೩೩

೧೦೨೯. ಚಾಂಡಾಲಿಕಾ, ಕಂಡೋಲವೀಣಾ, ಚಂಡಾಲವಲ್ಲಕೀ (ಸ್ತ್ರೀ)=ಮಾದಿಗರು ಉಪಯೋಗಿಸುವ ವೀಣೆ, ಕರುಳಿಂದ ತಂತಿಯನ್ನು ಮಾಡಿ ಬಿಗಿದಿರುವ ವೀಣೆ. ನಾರಾಚೀ, ಏಷಣಿಕಾ (ಸ್ತ್ರೀ)=ತಕ್ಕಡಿ. ಶಾಣ, ನಿಕಷ, ಕಷ (ಪು)=ಒರೆಗಲ್ಲು.

೧೦೩೦. ವೃಶ್ಚನ, ಪತ್ರಪರಶು (ಪು)=ಚಾಣ ; ಚಿಕ್ಕ ಗರಗಸ. ಈಷಿಕಾ, ತೂಲಿಕಾ (ಸ್ತ್ರೀ)=ಚಿತ್ರವನ್ನು ಬರೆಯುವ ಕಡ್ಡಿ,-ಕುಂಚ. ತೈಜಸಾವರ್ತನೀ, ಮೂಷಾ (ಸ್ತ್ರೀ)=ಲೋಹ ವನ್ನು ಕರಗಿಸುವ ಮೂಸೆ. ಭಸ್ತ್ರಾ, ಚರ್ಮಪ್ರಸೇವಿಕಾ (ಸ್ತ್ರೀ)=ತಿದಿ.

೧೦೩೧. ಆಸ್ಫೋಟನೀ, ವೇಧನಿಕಾ (ಸ್ತ್ರೀ)=ಬೈರಿಗೆ. ಕೃಪಾಣೀ, ಕರ್ತರೀ (ಸ್ತ್ರೀ)=ಕತ್ತರಿ. ವೃಕ್ಷಾದನೀ (ಸ್ತ್ರೀ), ವೃಕ್ಷಭೇದಿನ್ (ಪು)=ಉಳಿ (Chisel). ಟಂಕ, ಪಾಷಾಣದಾರಣ (ಪು)=ಕಲ್ಲನ್ನು ಕೆತ್ತುವ ಉಳಿ.

೧೦೩೨. ಕ್ರಕಚ (ಪು. ನ), ಕರಪತ್ರ (ನ)=ಗರಗಸ. ಆರಾ, ಚರ್ಮ ಪ್ರಭೇದಿಕಾ (ಸ್ತ್ರೀ)=ಚರ್ಮವನ್ನು ಹೊಲಿಯುವ ಸೂಚಿ ; ಚರ್ಮವನ್ನು ಕೊರೆಯುವ ಸಾಧನ. ಸೂರ್ಮೀ, ಸ್ಥೂಣಾ, ಅಯಃಪ್ರತಿಮಾ (ಸ್ತ್ರೀ)=ಕಬ್ಬಿಣದ ಪ್ರತಿಮೆ. ಶಿಲ್ಪ (ನ)=ಕುಶಲವಿದ್ಯೆ.

೧೦೩೩. ಪ್ರತಿಮಾನ, ಪ್ರತಿಬಿಂಬ (ನ), ಪ್ರತಿಮಾ, ಪ್ರತಿಯಾತನಾ, ಪ್ರತಿಚ್ಛಾಯಾ, ಪ್ರತಿಕೃತಿ, ಅರ್ಚಾ (ಸ್ತ್ರೀ), ಪ್ರತಿನಿಧಿ (ಪು)=ಮೂಲದ ಆಕೃತಿಯನ್ನು ಹೋಲುವಂತೆ ರಚಿಸಿದ ವಿಗ್ರಹ, ಚಿತ್ರ- ಇತ್ಯಾದಿ. ಉಪಮಾ (ಸ್ತ್ರೀ), ಉಪಮಾನ (ನ)=ಹೋಲಿಕೆ.

ವಾಚ್ಯಲಿಂಗಾಸ್ಸಮಸ್ತುಲ್ಯಸ್ಸದೃಕ್ಷಸ್ಸದೃಶಸ್ಸದೃಕ್ ।
ಸಾಧಾರಣಸ್ಸಮಾನಶ್ಚ ಸ್ಯುರುತ್ತರಪದೇ ತ್ವಮೀ ॥ ೧೦೩೪
ನಿಭಸಂಕಾಶನೀಕಾಶಪ್ರತೀಕಾಶೋಪಮಾದಯಃ ।
ಕರ್ಮಣ್ಯಾ ತು ವಿಧಾಭೃತ್ಯಾಭೃತಯೋ ಭರ್ಮ ವೇತನಮ್ ॥ ೧೦೩೫
ಭರಣ್ಯಂ ಭರಣಂ ಮೂಲ್ಯಂ ನಿರ್ವೇಶಃ ಪಣ ಇತ್ಯಪಿ ।
ಸುರಾ ಹಲಿಪ್ರಿಯಾ ಹಾಲಾ ಪರಿಸ್ರುದ್ವರುಣಾತ್ಮಜಾ ॥ ೧೦೩೬
ಗಂಧೋತ್ತಮಾ ಪ್ರಸನ್ನೇರಾಕಾದಂಬರ್ಯಃ ಪರಿಸ್ರುತಾ ।
ಮದಿರಾ ಕಶ್ಯಮದ್ಯೇ ಚಾಪ್ಯವದಂಶಸ್ತು ಭಕ್ಷಣಮ್ ॥ ೧೦೩೭
ಶುಂಡಾ ಪಾನಂ ಮದಸ್ಥಾನಂ ಮಧುವಾರಾ ಮಧುಕ್ರಮಾಃ ।
ಮಧ್ವಾಸವೋ ಮಾಧವಕೋ ಮಧು ಮಾರ್ದ್ವೀಕಮದ್ವಯೋಃ ॥ ೧೦೩೮

೧೦೩೪. ಈ ಶ್ಲೋಕದಲ್ಲಿ ಹೇಳುವ ಏಳು ಶಬ್ದಗಳು ವಿಶೇಷ್ಯಾನುರೋಧವಾಗಿ ಮೂರು ಲಿಂಗಗಳಲ್ಲಿಯೂ ಇರುತ್ತವೆ : ಸಮ, ತುಲ್ಯ, ಸದೃಕ್ಷ, ಸದೃಶ, (ಸ್ತ್ರೀ. ಸದೃಶೀ), ಸದೃಶ್, ಸಾಧಾರಣ (-ಸ್ತ್ರೀ. ಸಾಧಾರಣೀ, ಸಾಧಾರಣಾ), ಸಮಾನ=ಸಮಾನವಾದದ್ದು.

೧೦೩೫-೧೦೩೬. ನಿಭಾದಿ ಶಬ್ದಗಳು ಸಮಾಸದ ಉತ್ತರ ಪದದಲ್ಲಿ ಮಾತ್ರ ಪ್ರಯುಕ್ತವಾಗಿ ಸಮಾನ ಎಂಬ ಅರ್ಥವನ್ನು ಬೋಧಿಸುತ್ತವೆ. ವಿಶೇಷ್ಯಾನುರೋಧವಾಗಿ ಮೂರು ಲಿಂಗಗಳಲ್ಲಿಯೂ ಇರುತ್ತವೆ, ಉದಾ : ಚಂದ್ರನಿಭಂ, ಮುಖಂ, ಚಂದ್ರಿಕಾನಿಭಾ ಕೀರ್ತಿಃ. ನಿಭ, ಸಂಕಾಶ, ನೀಕಾಶ, ಪ್ರತೀಕಾಶ, ಉಪಮ. ಹೀಗೆಯೇ ಭೂತ, ರೂಪ, ಕಲ್ಪ. ಉದಾ— ಪಿತೃಭೂತಃ ಕರ್ಮಣ್ಯಾ, ವಿಧಾ, ಭೃತ್ಯಾ, ಭೃತಿ (ಸ್ತ್ರೀ), ಭರ್ಮನ್, ವೇತನ, ಭರಣ್ಯ, ಭರಣ, ಮೂಲ್ಯ (ನ), ನಿರ್ವೇಶ, ಪಣ (ಪು)=ಸಂಬಳ, ಕೂಲಿ.

೧೦೩೬-೧೦೩೭. ಸುರಾ, ಹಲಿಪ್ರಿಯಾ, ಹಾಲಾ, ಪರಿಸ್ರುತ್, ವರುಣಾತ್ಮಜಾ, ಗಂಧೋತ್ತಮಾ, ಪ್ರಸನ್ನಾ, ಈರಾ, ಕಾದಂಬರೀ, ಪರಿಸ್ರುತಾ, ಮದಿರಾ (ಸ್ತ್ರೀ), ಕಶ್ಯ, ಮದ್ಯ (ನ)=ಹೆಂಡ. ಅವದಂಶ (ಪು)=ನಂಜಿಕೊಳ್ಳತಕ್ಕ ವಸ್ತು-ಉಪ್ಪಿನ ಕಾಯಿ ಮೊದಲಾದದ್ದು.

೧೦೩೮. ಶುಂಡಾ (ಸ್ತ್ರೀ), ಪಾನ, ಮದಸ್ಥಾನ (ನ)=ಹೆಂಡವನ್ನು ಕುಡಿಯುವ ಸ್ಥಳ. ಮಧುರವಾರ, ಮಧುಕ್ರಮ (ಪು)=ಮದ್ಯಪಾನದ ಕ್ರಮ ; ಮದ್ಯಪಾನ ಮಾಡುವ ಸಮಯ. ಮಧ್ವಾಸವ, ಮಾಧವಕ (ಪು), ಮಧು (ನ)=ಹಿಪ್ಪೆಹೂವಿನಿಂದಾದ ಮದ್ಯ. ಮಾರ್ದ್ವೀಕ[1] (ನ)=ದ್ರಾಕ್ಷಿಹಣ್ಣಿನ ಮದ್ಯ.

---

[1] ಮಾಧ್ವೀಕ (ನ) ಎಂಬ ಪಾಠಾಂತರದಲ್ಲಿ ಹಿಪ್ಪೆ ಹೂವಿನ ಮದ್ಯಕ್ಕೆ ಹೆಸರು.

ಮೈರೇಯಮಾಸವಃ ಶೀಧುರ್ಮೇದಕೋ ಜಗಲಸ್ಸಮೌ ।
ಸಂಧಾನಂ ಸ್ಯಾದಭಿಷವಃ ಕಿಣ್ವಂ ಪುಂಸಿ ತು ನಗ್ನಹೂಃ ॥ ೧೦೩೯
ಕಾರೋತ್ತರಃ ಸುರಾಮಂಡಮಾಪಾನಂ ಪಾನಗೋಷ್ಠಿಕಾ ।
ಚಷಕೋಽಸ್ತ್ರೀ ಪಾನಪಾತ್ರಂ ಸರಕೋಽಪ್ಯನುತರ್ಷಣಮ್ ॥ ೧೦೪೦
ಧೂರ್ತೋ ಽಕ್ಷದೇವೀ ಕಿತವೋಽಕ್ಷಧೂರ್ತೋ ದ್ಯೂತಕೃತ್ಸಮಾಃ ।
ಸ್ಯುರ್ಲಗ್ನಕಾಃ ಪ್ರತಿಭುವಃ ಸಭಿಕಾ ದ್ಯೂತಕಾರಕಾಃ ॥ ೧೦೪೧
ದ್ಯೂತೋಽಸ್ತ್ರಿಯಾಮಕ್ಷವತೀ ಕೈತವಂ ಪಣ ಇತ್ಯಪಿ ।
ಪಣೋಽಕ್ಷೇಷು ಗ್ಲಹೋಽಕ್ಷಾಸ್ತು ದೇವನಾಃ ಪಾಶಕಾಶ್ಚತೇ ॥ ೧೦೪೨
ಪರಿಣಾಯಸ್ತು ಶಾರೀಣಾಂ ಸಮಂತನ್ನಯನೇಽಸ್ತ್ರಿಯಾಮ್ ।
ಅಷ್ಟಾಪದಂ ಶಾರಿಫಲಂ ಪ್ರಾಣಿದ್ಯೂತಂ ಸಮಾಹ್ವಯಃ ॥ ೧೦೪೩

೧೦೩೯. ಮೈರೇಯ (ನ), ಆಸವ, ಶೀಧು (ಪು)=ಕಬ್ಬಿನ ಹಾಲು ಮುಂತಾದವುಗಳಿಂದ ಮಾಡಿದ ಬೇರೆ ಬೇರೆ ಜಾತಿಯ ಮದ್ಯ. ಮೇದಕ, ಜಗಲ (ಪು)=ಮದ್ಯವನ್ನು ತಯಾರಿಸಲು ಬೇಕಾಗುವ ವಸ್ತು. ಸಂಧಾನ (ನ), ಅಭಿಷವ (ಪು)=ಮದ್ಯವನ್ನು ತಯಾರಿಸುವುದು (Distilling). ಕಿಣ್ವ (ನ), ನಗ್ನಹೂ (ಪು)=ಹೆಂಡವು ಹುಳಿಯಾಗಲು ಉಪಯೋಗಿಸುವ ವಸ್ತು ; ಕುಡುಕರ ಕೂಗಾಟ.

೧೦೪೦. ಕಾರೋತ್ತರ (ಪು), ಸುರಾಮಂಡ (ನ)=ಹೆಂಡದ ತಿಳಿ. ಆಪಾನ (ನ),ಪಾನಗೋಷ್ಠಿಕಾ (ಸ್ತ್ರೀ)=ಹೆಂಡಕುಡಿಯುವವರ ಗೋಷ್ಠಿ. ಚಷಕ (ಪು. ನ), ಪಾನಪಾತ್ರ (ನ)=ಹೆಂಡವನ್ನು ಕುಡಿಯುವ ಬಟ್ಟಲು. ಸರಕ (ಪು.ನ), ಅನುತರ್ಷಣ (ನ)=ಹೆಂಡವನ್ನು ಬಡಿಸುವುದು ; ಹೆಂಡವನ್ನು ಕುಡಿಯುವ ಬಟ್ಟಲು.

೧೦೪೧. ಧೂರ್ತ, ಅಕ್ಷದೇವಿನ್, ಕಿತವ, ಅಕ್ಷಧೂರ್ತ, ದ್ಯೂತಕೃತ್ (ಪು)=ಜೂಜಾಡತಕ್ಕವನು, ಜೂಜುಕೋರ. ಲಗ್ನಕ, ಪ್ರತಿಭೂ (ಪು)=ಹೊಣೆಗಾರ, 'ಜಾಮೀನು' ಹೇಳಿದವನು. ಸಭಿಕ, ದ್ಯೂತಕಾರಕ (ಪು)=ಜೂಜುಕಟ್ಟೆಯನ್ನು ನಡೆಸುವವನು.

೧೦೪೨. ದ್ಯೂತ (ಪು. ನ), ಅಕ್ಷವತೀ (ಸ್ತ್ರೀ), ಕೈತವ (ನ), ಪಣ (ಪು)=ಜೂಜು. ಪಣ, ಗ್ಲಹ (ಪು)=ಪಗಡೆಯಾಟದಲ್ಲಿ ಕಟ್ಟುವ ಪಂತ, ಪಂದ್ಯ. ಅಕ್ಷ, ದೇವನ, ಪಾಶಕ (ಪು)=ಪಗಡೆಕಾಯಿ.

೧೦೪೩. ಪರಿಣಾಯ (ಪು)=ಪಗಡೆಕಾಯಿ ನಡೆಸುವುದು. ಅಷ್ಟಾಪದ, ಶಾರಿಫಲ

ಉಕ್ತಾ ಭೂರಿಪ್ರಯೋಗತ್ವಾದೇಕಸ್ಮಿನ್ ಯೇಽತ್ರ ಯೌಗಿಕಾಃ ।
ತಾದ್ಧರ್ಮ್ಯಾದನ್ಯತೋ ವೃತ್ತಾವೂಹ್ಯಾ ಲಿಂಗಾಂತರೇಽಪಿ ತೇ ॥ ೧೦೪೪

ಇತಿ ಶೂದ್ರವರ್ಗಃ

ಇತ್ಯಮರಸಿಂಹಕೃತೌ ನಾಮಲಿಂಗಾನುಶಾಸನೇ ।
ದ್ವಿತೀಯಕಾಂಡೋ ಭೂಮ್ಯಾದಿಃ ಸಾಂಗ ಏವ ಸಮರ್ಥಿತಃ ॥ ೧೦೪೫

ಇತಿ ನಾಮಲಿಂಗಾನುಶಾಸನೇ ದ್ವಿತೀಯಕಾಂಡಂ

ಸಂಪೂರ್ಣಮ್

(ನ)=ಪಗಡೆಯಾಡುವ ಹಲಿಗೆ. ಪ್ರಾಣಿದ್ಯೂತ (ನ),ಸಮಾಹ್ವಯ (ಪು)=ಕೋಳಿ ಮೊದಲಾದ ಪ್ರಾಣಿಗಳ ಪಂದ್ಯ.

೧೦೪೪. ಇಲ್ಲಿ ಯೌಗಿಕಗಳಾದ ಮಾಲಾಕಾರಾದಿ ಶಬ್ದಗಳನ್ನು ಪ್ರಯೋಗ ಬಾಹುಳ್ಯವನ್ನನುಸರಿಸಿ ಒಂದೇ ಪುಲ್ಲಿಂಗದಲ್ಲಿ ಹೇಳಲಾಗಿದೆ. ಆ ಶಬ್ದಗಳ ಸಿದ್ಧಿಗೆ ಪ್ರಯೋಜಕವಾದ ಧರ್ಮವು ಬೇರೆ ಎಡೆಯಲ್ಲಿ ಬಂದಾಗ ಲಿಂಗಾಂತರಗಳಾದ ಸ್ತ್ರೀ ನಪುಂಸಕಗಳಲ್ಲಿಯೂ ಆ ಶಬ್ದಗಳು ವರ್ತಿಸುತ್ತವೆ.

ವಿವರಣೆ :- ಮಾಲಾಕಾರ, ವೈಣಿಕ ಮುಂತಾದವು ಮಾಲೆಯನ್ನು ಕಟ್ಟುವುದು, ವೀಣೆಯನ್ನು ನುಡಿಸುವುದು ಎಂಬ ಕ್ರಿಯೆಯ ಯೋಗದಿಂದಾದ ಯೌಗಿಕ ಶಬ್ದಗಳು. ಇವು ಪುಲ್ಲಿಂಗಗಳೆಂದು ತಿಳಿಸಲಾಗಿದೆ. ಆದರೆ ಈ ಕ್ರಿಯಾಯೋಗವು ಬೇರೆ ಎಡೆಯಲ್ಲಿಯೂ ಬರಬಹುದು. ಉದಾ : ಮಾಲಾಕಾರೀ ವೈಣಿಕೀ ವಾ ಸ್ತ್ರೀ. ಮಾಲಾಕಾರಂ ವೈಣಿಕಂ ವಾ ಕುಲಮ್. ಆದ್ದರಿಂದ ಇಂಥ ಶಬ್ದಗಳನ್ನು ಅರ್ಥಾನುಸಾರವಾಗಿ ಲಿಂಗಾಂತರದಲ್ಲಿಯೂ ಪ್ರಯೋಗಿಸಬಹುದು.

ಕರಣ, ಮಾಗಧ ಮುಂತಾದವು ಜಾತಿವಾಚಕಗಳು. ಇವು ಯೌಗಿಕಗಳಲ್ಲ. ಇವೂ ಸಹ ಅರ್ಥಾನುಸಾರವಾಗಿ ಕರಣೀ, ಮಾಗಧೀ ಎಂದು ಲಿಂಗಾಂತರವನ್ನು ಪಡೆಯುತ್ತವೆ. ಈ ಸೂಚನೆಯು ಶೂದ್ರವರ್ಗಕ್ಕೆ ಮಾತ್ರವೇ ಅಲ್ಲ, ದ್ವಿತೀಯ ಕಾಂಡದ ಎಲ್ಲ ವರ್ಗಗಳಿಗೂ ಅನ್ವಯಿಸುತ್ತದೆ.

೧೦೪೫. ಅಮರಸಿಂಹನ ಕೃತಿಯಾದ ನಾಮಲಿಂಗಾನುಶಾಸನದಲ್ಲಿ ಭೂಮಿವರ್ಗ ಮುಂತಾದವುಗಳಿಂದ ಯುಕ್ತವಾದ ದ್ವಿತೀಯಕಾಂಡವು ಈ ರೀತಿಯಲ್ಲಿ ಸಾಂಗವಾಗಿ ವಿವರಿಸಲ್ಪಟ್ಟಿತು.

ತೃತೀಯಕಾಂಡಮ್

ವಿಶೇಷ್ಯನಿಘ್ನೈಃ ಸಂಕೀರ್ಣೈರ್ನಾನಾರ್ಥೈರವ್ಯಯೈರಪಿ ।
ಲಿಂಗಾದಿಸಂಗ್ರಹೈರ್ವರ್ಗಾಸ್ಸಾಮಾನ್ಯೇ ವರ್ಗಸಂಶ್ರಯಾಃ ॥ ೧೦೪೬

೧. ವಿಶೇಷ್ಯ ನಿಘ್ನವರ್ಗಃ

ಸ್ತ್ರೀದಾರಾದ್ಯೈರ್ಯದ್ವಿಶೇಷ್ಯಂ ಯಾದೃಶ್ಯೈಃ ಪ್ರಸ್ತುತಂ ಪದೈಃ ।
ಗುಣದ್ರವ್ಯಕ್ರಿಯಾಶಬ್ದಾಸ್ತಥಾ ಸ್ಯುಸ್ತಸ್ಯ ಭೇದಕಾಃ ॥ ೧೦೪೭

ತೃತೀಯ ಕಾಂಡ

೧೦೪೬. ಈ ಸಾಮಾನ್ಯ ಕಾಂಡದಲ್ಲಿ ವಿಶೇಷ್ಯನಿಘ್ನ, ಸಂಕೀರ್ಣ, ನಾನಾರ್ಥ, ಅವ್ಯಯ, ಲಿಂಗಾದಿಸಂಗ್ರಹ-ಇವುಗಳಿಂದ ಕೂಡಿದ ಐದು ವರ್ಗಗಳಿವೆ. ಈ ವರ್ಗಗಳು, ವರ್ಗಸಂಶ್ರಯಾಃ—ಹಿಂದೆ ಹೇಳಿದ ಸ್ವರ್ಗಾದಿ ವರ್ಗಗಳಿಗೆ ಸಂಬಂಧಿಸಿದ ಸಾಧಾರಣ ಶಬ್ದಗಳಿಂದ ಕೂಡಿವೆ.

ಟಿಪ್ಪಣಿ —ಇಲ್ಲಿ ಉಕ್ತವಾದ ಸುಕೃತಿ ಮುಂತಾದ ಶಬ್ದಗಳು ಹಿಂದೆ ಹೇಳಿದ ದೇವ, ಮನುಷ್ಯ ಮುಂತಾದವುಗಳೊಡನೆ ಪ್ರಯೋಗಿಸಲು ಅರ್ಹವಾದ ಸಾಧಾರಣ ಶಬ್ದಗಳು.

ವಿಶೇಷ್ಯನಿಘ್ನ ವರ್ಗ

೧೦೪೭. ಈ ವರ್ಗದಲ್ಲಿ ಯಾವ ಯಾವ ಲಿಂಗ ಸಂಖ್ಯಾ ವಿಶಿಷ್ಟವಾದ ಸ್ತ್ರೀ, ದಾರ-ಮುಂತಾದ ಪದಗಳಿಂದ ವಿಶೇಷ್ಯವು ಪ್ರಸ್ತುತವಾಗಿರುತ್ತಿದೆಯೋ, ಅದರ ವಿಶೇಷಣಗಳಾದ ಗುಣ ದ್ರವ್ಯಕ್ರಿಯಾ ಶಬ್ದಗಳು ಆಯಾ ಲಿಂಗ ಸಂಖ್ಯೆಗಳನ್ನೇ ಪಡೆಯುತ್ತವೆ.

ವಿವರಣೆ—ವಿಶೇಷಣವು ಯಾವಾಗಲೂ ಗುಣ ದ್ರವ್ಯಕ್ರಿಯೆಗಳಲ್ಲಿ ಯಾವುದಾದರೊಂದನ್ನು ನಿಮಿತ್ತವಾಗಿಟ್ಟುಕೊಂಡು ಪ್ರವರ್ತಿಸುತ್ತದೆ. ಹೇಗೆಂದರೆ—ಸುಕೃತಿ, ದಂಡಿ, ಪಾಚಕ—ಇವು ಮೂರೂ ವಿಶೇಷಣಗಳೇ. ಸುಕೃತಿ ಶಬ್ದದಲ್ಲಿ ಸುಕೃತವೆಂಬ ಗುಣವೂ, ದಂಡಿ ಶಬ್ದದಲ್ಲಿ ದಂಡವೆಂಬ ದ್ರವ್ಯವೂ, ಪಾಚಕ ಶಬ್ದದಲ್ಲಿ ಪಾಕವೆಂಬ ಕ್ರಿಯೆಯೂ ಆಯಾ ಶಬ್ದಗಳ ಸಿದ್ಧಿಗೆ ನಿಮಿತ್ತಗಳು. ಯಾವ ವಿಶೇಷಣವನ್ನು ತೆಗೆದುಕೊಂಡರೂ ಗುಣದ್ರವ್ಯಕ್ರಿಯೆ ಗಳಲ್ಲೊಂದು ಪ್ರವೃತ್ತಿ ನಿಮಿತ್ತವಾಗಿ ಇರುತ್ತದೆ. ಈ ಶಬ್ದಗಳು ವಿಶೇಷ್ಯದ

ಕ್ಷೇಮಂಕರೋಽರಿಷ್ಟತಾತಿಶ್ಶಿವತಾತಿಶ್ಶಿವಂಕರಃ ।
ಸುಕೃತೀ ಪುಣ್ಯವಾನ್ ಧನ್ಯೋ ಮಹೇಚ್ಛಸ್ತು ಮಹಾಶಯಃ ॥ ೧೦೪೮
ಹೃದಯಾಲುಸ್ಸುಹೃದಯೋ ಮಹೋತ್ಸಾಹೋ ಮಹೋದ್ಯಮಃ ।
ಪ್ರವೀಣೇ ನಿಪುಣಾಭಿಜ್ಞವಿಜ್ಞನಿಷ್ಣಾತಶಿಕ್ಷಿತಾಃ ॥ ೧೦೪೯
ವೈಜ್ಞಾನಿಕಃ ಕೃತಮುಖಃ ಕೃತೀ ಕುಶಲ ಇತ್ಯಪಿ ।
ಪೂಜ್ಯಃ ಪ್ರತೀಕ್ಷ್ಯಸ್ಸಾಂಶಯಿಕಸ್ಸಂಶಯಾಪನ್ನಮಾನಸಃ ॥ ೧೦೫೦
ದಕ್ಷಿಣೀಯೋ ದಕ್ಷಿಣಾರ್ಹಸ್ತತ್ರ ದಕ್ಷಿಣ್ಯ ಇತ್ಯಪಿ ।
ಸ್ಯುರ್ವದಾನ್ಯಸ್ಥೂಲಲಕ್ಷದಾನಶೌಂಡಾ ಬಹುಪ್ರದೇ ॥ ೧೦೫೧

ಲಿಂಗ ಸಂಖ್ಯೆ ಗಳನ್ನನುಸರಿಸುತ್ತವೆ. ಉದಾ : ಸುಕೃತಿನೀ ಸ್ತ್ರೀ, ಸುಕೃತಿನೋ ದಾರಾಃ, ಸುಕೃತಿ ಕಲತ್ರಮ್.

ಈ ವರ್ಗದಲ್ಲಿ ಹೇಳುವ ಶಬ್ದಗಳು ಮೂರು ಲಿಂಗಗಳಲ್ಲಿಯೂ ಇರುತ್ತವೆ. ಸ್ತ್ರೀಲಿಂಗ ದಲ್ಲಿ ರೂಪವಿಶೇಷಗಳಿದ್ದರೆ, ಅಲ್ಲಲ್ಲಿ ತಿಳಿಸಲಾಗುವುದು. ಕೆಲವು ಪ್ರಸಿದ್ಧ ಪದಗಳ ಅರ್ಥ ವನ್ನು ಪುಲ್ಲಿಂಗಾನುಸಾರವಾಗಿ ಬರೆದಿದೆ.

೧೦೪೮. ಕ್ಷೇಮಂಕರ, ಅರಿಷ್ಟತಾತಿ, ಶಿವತಾತಿ, ಶಿವಂಕರ=ಶುಭವನ್ನು ಮಾಡುವವನು. ಸುಕೃತಿನ್, ಪುಣ್ಯವತ್, ಧನ್ಯ (—ಸ್ತ್ರೀ. ಸುಕೃತಿನೀ, ಪುಣ್ಯವತೀ)=ಪುಣ್ಯಶಾಲಿ. ಮಹೇಚ್ಛ, ಮಹಾಶಯ=ಶ್ರೇಷ್ಠವಾದ ಅಭಿಪ್ರಾಯವುಳ್ಳವನು.

ಲಕ್ಷ್ಯದೃಷ್ಟ್ಯಾಸ್ತ್ರಿಯಾಂ ಪುಂಸಿ ಗೌರ್ಲಿಂಗಂ ಚಿಹ್ನಶೇಫಸೋಃ ।
ಶೃಂಗಂ ಪ್ರಾಧಾನ್ಯಸಾನ್ವೋಶ್ಚ ವರಾಂಗಂ ಮೂರ್ಧಗುಹ್ಯಯೋಃ ॥ ೧೨೨೭
ಭಗಃ ಶ್ರೀಕಾಮಮಾಹಾತ್ಮ್ಯ ವೀರ್ಯಯತ್ನಾರ್ಕಕೀರ್ತಿಷು ।

ಇತಿ ಗಾಂತವರ್ಗಃ

೧೨೨೫. ಸಾರಂಗ (ಪು)=ಚಾತಕಪಕ್ಷಿ, ಜಿಂಕೆ. ಸಾರಂಗ (ಪು. ಸ್ತ್ರೀ. ನ) (—ಸ್ತ್ರೀ. ಸಾರಂಗೀ)=ಚಿತ್ರವರ್ಣದ ವಸ್ತು. ಪ್ಲವಗ (ಪು)=ಕಪಿ, ಕಪ್ಪೆ. ಅಭಿಷಂಗ (ಪು)=ಶಾಪ, ತಿರಸ್ಕಾರ.

೧೨೨೬—೧೨೨೭. ಯುಗ (ಪು)=ನೊಗ, ಯುಗ (ನ)=ಜೊತೆ, ಕೃತಾದಿ ಯುಗ. ಗೋ= ಸ್ವರ್ಗ, ಬಾಣ, ಎತ್ತು ಅಥವಾ ಹಸು, ಮಾತು, ವಜ್ರಾಯುಧ, ದಿಕ್ಕು, ಕಣ್ಣು, ಕಿರಣ, ಭೂಮಿ, ನೀರು. ಗೋಶಬ್ದವು ಸ್ವರ್ಗ, ಎತ್ತು, ಕಿರಣ, ವಜ್ರಾಯುಧ— ಇಷ್ಟು ಅರ್ಥಗಳಲ್ಲಿ ಪುಲ್ಲಿಂಗ. ಉಳಿದ ಅರ್ಥಗಳಲ್ಲಿ ಸ್ತ್ರೀಲಿಂಗ. ಲಿಂಗ (ನ)=ಚಿಹ್ನೆ, ಶಿಶ್ನ. ಶೃಂಗ (ನ)=ಪ್ರಾಧಾನ್ಯ, ಪರ್ವತ ಶಿಖರ. ವರಾಂಗ (ನ)=ತಲೆ, ಸ್ತ್ರೀಯರ ಗುಹ್ಯಾಂಗ.

೧೨೨೮. ಭಗ (ಪು)=ಐಶ್ವರ್ಯ, ಇಚ್ಛೆ, ಮಹಿಮೆ, ಶಕ್ತಿ, ಯತ್ನ, ಸೂರ್ಯ, ಕೀರ್ತಿ, (ಸ್ತ್ರೀಯರ ಗುಹ್ಯಾಂಗ).

ಘಾಂತಗಳು

೧೨೨೮—೧೨೩೯. ಪರಿಘ (ಪು)=ಬಡಿಯುವುದು, ಒಂದು ಆಯುಧ. ಓಘ (ಪು)=ಸಮೂಹ, ನೀರಿನ ವೇಗ. ಅರ್ಘ (ಪು)=ಬೆಲೆ, ಪೂಜಾವಿಧಿ. ಅಘ (ನ)=ಪಾಪ, ದುಃಖ, ದ್ಯೂತಾದಿವ್ಯಸನ. ಲಘು (ಪು. ಸ್ತ್ರೀ. ನ) (—ಸ್ತ್ರೀ. ಲಘ್ವೀ—ಲಘು)=ಇಷ್ಟ[1]ವಾದ, ಅಲ್ಪ.

---

[1] ಉದಾ:—ದರ್ಶನೇನ ಲಘುನಾ ಯಥಾ ತಯೋಃ ಪ್ರೀತಿಮಾಪುರುಭಯೋಸ್ತಪಸ್ವಿನಃ ॥–ರಘು, ೧೧—೧೨

ಪರಿಘಃ ಪರಿಘಾತೇಽಸ್ತ್ರೇಽಪ್ಯೋಘೋ ವೃಂದೇಂಽಭಸಾಂ ರಯೇ ॥ ೧೨೨೮
ಮೂಲ್ಯೇ ಪೂಜಾವಿಧಾವರ್ಘೋಂಽಹೋದುಃಖವ್ಯಸನೇಷ್ವಘಮ್ ।

ಇತಿ ಘಾಂತಾಃ

ತ್ರಿಷ್ವಿಷ್ಟೇಽಲ್ಪೇ ಲಘುಃ ಕಾಚಾಶ್ಶಿಕ್ಯಮೃದ್ಭೇದದೃಗ್ರುಜಃ ॥ ೧೨೨೯
ವಿಪರ್ಯಾಸೇ ವಿಸ್ತರೇ ಚ ಪ್ರಪಂಚಃ ಪಾವಕೇ ಶುಚಿಃ ।
ಮಾಸ್ಯಮಾತ್ಯೇ ಚಾತ್ಯುಪಧೇ ಪುಂಸಿ ಮೇಧ್ಯೇ ಸಿತೇ ತ್ರಿಷು ॥ ೧೨೩೦
ಅಭಿಷ್ವಂಗೇ ಸ್ಪೃಹಾಯಾಂ ಚ ಗಭಸ್ತೌ ಚ ರುಚಿಸ್ತ್ರಿಯಾಮ್ ।

ಇತಿ ಚಾಂತಾಃ

ಕೇಕಿತಾರ್ಕ್ಷ್ಯಾವಹಿಭುಜೌ ದಂತವಿಪ್ರಾಂಡಜಾ ದ್ವಿಜಾಃ ॥ ೧೨೩೧
ಅಜಾ ವಿಷ್ಣುಹರಚ್ಛಾಗಾ ಗೋಷ್ಠಾಧ್ವನಿವಹಾ ವ್ರಜಾಃ ।
ಧರ್ಮರಾಜೌ ಜಿನಯಮೌ ಕುಂಜೋ ದಂತೇಽಪಿ ನ ಸ್ತ್ರಿಯಾಮ್ ॥ ೧೨೩೨

ಚಾಂತಗಳು

೧೨೨೯—೧೨೩೦. ಕಾಚ (ಪು)=ನೇತುಹಾಕುವ ಜೋಳಿಗೆ, ಗಾಜು, ನೇತ್ರರೋಗ. ಪ್ರಪಂಚ (ಪು)=ವೈಪರೀತ್ಯ, ವಿಸ್ತಾರ. ಶುಚಿ (ಪು)=ಬೆಂಕಿ, ಆಷಾಢಮಾಸ. ಲಂಚ ಮುಂತಾದ ದೋಷವಿಲ್ಲದ ಮಂತ್ರಿ. ಶುಚಿ (ಪು. ಸ್ತ್ರೀ. ನ)=ಪರಿಶುದ್ಧ, ಶುಭ್ರ. ರುಚಿ (ಸ್ತ್ರೀ)=ಆಸಕ್ತಿ, ಇಚ್ಛೆ, ಕಿರಣ.

ಜಾಂತಗಳು

೧೨೩೧—೧೨೩೨. ಅಹಿಭುಜ್ (ಪು)=ನವಿಲು, ಗರುಡ. ದ್ವಿಜ (ಪು)=ಹಲ್ಲು, ಬ್ರಾಹ್ಮಣ, ಹಕ್ಕಿ. ಅಜ (ಪು)=ವಿಷ್ಣು, ಶಿವ, ಮೇಕೆ. ವ್ರಜ (ಪು)=ಕೊಟ್ಟಿಗೆ, ದಾರಿ, ಸಮೂಹ. ಧರ್ಮರಾಜ (ಪು)=ಬುದ್ಧ, ಯಮ. ಕುಂಜ (ಪು.ನ)=ಆನೆಯ ದಂತ, (ಲತಾಗೃಹ).

ವಲಜಂ ಕ್ಷೇತ್ರಪೂರ್ದ್ವಾರೇ ವಲಜಾ ವಲ್ಗುದರ್ಶನಾ ।
ಸಮುಕ್ಷ್ಮಾಂಶೇ ರಣೇಽಪ್ಯಾಜಿಃ ಪ್ರಜಾ ಸ್ಯಾತ್ಸಂತತೌ ಜನೇ ॥ ೧೨೩೩
ಅಬ್ಜೌ ಶಂಖಶಶಾಂಕೌ ಚ ಸ್ವಕೇ ನಿತ್ಯೇ ನಿಜಂ ತ್ರಿಷು ।

ಇತಿ ಜಾಂತಾಃ

ಪುಂಸ್ಯಾತ್ಮನಿ ಪ್ರವೀಣೇ ಚ ಕ್ಷೇತ್ರಜ್ಞೋ ವಾಚ್ಯಲಿಂಗಕಃ ॥ ೧೨೩೪
ಸಂಜ್ಞಾ ಸ್ಯಾಚ್ಚೇತನಾ ನಾಮಹಸ್ತಾದ್ಯೈಶ್ಚಾರ್ಥಸೂಚನಾ ।

ಇತಿ ಞಾಂತಾಃ

ಕಾಕೇಭಗಂಡೌ ಕರಟೌ ಗಜಗಂಡಕಟೀ ಕಟೌ ॥ ೧೨೩೫
ಶಿಪಿವಿಷ್ಟಸ್ತು ಖಲತೌ ದುಶ್ಚರ್ಮಣಿ ಮಹೇಶ್ವರೇ ।
ದೇವಶಿಲ್ಪಿನ್ಯಪಿ ತ್ವಷ್ಟಾ ದಿಷ್ಟಂ ದೈವೇಽಪಿ ನ ದ್ವಯೋಃ ॥ ೧೨೩೬

೧೨೩೩—೧೨೩೪. ವಲಜ (ನ)=ಹೊಲ, ನಗರದ್ವಾರ. ವಲಜಾ (ಸ್ತ್ರೀ)=ಸುಂದರಿ. ಆಜಿ (ಸ್ತ್ರೀ)=ಸಮವಾದ ನೆಲ, ಯುದ್ಧ. ಪ್ರಜಾ (ಸ್ತ್ರೀ)=ಸಂತಾನ, ಜನ. ಅಬ್ಜ (ಪು)=ಶಂಖ, ಚಂದ್ರ, (ಅಬ್ಜ (ನ)=ಕಮಲ). ನಿಜ (ಪು. ಸ್ತ್ರೀ.ನ)=ತನ್ನದು, ಶಾಶ್ವತವಾದ.

ಞಾಂತಗಳು

೧೨೩೪—೧೨೩೫. ಕ್ಷೇತ್ರಜ್ಞ (ಪು)=ಆತ್ಮ. ಕ್ಷೇತ್ರಜ್ಞ (ಪು. ಸ್ತ್ರೀ.ನ)=ನಿಪುಣ. ಸಂಜ್ಞಾ (ಸ್ತ್ರೀ)=ಚೈತನ್ಯ, ಹೆಸರು, ಹಸ್ತಾದಿಗಳಿಂದ ಅಭಿಪ್ರಾಯವನ್ನು ಸೂಚಿಸುವುದು.

ಟಾಂತಗಳು

೧೨೩೫—೧೨೩೬. ಕರಟ (ಪು)=ಕಾಗೆ, ಆನೆಯ ಗಂಡಸ್ಥಳ. ಕಟ (ಪು)—ಆನೆಯ ಗಂಡಸ್ಥಳ, ಸೊಂಟ. ಶಿಪಿವಿಷ್ಟ (ಪು)=ಬೋಳದಲೆಯವನು, ಕುಷ್ಠರೋಗಿ, ಪರಮೇಶ್ವರ. ತ್ವಷ್ಟೃ (ಪು)=ವಿಶ್ವಕರ್ಮ, ಬಡಗಿ. ದಿಷ್ಟ, (ನ)=ದೈವ. (ದಿಷ್ಟ(ಪು)=ಕಾಲ).

ರಸೇ ಕಟುಃ ಕಟ್ವಕಾರ್ಯೇ ತ್ರಿಷು ಮತ್ಸರತೀಕ್ಷ್ಣಯೋಃ ।
ರಿಷ್ಟಂ ಕ್ಷೇಮಾಶುಭಾಭಾವೇ ತ್ವರಿಷ್ಟೇ ತು ಶುಭಾಶುಭೇ ॥ ೧೨೩೭
ಮಾಯಾನಿಶ್ಚಲಯಂತ್ರೇಷು ಕೈತವಾನೃತರಾಶಿಷು ।
ಅಯೋಘನೇ ಶೈಲಶೃಂಗೇ ಸೀರಾಂಗೇ ಕೂಟಮಸ್ತ್ರಿಯಾಮ್ ॥ ೧೨೩೮
ಸೂಕ್ಷ್ಮೈಲಾಯಾಂ ತ್ರುಟಿಃ ಸ್ತ್ರೀಸ್ಯಾತ್ಕಾಲೇಽಲ್ಪೇ ಸಂಶಯೇಽಪಿ ಸಾ ।
ಅತ್ಯುತ್ಕರ್ಷಾಶ್ರಯಃ ಕೋಟ್ಯೋ ಮೂಲೇ ಲಗ್ನಕಚೇ ಜಟಾ ॥ ೧೨೩೯
ವ್ಯುಷ್ಟಿಃ ಫಲೇ ಸಮೃದ್ಧೌ ಚ ದೃಷ್ಟಿರ್ಜ್ಞಾನೇಽಕ್ಷ್ಣಿ ದರ್ಶನೇ ।
ಇಷ್ಟಿರ್ಯಾಗೇಚ್ಛಯೋಃ ಸೃಷ್ಟಂ ನಿಶ್ಚಿತೇ ಬಹುಲೇ ತ್ರಿಷು ॥ ೧೨೪೦
ಕಷ್ಟೇ ತು ಕೃಚ್ಛ್ರ ಗಹನೇ ದಕ್ಷಾಮಂದಾಗದೇಷು ತು ।

ಇತಿ ಟಾಂತಾಃ

ಪಟುರ್ದ್ವೌ ವಾಚ್ಯಲಿಂಗೌ ಚ ನೀಲಕಂಠಶ್ಶಿವೇಽಪಿ ಚ ॥ ೧೨೪೧

೧೨೩೭. ಕಟು (ಪು)=ಖಾರ, ಕಟು (ನ)=ದುಷ್ಕಾರ್ಯ. ಕಟು (ವಿ. ನಿಘ್ನ)=ಮಾತ್ಸರ್ಯವುಳ್ಳ, ತೀಕ್ಷ್ಣವಾದ. ರಿಷ್ಟ (ನ)=ಕ್ಷೇಮ, ಅಶುಭ, ವಿನಾಶ. ಅರಿಷ್ಟ (ನ)=ಶುಭ, ಅಶುಭ.

೧೨೩೮. ಕೂಟ (ಪು.ನ)=ಇಂದ್ರಜಾಲ ಮುಂತಾದ ಮಾಯಾವಿದ್ಯೆ. ನಿಶ್ಚಲವಸ್ತು, ಬೋನು ಮುಂತಾದ ಕಪಟಯಂತ್ರ, ವಂಚನೆ, ಸುಳ್ಳು, ಸಮೂಹ, ಸುತ್ತಿಗೆ, ಬೆಟ್ಟದ ಶಿಖರ, ಗುಳ.

೧೨೩೯. ತ್ರುಟಿ (ಸ್ತ್ರೀ)=ಸಣ್ಣ ಯಾಲಕ್ಕಿ, ಕಾಲದ ಒಂದು ಅಲ್ಪವಾದ ಪರಿಮಾಣ, ಸಂಶಯ. ಕೋಟೀ (ಸ್ತ್ರೀ)=ಹೆಚ್ಚುಗಾರಿಕೆ, ಧನುಸ್ಸಿನ ತುದಿ. ಜಟಾ (ಸ್ತ್ರೀ)=ಮರದ ಬಿಳಲು, ಜಡೆ.

೧೨೪೦—೧೨೪೧. ವ್ಯುಷ್ಟಿ (ಸ್ತ್ರೀ)=ಪ್ರಯೋಜನ, ಸಮೃದ್ಧಿ. ದೃಷ್ಟಿ (ಸ್ತ್ರೀ)=ಜ್ಞಾನ, ಕಣ್ಣು, ನೋಟ. ಇಷ್ಟಿ (ಸ್ತ್ರೀ)=ಯಾಗ, ಇಚ್ಛೆ. ಸೃಷ್ಟ (ಪು.ಸ್ತ್ರೀ.ನ)= ನಿಶ್ಚಿತ, ಬಹಳವಾದ. ಕಷ್ಟ (ಪು. ಸ್ತ್ರೀ.ನ)=ಕ್ಲೇಶಕರ, ಪ್ರವೇಶಿಸಲು ಅಶಕ್ಯ. ಪಟು (ಪು. ಸ್ತ್ರೀ. ನ) (—ಸ್ತ್ರೀ. ಪಟ್ವೀ—ಪಟು)=ದಕ್ಷ, ಚುರುಕು ಬುದ್ಧಿಯವನು, ಆರೋಗ್ಯವುಳ್ಳವನು.

ಪುಂಸಿ ಕೋಷ್ಠೋಽನ್ತರ್ಜಠರಂ ಕುಸೂಲೋಽನ್ತರ್ಗೃಹಂ ತಥಾ ।
ನಿಷ್ಠಾ ನಿಷ್ಪತ್ತಿನಾಶಾಂತಾಃ ಕಾಷ್ಠೋತ್ಕರ್ಷೇ ಸ್ಥಿತೌ ದಿಶಿ ॥ ೧೨೪೨
ತ್ರಿಷು ಜ್ಯೇಷ್ಠೋಽತಿಶಸ್ತೇಽಪಿ ಕನಿಷ್ಠೋಽತಿಯುವಾಲ್ಪಯೋಃ ।

ಇತಿ ಠಾಂತಾಃ

ದಂಡೋಽಸ್ತ್ರೀ ಲಗುಡೇಽಪಿ ಸ್ಯಾದ್ಗುಡೋ ಗೋಲೇಕ್ಷು ಪಾಕಯೋಃ ॥೧೨೪೩
ಸರ್ಪಮಾಂಸಾತ್ಪಶೂ ವ್ಯಾಡೌ ಗೋಭೂವಾಚಸ್ತ್ವಿಡಾ ಇಲಾ ।
ಕ್ಷ್ವೇಡಾ ವಂಶಶಲಾಕಾಪಿ ನಾಡೀ ಕಾಲೇಽಪಿ ಷಟ್ಕ್ಷಣೇ ॥ ೧೨೪೪
ಕಾಂಡೋಽಸ್ತ್ರೀ ದಂಡಬಾಣಾರ್ವವರ್ಗಾವಸರವಾರಿಷು ।
ಸ್ಯಾದ್ಭಾಂಡಮಶ್ವಾಭರಣೇಽಮತ್ರೇ ಮೂಲವಣಿಗ್ಧನೇ ॥ ೧೨೪೫

ಇತಿ ಡಾಂತಃ

ಠಾಂತಗಳು

೧೨೪೧-೧೨೪೨-೧೨೪೩. ನೀಲಕಂಠ (ಪು)=ಶಿವ, (ನವಿಲು), ಕೋಷ್ಠ (ಪು)=ಹೊಟ್ಟೆಯ ಒಳಭಾಗ, (ಧಾನ್ಯದ ಕಣಜ, ಒಳಮನೆ). ನಿಷ್ಠಾ (ಸ್ತ್ರೀ)=ಕಾರ್ಯಸಿದ್ಧಿ, ನಾಶ, ಕೊನೆ. ಕಾಷ್ಠಾ (ಸ್ತ್ರೀ)=ಅತಿಶಯ, ಸ್ಥಾನ, ದಿಕ್ಕು. ಜ್ಯೇಷ್ಠ (ಪು. ಸ್ತ್ರೀ.ನ)=ಶ್ರೇಷ್ಠ, (ಹಿರಿಯ). ಕನಿಷ್ಠ (ಪು.ಸ್ತ್ರೀ.ನ)=ಬಹಳ ಚಿಕ್ಕವನು, ಅಲ್ಪ.

ಡಾಂತಗಳು

೧೨೪೩-೧೨೪೪. ದಂಡ (ಪು.ನ)=ದೊಣ್ಣೆ, (ದಂಡನೆ), ಗುಡ (ಪು)=ಉಂಡೆ, ಬೆಲ್ಲ. ವ್ಯಾಡ (ಪು)=ಸರ್ಪ, ಮಾಂಸಾಹಾರಿಯಾದ ಪ್ರಾಣಿ. ಇಡಾ—ಇಲಾ (ಸ್ತ್ರೀ)=ಹಸು, ಭೂಮಿ, ಮಾತು. ಕ್ಷ್ವೇಡಾ (ಸ್ತ್ರೀ)=ಬಿದಿರಿನ ಸೀಳು, ಸಿಂಹನಾದ. ನಾಡೀ (ಸ್ತ್ರೀ)=ಆರು ಕ್ಷಣಗಳ ಕಾಲ, (ಸೊಪ್ಪಿನ ದಂಟು, ನರ).

೧೨೪೫. ಕಾಂಡ (ಪು.ನ)=ಕೋಲು, ಬಾಣ, ಕುದುರೆ, ಗ್ರಂಥದ ಒಂದು ವಿಭಾಗ, ಕಾಲ, ನೀರು. ಭಾಂಡ (ನ)=ಕುದುರೆಯ ಆಭರಣ, ಪಾತ್ರೆ, ವ್ಯಾಪಾರದ ಬಂಡವಾಳ.

ಭೃಶಪ್ರತಿಜ್ಞಯೋರ್ಬಾಢಂ ಪ್ರಗಾಢಂ ಭೃಶಕೃಚ್ಛ್ರಯೋಃ ।
ಶಕ್ತಸ್ಥೂಲೌ ತ್ರಿಷು ದೃಢೌ ವ್ಯೂಢೌ ವಿನ್ಯಸ್ತಸಂಹತೌ ॥ ೧೨೪೬

ಇತಿ ಢಾಂತಾಃ

ಭ್ರೂಣೋಽರ್ಭಕೇ ಸ್ತ್ರೈಣಗರ್ಭೇ ಬಾಣೋ ಬಲಿಸುತೇ ಶರೇ ।
ಕಣೋಽತಿಸೂಕ್ಷ್ಮೇ ಧಾನ್ಯಾಂಶೇ ಸಂಘಾತೇ ಪ್ರಮಥೇ ಗಣಃ ॥ ೧೨೪೭
ಪಣೋ ದ್ಯೂತಾದಿಷೂತ್ಸೃಷ್ಟೇ ಭೃತೌ ಮೂಲ್ಯೇ ಧನೇಽಪಿ ಚ ।
ಮೌರ್ವ್ಯಾಂ ದ್ರವ್ಯಾಶ್ರಿತೇ ಸತ್ತ್ವಶುಕ್ಲಸಂಧ್ಯಾದಿಕೇ ಗುಣಃ ॥ ೧೨೪೮
ನಿರ್ವ್ಯಾಪಾರಸ್ಥಿತೌ ಕಾಲವಿಶೇಷೋತ್ಸವಯೋಃ ಕ್ಷಣಃ ।
ವರ್ಣೋ ದ್ವಿಜಾದೌ ಶುಕ್ಲಾದೌ ಸ್ತುತೌ ವರ್ಣಂ ತು ಚಾಕ್ಷರೇ ॥ ೧೨೪೯

ಢಾಂತಗಳು

೧೨೪೬. ಬಾಢ[1] (ನ)=ಅತಿಶಯವಾಗಿ, ಅಂಗೀಕಾರಾರ್ಹವಾಗಿ. ಪ್ರಗಾಢ (ನ)=ಅತಿಶಯವಾದ, ದುಃಖ. ದೃಢ (ಪು. ಸ್ತ್ರೀ. ನ)=ಶಕ್ತ, ಸ್ಥೂಲ. ವ್ಯೂಢ (ಪು. ಸ್ತ್ರೀ. ನ)=ರಚನಾವಿಶೇಷದಿಂದ ಕೂಡಿದ, ಸಂಶ್ಲಿಷ್ಟವಾದ.

ಣಾಂತಗಳು

೧೨೪೭. ಭ್ರೂಣ (ಪು)=ಬಾಲಕ, ಗರ್ಭ. ಬಾಣ (ಪು)=ಬಲಿಯ ಮಗ, ಅಂಬು. ಕಣ (ಪು)=ಅತಿಸೂಕ್ಷ್ಮವಾದ ವಸ್ತು, ಧಾನ್ಯದ ಒಡಕಲು. ಗಣ (ಪು)=ಸಮೂಹ, ಪ್ರಮಥಗಣ.

೧೨೪೮. ಪಣ (ಪು)=ಜೂಜಿನಲ್ಲಿ ಇಡುವ ದ್ರವ್ಯ, ಕೂಲಿ, ಬೆಲೆ, ಹಣ. ಗುಣ (ಪು)=ಬಿಲ್ಲಿನ ಹೆದೆ, ದ್ರವ್ಯದಲ್ಲಿರುವ ರೂಪರಸಾದಿ, ಸತ್ತ್ವರಜಸ್ತಮೋ ಗುಣಗಳು, ಶುಕ್ಲ ಕೃಷ್ಣ ಮುಂತಾದವು, ಸಂಧಿವಿಗ್ರಹಾದಿಗಳು.

---

[1] ಇದು ಕ್ರಿಯಾವಿಶೇಷಣವಾಗಿ ಮಾತ್ರವೇ ಪ್ರಯುಕ್ತವಾಗಿರುವುದು ಕಂಡುಬರುತ್ತದೆ. ಆಗ ನಪುಂಸಕಲಿಂಗದ ದ್ವಿತೀಯೈಕವಚನವೆಂದು ತಿಳಿಯಬೇಕು. ಈ ಶಬ್ದವು ತರಬರ್ಥದಲ್ಲಿ ಸಾಧೀಯಸ್ ಎಂದೂ ತಮಬರ್ಥದಲ್ಲಿ ಸಾಧಿಷ್ಠ ಎಂದೂ ರೂಪವನ್ನು ಪಡೆಯುತ್ತದೆ. ಹೀಗೆ ರೂಪಾಂತರವಾದಾಗ ಕ್ರಿಯಾವಿಶೇಷಣವೆಂಬ ನಿಯಮವಿಲ್ಲ.

ಅರುಣೋ ಭಾಸ್ಕರೇಽಪಿ ಸ್ಯಾದ್ವರ್ಣಭೇದೇಽಪಿ ಚ ತ್ರಿಷು ।
ಸ್ಥಾಣುಃ ಶರ್ವೇಽಪ್ಯಥ ದ್ರೋಣಃ ಕಾಕೇಽಪಿ ಚ ರವೇ ರಣಃ ॥ ೧೨೫೦
ಗ್ರಾಮಣೀರ್ನಾಪಿತೇ ಪುಂಸಿ ಶ್ರೇಷ್ಠೇ ಗ್ರಾಮಾಧಿಪೇ ತ್ರಿಷು ।
ಊರ್ಣಾ ಮೇಷಾದಿಲೋಮ್ನಿ ಸ್ಯಾದಾವರ್ತೇ ಚಾಂತರಾ ಭ್ರುವೌ ॥ ೧೨೫೧
ಹರಿಣೀ ಸ್ಯಾನ್ಮೃಗೀ ಹೇಮಪ್ರತಿಮಾ ಹರಿತಾ ಚ ಯಾ ।
ತ್ರಿಷು ಪಾಂಡೌ ಚ ಹರಿಣಃ ಸ್ಥೂಣಾ ಸ್ತಂಭೇಽಪಿ ವೇಶ್ಮನಃ ॥ ೧೨೫೨
ತೃಷ್ಣೇ ಸ್ಪೃಹಾಪಿಪಾಸೇ ದ್ವೇ ಜುಗುಪ್ಸಾಕರುಣೇ ಘೃಣೇ ।
ವಣಿಕ್ಪಥೇ ಚ ವಿಪಣಿಸ್ಸುರಾ ಪ್ರತ್ಯಕ್ಚ ವಾರುಣೀ ॥ ೧೨೫೩
ಕರೇಣುರಿಭ್ಯಾಂ ಸ್ತ್ರೀ ನೇಭೇ ದ್ರವಿಣಂ ತು ಬಲಂ ಧನಮ್ ।
ಶರಣಂ ಗೃಹರಕ್ಷಿತ್ರೋಃ ಶ್ರೀಪರ್ಣಂ ಕಮಲೇಽಪಿ ಚ ॥ ೧೨೫೪

೧೨೪೯. ಕ್ಷಣ (ಪು)=ವಿರಾಮ (Leisure), ಸೆಕೆಂಡಿಗಿಂತ ಕಡಿಮೆಯಾದ ಕಾಲವಿಶೇಷ, ಉತ್ಸವ. ವರ್ಣ (ಪು)=ಬ್ರಾಹ್ಮಣಾದಿ ವರ್ಣ, ಬಿಳುಪು ಮುಂತಾದ ಬಣ್ಣ, ಸ್ತೋತ್ರ. ವರ್ಣ (ನ)=ಅಕ್ಷರ. (ಅಕ್ಷರಾರ್ಥದಲ್ಲಿ ಪುಲ್ಲಿಂಗವೂ ಉಂಟು).

೧೨೫೦. ಅರುಣ (ಪು)=ಸೂರ್ಯ, (ಸೂರ್ಯನ ಸಾರಥಿ). ಅರುಣ (ತ್ರಿಲಿಂಗ)=ಎಳೆಗೆಂಪಾದ. ಸ್ಥಾಣು (ಪು)=ಶಿವ, (ಮೋಟುಮರ). ದ್ರೋಣ (ಪು)=ಕಾಗೆ, (ಒಂದು ಪರಿಮಾಣ, ತುಂಬೆಗಿಡ). ರಣ (ಪು)=ಶಬ್ದ, (ಯುದ್ಧ)

೧೨೫೧. ಗ್ರಾಮಣೀ (ಪು)=ಕ್ಷೌರಿಕ. ಗ್ರಾಮಣೀ (ತ್ರಿಲಿಂಗ.—ನ. ಗ್ರಾಮಣಿ)=ಶ್ರೇಷ್ಠ, ಗ್ರಾಮದ ಒಡೆಯ—ಪಟೇಲ. ಊರ್ಣಾ (ಸ್ತ್ರೀ)=ಕುರಿ ಮುಂತಾದವುಗಳ ಕೂದಲು — ಉಣ್ಣೆ, ಹುಬ್ಬುಗಳ ನಡುವಿನ ಸುರುಳಿ.

೧೨೫೨. ಹರಿಣೀ (ಸ್ತ್ರೀ)=ಹೆಣ್ಣುಜಿಂಕೆ. ಹರಿಣೀ (ಸ್ತ್ರೀ)=ಚಿನ್ನದ ಪ್ರತಿಮೆ, ಹಳದಿಯ ಬಣ್ಣ ಉಳ್ಳದ್ದು (ಹರಿತಾ). ಹರಿಣ (ಪು)=ಜಿಂಕೆ. ಹರಿಣ (ತ್ರಿಲಿಂಗ)=ಹಳದಿಮಿಶ್ರ ಬಿಳುಪಾದ. ಸ್ಥೂಣಾ (ಸ್ತ್ರೀ)=ಕಂಭ (ಕಬ್ಬಿಣದ ಪ್ರತಿಮೆ).

೧೨೫೩. ತೃಷ್ಣಾ (ಸ್ತ್ರೀ)=ಆಸೆ, ಬಾಯಾರಿಕೆ. ಘೃಣಾ (ಸ್ತ್ರೀ)=ಜುಗುಪ್ಸೆ, ಕರುಣೆ. ವಿಪಣಿ (ಸ್ತ್ರೀ)=ಅಂಗಡಿಬೀದಿ, (ಅಂಗಡಿ, ಮಾರಾಟದ ವಸ್ತು) ವಾರುಣೀ (ಸ್ತ್ರೀ)=ಹೆಂಡ, ಪಶ್ಚಿಮದಿಕ್ಕು.

ವಿಷಾಭಿಮರಲೋಹೇಷು ತೀಕ್ಷ್ಣಂ ಕ್ಲೀಬೇ ಖರೇ ತ್ರಿಷು ।
ಪ್ರಮಾಣಂ ಹೇತುಮರ್ಯಾದಾಶಾಸ್ತ್ರೇಯತ್ತಾಪ್ರಮಾತೃಷು ॥ ೧೨೫೫
ಕರಣಂ ಸಾಧಕತಮಂ ಕ್ಷೇತ್ರಗಾತ್ರೇಂದ್ರಿಯೇಷ್ವಪಿ ।
ಪ್ರಾಣ್ಯುತ್ಪಾದೇ ಸಂಸರಣಮಸಂಬಾಧಚಮೂಗತೌ ॥ ೧೨೫೬
ಘಂಟಾಪಥೇಽಥ ವಾಂತಾನ್ನೇ ಸಮುದ್ಧರಣಮುನ್ನಯೇ ।
ಅತಸ್ತ್ರಿಷು ವಿಷಾಣಂ ಸ್ಯಾತ್ಪಶುಶೃಂಗೇಭದಂತಯೋಃ ॥ ೧೨೫೭
ಪ್ರವಣಃ ಕ್ರಮನಿಮ್ನೋರ್ವ್ಯಾಂ ಪ್ರಹ್ವೇ ನಾ ತು ಚತುಷ್ಪಥೇ ।
ಸಂಕೀರ್ಣೌ ನಿಚಿತಾಶುದ್ಧಾವಿರಿಣಂ ಶೂನ್ಯಮೂಷರಮ್ ॥ ೧೨೫೮

ಇತಿ ಣಾಂತಾಃ

೧೨೫೪. ಕರೇಣು (ಸ್ತ್ರೀ)=ಹೆಣ್ಣಾನೆ. ಕರೇಣು (ಪು)=ಗಂಡಾನೆ. ದ್ರವಿಣ (ನ)=ಬಲ, ಹಣ. ಶರಣ (ನ)=ಮನೆ, ಪಾಲಕ. ಶ್ರೀಪರ್ಣ (ನ)=ಕಮಲ, ನೆಲ್ಲಿಗಿಡ.

೧೨೫೫. ತೀಕ್ಷ್ಣ (ನ)=ವಿಷ, ಯುದ್ಧ, ಕಬ್ಬಿಣ (ಅಭಿಮರಃ=ಯುದ್ಧ). ತೀಕ್ಷ್ಣ (ಪು.ಸ್ತ್ರೀ.ನ)=ಹರಿತವಾದ, ಕಠೋರವಾದ. ಪ್ರಮಾಣ (ನ)=ಯಥಾರ್ಥ ಜ್ಞಾನದ ಕಾರಣ, ಅವಧಿ, ಶಾಸ್ತ್ರ, ಅಳತೆ. ಸರಿಯಾಗಿ ತಿಳಿಯತಕ್ಕವನು.

೧೨೫೬. ಕರಣ (ನ)=ಮುಖ್ಯವಾದ ಸಾಧನ, ಹೊಲ, ದೇಹ, ಇಂದ್ರಿಯ. ಸಂಸರಣ (ನ)=ಪ್ರಾಣಿಗಳ ಉತ್ಪತ್ತಿರೂಪವಾದ ಸಂಸಾರ, ಇಕ್ಕಟ್ಟು ಆಗದಂತೆ ಸೈನ್ಯದ ನಡಿಗೆ, ದೊಡ್ಡ ಬೀದಿ.

೧೨೫೭. ಸಮುದ್ಧರಣ (ನ)=ಕಕ್ಕಿದ ಅನ್ನ, ಮೇಲಕ್ಕೆ ಎತ್ತುವುದು. ಮುಂದೆ ಣಾಂತವು ಮುಗಿಯುವವರೆಗಿನ ಶಬ್ದಗಳು ಮೂರು ಲಿಂಗಗಳಲ್ಲಿ ಇರುತ್ತವೆ. ವಿಷಾಣ (ತ್ರಿಲಿಂಗ, —ಸ್ತ್ರೀ. ವಿಷಾಣೀ. ಇದು ವಿ. ನಿಘ್ನವಲ್ಲ)=ಕೊಂಬು, ಆನೆಯ ದಂತ.

೧೨೫೮. ಪ್ರವಣ (ತ್ರಿಲಿಂಗ)=ಕ್ರಮವಾಗಿ ಇಳಿಜಾರಾದ ನೆಲ, ವಿನೀತ. ಪ್ರವಣ (ಪು)=ನಾಲ್ಕು ಬೀದಿಗಳು ಸೇರುವ ಚೌಕ. ಸಂಕೀರ್ಣ (ವಿ. ನಿಘ್ನ)=ಸಂಮಿಶ್ರವಾದ, ಅಶುದ್ಧವಾದ. ಈರಿಣ (ಇರಿಣ) (ತ್ರಿಲಿಂಗ)=ಪಾಳುಬಿದ್ದ ನೆಲ, ಚೌಳುಭೂಮಿ.

ದೇವಸೂರ್ಯೌ ವಿವಸ್ವಂತೌ ಸರಸ್ವಂತೌ ನದಾರ್ಣವೌ ।
ಪಕ್ಷಿತಾರ್ಕ್ಷ್ಯೌ ಗರುತ್ಮಂತೌ ಶಕುಂತೌ ಭಾಸಪಕ್ಷಿಣೌ ॥ ೧೨೫೯
ಅಗ್ನ್ಯುತ್ಪಾತೌ ಧೂಮಕೇತೂ ಜೀಮೂತೌ ಮೇಘಪರ್ವತೌ ।
ಹಸ್ತೌ ತು ಪಾಣಿನಕ್ಷತ್ರೇ ಮರುತೌ ಪವನಾಮರೌ ॥ ೧೨೬೦
ಯಂತಾ ಹಸ್ತಿಪಕೇ ಸೂತೇ ಭರ್ತಾ ಧಾತರಿ ಪೋಷ್ಟರಿ ।
ಯಾನಪಾತ್ರೇ ಶಿಶೌ ಪೋತಃ ಪ್ರೇತಃ ಪ್ರಾಣ್ಯಂತರೇ ಮೃತೇ ॥ ೧೨೬೧
ಗ್ರಹಭೇದೇ ಧ್ವಜೇ ಕೇತುಃ ಪಾರ್ಥಿವೇ ತನಯೇ ಸುತಃ ।
ಸ್ಥಪತಿಃ ಕಾರುಭೇದೇಽಪಿ ಭೂಭೃದ್ಭೂಮಿಧರೇ ನೃಪೇ ॥ ೧೨೬೨
ಮೂರ್ಧಾಭಿಷಿಕ್ತೋ ಭೂಪೇಽಪಿ ಋತುಃ ಸ್ತ್ರೀಕುಸುಮೇಽಪಿ ಚ ।
ವಿಷ್ಣಾವಪ್ಯಜಿತಾವ್ಯಕ್ತೌ ಸೂತಸ್ತ್ವಷ್ಟರಿ ಸಾರಥೌ ॥ ೧೨೬೩

ತಾಂತಗಳು

೧೨೫೯. ವಿವಸ್ವತ್ (ಪು)=ದೇವತೆ, ಸೂರ್ಯ. ಸರಸ್ವತ್ (ಪು)=ಸರಸ್ವಾನ್ ಎಂಬ ಒಂದು ಹೊಳೆ, ಸಮುದ್ರ. ಗುರುತ್ಮತ್ (ಪು)=ಹಕ್ಕಿ, ಗರುಡ, ಶಕುಂತ (ಪು)=ಚಂಬಾರಕಾಗೆ (Raven), ಹಕ್ಕಿ

೧೨೬೦. ಧೂಮಕೇತು (ಪು)=ಅಗ್ನಿ, ಉತ್ಪಾತ. ಜೀಮೂತ (ಪು)=ಮೋಡ, ಬೆಟ್ಟ. ಹಸ್ತ (ಪು)=ಕೈ, ನಕ್ಷತ್ರವಿಶೇಷ. ಮರುತ್ (ಪು)=ವಾಯು, ದೇವತೆ.

೧೨೬೧. ಯಂತೃ (ಪು)=ಮಾವುತ, ಸಾರಥಿ. ಭರ್ತೃ (ಪು)=ಹೊರುವವನು, ಪೋಷಿಸುವವನು. ಪೋತ (ಪು)=ಹರಿಗೋಲು, ಮಗು. ಪ್ರೇತ (ಪು)=ನರಕದಲ್ಲಿರುವ ಜೀವಿ ಅಥವಾ ಒಂದು ಭೂತ, ಸತ್ತವನು (ಸಪಿಂಡೀಕರಣವಾಗುವುದಕ್ಕಿಂತ ಪೂರ್ವದಲ್ಲಿ).

೧೨೬೨. ಕೇತು (ಪು)=ಕೇತು ಎಂಬ ಗ್ರಹ, ಬಾವುಟ. ಸುತ (ಪು)=ಕ್ಷತ್ರಿಯ, ಮಗ. ಸ್ಥಪತಿ (ಪು)=ಶಿಲ್ಪಿ, (ಬೃಹಸ್ಪತಿಯಾಗಕರ್ತ, ಕಂಚುಕಿ). ಭೂಭೃತ್ (ಪು)=ಬೆಟ್ಟ, ರಾಜ.

೧೨೬೩. ಮೂರ್ಧಾಭಿಷಿಕ್ತ (ಪು)=ಪಟ್ಟಾಭಿಷಿಕ್ತನಾದ ರಾಜ, (ಮಂತ್ರಿ, ಕ್ಷತ್ರಿಯ). ಋತು (ಪು)=ಸ್ತ್ರೀಯರ ರಜಸ್ಸು, (ವಸಂತಾದಿ ಋತು). ಅಜಿತ (ಪು)=ವಿಷ್ಣು (ಶಿವ, ಜಯಿಸಲ್ಪಡದವನು). ಅವ್ಯಕ್ತ (ಪು)=ವಿಷ್ಣು, (ಶಿವ, ವ್ಯಕ್ತವಲ್ಲದ್ದು). ಸೂತ (ಪು)=ಬಡಗಿ, ಸಾರಥಿ.

ವ್ಯಕ್ತಃ ಪ್ರಾಜ್ಞೇಽಪಿ ದೃಷ್ಟಾಂತವುಭೇ ಶಾಸ್ತ್ರನಿದರ್ಶನೇ ।
ಕ್ಷತ್ತಾಸ್ಯಾತ್ಸಾರಥೌ ದ್ವಾಃಸ್ಥೇಕ್ಷತ್ರಿಯಾಯಾಂ ಚ ಶೂದ್ರಜೇ ॥ ೧೨೬೪
ವೃತ್ತಾಂತಸ್ಸ್ಯಾತ್ಪ್ರಕರಣೇ ಪ್ರಕಾರೇ ಕಾರ್ತ್ಸ್ನ್ಯವಾರ್ತಯೋಃ ।
ಆನರ್ತಸ್ಸಮರೇ ನೃತ್ಯಸ್ಥಾನನೀವೃದ್ವಿಶೇಷಯೋಃ ॥ ೧೨೬೫
ಕೃತಾಂತೋ ಯಮಸಿದ್ಧಾಂತದೈವಾಕುಶಲಕರ್ಮಸು ।
ಶ್ಲೇಷ್ಮಾದಿ ರಸರಕ್ತಾದಿ ಮಹಾಭೂತಾನಿ ತದ್ಗುಣಾಃ ॥ ೧೨೬೬
ಇಂದ್ರಿಯಾಣ್ಯಶ್ಮವಿಕೃತಿಃ ಶಬ್ದಯೋನಿಶ್ಚ ಧಾತವಃ ।
ಕಕ್ಷ್ಯಾಂತರೇಽಪಿ ಶುದ್ಧಾಂತೋ ನೃಪಸ್ಯಾಸರ್ವಗೋಚರೇ ॥ ೧೨೬೭
ಕಾಸೂಸಾಮರ್ಥ್ಯಯೋಃ ಶಕ್ತಿಃ ಮೂರ್ತಿಃ ಕಾಠಿನ್ಯಕಾಯಯೋಃ ।
ವಿಸ್ತಾರವಲ್ಲ್ಯೋರ್ವ್ರತತಿರ್ವಸತೀ ರಾತ್ರಿವೇಶ್ಮನೋಃ ॥ ೧೨೬೮
ಕ್ಷಯಾರ್ಚಯೋರಪಚಿತಿಃ ಸಾತಿರ್ದಾನಾವಸಾನಯೋಃ ।
ಅರ್ತಿಃಪೀಡಾಧನುಷ್ಕೋಟ್ಯೋರ್ಜಾತಿಸ್ಸಾಮಾನ್ಯ ಜನ್ಮನೋಃ ॥ ೧೨೬೯

೧೨೬೪. ವ್ಯಕ್ತ (ಪು)=ಬುದ್ಧಿಶಾಲಿ, (ಸ್ಪಷ್ಟವಾದ). ದೃಷ್ಟಾಂತ (ಪು)=ಶಾಸ್ತ್ರ, ಉದಾಹರಣೆ. ಕ್ಷತ್ತೃ (ಪು)=ಸಾರಥಿ, ದ್ವಾರಪಾಲಕ, ಶೂದ್ರನಿಂದ ಕ್ಷತ್ರಿಯ ಸ್ತ್ರೀಯಲ್ಲಿ ಹುಟ್ಟಿದವನು. (ವಿದುರನು ಕ್ಷತ್ತೃವೆನಿಸಿದ್ದು ಹೇಗೆ ?)

೧೨೬೫. ವೃತ್ತಾಂತ (ಪು)=ಪ್ರಕೃತ ಸಂದರ್ಭ, ರೀತಿ, ಸಮಗ್ರತೆ, ಸುದ್ದಿ. ಆನರ್ತ (ಪು)=ಯುದ್ಧ, ನೃತ್ಯಶಾಲೆ, ಒಂದು ದೇಶ.

೧೨೬೬—೧೨೬೭. ಕೃತಾಂತ (ಪು)=ಯಮ, ಸಿದ್ಧಾಂತ, ಅದೃಷ್ಟ, ಪಾಪಕರ್ಮ, ಧಾತು (ಪು)=ವಾತ ಪಿತ್ತ ಶ್ಲೇಷ್ಮಗಳು, ರಸ ರಕ್ತಮಾಂಸಾದಿಗಳು (ರಸ=ತಿಂದ ಆಹಾರದ ಪ್ರಥಮ ರೂಪಾಂತರ), ಭೂಮಿ ಜಲ ಮುಂತಾದ ಪಂಚಭೂತಗಳು, ಶಬ್ದಸ್ಪರ್ಶಾದಿ ಗುಣಗಳು, ಗುಣಗಳು, ಇಂದ್ರಿಯ, ಗೈರಿಕಲೋಹ, ಭೂ—ಏಧ್ ಮುಂತಾದ ಕ್ರಿಯಾಪದದ ಮೂಲ ರೂಪ. ಶುದ್ಧಾಂತ (ಪು)=ರಾಜನ ಏಕಾಂತಸ್ಥಳ, ಅಂತಃಪುರದ ಸ್ತ್ರೀಜನ.

೧೨೬೮. ಶಕ್ತಿ (ಸ್ತ್ರೀ)=ಆಯುಧ ವಿಶೇಷ, ಸಾಮರ್ಥ್ಯ. ಮೂರ್ತಿ (ಸ್ತ್ರೀ)=ಕಠಿನತ್ವ, ಶರೀರ. ವ್ರತತಿ (ಸ್ತ್ರೀ)=ವಿಸ್ತಾರ, ಬಳ್ಳಿ. ವಸತಿ (ಸ್ತ್ರೀ)=ರಾತ್ರಿ, ಮನೆ.

೧೨೬೯. ಅಪಚಿತಿ (ಪು)=ಕ್ಷೀಣಿಸುವಿಕೆ, ಪೂಜೆ. ಸಾತಿ (ಸ್ತ್ರೀ)=ದಾನ, ಅವಸಾನ. ಅರ್ತಿ[1]

---

[1] ಪೀಡೆ ಎಂಬ ಅರ್ಥದಲ್ಲಿ 'ಆರ್ತಿ' ಎಂಬ ಶಬ್ದವೂ ಇದೆ.

ಪ್ರಚಾರಸ್ಯಂದಯೋ ರೀತಿರೀತಿರ್ಡಿಂಬಪ್ರವಾಸಯೋಃ ।
ಉದಯೇಽಧಿಗಮೇ ಪ್ರಾಪ್ತಿಸ್ತ್ರೇತಾ ತ್ವಗ್ನಿತ್ರಯೇ ಯುಗೇ ॥ ೧೨೭೦
ವೀಣಾಭೇದೇಽಪಿ ಮಹತೀ ಭೂತಿರ್ಭಸ್ಮನಿ ಸಂಪದಿ ।
ನದೀನಗರ್ಯ್ಯೋರ್ನಾಗಾನಾಂ ಭೋಗವತ್ಯಥ ಸಂಗರೇ ॥ ೧೨೭೧
ಸಂಗೇ ಸಭಾಯಾಂ ಸಮಿತಿಃ ಕ್ಷಯವಾಸಾವಪಿ ಕ್ಷಿತಿಃ ।
ರವೇರರ್ಚಿಶ್ಚ ಶಸ್ತ್ರಂ ಚ ವಹ್ನಿಜ್ವಾಲಾ ಚ ಹೇತಯಃ ॥ ೧೨೭೨
ಜಗತೀ ಜಗತಿ ಚ್ಛಂದೋವಿಶೇಷೇಽಪಿ ಕ್ಷಿತಾವಪಿ ।
ಪಂಕ್ತಿಶ್ಛಂದೋಽಪಿ ದಶಮಂ ಸ್ಯಾತ್ಪ್ರಭಾವೇಽಪಿ ಚಾಯತಿಃ ॥ ೧೨೭೩
ಪತ್ತಿರ್ಗತೌ ಚ ಮೂಲೇ ತು ಪಕ್ಷತಿಃ ಪಕ್ಷಭೇದಯೋಃ ।
ಪ್ರಕೃತಿರ್ಯೋನಿಲಿಂಗೇ ಚ ಕೈಶಿಕ್ಯಾದ್ಯಾಶ್ಚ ವೃತ್ತಯಃ ॥ ೧೨೭೪

(ಸ್ತ್ರೀ)= ಪೀಡೆ, ಬಿಲ್ಲಿನ ತುದಿ. ಜಾತಿ (ಸ್ತ್ರೀ)=ದ್ರವ್ಯಗುಣ ಕರ್ಮಗಳಲ್ಲಿರುವ ಸಾಮಾನ್ಯಧರ್ಮ, ಜನನ.

೧೨೭೦. ರೀತಿ (ಸ್ತ್ರೀ)=ವ್ಯವಹಾರ, ಜಾರುವುದು, (ಹಿತ್ತಾಳೆ). ಈತಿ (ಸ್ತ್ರೀ)=ಅತಿವೃಷ್ಟಿ[1] ಮುಂತಾದ ಬಾಧೆ, ಪರಸ್ಥಳವಾಸ. ಪ್ರಾಪ್ತಿ (ಸ್ತ್ರೀ)=ಏಳಿಗೆ, ಪಡೆಯುವುದು. ತ್ರೇತಾ (ಸ್ತ್ರೀ)=ಗಾರ್ಹಪತ್ಯಾದಿ ಅಗ್ನಿತ್ರಯ, ಒಂದು ಯುಗ,

೧೨೭೧—೧೨೭೨. ಮಹತೀ (ಸ್ತ್ರೀ)=(ನಾರದರ) ವೀಣೆ, ಶ್ರೇಷ್ಠವಾದದ್ದು (ವಿ. ನಿಘ್ನ),. ಭೂತಿ (ಸ್ತ್ರೀ)=ಬೂದಿ, ಐಶ್ವರ್ಯ. ಭೋಗವತೀ (ಸ್ತ್ರೀ)=ನಾಗಲೋಕದ ನದಿ, ನಾಗಲೋಕದ ರಾಜಧಾನಿ. ಸಮಿತಿ (ಸ್ತ್ರೀ)=ಯುದ್ಧ, ಸೇರುವಿಕೆ, ಸಭೆ. ಕ್ಷಿತಿ (ಸ್ತ್ರೀ)=ಕ್ಷೀಣಿಸುವುದು, ಮನೆ, (ಭೂಮಿ). ಹೇತಿ (ಸ್ತ್ರೀ)=ಸೂರ್ಯಕಿರಣ, ಆಯುಧ, ಅಗ್ನಿಜ್ವಾಲೆ.

೧೨೭೩. ಜಗತೀ (ಸ್ತ್ರೀ)=ಜಗತ್ತು, ಜಗತೀ ಎಂಬ ಛಂದಸ್ಸು, ಭೂಮಿ. ಪಂಕ್ತಿ (ಸ್ತ್ರೀ)=ಪಂಕ್ತಿ ಎಂಬ ಛಂದಸ್ಸು,. ಹತ್ತು (Ten) (ಸಾಲು). ಆಯತಿ (ಸ್ತ್ರೀ)=ಪ್ರಭಾವ, (ಭವಿಷ್ಯತ್ಕಾಲ, ವಿಸ್ತಾರ).

೧೨೭೪. ಪತ್ತಿ (ಸ್ತ್ರೀ)=ನಡಿಗೆ, (ಪು=ಕಾಲಾಳು). ಪಕ್ಷತಿ (ಸ್ತ್ರೀ)=ಪಾಡ್ಯ, ರೆಕ್ಕೆಯ ಬುಡ. ಪ್ರಕೃತಿ (ಸ್ತ್ರೀ)=ಉಪಾದಾನ ಕಾರಣ (ಉದಾ : ಗಡಿಗೆಗೆ ಮಣ್ಣು), ಚಿಹ್ನೆ,

---

[1] ಅತಿವೃಷ್ಟಿರನಾವೃಷ್ಟಿರ್ಮೂಷಕಾಃ ಶಲಭಾಃ ಶುಕಾಃ । ಅತ್ಯಾಸನ್ನಾಶ್ಚರಾಜಾನಃ ಷಡೇತಾ ಈತಯಃ ಸ್ಮೃತಾಃ ॥

ಸಿಕತಾಸ್ಸ್ಯುರ್ವಾಲುಕಾಪಿ ವೇದೇ ಶ್ರವಸಿ ಚ ಶ್ರುತಿಃ ।
ವನಿತಾ ಜನಿತಾತ್ಯರ್ಥಾನುರಾಗಾಯಾಂ ಚ ಯೋಷಿತಿ ॥ ೧೨೭೫
ಗುಪ್ತಿಃ ಕ್ಷಿತಿವ್ಯುದಾಸೇಽಪಿ ಧೃತಿರ್ಧಾರಣಧೈರ್ಯಯೋಃ ।
ಬೃಹತೀ ಕ್ಷುದ್ರವಾರ್ತಾಕೀ ಛಂದೋಭೇದೇ ಮಹತ್ಯಪಿ ॥ ೧೨೭೬
ವಾಸಿತಾ ಸ್ತ್ರೀಕರಿಣ್ಯೋಶ್ಚ ವಾರ್ತಾ ವೃತ್ತೌ ಜನಶ್ರುತೌ ।
ವಾರ್ತಂ ಫಲ್ಗುನ್ಯರೋಗೇ ಚ ತ್ರಿಷ್ವಪ್ಸು ಚ ಘೃತಾಮೃತೇ ॥ ೧೨೭೭
ಕಲಧೌತಂ ರೂಪ್ಯಹೇಮ್ನೋರ್ನಿಮಿತ್ತಂ ಹೇತುಲಕ್ಷ್ಮಣೋಃ ।
ಶ್ರುತಂ ಶಾಸ್ತ್ರಾವಧೃತಯೋರ್ಯುಗಪರ್ಯಾಪ್ತಯೋಃ ಕೃತಮ್ ॥ ೧೨೭೮
ಅತ್ಯಾಹಿತಂ ಮಹಾಭೀತಿಃ ಕರ್ಮ ಜೀವಾನಪೇಕ್ಷಿ ಚ ।
ಯುಕ್ತೇ ಕ್ಷ್ಮಾದಾವೃತೇ ಭೂತಂ ಪ್ರಾಣ್ಯ ತೀತೇ ಸಮೇ ತ್ರಿಷು ॥ ೧೨೭೯

(ರಾಜ್ಯಾಂಗ, ಸ್ವಭಾವ). ವೃತ್ತಿ (ಸ್ತ್ರೀ)=ಕೈಶಿಕೀ[1] ಮುಂತಾದ ವೃತ್ತಿ, (ಜೀವನೋಪಾಯ, ವ್ಯಾಖ್ಯಾನ).

೧೨೭೫. ಸಿಕತಾ (ಸ್ತ್ರೀ. ನಿತ್ಯಬಹುವಚನ)=ಮರಳು, ಮರಳಿನ ನೆಲ. ಶ್ರುತಿ (ಸ್ತ್ರೀ)=ವೇದ, ಕಿವಿ, (ಕೇಳುವಿಕೆ). ವನಿತಾ (ಸ್ತ್ರೀ)=ಅನುರಕ್ತಳಾದ ಸ್ತ್ರೀ, ಹೆಂಗಸು.

೧೨೭೬. ಗುಪ್ತಿ (ಸ್ತ್ರೀ)=ನೆಲಮಾಳಿಗೆ (ಹಗೇವು), (ರಕ್ಷಣೆ, ಸೆರೆಮನೆ). ಧೃತಿ (ಸ್ತ್ರೀ)=ಧಾರಣೆ, ಧೈರ್ಯ, (ಸಂತೋಷ). ಬೃಹತೀ (ಸ್ತ್ರೀ)=ರಾಮಗುಳ್ಳ (ಒಂದು ಜಾತಿಯ ಬದನೆ), ಒಂದು ಛಂದಸ್ಸು, ದೊಡ್ಡದು (ವಿ. ನಿಘ್ನ. ಪು. ಬೃಹತ್).

೧೨೭೭. ವಾಸಿತಾ (ಸ್ತ್ರೀ)=ಹೆಂಗಸು, ಹೆಣ್ಣಾನೆ. ವಾರ್ತಾ (ಸ್ತ್ರೀ)=ಜೀವನೋಪಾಯ, ಸುದ್ದಿ. ವಾರ್ತ (ಪು. ಸ್ತ್ರೀ. ನ)=ನಿಸ್ಸಾರ, ಆರೋಗ್ಯವುಳ್ಳ (ಆರೋಗ್ಯ) (ನ). ಘೃತ, ಅಮೃತ (ನ)=ನೀರು (ತುಪ್ಪ).

೧೨೭೮. ಕಲಧೌತ (ನ)=ಬೆಳ್ಳಿ, ಚಿನ್ನ. ನಿಮಿತ್ತ (ನ)=ಕಾರಣ, ಚಿಹ್ನೆ. ಶ್ರುತ (ನ)=ಶಾಸ್ತ್ರ, ಕೇಳಲ್ಪಟ್ಟ (ವಿ. ನಿಘ್ನ). ಕೃತ (ನ)=ಒಂದು ಯುಗ, ಸಾಕು (Enough).

೧೨೭೯. ಅತ್ಯಾಹಿತ (ನ)=ಮಹಾಭಯ, ಜೀವದಮೇಲೆ ಆಸೆಯಿಲ್ಲದೆ ಮಾಡುವ ಕೆಲಸ. ಭೂತ (ನ)=ಯುಕ್ತ, ಭೂಮಿ ಮೊದಲಾದ ಪಂಚಮಹಾಭೂತಗಳು, ಸತ್ಯ, ಜೀವಿ, ಸದೃಶ (ಪಿತೃಭೂತಃ ಮಾತೃಭೂತಾ—ಇಲ್ಲಿ ಸದೃಶವಾಚಿ. ಇದು ವಿ. ನಿಘ್ನ).

---

[1] ಕೈಶಿಕೀ, ಸಾತ್ವಿಕೀ, ಆರಭಟೀ ಮತ್ತು ಭಾರತೀ ಎಂದು ವೃತ್ತಿಗಳು ನಾಲ್ಕು.

ವೃತ್ತಂ ಪದ್ಯೇ ಚರಿತ್ರೇ ತ್ರಿಷ್ವತೀತೇ ದೃಢನಿಸ್ತಲೇ ।
ಮಹದ್ರಾಜ್ಯಂ ಚಾವಗೀತಂ ಜನ್ಯೇ ಸ್ಯಾದ್ಗರ್ಹಿತೇ ತ್ರಿಷು ॥ ೧೨೮೦
ಶ್ವೇತಂ ರೂಪ್ಯೇಽಪಿ ರಜತಂ ಹೇಮ್ನಿ ರೂಪ್ಯೇ ಸಿತೇ ತ್ರಿಷು ।
ತ್ರಿಷ್ವಿತೋ ಜಗದಿಂಗೇಽಪಿ ರಕ್ತಂ ನೀಲ್ಯಾದಿರಾಗಿ ಚ ॥ ೧೨೮೧
ಅವದಾತಸ್ಸಿತೇ ಪೀತೇ ಶುದ್ಧೇ ಬದ್ಧಾರ್ಜುನೌ ಸಿತೌ ।
ಯುಕ್ತೇಽತಿಸಂಸ್ಕೃತೇ ಮರ್ಷಿಣ್ಯಭಿನೀತೋಽಥ ಸಂಸ್ಕೃತಮ್ ॥ ೧೨೮೨
ಕೃತ್ರಿಮೇ ಲಕ್ಷಣೋಪೇತೇಽಪ್ಯನಂತೋಽನವಧಾವಪಿ ।
ಖ್ಯಾತೇ ಹೃಷ್ಟೇ ಪ್ರತೀತೋಽಭಿಜಾತಸ್ತು ಕುಲಜೇ ಬುಧೇ ॥ ೧೨೮೩
ವಿವಿಕ್ತೌ ಪೂತವಿಜನೌ ಮೂರ್ಛಿತೌ ಮೂಢಸೋಚ್ಛ್ರಯೌ ।
ದ್ವೌ ಚಾಮ್ಲಪರುಷೌ ಶುಕ್ತೌ ಶಿತೀ ಧವಲಮೇಚಕೌ ॥ ೧೨೮೪

೧೨೮೦. ವೃತ್ತ (ನ)=ಪದ್ಯ, ಚರಿತೆ, ವೃತ್ತ (ವಿ. ನಿಘ್ನ.)=ದೃಢ, ದುಂಡಾದ. ಮಹತ್ (ನ)=ರಾಜ್ಯ, ದೊಡ್ಡದು (ವಿ. ನಿಘ್ನ—ಸ್ತ್ರೀ. ಮಹತೀ). ಅವಗೀತ (ನ)=ಅಪವಾದ, ನಿಂದ್ಯ (ವಿ. ನಿಘ್ನ).

೧೨೮೧. ಶ್ವೇತ (ನ)=ಬೆಳ್ಳಿ, (ಬಿಳುಪಾದ). ರಜತ (ನ)=ಚಿನ್ನ, ಬೆಳ್ಳಿ, ಬಿಳುಪಾದ (ವಿ. ನಿಘ್ನ). ಇಲ್ಲಿಂದ ಮುಂದೆ ತಕಾರಾಂತಗಳು ವಿಶೇಷ್ಯ ನಿಘ್ನಗಳಾಗಿ ಮೂರು ಲಿಂಗಗಳಲ್ಲಿಯೂ ಇರುತ್ತವೆ. ಜಗ[1]ತ್ (—ಸ್ತ್ರೀ. ಜಗತೀ)=ಜಂಗಮವಾದ, ಲೋಕ. ರಕ್ತ=ಬಣ್ಣದಿಂದ ಕೂಡಿದ, ಅನುರಕ್ತ, (ಕೆಂಪಾದ).

೧೨೮೨—೧೨೨೮೩. ಅವದಾತ=ಬಿಳುಪಾದ, ಹಳದಿಯ, ಶುದ್ಧವಾದ. ಸಿತ=ಕಟ್ಟಲ್ಪಟ್ಟ, ಬಿಳುಪಾದ. ಅಭಿನೀತ=ಯೋಗ್ಯ, ಪರಿಷ್ಕೃತ, ಕ್ಷಮಾಯುಕ್ತ. ಸಂಸ್ಕೃತ=ಚೆನ್ನಾಗಿ ಮಾಡಲ್ಪಟ್ಟ, ಲಕ್ಷಣಯುಕ್ತ, (ಪರಿಷ್ಕೃತ). ಅನಂತ=ಅಂತ್ಯವಿಲ್ಲದ (—ಪು. ವಿಷ್ಣು, ಆದಿಶೇಷ, —ನ. ಆಕಾಶ). ಪ್ರತೀತ=ಖ್ಯಾತ, ಸಂತುಷ್ಟ. ಅಭಿಜಾತ, ಸದ್ವಂಶದಲ್ಲಿ ಜನಿಸಿದ, ವಿದ್ವಾಂಸ.

೧೨೮೪. ವಿವಿಕ್ತ=ಪರಿಶುದ್ಧ, ಏಕಾಂತವಾದ. ಮೂರ್ಛಿತ=ಎಚ್ಚರದಪ್ಪಿದ, ವೃದ್ಧಿ ಹೊಂದಿದ. ಶುಕ್ತ=ಹುಳಿಯಾದ, ಕಠೋರ. ಶಿತಿ=ಬಿಳುಪಾದ, ಕಪ್ಪಾದ.

---

[1] ಇದಕ್ಕೆ ಲೋಕ ಎಂಬ ಅರ್ಥದಲ್ಲಿ ಪುಲ್ಲಿಂಗದ ಪ್ರಯೋಗ ದೊರೆಯುವುದಿಲ್ಲ.

ಸತ್ಯೇ ಸಾಧೌ ವಿದ್ಯಮಾನೇ ಪ್ರಶಸ್ತೇಽಭ್ಯರ್ಹಿತೇ ಚ ಸತ್ ।
ಪುರಸ್ಕೃತಃ ಪೂಜಿತೇಽರಾತ್ಯಭಿಯುಕ್ತೇಽಗ್ರತಃ ಕೃತೇ ॥ ೧೨೮೫
ನಿವಾತಾವಾಶ್ರಯಾವಾತೌ ಶಸ್ತ್ರಾಭೇದ್ಯಂ ಚ ವರ್ಮ ಯತ್ ।
ಜಾತೋನ್ನತಪ್ರವೃದ್ಧಾಃ ಸ್ಯುರುಚ್ಛ್ರಿತಾ ಉತ್ಥಿತಾಸ್ತ್ವಮೀ ॥ ೧೨೮೬
ವೃದ್ಧಿಮತ್ಪ್ರೋದ್ಯತೋತ್ಪನ್ನಾ ಆದೃತೌ ಸಾದರಾರ್ಚಿತೌ ।

ಇತಿ ತಾಂತಾಃ

ಅರ್ಥೋಽಭಿಧೇಯರೈವಸ್ತು ಪ್ರಯೋಜನನಿವೃತ್ತಿಷು ॥ ೧೨೮೭
ನಿಪಾನಾಗಮಯೋಸ್ತೀರ್ಥಮೃಷಿಜುಷ್ಟಜಲೇ ಗುರೌ ।
ಸಮರ್ಥಸ್ತ್ರಿಷು ಶಕ್ತಿಸ್ಥೇ ಸಂಬದ್ಧಾರ್ಥೇ ಹಿತೇಽಪಿ ಚ ॥ ೧೨೮೮
ದಶಮೀಸ್ಥೌ ಕ್ಷೀಣರಾಗವೃದ್ಧೌ ವೀಥೀ ಪದವ್ಯಪಿ ।
ಆಸ್ಥಾನೀಯತ್ನಯೋರಾಸ್ಥಾ ಪ್ರಸ್ಥೋಽಸ್ತ್ರೀ ಸಾನುಮಾನಯೋಃ ॥ ೧೨೮೯

ಇತಿ ಥಾಂತಾಃ

೧೨೮೫. ಸತ್ (—ಸ್ತ್ರೀ. ಸತೀ)=ಸತ್ಯವಾದ, ಸಾಧುವಾದ, ಇರತಕ್ಕ, ಪ್ರಶಸ್ತ, ಪೂಜ್ಯ. ಪುರಸ್ಕೃತ=ಪೂಜಿತ, ಶತ್ರುವಿನಿಂದ ಎದುರಿಸಲ್ಪಟ್ಟ, ಮುಂದೆ ಮಾಡಲ್ಪಟ್ಟ.

೧೨೮೬—೧೨೮೭. ನಿವಾತ=ಆಶ್ರಯ, ಗಾಳಿ ಇಲ್ಲದ ಸ್ಥಳ, ಆಯುಧದಿಂದ ಅಭೇದ್ಯವಾದ ಕವಚ. ಉಚ್ಛ್ರಿತ=ಹುಟ್ಟಿದ, ಎತ್ತರವಾದ, ಬೆಳೆದ. ಉತ್ಥಿತ=ಏಳಿಗೆಯುಳ್ಳ, ಉದ್ಯೋಗದಲ್ಲಿ ತೊಡಗಿದ, ಉತ್ಪನ್ನವಾದ. ಆದೃತ=ಆದರಪಾತ್ರ, ಪೂಜಿತ.

ಥಾಂತಗಳು

ಅರ್ಥ (ಪು)=ಶಬ್ದಬೋಧ್ಯವಾದ ಅರ್ಥ, ಧನ, ವಸ್ತು, ಪ್ರಯೋಜನ, ನಿವೃತ್ತಿ (ಉದಾ: ಮಶಕಾರ್ಥೋ ಧೂಮಃ=ಸೊಳ್ಳೆಗಳ ನಿವೃತ್ತಿಗಾಗಿ ಹೊಗೆ). ೧೨೮೮. ತೀರ್ಥ (ನ)=ನೀರಿನ ತೊಟ್ಟಿ, ಶಾಸ್ತ್ರ, ಋಷಿಗಳಿಂದ ಸೇವಿತವಾದ ಜಲಾಶಯ, ಗುರು. ಸಮರ್ಥ (ವಿ. ನಿಘ್ನ)=ಸಾಮರ್ಥ್ಯವುಳ್ಳವನು, ಅನ್ವಯ ಯೋಗ್ಯವಾದ ಅರ್ಥವುಳ್ಳ ಶಬ್ದ, ಹಿತಕರ.

೧೨೮೯. ದಶಮೀಸ್ಥ (ವಿ. ನಿಘ್ನ)=ನಷ್ಟವಾದ ಕಾಮವಾಸನೆಯುಳ್ಳ, ವೃದ್ಧ. ವೀಥೀ (ಸ್ತ್ರೀ)=ಬೀದಿ, (ಸಾಲು). ಆಸ್ಥಾ (ಸ್ತ್ರೀ)=ಆಸ್ಥಾನ, ಯತ್ನ. ಪ್ರಸ್ಥ (ಪು. ನ)=ಬೆಟ್ಟದ ತಪ್ಪಲು, ಕೊಳಗ.

ಅಭಿಪ್ರಾಯವಶೌ ಛಂದಾವಬ್ದೌ ಜೀಮೂತವತ್ಸರೌ ।
ಅಪವಾದೌ ತು ನಿಂದಾಜ್ಞೇ ದಾಯಾದೌ ಸುತಬಾಂಧವೌ ॥ ೧೨೬೦
ಪಾದಾ ರಶ್ಮ್ಯಂಘ್ರಿತುರ್ಯಾಂಶಾಶ್ಚಂದ್ರಾಗ್ನ್ಯರ್ಕಾಸ್ತಮೋನುದಃ ।
ನಿರ್ವಾದೋ ಜನವಾದೇಽಪಿ ಶಾದೋ ಜಂಬಾಲಶಷ್ಪಯೋಃ ॥ ೧೨೬೧
ಸಾರಾವೇ ರುದಿತೇ ತ್ರಾತರ್ಯಾಕ್ರಂದೋ ದಾರುಣೇ ರಣೇ ।
ಸ್ಯಾತ್ಪ್ರಸಾದೋಽನುರೋಧೇಽಪಿ ಸೂದಸ್ಸ್ಯಾದ್ವ್ಯಂಜನೇಽಪಿ ಚ ॥ ೧೨೬೨
ಗೋಷ್ಠಾಧ್ಯಕ್ಷೇಽಪಿ ಗೋವಿಂದೋ ಹರ್ಷೇಽಪ್ಯಾಮೋದವನ್ಮದಃ ।
ಪ್ರಾಧಾನ್ಯೇ ರಾಜಲಿಂಗೇ ಚ ವೃಷಾಂಗೇ ಕಕುದೋಽಸ್ತ್ರಿಯಾಮ್ ॥ ೧೨೬೩
ಸ್ತ್ರೀ ಸಂವಿಜ್ಞಾನಸಂಭಾಷಾಕ್ರಿಯಾಕಾರಾಜಿನಾಮಸು ।
ಧರ್ಮೇ ರಹಸ್ಯುಪನಿಷತ್ಸ್ಯಾದೃತೌ ವತ್ಸರೇ ಶರತ್ ॥ ೧೨೬೪
ಪದಂ ವ್ಯವಸಿತತ್ರಾಣಸ್ಥಾನಲಕ್ಷ್ಮಾಂಘ್ರಿವಸ್ತುಷು ।
ಗೋಷ್ಪದಂ ಸೇವಿತೇ ಮಾನೇ ಪ್ರತಿಷ್ಠಾಕೃತ್ಯಮಾಸ್ಪದಮ್ ॥ ೧೨೬೫

ದಾಂತಗಳು

೧೨೬೦. ಛಂದ (ಪು)=ಅಭಿಪ್ರಾಯ, ಅಧೀನ. ಅಬ್ದ (ಪು)=ಮೋಡ, ವರ್ಷ. ಅಪವಾದ (ಪು)=ನಿಂದೆ, ಆಜ್ಞೆ. ದಾಯಾದ (ಪು)=ಮಗ, ಬಂಧು.

೧೨೬೧. ಪಾದ (ಪು)=ಕಿರಣ, ಕಾಲು, ನಾಲ್ಕನೆಯ ಒಂದು ಭಾಗ. ತಮೋನುದ್ (ಪು)=ಚಂದ್ರ, ಅಗ್ನಿ,ಸೂರ್ಯ. ನಿರ್ವಾದ (ಪು)=ಅಪವಾದ (ನಿಶ್ಚಿತವಾದ ವಾದ, ವಾದರಹಿತ). ಶಾದ (ಪು)=ಕೆಸರು, ಎಳೆಹುಲ್ಲು.

೧೨೬೨. ಆಕ್ರಂದ (ಪು)=ಆರ್ತಧ್ವನಿಯಿಂದ ಕೂಡಿದ ರೋದನ, ರಕ್ಷಕ ಭೀಕರಯುದ್ಧ. ಪ್ರಸಾದ (ಪು)=ಅನುಗ್ರಹ (ನೈರ್ಮಲ್ಯ, ಪ್ರೀತಿ). ಸೂದ (ಪು)=ತೊವ್ವೆ ಮುಂತಾದ ಊಟದ ಪರಿಕರ, (ಅಡಿಗೆಯವನು).

೧೨೬೩. ಗೋವಿಂದ (ಪು)=ದನದ ಕೊಟ್ಟಿಗೆಯ ಒಡೆಯ, (ಶ್ರೀ ಕೃಷ್ಣ). ಆಮೋದ, ಮದ (ಪು)=ಸಂತೋಷ, (ಗರ್ವ). ಕಕುದ (ಪು)=ಶ್ರೇಷ್ಠ, ರಾಜಚಿಹ್ನೆ, ಎತ್ತಿನ ಹಿಣಿಲು.

೧೨೬೪. ಸಂವಿದ್ (ಸ್ತ್ರೀ)=ಜ್ಞಾನ, ಸಂಭಾಷಣೆ, ಕ್ರಿಯಾನಿಶ್ಚಯ, ಯುದ್ಧ, ಹೆಸರು. ಉಪನಿಷದ್ (ಸ್ತ್ರೀ)=ಧರ್ಮ, ರಹಸ್ಯ, (ವೇದಾಂತ). ಶರದ್ (ಸ್ತ್ರೀ)=ಶರದೃತು, ವರ್ಷ.

೧೨೬೫. ಪದ (ನ)=ಉದ್ಯೋಗ, ರಕ್ಷಣೆ, ಸ್ಥಳ, ಚಿಹ್ನೆ, ಪಾದ, ವಸ್ತು. ಗೋಷ್ಪದ

ತ್ರಿಷ್ವಿಷ್ಟಮಧುರೌ ಸ್ವಾದೂ ಮೃದೂ ಚಾತೀಕ್ಷ್ಣ ಕೋಮಲೌ ।
ಮೂಢಾಲ್ಪಾಪಟುನಿರ್ಭಾಗ್ಯಾ ಮಂದಾಸ್ಸ್ಯುರ್ದ್ವೌ ತು ಶಾರದೌ ॥ ೧೨೬
ಪ್ರತ್ಯಗ್ರಾಪ್ರತಿಭೌ ವಿದ್ವತ್ಸುಪ್ರಗಲ್ಭೌ ವಿಶಾರದೌ ।

ಇತಿ ದಾಂತಾಃ

ವ್ಯಾಮೋ ವಟಶ್ಚ ನ್ಯಗ್ರೋಧಾವುತ್ಸೇಧಃ ಕಾಯ ಉನ್ನತಿಃ ॥ ೧೨೭
ಪರ್ಯಾಹಾರಶ್ಚ ಮಾರ್ಗಶ್ಚ ವಿವಧೌ ವೀವಧೌ ಚ ತೌ ।
ಪರಿಧಿರ್ಯಜ್ಞಿಯತರೋಶ್ಶಾಖಾಯಾಮುಪಸೂರ್ಯಕೇ ॥ ೧೨೮
ಬಂಧಕಂ ವ್ಯಸನಂ ಚೇತಃಪೀಡಾಧಿಷ್ಠಾನಮಾಧಯಃ ।
ಸ್ಯುಸ್ಸಮರ್ಥನನೀವಾಕನಿಯಮಾಶ್ಚ ಸಮಾಧಯಃ ॥ ೧೨೯

(ನ)=ಗೋವುಗಳು ತಿರುಗಾಡುವ ಸ್ಥಳ, ಗೋವುಗಳು ಹೆಜ್ಜೆಯಿಡುವಷ್ಟು ಸ್ಥಳ. ಆಸ್ಪದ (ನ)=ಸ್ಥಳ, ಕರ್ತವ್ಯ.

೧೨೬—೧೨೭. ಸ್ವಾದು (ವಿ. ನಿಘ್ನ—ಸ್ತ್ರೀ. ಸ್ವಾದ್ವೀ—ಸ್ವಾದು)=ಇಷ್ಟವಾದ, ಮಧುರವಾದ. ಮೃದು (ವಿ. ನಿಘ್ನ—ಸ್ತ್ರೀ. ಮೃದ್ವೀ—ಮೃದು)=ತೀಕ್ಷ್ಣವಲ್ಲದ, ಕೋಮಲ ವಾದ. ಮಂದ (ವಿ. ನಿಘ್ನ)=ಮೂಢ, ಅಲ್ಪ, ಅಸಮರ್ಥ, ಭಾಗ್ಯಹೀನ. ಶಾರದ (ವಿ. ನಿಘ್ನ)=ನೂತನ, ಪ್ರತಿಭೆಯಿಲ್ಲದ. ವಿಶಾರದ (ವಿ. ನಿಘ್ನ)=ಪಂಡಿತ, ಸಮರ್ಥ.

ಧಾಂತಗಳು

೧೨೭. ನ್ಯಗ್ರೋಧ (ಪು)=ಮಾರು ಅಳತೆ, ಆಲದಮರ. ಉತ್ಸೇಧ (ಪು)=ಶರೀರ, ಎತ್ತರ.

೧೨೮. ವಿವಧ, ವೀವಧ (ಪು)=ಎರಡು ತುದಿಗಳಲ್ಲಿಯೂ ಭಾರವನ್ನು ತೂಗುಹಾಕಿ ಹೆಗಲಿನ ಮೇಲೆ ಹೊರುವ ಕಟ್ಟಿಗೆ (ಕಾವಡಿ), ದಾರಿ. ಪರಿಧಿ (ಪು)=ಯಜ್ಞಕ್ಕೆ ಯೋಗ್ಯವಾದ ಅತ್ತಿಯಮರ ಮೊದಲಾದ ಮರದ ಕೊಂಬೆ, ಸೂರ್ಯ ಚಂದ್ರರ ಸುತ್ತಲೂ ಕಾಣಿಸುವ ವರ್ತುಲ.

೧೨೯. ಆಧಿ (ಪು)=ಅಡವು (Pledge), ಜೂಜು ಮುಂತಾದ ಚಟ, ಮನೋವ್ಯಥೆ, ಆಶ್ರಯ. ಸಮಾಧಿ (ಪು)= ಶಂಕಾಪರಿಹಾರ, ಮೌನ, ಉಪವಾಸಾದಿನಿಯಮ, (ಅಂಗೀಕಾರ, ಯೋಗದ ಒಂದು ಅಂಗ).

ದೋಷೋತ್ಪಾದೇಽನುಬಂದಸ್ಸ್ಯಾತ್ಪ್ರಕೃತ್ಯಾದಿಷು ನಶ್ವರೇ ।
ಮುಖ್ಯಾನುಯಾಯಿನಿ ಶಿಶೌ ಪ್ರಕೃತಸ್ಯಾನುವರ್ತನೇ ॥ ೧೩೦೦
ವಿಧುರ್ವಿಷ್ಣೌ ಚಂದ್ರಮಸಿ ಪರಿಚ್ಛೇದೇ ಬಿಲೇಽವಧಿಃ ।
ವಿಧಿರ್ವಿಧಾನೇ ದೈವೇಽಪಿ ಪ್ರಣಿಧಿಃ ಪ್ರಾರ್ಥನೇ ಚರೇ ॥ ೧೩೦೧
ಬುಧವೃದ್ಧೌ ಪಂಡಿತೇಽಪಿ ಸ್ಕಂಧಸ್ಸಮುದಯೇಽಪಿ ಚ ।
ದೇಶೇ ನದವಿಶೇಷೇಽಬ್ಧೌ ಸಿಂಧುರ್ನಾ ಸರಿತಿ ಸ್ತ್ರಿಯಾಮ್ ॥ ೧೩೦೨
ವಿಧಾ ವಿಧೌ ಪ್ರಕಾರೇ ಚ ಸಾಧೂ ರಮ್ಯೇಽಪಿ ಚ ತ್ರಿಷು ।
ವಧೂರ್ಜಾಯಾ ಸ್ನುಷಾ ಸ್ತ್ರೀ ಚ ಸುಧಾ ಲೇಪೋಽಮೃತಂ ಸ್ನುಹೀ ॥ ೧೩೦೩
ಸಂಧಾ ಪ್ರತಿಜ್ಞಾ ಮರ್ಯಾದಾ ಶ್ರದ್ಧಾ ಸಂಪ್ರತ್ಯಯಃ ಸ್ಪೃಹಾ ।
ಮಧು ಮದ್ಯೇ ಪುಷ್ಪರಸೇ ಕ್ಷೌದ್ರೇಽಪ್ಯಂಧಂ ತಮಸ್ಯಪಿ ॥ ೧೩೦೪

೧೩೦೦. ಅನುಬಂಧ (ಪು)=ದೋಷೋತ್ಪಾದನೆ, ಪ್ರಕೃತಿ ಪ್ರತ್ಯಯಾದಿಗಳಲ್ಲಿ ಲೋಪವನ್ನು ಹೊಂದುವ 'ಇತ್' ಸಂಜ್ಞಕವಾದ ಅಕ್ಷರ, ಮುಖ್ಯನನ್ನು ಹಿಂಬಾಲಿಸತಕ್ಕವನು, ಶಿಶು, ಆರಬ್ಧವಾದುದನ್ನು ಮುಂದುವರಿಸುವುದು.

೧೩೦೧. ವಿಧು (ಪು)=ವಿಷ್ಣು, ಚಂದ್ರ. ಅವಧಿ (ಪು) ಎಲ್ಲೆ, ಬಿಲ. ವಿಧಿ (ಪು)=ಮಾಡುವುದು, ದೈವ, (ಬ್ರಹ್ಮ, ವಿಧಿಸುವ ವಾಕ್ಯ). ಪ್ರಣಿಧಿ (ಪು)=ಪ್ರಾರ್ಥನೆ, ಗೂಢಚಾರ.

೧೩೦೨. ಬುಧ (ಬುದ್ಧ), ವೃದ್ಧ (ಪು)=ಪಂಡಿತ, (ಮುದುಕ, ಬುದ್ಧ). ಸ್ಕಂಧ (ಪು)=ಸಮೂಹ, (ಹೆಗಲು). ಸಿಂಧು (ಪು)=ಸಿಂಧು ಎಂಬ ದೇಶ, ಸಿಂಧು ಎಂಬ ನದಿ, ಸಮುದ್ರ. ಸಿಂಧು (ಸ್ತ್ರೀ)=ನದಿ.

೧೩೦೩. ವಿಧಾ (ಸ್ತ್ರೀ)=ಮಾಡುವಿಕೆ, ರೀತಿ. ಸಾಧು (ವಿ. ನಿಘ್ನ—ಸ್ತ್ರೀ. ಸಾಧು—ಸಾಧ್ವೀ)=ಸುಂದರ, ಒಳ್ಳೆಯವ. ವಧೂ (ಸ್ತ್ರೀ)=ಹೆಂಡತಿ, ಸೊಸೆ, ಹೆಂಗಸು. ಸುಧಾ (ಸ್ತ್ರೀ)=ಸುಣ್ಣ, ಅಮೃತ, ಮುಂಡಗಳ್ಳಿ.

೧೩೦೪. ಸಂಧಾ (ಸ್ತ್ರೀ)=ಪ್ರತಿಜ್ಞೆ, ಎಲ್ಲೆ. ಶ್ರದ್ಧಾ (ಸ್ತ್ರೀ)=ಆದರ, ಆಸೆ. ಮಧು (ನ)—ಮದ್ಯ, ಹೂವಿನ ಬಂಡು, ಜೇನು. (ಮಧು (ಪು)=ಚೈತ್ರಮಾಸ). ಅಂಧ (ನ)=ಕತ್ತಲೆ. (ಅಂಧ (ಪು)=ಕುರುಡ).

ಅತಸ್ತ್ರಿಷು ಸಮುನ್ನದ್ಧೌ ಪಂಡಿತಂಮನ್ಯಗರ್ವಿತೌ ।
ಬ್ರಹ್ಮಬಂಧುರಧಿಕ್ಷೇಪೇ ನಿರ್ದೇಶೇಽಥಾವಲಂಬಿತಃ ॥ ೧೩೦೫
ಅವಿದೂರೋಽಪ್ಯವಷ್ಟಬ್ಧಃ ಪ್ರಸಿದ್ಧೌ ಖ್ಯಾತಭೂಷಿತೌ ।

ಇತಿ ಧಾಂತಃ

ಸೂರ್ಯವಹ್ನೀ ಚಿತ್ರಭಾನೂ ಭಾನೂ ರಶ್ಮಿದಿವಾಕರೌ ॥ ೧೩೦೬
ಭೂತಾತ್ಮಾನೌ ಧಾತೃದೇಹೌ ಮೂರ್ಖನೀಚೌ ಪೃಥಗ್ಜನೌ ।
ಗ್ರಾವಾಣೌ ಶೈಲಪಾಷಾಣೌ ಪತ್ರಿಣೌ ಶರಪಕ್ಷಿಣೌ ॥ ೧೩೦೭
ತರುಶೈಲೌ ಶಿಖರಿಣೌ ಶಿಖಿನೌ ವಹ್ನಿಬರ್ಹಿಣೌ ।
ಪ್ರತಿಯತ್ನಾವುಭೌ ಲಿಪ್ಸೋಪಗ್ರಹಾವಥ ಸಾದಿನೌ ॥ ೧೩೦೮
ದ್ವೌ ಸಾರಥಿಹಯಾರೋಹಾ ವಾಜಿನೋಽಶ್ವೇಷು ಪಕ್ಷಿಣಃ ।
ಕುಲೇಽಪ್ಯಭಿಜನೋ ಜನ್ಮಭೂಮ್ಯಾಮಪ್ಯಥ ಹಾಯನಾಃ ॥ ೧೩೦೯

೧೩೦೫—೧೩೦೬. ಮುಂದೆ ಧಾಂತವು ಮುಗಿಯುವವರೆಗಿನ ಶಬ್ದಗಳು ವಿಶೇಷ್ಯ ನಿಘ್ನಗಳಾಗಿ ಮೂರುಲಿಂಗಗಳಲ್ಲಿಯೂ ಇರುತ್ತವೆ. ಸಮುನ್ನದ್ಧ=ತಾನು ಪಂಡಿತನೆಂದು ತಿಳಿದುಕೊಂಡವನು, ಗರ್ವಿ. ಬ್ರಹ್ಮಬಂಧು=ನಿಂದೆಗೆ ಗುರಿಯಾದ ಬ್ರಾಹ್ಮಣ (—ಇದು ಬಯ್ಯುವಾಗ ಬಳಸುವ ಶಬ್ದ), ಜಾತಿ ಮಾತ್ರದಿಂದ ಬ್ರಾಹ್ಮಣ. ಹೀಗೆಯೇ ಕ್ಷತ್ರಬಂಧು ಮುಂತಾದ ಶಬ್ದಗಳು. ಅವಷ್ಟಬ್ಧ=ಆಶ್ರಿತ, ಸಮೀಪದಲ್ಲಿರುವ. ಪ್ರಸಿದ್ಧ=ವಿಖ್ಯಾತ, ಅಲಂಕೃತ.

ನಾಂತಗಳು

೧೩೦೬—೧೩೦೭. ಚಿತ್ರಭಾನು (ಪು)=ಸೂರ್ಯ, ಅಗ್ನಿ. ಭಾನು (ಪು)=ಕಿರಣ, ಸೂರ್ಯ. ಭೂತಾತ್ಮನ್ (ಪು)=ಬ್ರಹ್ಮ, ದೇಹ. ಪೃಥಗ್ಜನ (ಪು)=ಮೂರ್ಖ, ನೀಚ. ಗ್ರಾವನ್ (ಪು)=ಬೆಟ್ಟ, ಕಲ್ಲು. ಪತ್ರಿನ್ (ಪು)=ಬಾಣ, ಹಕ್ಕಿ.

೧೩೦೮. ಶಿಖರಿನ್ (ಪು)=ಮರ, ಬೆಟ್ಟ. ಶಿಖಿನ್ (ಪು)=ಅಗ್ನಿ, ನವಿಲು. ಪ್ರತಿಯತ್ನ (ಪು)=ಅಭಿಲಾಷೆ, ಸೆರೆಹಿಡಿಯುವುದು, (ಗುಣವಿಶೇಷವನ್ನುಂಟುಮಾಡುವುದು.)

೧೩೦೯. ಸಾದಿನ್ (ಪು)=ಸಾರಥಿ, ಕುದುರೆಸವಾರ. ವಾಜಿನ್ (ಪು)=ಕುದುರೆ, ಬಾಣ, ಹಕ್ಕಿ. ಅಭಿಜನ (ಪು)=ವಂಶ, ಹುಟ್ಟಿದ ಸ್ಥಳ.

ವರ್ಷಾರ್ಚಿವ್ರೀಹಿಭೇದಾಶ್ಚ ಚಂದ್ರಾಗ್ನ್ಯರ್ಕಾ ವಿರೋಚನಾಃ ।
ಕೇಶೇಽಪಿ ವೃಜಿನೋ ವಿಶ್ವಕರ್ಮಾರ್ಕಸುರಶಿಲ್ಪಿನೋಃ ॥ ೧೩೧೦
ಆತ್ಮಾಯತ್ನೋ ಧೃತಿರ್ಬುದ್ಧಿಃ ಸ್ವಭಾವೋ ಬ್ರಹ್ಮ ವರ್ಷ್ಮ ಚ ।
ಶಕ್ರೋ ಘಾತುಕಮತ್ತೇಭೋ ವರ್ಷುಕಾಬ್ದೋ ಘನಾಘನಃ ॥ ೧೩೧೧
ಅಭಿಮಾನೋಽರ್ಥಾದಿದರ್ಪೇ ಜ್ಞಾನೇ ಪ್ರಣಯಹಿಂಸಯೋಃ ।
ಘನೋ ಮೇಘೇ ಮೂರ್ತಿಗುಣೇ ತ್ರಿಷು ಮೂರ್ತೇ ನಿರಂತರೇ ॥ ೧೩೧೨
ಇನಸ್ಸೂರ್ಯೇ ಪ್ರಭೌ ರಾಜಾ ಮೃಗಾಂಕೇ ಕ್ಷತ್ರಿಯೇ ನೃಪೇ ।
ವಾಣಿನ್ಯೌ ನರ್ತಕೀದೂತ್ಯೌ ಸ್ರವಂತ್ಯಾಮಪಿ ವಾಹಿನೀ ॥ ೧೩೧೩
ಹ್ರಾದಿನ್ಯೌ ವಜ್ರತಟಿತೌ ವಂದಾಯಾಮಪಿ ಕಾಮಿನೀ ।
ತ್ವಗ್ದೇಹಯೋರಪಿ ತನುಸ್ಸೂನಾಧೋಜಿಹ್ವಿಕಾಪಿ ಚ ॥ ೧೩೧೪

೧೩೧೦. ಹಾಯನ (ಪು)=ವರ್ಷ, ಕಿರಣ, ಒಂದು ಜಾತಿಯ ಬತ್ತ. ವಿರೋಚನ (ಪು)=ಚಂದ್ರ, ಅಗ್ನಿ, ಸೂರ್ಯ. ವೃಜಿನ (ಪು)=ಕೂದಲು. (ವೃಜಿನ (ನ)=ಪಾಪಕರ್ಮ). ವಿಶ್ವಕರ್ಮನ್ (ಪು)=ಸೂರ್ಯ, ದೇವಶಿಲ್ಪಿ.

೧೩೧೧. ಆತ್ಮನ್ (ಪು)=ಪ್ರಯತ್ನ, ಧೈರ್ಯ, ಬುದ್ಧಿ, ಸ್ವಭಾವ, ಬ್ರಹ್ಮವಸ್ತು, ದೇಹ. ಘನಾಘನ (ಪು)=ಇಂದ್ರ, ಕೊಲ್ಲುವುದಕ್ಕಾಗಿ ಹೊರಟ ಮದಿಸಿದ ಆನೆ, ಮಳೆಸುರಿಸುವ ಮೋಡ.

೧೩೧೨. ಅಭಿಮಾನ (ಪು)=ಧನಾದಿಗಳಿಂದ ಉಂಟಾದ ಅಹಂಕಾರ, ತಿಳಿವಳಿಕೆ, ಪ್ರೀತಿ, ಹಿಂಸೆ. ಘನ (ಪು)=ಮೋಡ, ಕಾಠಿಣ್ಯ (Hardness). ಘನ (ವಿ. ನಿಘ್ನ) ಆಕಾರವುಳ್ಳ, ಸಾಂದ್ರವಾದ.

೧೩೧೩. ಇನ (ಪು)=ಸೂರ್ಯ, ಒಡೆಯ. ರಾಜನ್ (ಪು)=ಚಂದ್ರ, ಕ್ಷತ್ರಿಯ, ದೊರೆ. ವಾಣಿನೀ (ಸ್ತ್ರೀ)=ನರ್ತಕೀ, ದೂತಿ. ವಾಹಿನೀ (ಸ್ತ್ರೀ)=ನದಿ, (ಸೈನ್ಯ).

೧೩೧೪. ಹ್ರಾದಿನೀ (ಸ್ತ್ರೀ)=ಸಿಡಿಲು, ಮಿಂಚು. ಕಾಮಿನೀ (ಸ್ತ್ರೀ)=ಬದನಿಕೆ (ಬಂದಳಿಕೆ), ಕಾಮವುಳ್ಳ ಸ್ತ್ರೀ. ತನು (ಸ್ತ್ರೀ)=ಚರ್ಮ, ದೇಹ, (ತನು (ವಿ. ನಿಘ್ನ)=ಚಿಕ್ಕದು. ಸೂನಾ (ಸ್ತ್ರೀ)=ಕಿರುನಾಲಿಗೆ, (ವಧಸ್ಥಾನ).

ಕ್ರತುವಿಸ್ತಾರಯೋರಸ್ತ್ರೀ ವಿತಾನಂ ತ್ರಿಷು ತುಚ್ಛಕೇ ।
ಮಂದೇಽಥ ಕೇತನಂ ಕೃತ್ಯೇ ಕೇತಾವುಪನಿಮಂತ್ರಣೇ ॥ ೧೩೧೫

ವೇದಸ್ತತ್ತ್ವಂ ತಪೋ ಬ್ರಹ್ಮ ಬ್ರಹ್ಮಾ ವಿಪ್ರಃ ಪ್ರಜಾಪತಿಃ ।
ಉತ್ಸಾಹನೇ ಚ ಹಿಂಸಾಯಾಂ ಸೂಚನೇ ಚಾಪಿ ಗಂಧನಮ್ ॥ ೧೩೧೬

ಆತಂಚನಂ ಪ್ರತೀವಾಪಜವನಾಪ್ಯಾಯನಾರ್ಥಕಮ್ ।
ವ್ಯಂಜನಂ ಲಾಂಛನೇ ಶ್ಮಶ್ರುನಿಷ್ಠಾನಾವಯವೇಷ್ವಪಿ ॥ ೧೩೧೭

ಸ್ಯಾತ್ ಕೌಲೀನಂ ಲೋಕವಾದೇ ಯುದ್ಧೇ ಪಶ್ವಹಿಪಕ್ಷಿಣಾಮ್ ।
ಸ್ಯಾದುದ್ಯಾನಂ ನಿಸ್ಸರಣೇ ವನಭೇದೇ ಪ್ರಯೋಜನೇ ॥ ೧೩೧೮

ಅವಕಾಶೇ ಸ್ಥಿತೌ ಸ್ಥಾನಂ ಕ್ರೀಡಾದಾವಪಿ ದೇವನಮ್ ।
ಉತ್ಥಾನಂ ಪೌರುಷೇ ತಂತ್ರೇ ಸನ್ನಿವಿಷ್ಟೋದ್ಗಮೇಽಪಿ ಚ ॥ ೧೩೧೯

ವ್ಯುತ್ಥಾನಂ ಪ್ರತಿರೋಧೇ ಚ ವಿರೋಧಾಚರಣೇಽಪಿ ಚ ।
ಮಾರಣೇ ಮೃತಸಂಸ್ಕಾರೇ ಗತೌ ದ್ರವ್ಯೋಪಪಾದನೇ ॥ ೧೩೨೦

೧೩೧೫. ವಿತಾನ (ಪು.ನ)=ಯಜ್ಞ, ವಿಸ್ತಾರ. ವಿತಾನ (ವಿ. ನಿಘ್ನ)=ತುಚ್ಛವಾದ, ಮೂಢ. ಕೇತನ(ನ)=ಕೆಲಸ, ಧ್ವಜ, ಆಹ್ವಾನ.

೧೩೧೬. ಬ್ರಹ್ಮನ್ (ನ)=ವೇದ, ಪರಬ್ರಹ್ಮ, ತಪಸ್ಸು. ಬ್ರಹ್ಮನ್ (ಪು)=ಬ್ರಾಹ್ಮಣ, ಬ್ರಹ್ಮ. ಗಂಧನ (ನ)=ಉತ್ಸಾಹಪಡಿಸುವುದು, ಹಿಂಸೆ, ಸೂಚನೆ.

೧೩೧೭.ಆತಂಚನ (ನ)=ಹೆಪ್ಪುಹಾಕುವುದು, ವೇಗ, ತೃಪ್ತಿಪಡಿಸುವುದು. ವ್ಯಂಜನ (ನ)=ಚಿಹ್ನೆ, ಗಡ್ಡ ಅಥವಾ ಮೀಸೆ, ಪಳಿದ್ಯ ಮುಂತಾದ ಪದಾರ್ಥ, ಸ್ತ್ರೀಪುರುಷರ ಗುಹ್ಯಾವಯವ, (ಅಕ್ಷರವಿಶೇಷ (ಹಲ್)— (Consonant).

೧೩೧೮. ಕೌಲೀನ (ನ)=ಲೋಕಾಪವಾದ, ಮೃಗ ಹಾವು ಹಕ್ಕಿ ಮುಂತಾದವುಗಳ ಕಲಹ. ಉದ್ಯಾನ (ನ)=ಹೊರಡುವುದು, ಹೂದೋಟ, ಪ್ರಯೋಜನ.

೧೩೧೯. ಸ್ಥಾನ (ನ)=ಸ್ಥಳ, ಇರುವಿಕೆ. ದೇವನ (ನ)=ಕ್ರೀಡೆ, (ವ್ಯವಹಾರ, ಜೂಜು, ಸ್ತುತಿ, ಪ್ರಕಾಶ, ಮದ). ಉತ್ಥಾನ (ನ)=ಪುರುಷ ಪ್ರಮಾಣ, ಸಿದ್ಧಾಂತ, ಮೇಲಕ್ಕೆ ಏಳುವುದು.

೧೩೨೦—೧೩೨೧. ವ್ಯುತ್ಥಾನ (ನ)=ಅಡ್ಡಗಟ್ಟುವುದು, ವಿರೋಧವಾಗಿ ಆಚರಿಸುವುದು ಸಾಧನ (ನ)=ಕೊಲ್ಲುವುದು, ಮೃತನ ಸಂಸ್ಕಾರ, ಗಮನ, ಧನಸಂಪಾದನೆ, ನೆರವೇರಿಸುವುದು,

ನಿರ್ವರ್ತನೋಪಕರಣಾನುವ್ರಜ್ಯಾಸು ಚ ಸಾಧನಮ್ ।
ನಿರ್ಯಾತನಂ ವೈರಶುದ್ಧೌ ದಾನೇ ನ್ಯಾಸಾರ್ಪಣೇಽಪಿ ಚ ॥ ೧೩೨೧
ವ್ಯಸನಂ ವಿಪದಿ ಭ್ರಂಶೇ ದೋಷೇ ಕಾಮಜಕೋಪಜೇ ।
ಪಕ್ಷ್ಮಾಕ್ಷಿಲೋಮ್ನಿ ಕಿಂಜಲ್ಕೇ ತಂತ್ವಾದ್ಯಂಶೇಽಪ್ಯಣೀಯಸಿ ॥ ೧೩೨೨
ತಿಥಿಭೇದೇ ಕ್ಷಣೇ ಪರ್ವ ವರ್ತ್ಮ ನೇತ್ರಚ್ಛದೇಽಧ್ವನಿ ।
ಅಕಾರ್ಯಗುಹ್ಯೇ ಕೌಪೀನಂ ಮೈಥುನಂ ಸಂಗತೇ ರತೇ ॥ ೧೩೨೩
ಪ್ರಧಾನಂ ಪರಮಾತ್ಮಾ ಧೀಃ ಪ್ರಜ್ಞಾನಂ ಬುದ್ಧಿ ಚಿಹ್ನಯೋಃ ।
ಪ್ರಸೂನಂ ಪುಷ್ಪಫಲಯೋರ್ನಿಧನಂ ಕುಲನಾಶಯೋಃ ॥ ೧೩೨೪
ಕ್ರಂದನೇ ರೋದನಾಹ್ವಾನೇ ವರ್ಷ್ಮ ದೇಹಪ್ರಮಾಣಯೋಃ ।
ಗೃಹದೇಹತ್ವಿಟ್ಪ್ರಭಾವಾ ಧಾಮಾನ್ಯಥ ಚತುಷ್ಪಥೇ ॥ ೧೩೨೫
ಸನ್ನಿವೇಶೇ ಚ ಸಂಸ್ಥಾನಂ ಲಕ್ಷ್ಮ ಚಿಹ್ನಪ್ರಧಾನಯೋಃ ।
ಆಚ್ಛಾದನಂ ಸಂಪಿಧಾನಮಪವಾರಣಮಿತ್ಯುಭೇ ॥ ೧೩೨೬

ಸಾಮಗ್ರಿ, ಹಿಂಬಾಲಿಸಿಹೋಗುವುದು, (ಸೈನ್ಯ). ನಿರ್ಯಾತನ (ನ)=ಹಗೆತೀರಿಸಿಕೊಳ್ಳುವುದು, ಕೊಡುವುದು, ಒತ್ತೆಯನ್ನು ಹಿಂದಿರುಗಿಸುವುದು.

೧೩೨೨. ವ್ಯಸನ (ನ)=ವಿಪತ್ತು, ಬೀಳುವುದು, ಕಾಮದಿಂದ ಅಥವಾ ಕೋಪದಿಂದ ಹುಟ್ಟಿದ ದೋಷ. ಪಕ್ಷ್ಮನ್ (ನ)=ರೆಪ್ಪೆಕೂದಲು, ಹೂವಿನ ಕೇಸರ, ದಾರ ಮುಂತಾದ್ದರ ಸೂಕ್ಷ್ಮಭಾಗ (ಎಳೆ).

೧೩೨೩. ಪರ್ವನ್ (ನ)=ಪರ್ವತಿಥಿ (ಅಷ್ಟಮಿ, ಚತುರ್ದಶಿ, ಹುಣ್ಣಿಮೆ, ಅಮಾವಾಸ್ಯೆ, ಸಂಕ್ರಾಂತಿ), ಉತ್ಸವ, (ಬಿದಿರು ಮುಂತಾದ್ದರ ಗಿಣ್ಣು). ವರ್ತ್ಮನ್ (ನ)=ರೆಪ್ಪೆ, ದಾರಿ. ಕೌಪೀನ (ನ)=ಮಾಡಬಾರದ ಕೆಲಸ, ಗುಹ್ಯಾಂಗ (ಲಂಗೋಟಿ). ಮೈಥುನ (ನ)=ಸಂಬಂಧ, ಸುರತ.

೧೩೨೪. ಪ್ರಧಾನ (ನ)=ಪರಮಾತ್ಮ, ಬುದ್ಧಿ, (ಮುಖ್ಯ, ಮೂಲ ಪ್ರಕೃತಿ). ಪ್ರಜ್ಞಾನ (ನ)=ಬುದ್ಧಿ, ಚಿಹ್ನೆ. ಪ್ರಸೂನ (ನ)=ಹೂ, ಹಣ್ಣು. ನಿಧನ (ನ)=ಕುಲ, ನಾಶ.

೧೩೨೫. ಕ್ರಂದನ (ನ)=ಅಳುವುದು, ಕರೆಯುವುದು. ವರ್ಷ್ಮನ್ (ನ)=ದೇಹ, ಅಳತೆ. ಧಾಮನ್ (ನ)=ಮನೆ, ದೇಹ, ಕಾಂತಿ, ಪ್ರಭಾವ.

೧೩೨೬. ಸಂಸ್ಥಾನ (ನ)=ಚೌಕ, ಸಂನಿವೇಶ. ಲಕ್ಷ್ಮನ್ (ನ)=ಚಿಹ್ನೆ, ಮುಖ್ಯ. ಆಚ್ಛಾದನ (ನ)= ಮುಚ್ಚಳು, ಮರೆಮಾಡುವುದು, (ವಸ್ತ್ರ).

ಆರಾಧನಂ ಸಾಧನೇ ಸ್ಯಾದವಾಪ್ತೌ ತೋಷಣೇಽಪಿ ಚ ।
ಅಧಿಷ್ಠಾನಂ ಚಕ್ರಪುರಪ್ರಭಾವಾಧ್ಯಾಸನೇಷ್ವಪಿ ॥ ೧೩೨೭
ರತ್ನಂ ಸ್ವಜಾತಿಶ್ರೇಷ್ಠೇಽಪಿ ವನೇ ಸಲಿಲಕಾನನೇ ।
ತಲಿನಂ ವಿರಲೇ ಸ್ತೋಕೇ ವಾಚ್ಯಲಿಂಗಾಸ್ತಥೋತ್ತರೇ ॥ ೧೩೨೮
ಸಮಾನಾಸ್ಸತ್ಸಮೈಕೇ ಸ್ಯುಃ ಪಿಶುನೌ ಖಲಸೂಚಕೌ ।
ಹೀನನ್ಯೂನಾವೂನಗರ್ಹ್ಯೌ ವೇಗಿಶೂರೌ ತರಸ್ವಿನೌ ॥ ೧೩೨೯
ಅಭಿಪನ್ನೋಽಪರಾದ್ಧೋಽಭಿಗ್ರಸ್ತ ವ್ಯಾಪದ್ಗತಾವಪಿ ।

ಇತಿ ನಾಂತಾಃ

೧೩೨೭. ಆರಾಧನ[1] (ನ)=ಸಾಧಿಸುವಿಕೆ, ಪಡೆಯುವಿಕೆ, ಸಂತೋಷ ಪಡಿಸುವುದು. ಅಧಿಷ್ಠಾನ (ನ)=ಗಾಲಿ, ನಗರ, ಪ್ರಭಾವ, ಆಧಾರ.

೧೩೨೮. ರತ್ನ (ನ)=ಶ್ರೇಷ್ಠ, (ಮಣಿ). ವನ (ನ), ನೀರು, ಕಾಡು. ತಲಿನ (ವಿ. ನಿಘ್ನ)=ವಿರಳವಾದ, ಅಲ್ಪವಾದ. ಹೀಗೆಯೇ ಮುಂದಿನ ನಾಂತಗಳೆಲ್ಲವೂ ವಿಶೇಷ್ಯ ನಿಘ್ನಗಳು.

೧೩೨೯—೧೩೩೦. ಸಮಾನ=ಸಜ್ಜನ, ಸದೃಶ, ಒಂದೇ ಗುಂಪಿನ. ಪಿಶುನ=ದುಷ್ಟ, ಚಾಡಿಖೋರ. ಹೀನ, ನ್ಯೂನ=ಕೊರತೆಯುಳ್ಳ, ನಿಂದ್ಯವಾದ. ತರಸ್ವಿನಂ (—ಸ್ತ್ರೀ. ತಪಸ್ವಿನೀ)=ವೇಗಶಾಲಿ, ಶೂರ. ಅಭಿಪನ್ನ=ಅಪರಾಧಿ, ಆಕ್ರಮಣಕ್ಕೆ ಒಳಗಾದವ, ಆಪತ್ತಿಗೆ ಸಿಕ್ಕಿದ.

---

[1] ಆರಾಧನಾ ಎಂಬ ಸ್ತ್ರೀಲಿಂಗವೂ ಇದೆ.

ಕಲಾಪೋ ಭೂಷಣೇ ಬರ್ಹೇ ತೂಣೀರೇ ಸಂಹತಾವಪಿ ॥ ೧೩೩೦
ಪರಿಚ್ಛದೇ ಪರೀವಾಪಃ ಪರ್ಯುಪ್ತೌ ಸಲಿಲಸ್ಥಿತೌ ।
ಗೋಧುಗ್ಗೋಷ್ಠಪತೀ ಗೋಪೌ ಹರವಿಷ್ಣೂ ವೃಷಾಕಪೀ ॥ ೧೩೩೧
ಬಾಷ್ಪಮೂಷ್ಮಾಶ್ರು ಕಶಿಪುಸ್ತ್ವನ್ನಮಾಚ್ಛಾದನಂ ದ್ವಯಮ್ ।
ತಲ್ಪಂ ಶಯ್ಯಾಟ್ಟದಾರೇಷು ಸ್ತಂಬೇಽಪಿ ವಿಟಪೋಽಸ್ತ್ರಿಯಾಮ್ ॥ ೧೩೩೨
ಪ್ರಾಪ್ತರೂಪಸ್ವರೂಪಾಭಿರೂಪಾ ಬುಧಮನೋಜ್ಞಯೋಃ ।
ಭೇದ್ಯಲಿಂಗಾ ಅಮೀ ಕೂರ್ಮೀ ವೀಣಾಭೇದಶ್ಚ ಕಚ್ಛಪೀ ॥ ೧೩೩೩

ಇತಿ ಪಾಂತಾಃ

ರವರ್ಣೇ ಪುಂಸಿ ರೇಫಃ ಸ್ಯಾತ್ಕುತ್ಸಿತೇ ವಾಚ್ಯಲಿಂಗಕಃ ।

ಇತಿ ಫಾಂತಃ

ಪಾಂತಗಳು

೧೩೩೦—೧೩೩೧. ಕಲಾಪ (ಪು)=ಒಡವೆ, ನವಿಲುಗರಿ, ಬತ್ತಳಿಕೆ, ಸಮೂಹ. ಪರೀವಾಪ (ಪು)=ಪರಿವಾರ, ಬಿತ್ತನೆ, ನೀರು ನಿಂತಿರುವಿಕೆ—ನೀರು ನಿಂತಿರುವ ಸ್ಥಳ. ಗೋಪ (ಪು)=ಹಾಲನ್ನು ಕರೆಯುವವನು, ಕೊಟ್ಟಿಗೆಯ ಮೇಲ್ವಿಚಾರಕ, (ದನಕಾಯುವವನು). ವೃಷಾಕಪಿ (ಪು)=ಶಿವ, ವಿಷ್ಣು.

೧೩೩೨. ಬಾಷ್ಪ (ನ)=ಹಬೆ, ಕಣ್ಣೀರು. ಕಶಿಪು (ಪು)=ಅನ್ನ, ವಸ್ತ್ರ. ತಲ್ಪ (ನ)=ಹಾಸಿಗೆ, ಅಟ್ಟ, ಹೆಂಡತಿ. ವಿಟಪ (ಪು.ನ)=ಹುಲ್ಲುಜಡ್ಡು, (ಕೊಂಬೆ).

೧೩೩೩. ಪ್ರಾಪ್ತರೂಪ, ಸ್ವರೂಪ, ಅಭಿರೂಪ (ವಿ. ನಿಘ್ನ)=ವಿದ್ವಾಂಸ, ಸುಂದರ. ಕಚ್ಛಪೀ (ಸ್ತ್ರೀ)=ಹೆಣ್ಣು ಆಮೆ, ಸರಸ್ವತಿಯ ವೀಣೆ.

ಫಾಂತ

೧೩೩೪. ರೇಫ (ಪು)= 'ರ' ಎಂಬ ವರ್ಣ. ರೇಫ (ವಿ. ನಿಘ್ನ) ನೀಚ.

ಅಂತರಾಭವಸತ್ತ್ವೇಽಶ್ವೇ ಗಂಧರ್ವೋ ದಿವ್ಯಗಾಯನೇ ॥ ೧೩೩೪
ಕಂಬುರ್ನಾ ವಲಯೇ ಶಂಖೇ ದ್ವಿಜಿಹ್ವೌ ಸರ್ಪಸೂಚಕೌ ।
ಪೂರ್ವೋಽನ್ಯಲಿಂಗಃ ಪ್ರಾಗಾಹ ಪುಂಬಹುತ್ವೇಽಪಿ ಪೂರ್ವಜಾನ್ ॥ ೧೩೩೫

ಇತಿ ಬಾಂತಾಃ

ಕುಂಭಾ ಘಟೇಭಮೂರ್ಧಾಂಶೌ ಡಿಂಭೌ ತು ಶಿಶುಬಾಲಿಶೌ ।
ಸ್ತಂಭೌ ಸ್ಥೂಣಾಜಡೀಭಾವೌ ಶಂಭೂ ಬ್ರಹ್ಮತ್ರಿಲೋಚನೌ ॥ ೧೩೩೬
ಕುಕ್ಷಿಭ್ರೂಣಾರ್ಭಕಾ ಗರ್ಭಾ ವಿಸ್ರಂಭಃ ಪ್ರಣಯೇಽಪಿ ಚ ।
ಸ್ಯಾದ್ಭೇರ್ಯಾಂ ದುಂದುಭಿಃ ಪುಂಸಿ ಸ್ಯಾದಕ್ಷೇ ದುಂದುಭಿಃ ಸ್ತ್ರಿಯಾಮ್ ॥

ಬಾಂತಗಳು

೧೩೩೪. ಗಂಧರ್ವ (ಪು)=ಅಂತರಪಿಶಾಚ (ಮರಣಾನಂತರದ ಯಾತನಾ ಶರೀರಿ). ಕುದುರೆ, ದೇವಲೋಕದ ಸಂಗೀತಗಾರ.

೧೩೩೫. ಕಂಬು (ಪು)=ಕಡಗ, ಶಂಖ. ದ್ವಿಜಿಹ್ವ (ಪು)=ಸರ್ಪ, ಚಾಡಿಖೋರ. ಪೂರ್ವ (ವಿ. ನಿಘ್ನ)=ಪೂರ್ವದಿಕ್ಕಿನಲ್ಲಿರುವ ವಸ್ತು. ಉದಾ:—ಪೂರ್ವೋಗ್ರಾಮಃ, ಪೂರ್ವಾನದೀ, ಪೂರ್ವಂ ವನಮ್. ಪೂರ್ವ (ಪು. ನಿತ್ಯಬಹು.)=ಪೂರ್ವಜರು (ಹಿಂದಿನವರು).

ವಿಶೇಷ :— 'ವಬಯೋರಭೇದಃ' ಎಂಬ ನ್ಯಾಯದಂತೆ ಗಂಧರ್ವಾದಿಶಬ್ದಗಳನ್ನು ಬಾಂತದಲ್ಲಿ ಸೇರಿಸಲಾಗಿದೆ.

ಭಾಂತಗಳು

೧೩೩೬. ಕುಂಭ (ಪು)=ಗಡಿಗೆ, ಆನೆಯ ಕುಂಭಸ್ಥಳ. ಡಿಂಭ (ಪು)=ಶಿಶು, ಮೂರ್ಖ. ಸ್ತಂಭ (ಪು)=ಕಂಭ, ಜಡತ್ತ್ವ. ಶಂಭು (ಪು)=ಬ್ರಹ್ಮ, ಶಿವ.

೧೩೩೭. ಗರ್ಭ (ಪು)=ಹೊಟ್ಟೆ, ಭ್ರೂಣ (Foetus), ಮಗು. ವಿಸ್ರಂಭ (ಪು)=ಪ್ರೀತಿ, (ನಂಬಿಕೆ). ದುಂದುಭಿ (ಪು)=ಭೇರಿ. ದುಂದುಭಿ (ಸ್ತ್ರೀ)=ಪಗಡೆಯ ಲೆತ್ತ.

ಸ್ಯಾನ್ಮಹಾರಾಜನೇ ಕ್ಲೀಬಂ ಕುಸುಂಭಂ ಕರಕೇ ಪುಮಾನ್ ।
ಕ್ಷತ್ರಿಯೇಽಪಿ ಚ ನಾಭಿರ್ನಾ ಸುರಭಿರ್ಗವಿ ಚ ಸ್ತ್ರಿಯಾಮ್ ॥ ೧೩೩೮
ಸಭಾ ಸಂಸದಿ ಸಭ್ಯೇ ಚ ತ್ರಿಷ್ವಧ್ಯಕ್ಷೇಽಪಿ ವಲ್ಲಭಃ ।

ಇತಿ ಭಾಂತಾಃ

ಕಿರಣಪ್ರಗ್ರಹೌ ರಶ್ಮೀ ಕಪಿಭೇಕೌ ಪ್ಲವಂಗಮೌ ॥ ೧೩೩೯
ಇಚ್ಛಾಮನೋಭವೌ ಕಾಮೌ ಶೌರ್ಯೋದ್ಯೋಗೌ ಪರಾಕ್ರಮೌ ।
ಧರ್ಮಾಃ ಪುಣ್ಯಯಮನ್ಯಾಯಸ್ವಭಾವಾಚಾರಸೋಮಪಾಃ ॥ ೧೩೪೦
ಉಪಾಯಪೂರ್ವ ಆರಂಭ ಉಪಧಾ ಚಾಪ್ಯುಕ್ರಮಃ ।
ವಣಿಕ್ಪಥಃ ಪುರಂ ವೇದೋ ನಿಗಮೋ ನಾಗರೋ ವಣಿಕ್ ॥ ೧೩೪೧
ನೈಗಮೌ ದ್ವೌ ಬಲೇ ರಾಮೋ ನೀಲಚಾರುಸಿತೇ ತ್ರಿಷು ।
ಶಬ್ದಾದಿಪೂರ್ವೋ ವೃಂದೇಽಪಿ ಗ್ರಾಮಃ ಕ್ರಾಂತೌ ಚ ವಿಕ್ರಮಃ ॥ ೧೩೪೨

೧೩೩೮—೧೩೩೯. ಕುಸುಂಭ (ನ)= ಕುಸುಬೆಹೂ. ಕುಸುಂಭ (ಪು)=ಕಮಂಡಲು. ನಾಭಿ (ಪು)=ಕ್ಷತ್ರಿಯ, (ಗಾಲಿಯ ಮಧ್ಯಭಾಗ, ಹೊಕ್ಕಳು). ಸುರಭಿ (ಸ್ತ್ರೀ)=ಹಸು, ಕಾಮಧೇನು. (ಸುರಭಿ (ಪು)=ಸಂಪಗೆಮರ), ವಸಂತ. ಸುರಭಿ (ತ್ರಿಲಿಂಗ)=ಪರಿಮಳಯುಕ್ತ ವಾದ). ಸಭಾ (ಸ್ತ್ರೀ)=ಸಭೆ, (ಜೂಜು, ಮಂದಿರ). ವಲ್ಲಭ (ವಿ. ನಿಘ್ನ)=ಅಧ್ಯಕ್ಷ, (ಪ್ರಿಯ).

ಮಾಂತಗಳು

೧೩೩೯—೧೩೪೦. ರಶ್ಮಿ (ಪು)=ಕಿರಣ, ಹಗ್ಗ. ಪ್ಲವಂಗಮ (ಪು)=ಕಪಿ, ಕಪ್ಪೆ. ಕಾಮ (ಪು)=ಇಚ್ಛೆ, ಮನ್ಮಥ. ಪರಾಕ್ರಮ (ಪು)=ಶೌರ್ಯ, ಉದ್ಯೋಗ. ಧರ್ಮ (ಪು)=ಪುಣ್ಯ, ಯಮ, ನ್ಯಾಯ, ಸ್ವಭಾವ, ಆಚಾರ, ಸೋಮಯಾಗಕರ್ತ.

೧೩೪೧—೧೩೪೨. ಉಪಕ್ರಮ (ಪು)=ಉಪಾಯವನ್ನರಿತು ಕಾರ್ಯದ ಆರಂಭ, ಮಂತ್ರಿಗಳ ಗುಣಪರೀಕ್ಷೆ, (ವಂಚನೆ). ನಿಗಮ (ಪು)=ಅಂಗಡಿಬೀದಿ, ಪಟ್ಟಣ, ವೇದ. ನೈಗಮ (ಪು)=ನಾಗರಿಕ, ವ್ಯಾಪಾರಿ. ರಾಮ (ಪು)=ಬಲರಾಮ (ದಾಶರಥಿರಾಮ, ಪರಶುರಾಮ). ರಾಮ (ವಿ. ನಿಘ್ನ. ತ್ರಿಲಿಂಗ)=ಕಪ್ಪಾದ, ಸುಂದರವಾದ, ಬಿಳಿಯದಾದ. ಗ್ರಾಮ (ಪು)=ಶಬ್ದಾದಿ

---

[1] ನಕಾರಾಂತ ನಪುಂಸಕವಾದ ಲಲಾಮನ್ ಎಂಬ ಶಬ್ದವೂ ಇದೆ.

ಗುಲ್ಮಾ ರುಕ್‌ಸ್ತಂಬಸೇನಾಶ್ಚ ಜಾಮಿಃ ಸ್ವಸೃಕುಲಸ್ತ್ರಿಯೋಃ ।
ಕ್ಷಿತಿಕ್ಷಾಂತ್ಯೋಃ ಕ್ಷಮಾ ಯುಕ್ತೇ ಕ್ಷಮಂ ಶಕ್ತೇ ಹಿತೇ ತ್ರಿಷು ॥ ೧೩೪೩
ತ್ರಿಷು ಶ್ಯಾಮೌ ಹರಿತ್ಕೃಷ್ಣೌ ಶ್ಯಾಮಾ ಸ್ಯಾಚ್ಛಾರಿವಾ ನಿಶಾ ।
ಲಲಾಮಂ ಪುಚ್ಛಪುಂಡ್ರಾಶ್ವಭೂಷಾಪ್ರಾಧಾನ್ಯಕೇತುಷು ॥ ೧೩೪೪
ಸೂಕ್ಷ್ಮಮಧ್ಯಾತ್ಮಮಪ್ಯಾದೌ ಪ್ರಧಾನೇ ಪ್ರಥಮಸ್ತ್ರಿಷು ।
ವಾಮೌ ವಲ್ಗುಪ್ರತೀಪೌ ದ್ವಾವಧಮೌ ನ್ಯೂನಕುತ್ಸಿತೌ ॥ ೧೩೪೫
ಜೀರ್ಣಂ ಚ ಪರಿಭುಕ್ತಂ ಚ ಯಾತಯಾಮಮಿದಂ ದ್ವಯಮ್ ।

ಇತಿ ಮಾಂತಾಃ

ತುರಂಗಗರುಡೌ ತಾರ್ಕ್ಷ್ಯೌ ನಿಲಯಾಪಚಯೌ ಕ್ಷಯೌ ॥ ೧೩೪೬
ಶ್ವಶುರ್ಯೌ ದೇವರಶ್ಯಾಲೌ ಭ್ರಾತೃವ್ಯೌ ಭ್ರಾತೃಜದ್ವಿಷೌ ।
ಪರ್ಜನ್ಯೌ ರಸದಬ್ದೇಂದ್ರೌ ಸ್ಯಾದರ್ಯಃ ಸ್ವಾಮಿವೈಶ್ಯಯೋಃ ॥ ೧೩೪೭

ಪೂರ್ವವಾದಾಗ ಸಮೂಹ. ಉದಾ:—ಶಬ್ದಗ್ರಾಮ, ಗುಣಗ್ರಾಮ, (ಊರು, ಸ್ವರ). ವಿಕ್ರಮ (ಪು)=ದಾಟುವುದು, ಪರಾಕ್ರಮ.

೧೩೪೩. ಗುಲ್ಮ (ಪು)=ಪ್ಲೀಹವೆಂಬ ರೋಗ, ಪೊದೆ, ಸೇನಾವಿಭಾಗ. ಜಾಮಿ (ಸ್ತ್ರೀ)=ಒಡಹುಟ್ಟಿದವಳು, ಕುಲಸ್ತ್ರೀ. ಕ್ಷಮಾ (ಸ್ತ್ರೀ)=ಭೂಮಿ, ಸೈರಣೆ. ಕ್ಷಮ (ನ)=ಯುಕ್ತವಾದದ್ದು. ಕ್ಷಮ (ವಿ. ನಿಘ್ನ)= ಶಕ್ತ, ಹಿತಕಾರಿ.

೧೩೪೪. ಶ್ಯಾಮ (ವಿ. ನಿಘ್ನ)=ಹಸಿರು, ಕಪ್ಪು. ಶ್ಯಾಮಾ (ಸ್ತ್ರೀ)=ಸೊಗದೆಬೇರು, ರಾತ್ರಿ, (ಯುವತಿ). ಲಲಾಮ' (ನ)=ಬಾಲ, ತಿಲಕ, ಕುದುರೆಯ ಅಲಂಕಾರ, ಪ್ರಧಾನ.

೧೩೪೫—೧೩೪೬. ಸೂಕ್ಷ್ಮ (ನ)=ಆಧ್ಯಾತ್ಮವಿಷಯ. ಸೂಕ್ಷ್ಮ (ವಿ. ನಿಘ್ನ)=ಚಿಕ್ಕದು. ಪ್ರಥಮ (ವಿ. ನಿಘ್ನ)=ಮೊದಲನೆಯ, ಪ್ರಧಾನವಾದ. ವಾಮ=ಸುಂದರ, ಪ್ರತಿಕೂಲ. ಅಧಮ (ವಿ. ನಿಘ್ನ)=ನ್ಯೂನ, ನಿಂದನೀಯ. ಯಾತಯಾಮ (ವಿ. ನಿಘ್ನ)=ಹಳಸಿದ, ಭೋಗಿಸಲ್ಪಟ್ಟ.

ಯಾಂತಗಳು

೧೩೪೬—೧೩೪೭. ತಾರ್ಕ್ಷ್ಯ (ಪು)=ಕುದುರೆ, ಗರುಡ. ಕ್ಷಯ (ಪು)=ಮನೆ, ಕ್ಷೀಣತೆ. ಶ್ವಶುರ್ಯ (ಪು)=ಗಂಡನ ಸೋದರ, ಹೆಂಡತಿಯ ಸೋದರ. ಭ್ರಾತೃವ್ಯ (ಪು)=ಸೋದರನ ಮಗ, ಶತ್ರು. ಪರ್ಜನ್ಯ (ಪು)=ಗುಡುಗುವ ಮೋಡ, ಇಂದ್ರ. ಅರ್ಯ (ಪು)=ಒಡೆಯ, ವೈಶ್ಯ.

ತಿಷ್ಯಃ ಪುಷ್ಯೇ ಕಲಿಯುಗೇ ಪರ್ಯಾಯೋಽವಸರೇ ಕ್ರಮೇ ।
ಪ್ರತ್ಯಯೋಽಧೀನಶಪಥಜ್ಞಾನವಿಶ್ವಾಸಹೇತುಷು ॥ ೧೩೪೮
ರಂಧ್ರೇ ಶಬ್ದೇಽಥಾನುಶಯೋ ದೀರ್ಘದ್ವೇಷಾನುತಾಪಯೋಃ ।
ಸ್ಥೂಲೋಚ್ಚಯಸ್ತ್ವಸಾಕಲ್ಯೇ ಗಜಾನಾಂ ಮಧ್ಯಮೇ ಗತೇ ॥ ೧೩೪೯
ಸಮಯಾಃ ಶಪಥಾಚಾರಕಾಲಸಿದ್ಧಾಂತಸಂವಿದಃ ।
ವ್ಯಸನಾನ್ಯಶುಭಂ ದೈವಂ ವಿಪದಿತ್ಯನಯಾಸ್ತ್ರಯಃ ॥ ೧೩೫೦
ಅತ್ಯಯೋಽತಿಕ್ರಮೇ ಕೃಚ್ಛ್ರೇ ದೋಷೇ ದಂಡೇಽಪ್ಯಥಾಪದಿ ।
ಯುದ್ಧಾಯತ್ಯೋಸ್ಸಂಪರಾಯಃ ಪೂಜ್ಯಸ್ತು ಶ್ವಶುರೇಽಪಿ ಚ ॥ ೧೩೫೧
ಪಶ್ಚಾದವಸ್ಥಾಯಿಬಲಂ ಸಮವಾಯಶ್ಚ ಸಂನಯೌ ।
ಸಂಘಾತೇ ಸನ್ನಿವೇಶೇ ಚ ಸಂಸ್ತ್ಯಾಯಃ ಪ್ರಣಯಾಸ್ತ್ವಮೀ ॥ ೧೩೫೨
ವಿಸ್ರಂಭಯಾಜ್ಞಾಪ್ರೇಮಾಣೋ ವಿರೋಧೇಽಪಿ ಸಮುಚ್ಛ್ರಯಃ ।
ವಿಷಯೋ ಯಸ್ಯ ಯೋ ಜ್ಞಾತಸ್ತತ್ರ ಶಬ್ದಾದಿಕೇಷ್ವಪಿ ॥ ೧೩೫೩

೧೩೪೮—೧೩೪೯. ತಿಷ್ಯ (ಪು)=ಪುಷ್ಯಮಾಸ, ಕಲಿಯುಗ. ಪರ್ಯಾಯ (ಪು)=ಸರದಿ, ಕ್ರಮ. ಪ್ರತ್ಯಯ (ಪು)=ಅಧೀನ (ಉದಾ:—ರಾಜಪ್ರತ್ಯಯಾಃ ಪ್ರಜಾಃ) ಶಪಥ, ಜ್ಞಾನ, ವಿಶ್ವಾಸ, ಕಾರಣ, ದೋಷಾವಕಾಶ (ಉದಾ :—ರಿಪೌ ಪ್ರತ್ಯಯಮಾಸಾದ್ಯ ಪ್ರಹರೇತ್) ಕೃತ್ತದ್ಧಿತಾದಿ ಪ್ರತ್ಯಯ. ಅನುಶಯ (ಪು)=ದೀರ್ಘಕಾಲದ ವೈರ, ಪಶ್ಚಾತ್ತಾಪ. ಸ್ಥೂಲೋಚ್ಚಯ (ಪು)=ಅಸಂಪೂರ್ಣತೆ, ಆನೆಗಳ ಸಾಮಾನ್ಯವಾದ ನಡಿಗೆ.

೧೩೫೦. ಸಮಯ (ಪು)=ಶಪಥ, ಆಚಾರ, ಕಾಲ, ಸಿದ್ಧಾಂತ, ಜ್ಞಾನ, (ಸಂಕೇತ). ಅನಯ (ಪು)=ದ್ಯೂತಾದಿ ವ್ಯಸನ, ದುರದೃಷ್ಟ, ವಿಪತ್ತು.

೧೩೫೧. ಅತ್ಯಯ(ಪು)=ಅತಿಕ್ರಮಣ, ಕಷ್ಟ, ದೋಷ, ದಂಡನೆ. ಸಂಪರಾಯ (ಪು)=ಆಪತ್ತು, ಯುದ್ಧ, ಭವಿಷ್ಯತ್ಕಾಲ. ಪೂಜ್ಯ (ಪು)=ಮಾವ, ಪೂಜಾರ್ಹ.

೧೩೫೨—೧೩೫೩. ಸಂನಯ (ಪು)=ಹಿಂದುಗಡೆ ಕಾದಿಟ್ಟಿರುವ ಸೇನೆ, ಸಮೂಹ. ಸಂಸ್ತ್ಯಾಯ (ಪು)=ಸಮೂಹ, ಸಂನಿವೇಶ. ಪ್ರಣಯ (ಪು)=ನಂಬಿಕೆ, ಯಾಚನೆ, ಪ್ರೇಮ. ಸಮುಚ್ಛ್ರಯ (ಪು)=ವಿರೋಧ, (ಔನ್ನತ್ಯ). ವಿಷಯ (ಪು)=ಜ್ಞಾನಕ್ಕೆ ಗೋಚರವಾದದ್ದು. ಶಬ್ದ=ಸ್ಪರ್ಶಾದಿ ವಿಷಯ.

ನಿರ್ಯಾಸೇऽಪಿ ಕಷಾಯೋऽಸ್ತ್ರೀ ಸಭಾಯಾಂ ಚ ಪ್ರತಿಶ್ರಯಃ ।
ಪ್ರಾಯೋ ಭೂಮ್ನ್ಯಂತಗಮನೇ ಮನ್ಯುರ್ದೈನ್ಯೇ ಕ್ರತೌ ಕ್ರುಧಿ ॥ ೧೩೪೪
ರಹಸ್ಯೋಪಸ್ಥಯೋರ್ಗುಹ್ಯಂ ಸತ್ಯಂ ಶಪಥತಥ್ಯಯೋಃ ।
ವೀರ್ಯಂ ಬಲೇ ಪ್ರಭಾವೇ ಚ ದ್ರವ್ಯಂ ಭವ್ಯೇ ಗುಣಾಶ್ರಯೇ ॥ ೧೩೪೫
ಧಿಷ್ಣ್ಯಂ ಸ್ಥಾನೇ ಗೃಹೇ ಭೇऽಗ್ನೌ ಭಾಗ್ಯಂ ಕರ್ಮ ಶುಭಾಶುಭಮ್ ।
ಕಶೇರುಹೇಮ್ನೋರ್ಗಾಂಗೇಯಂ ವಿಶಲ್ಯಾ ದಂತಿಕಾऽಪಿ ಚ ॥ ೧೩೪೬
ವೃಷಾಕಪಾಯೀ ಶ್ರೀಗೌರ್ಯೋರಭಿಖ್ಯಾ ನಾಮಶೋಭಯೋಃ ।
ಆರಂಭೋ ನಿಷ್ಕೃತಿಶ್ಶಿಕ್ಷಾ ಪೂಜನಂ ಸಂಪ್ರಧಾರಣಮ್ ॥ ೧೩೪೭
ಉಪಾಯಃ ಕರ್ಮ ಚೇಷ್ಟಾ ಚ ಚಿಕಿತ್ಸಾ ಚ ನವ ಕ್ರಿಯಾಃ ।
ಛಾಯಾ ಸೂರ್ಯಪ್ರಿಯಾ ಕಾಂತಿಃ ಪ್ರತಿಬಿಂಬಮನಾತಪಃ ॥ ೧೩೪೮

೧೩೪೪. ಕಷಾಯ (ಪು.ನ)=ವಸ್ತುವನ್ನು ಹಾಕಿ ಮರಳಿಸಿದ ನೀರು (Decotion), (ಒಗರು). ಪ್ರತಿಶ್ರಯ (ಪು)=ಸಭೆ, (ಆಶ್ರಯ, ಒಪ್ಪಿಗೆ). ಪ್ರಾಯ (ಪು)=ಬಾಹುಳ್ಯ, ಮರಣ. ಮನ್ಯು (ಪು)=ದೈನ್ಯ, ಯಾಗ, ಕೋಪ.

೧೩೪೫. ಗುಹ್ಯ (ನ)=ಗುಟ್ಟು, ಗುಹ್ಯೇಂದ್ರಿಯ. ಸತ್ಯ (ನ)=ಶಪಥ, ದಿಟ. ವೀರ್ಯ (ನ)=ಬಲ, ಪ್ರಭಾವ, (ರೇತಸ್ಸು). ದ್ರವ್ಯ (ನ)=ಒಳ್ಳೆಯ ಪದಾರ್ಥ, ಗುಣಾಶ್ರಯವಾದ ಪೃಥಿವ್ಯಾದಿ ದ್ರವ್ಯ.

೧೩೪೬. ಧಿಷ್ಣ್ಯ (ನ)=ಸ್ಥಳ, ಮನೆ, ನಕ್ಷತ್ರ, ಅಗ್ನಿ. ಭಾಗ್ಯ(ನ)=ಶುಭಾಶುಭ ರೂಪವಾದ ಕರ್ಮ. ಗಾಂಗೇಯ (ನ)=ತಾವರೆ ಮೊದಲಾದವುಗಳ ಗಡ್ಡೆ, ಚಿನ್ನ. ವಿಶಲ್ಯಾ (ಸ್ತ್ರೀ)= ಜಾಪಾಳದ ಗಿಡ. ಹಾವುಮೆಕ್ಕೆ ಗಿಡ.

೧೩೪೭—೧೩೪೮. ವೃಷಾಕಪಾಯೀ (ಸ್ತ್ರೀ)=ಲಕ್ಷ್ಮಿ, ಪಾರ್ವತಿ. ಅಭಿಖ್ಯಾ (ಸ್ತ್ರೀ)=ಹೆಸರು, ಕಾಂತಿ, ಕ್ರಿಯಾ (ಸ್ತ್ರೀ)=ಆರಂಭ, ಪ್ರಾಯಶ್ಚಿತ್ತ, ಕಲಿಸುವುದು, ಪೂಜೆ, ವ್ಯವಹಾರನಿರ್ಣಯ, ಉಪಾಯ, ಕೆಲಸ, ಚಲನೆ, ಚಿಕಿತ್ಸೆ. ಛಾಯಾ (ಸ್ತ್ರೀ)=ಸೂರ್ಯನ ಹೆಂಡತಿ, ಕಾಂತಿ, ಪ್ರತಿಬಿಂಬ, ನೆರಳು.

ಕಕ್ಷ್ಯಾ ಪ್ರಕೋಷ್ಠೇ ಹರ್ಮ್ಯಾದೇಃ ಕಾಂಚ್ಯಾಂ ಮಧ್ಯೇಭಬಂಧನೇ ।
ಕೃತ್ಯಾ ಕ್ರಿಯಾದೇವತಯೋಸ್ತ್ರಿಷು ಭೇದ್ಯೇ ಧನಾದಿಭಿಃ ॥ ೧೩೫೯
ಜನ್ಯಂ ಸ್ಯಾಜ್ಜನವಾದೇಽಪಿ ಜಘನ್ಯೋಽಂತ್ಯೇಽಧಮೇಽಪಿ ಚ ।
ಗರ್ಹ್ಯಾಧೀನೌ ಚ ವಕ್ತವ್ಯೌ ಕಲ್ಯೌ ಸಜ್ಜನಿರಾಮಯೌ ॥ ೧೩೬೦
ಆತ್ಮವಾನನಪೇತೋಽರ್ಥಾತ್ ಅರ್ಥ್ಯೌ ಪುಣ್ಯಂ ತು ಚಾರ್ವಪಿ ।
ರೂಪ್ಯಂ ಪ್ರಶಸ್ತೇ ರೂಪೇಽಪಿ ವದಾನ್ಯೋ ವಲ್ಗುವಾಗಪಿ ॥ ೧೩೬೧
ನ್ಯಾಯ್ಯೇಽಪಿ ಮಧ್ಯಂ ಸೌಮ್ಯಂ ತು ಸುಂದರೇ ಸೋಮದೈವತೇ ।

ಇತಿ ಯಾಂತಾಃ

ನಿವಹಾವಸರೌ ವಾರೌ ಸಂಸ್ತರೌ ಪ್ರಸ್ತರಾಽಧ್ವರೌ ॥ ೧೩೬೨
ಗುರೂ ಗೀಷ್ಪತಿಪಿತ್ರಾದ್ಯೌ ದ್ವಾಪರೌ ಯುಗಸಂಶಯೌ ।
ಪ್ರಕಾರೌ ಭೇದಸಾದೃಶ್ಯೇ ಆಕಾರಾವಿಂಗಿತಾಕೃತೀ ॥ ೧೩೬೩

೧೩೫೯. ಕಕ್ಷ್ಯಾ (ಸ್ತ್ರೀ)= ಮನೆಯ ಕೋಣೆ ಇತ್ಯಾದಿ ವಿಭಾಗ, ಡಾಬು, ಆನೆಯ ಸೊಂಟಕ್ಕೆ ಕಟ್ಟುವ ಹಗ್ಗ. ಕೃತ್ಯಾ(ಸ್ತ್ರೀ)=ಕೆಲಸ, ಆಭಿಚಾರಿಕ ದೇವತೆ. ಕೃತ್ಯ (ವಿ. ನಿಘ್ನ. ತ್ರಿಲಿಂಗ)=ಧನಾದಿಗಳಿಂದ ವಶಪಡಿಸಿಕೊಳ್ಳಬಹುದಾದ.

೧೩೬೦. ಜನ್ಯ (ನ)=ಜನರ ಹೇಳಿಕೆ (Rumour), ಯುದ್ಧ, (ಜನ್ಯಾ (ಸ್ತ್ರೀ)=ವಧುವಿನ ಗೆಳತಿ, ದಾದಿ). ಜಘನ್ಯ (ವಿ. ನಿಘ್ನ)=ಕಡೆಯವನು, ಅಧಮ. ವಕ್ತವ್ಯ (ವಿ. ನಿಘ್ನ)=ನಿಂದಿತ, ಅಧೀನ. ಕಲ್ಯ (ವಿ. ನಿಘ್ನ)ಸಿದ್ಧವಾದ, ಆರೋಗ್ಯವುಳ್ಳ.

೧೩೬೧—೧೩೬೨. ಅರ್ಥ್ಯ (ವಿ. ನಿಘ್ನ)=ತಿಳಿವಳಿಕೆಯುಳ್ಳ, ಅರ್ಥವುಳ್ಳ. ಪುಣ್ಯ (ನ)=ಸುಂದರ, ಪುಣ್ಯಕರ. ರೂಪ್ಯ (ನ)=ಪ್ರಶಸ್ತವಾದ ರೂಪವುಳ್ಳ, ಚಿನ್ನಬೆಳ್ಳಿಗಳ ನಾಣ್ಯ. ವದಾನ್ಯ (ಪು)=ವಾಗ್ಮಿ, ದಾನಿ. ಮಧ್ಯ (ನ)=ನ್ಯಾಯವಾದದ್ದು, ನಡು. ಸೌಮ್ಯ (ನ)=ಸುಂದರ, ಸೋಮದೇವತಾಕವಾದ.

ರಾಂತಗಳು

೧೩೬೨—೧೩೬೩. ವಾರ (ಪು)=ಸಮೂಹ, ಸರದಿ. ಸಂಸ್ತರ (ಪು)=ಹಾಸಿಗೆ, ಯಜ್ಞ, ಗುರು (ಪು)=ಬೃಹಸ್ಪತಿ, ತಂದೆ, (ಉಪದೇಶಕರ್ತ, ಭಾರವಾದ, ದೊಡ್ಡ). ದ್ವಾಪರ (ಪು)= ಒಂದು ಯುಗ, ಸಂದೇಹ. ಪ್ರಕಾರ (ಪು)=ಭೇದ, ಹೋಲಿಕೆ. ಆಕಾರ (ಪು)= ಅಭಿಪ್ರಾಯವನ್ನು ಸೂಚಿಸುವ ಚೇಷ್ಟೆ, ಆಕೃತಿ.

ಕಿಂಶಾರೂ ಧಾನ್ಯಶೂಕೇಷೂ ಮರೂ ಧನ್ವಧರಾಧರೌ ।
ಅದ್ರಯೋ ದ್ರುಮಶೈಲಾರ್ಕಾಃ ಸ್ತ್ರೀಸ್ತನಾಬ್ದೌ ಪಯೋಧರೌ ॥ ೧೩೬೪
ಧ್ವಾಂತಾರಿದಾನವಾ ವೃತ್ರಾಃ ಬಲಿಹಸ್ತಾಂಶವಃ ಕರಾಃ ।
ಪ್ರದರಾ ಭಂಗನಾರೀರುಗ್ಬಾಣಾ ಅಸ್ರಾಃ ಕಚಾ ಅಪಿ ॥ ೧೩೬೫
ಅಜಾತಶೃಂಗೋ ಗೌಃ ಕಾಲೇಽಪ್ಯಶ್ಮಶ್ರುರ್ನಾ ಚ ತೂಬರೌ ।
ಸ್ವರ್ಣೇಽಪಿ ರಾಃ ಪರಿಕರಃ ಪರ್ಯಂಕಪರಿವಾರಯೋಃ ॥ ೧೩೬೬
ಮುಕ್ತಾಶುದ್ಧೌ ಚ ತಾರಸ್ಸ್ಯಾಚ್ಛಾರೋ ವಾಯೌ ಸ ತು ತ್ರಿಷು ।
ಕರ್ಬುರೇಽಥ ಪ್ರತಿಜ್ಞಾಜಿಸಂವಿದಾಪತ್ಸು ಸಂಗರಃ ॥ ೧೩೬೭
ವೇದಭೇದೇ ಗುಪ್ತವಾದೇ ಮಂತ್ರೋ ಮಿತ್ರೋ ರವಾವಪಿ ।
ಮಖೇಷು ಯೂಪಖಂಡೇಽಪಿ ಸ್ವರುರ್ಗುಹ್ಯೇಽಪ್ಯವಸ್ಕರಃ ॥ ೧೩೬೮
ಆಡಂಬರಸ್ತೂರ್ಯರವೇ ಗಜೇಂದ್ರಾಣಾಂ ಚ ಗರ್ಜಿತೇ ।
ಅಭಿಹಾರೋಽಭಿಯೋಗೇ ಚ ಚೌರ್ಯೇ ಸನ್ನಹನೇಽಪಿ ಚ ॥ ೧೩೬೯

೧೩೬೪. ಕಿಂಶಾರು (ಪು)=ಧಾನ್ಯದ ಮುಳ್ಳು, ಬಾಣ. ಮರು (ಪು)=ನಿರ್ಜಲವಾದ ನೆಲ, ಬೆಟ್ಟ. ಅದ್ರಿ (ಪು)=ಮರ, ಬೆಟ್ಟ, ಸೂರ್ಯ. ಪಯೋಧರ (ಪು)=ಮೊಲೆ, ಮೋಡ.

೧೩೬೫. ವೃತ್ರ (ಪು)=ಕತ್ತಲೆ, ಶತ್ರು, ವೃತ್ರನೆಂಬ ಅಸುರ. ಕರ (ಪು)=ಕಪ್ಪ, ಕೈ, ಕಿರಣ. ಪ್ರದರ (ಪು)=ಸೀಳುವಿಕೆ, ಹೆಂಗಸರ ಒಂದು ರೋಗ, ಬಾಣ. ಅಸ್ರ (ಪು)=ತಲೆಗೂದಲು, (ಅಸ್ರ (ನ)=ರಕ್ತ, ಕಣ್ಣೀರು).

೧೩೬೬. ತೂಬರ (ಪು)=ವಯಸ್ಸಾದರೂ ಕೊಂಬು ಹುಟ್ಟದಿರುವ ಎತ್ತು, ವಯಸ್ಸಾದರೂ ಗಡ್ಡಮೀಸೆಗಳು ಹುಟ್ಟದಿರುವವನು. ರೈ (ಪು)=ಚಿನ್ನ, (ಹಣ).ಪರಿಕರ (ಪು)=ಮಂಚ, ಪರಿವಾರ.

೧೩೬೭. ತಾರ (ಪು)=ಮುತ್ತಿನ ಶುದ್ಧತೆ, (ಶುದ್ಧವಾದ ಮುತ್ತು). ಶಾರ (ಪು)=ವಾಯು. ಶಾರ (ವಿ.ನಿಘ್ನ)= ಚಿತ್ರವರ್ಣವಾದ. ಸಂಗರ (ಪು)=ಪ್ರತಿಜ್ಞೆ, ಯುದ್ಧ, ನಿಶ್ಚಯ, ಆಪತ್ತು.

೧೩೬೮. ಮಂತ್ರ (ಪು)=ವೇದದ ಒಂದು ಭಾಗ, ರಹಸ್ಯವಾದ ಮಾತು. ಮಿತ್ರ (ಪು)=ಸೂರ್ಯ. ಮಿತ್ರ (ನ)=ಸ್ನೇಹಿತ. ಸ್ವರು (ಪು)=ಯಜ್ಞ, ಬಾಣ, ಯೂಪಸ್ತಂಭದ ತುಂಡು. ಅವಸ್ಕರ (ಪು)=ಸ್ತ್ರೀಪುರುಷರ ಗುಹ್ಯಾಂಗ, ಮಲ.

೧೩೬೯. ಆಡಂಬರ (ಪು)=ವಾದ್ಯಧ್ವನಿ, ಆನೆಗಳ ಗರ್ಜನೆ. ಅಭಿಹಾರ (ಪು)=ಮೇಲೆ ಬೀಳುವುದು (ಆಕ್ರಮಣ), ಕಳ್ಳತನ, ಕವಚಾದಿಗಳನ್ನು ಧರಿಸುವುದು.

ಸ್ಯಾಜ್ಜಂಗಮೇ ಪರೀವಾರಃ ಖಡ್ಗಕೋಶೇ ಪರಿಚ್ಛದೇ ।
ವಿಷ್ಟರೋ ವಿಟಪೀ ದರ್ಭಮುಷ್ಟಿಃ ಪೀಠಾದ್ಯಮಾಸನಮ್ ॥ ೧೩೭೦
ದ್ವಾರಿ ದ್ವಾಃಸ್ಥೇ ಪ್ರತೀಹಾರಃ ಪ್ರತೀಹಾರ್ಯಪ್ಯನಂತರೇ ।
ವಿಪುಲೇ ನಕುಲೇ ವಿಷ್ಣೌ ಬಭ್ರುಸ್ಸ್ಯಾತ್ ಪಿಂಗಲೇ ತ್ರಿಷು ॥ ೧೩೭೧
ಸಾರೋ ಬಲೇ ಸ್ಥಿರಾಂಶೇ ಚ ನ್ಯಾಯ್ಯೇ ಕ್ಲೀಬಂ ವರೇ ತ್ರಿಷು ।
ದುರೋದರೋ ದ್ಯೂತಕಾರೇ ಪಣೇ ದ್ಯೂತೇ ದುರೋದರಮ್ ॥ ೧೩೭೨
ಮಹಾರಣ್ಯೇ ದುರ್ಗಪಥೇ ಕಾಂತಾರಂ ಪುನ್ನಪುಂಸಕಮ್ ।
ಮತ್ಸರೋಽನ್ಯಶುಭದ್ವೇಷೇ ತದ್ವತ್ಕೃಪಣಯೋಸ್ತ್ರಿಷು ॥ ೧೩೭೩
ದೇವಾದ್ವೃತೇ ವರಃ ಶ್ರೇಷ್ಠೇ ತ್ರಿಷು ಕ್ಲೀಬಂ ಮನಾಕ್ಪ್ರಿಯೇ ।
ವಂಶಾಂಕುರೇ ಕರೀರೋಽಸ್ತ್ರೀ ತರುಭೇದೇ ಘಟೇ ಚ ನಾ ॥ ೧೩೭೪
ನಾ ಚಮೂಜಘನೇ ಹಸ್ತಸೂತ್ರೇ ಪ್ರತಿಸರೋಽಸ್ತ್ರಿಯಾಮ್ ।
ಯಮಾನಿಲೇಂದ್ರಚಂದ್ರಾರ್ಕವಿಷ್ಣುಸಿಂಹಾಂಶುವಾಜಿಷು ॥ ೧೩೭೫

೧೩೭೦. ಪರೀವಾರ (ಪು)=ಪರಿಜನ, ಕತ್ತಿಯ ಒರೆ, ಉಪಕರಣ. ವಿಷ್ಟರ (ಪು)=ಮರ, ಒಂದು ಹಿಡಿ ದರ್ಭೆ, ಪೀಠ.

೧೩೭೧. ಪ್ರತೀಹಾರ (ಪು)=ಬಾಗಿಲು, ಬಾಗಿಲುಕಾಯುವವನು. ಪ್ರತೀಹಾರೀ (ಸ್ತ್ರೀ)= ಬಾಗಿಲು ಕಾಯುವವನು, ಬಾಗಿಲು ಕಾಯುವವಳು. ಬಭ್ರು (ಪು)=ವಿಶಾಲ, ಮುಂಗುಸಿ, ವಿಷ್ಣು. ಬಭ್ರು (ವಿ. ನಿಘ್ನ)=ಪಿಂಗಳ ವರ್ಣವಾದ, (ವಿಶಾಲ ಎಂಬ ಅರ್ಥದಲ್ಲಿಯೂ ಈ ಶಬ್ದವು ವಿ. ನಿಘ್ನವಾಗುತ್ತದೆ).

೧೩೭೨. ಸಾರ (ಪು)=ಬಲ, ಸ್ಥಿರಾಂಶ (Essence), ಯುಕ್ತ. ಸಾರ (ವಿ. ನಿಘ್ನ)=ಶ್ರೇಷ್ಠ. ದುರೋದರ (ಪು)=ಜೂಜಾಡುವವನು, ಪಣ. ದುರೋದರ (ನ)=ಜೂಜು.

೧೩೭೩. ಕಾಂತಾರ (ಪು.ನ)= ದೊಡ್ಡಕಾಡು, ಕಷ್ಟವಾದ ದಾರಿ. ಮತ್ಸರ (ಪು)=ಹೊಟ್ಟೆ ಕಿಚ್ಚು. ಮತ್ಸರ (ವಿ. ನಿಘ್ನ)=ಹೊಟ್ಟೆ ಕಿಚ್ಚುಳ್ಳವನು, ಕೃಪಣ.

೧೩೭೪. ವರ (ಪು)=ದೇವತೆಯಿಂದ ಪಡೆದ ಇಷ್ಟಾರ್ಥ, ವರ (ವಿ. ನಿಘ್ನ)=ಶ್ರೇಷ್ಠ, ವರ (ನ)=ಸ್ವಲ್ಪ ಇಷ್ಟವಾದದ್ದು. ಕರೀರ (ಪು.ನ)=ಬಿದಿರು ಮೊಳಕೆ (ಕಳಲೆ). ಕರೀರ (ಪು)=ಒಂದು ಮುಳ್ಳುಗಿಡ, ಗಡಿಗೆ.

೧೩೭೫–೧೩೭೬. ಪ್ರತಿಸರ (ಪು)=ಸೈನ್ಯದ ಹಿಂಭಾಗ. ಪ್ರತಿಸರ (ಪು.ನ)=ಕೈಗೆ

ಶುಕಾಹಿಕಪಿಭೇಕೇಷು ಹರಿರ್ನಾ ಕಪಿಲೇ ತ್ರಿಷು ।
ಶರ್ಕರಾ ಕರ್ಪರಾಂಶೇಽಪಿ ಯಾತ್ರಾ ಸ್ಯಾದ್ಯಾಪನೇ ಗತೌ ॥ ೧೩೭೬
ಇರಾ ಭೂವಾಕ್ಸುರಾಪ್ಸು ಸ್ಯಾತ್ ತಂದ್ರೀ ನಿದ್ರಾಪ್ರಮೀಲಯೋಃ ।
ಧಾತ್ರೀ ಸ್ಯಾದುಪಮಾತಾಪಿ ಕ್ಷಿತಿರಪ್ಯಾಮಲಕ್ಯಪಿ ॥ ೧೩೭೭
ಕ್ಷುದ್ರಾ ವ್ಯಂಗಾ ನಟೀ ವೇಶ್ಯಾ ಸರಘಾ ಕಂಟಕಾರಿಕಾ ।
ತ್ರಿಷು ಕ್ರೂರೇಽಧಮೇಽಲ್ಪೇಽಪಿ ಕ್ಷುದ್ರಂ ಮಾತ್ರಾ ಪರಿಚ್ಛದೇ ॥ ೧೩೭೮
ಅಲ್ಪೇ ಚ ಪರಿಮಾಣೇ ಸ್ಯಾನ್ಮಾತ್ರಂ ಕಾರ್ತ್ಸ್ನ್ಯೇಽವಧಾರಣೇ ।
ಆಲೇಖ್ಯಾಶ್ಚರ್ಯಯೋಶ್ಚಿತ್ರಂ ಕಲತ್ರಂ ಶ್ರೋಣಿಭಾರ್ಯಯೋಃ ॥ ೧೩೭೯
ಯೋಗ್ಯಭಾಜನಯೋಃ ಪಾತ್ರಂ ಪತ್ರಂ ವಾಹನಪಕ್ಷಯೋಃ ।
ನಿದೇಶಗ್ರಂಥಯೋಃ ಶಾಸ್ತ್ರಂ ಶಸ್ತ್ರಮಾಯುಧಲೋಹಯೋಃ ॥ ೧೩೮೦
ಸ್ಯಾಜ್ಜಟಾಂಶುಕಯೋರ್ನೇತ್ರಂ ಕ್ಷೇತ್ರಂ ಪತ್ನೀಶರೀರಯೋಃ ।
ಮುಖಾಗ್ರೇ ಕ್ರೋಡಹಲಯೋಃ ಪೋತ್ರಂ ಗೋತ್ರಂ ತು ನಾಮ್ನಿ ಚ ॥ ೧೩೮೧

ಕಟ್ಟಿಕೊಳ್ಳುವ ದಾರ (ಕಂಕಣ). ಹರಿ (ಪು)=ಯಮ, ವಾಯು, ಇಂದ್ರ, ಚಂದ್ರ, ಸೂರ್ಯ, ವಿಷ್ಣು, ಸಿಂಹ, ಕಿರಣ, ಕುದುರೆ, ಗಿಳಿ, ಹಾವು, ಕಪಿ, ಕಪ್ಪೆ. ಹರಿ (ವಿ. ನಿಘ್ನ)=ಹೊಂಬಣ್ಣವುಳ್ಳ. ಶರ್ಕರಾ(ಸ್ತ್ರೀ)=ಗಡಿಗೆಯ ಚೂರು, (ಸಕ್ಕರೆ, ಕಲ್ಲುಹರಳು). ಯಾತ್ರಾ (ಸ್ತ್ರೀ)=ನಡೆಸುವುದು, ನಡೆಯುವುದು.

೧೩೭೭. ಇರಾ (ಸ್ತ್ರೀ)=ಭೂಮಿ, ವಾಕ್ಕು, ಹೆಂಡ, ನೀರು. ತಂದ್ರೀ (ಸ್ತ್ರೀ)=ನಿದ್ರೆ, ಬಳಲಿಕೆ. ಧಾತ್ರೀ (ಸ್ತ್ರೀ)=ಸಾಕಿದ ತಾಯಿ, ಭೂಮಿ, ನೆಲ್ಲಿಗಿಡ.

೧೩೭೮—೧೩೭೯. ಕ್ಷುದ್ರಾ (ಸ್ತ್ರೀ)=ಅಂಗಹೀನಳು, ನಟಿ, ಸೂಳೆ, ಜೇನುಹುಳು, ಹೆಗ್ಗುಳ್ಳದ ಗಿಡ. ಕ್ಷುದ್ರ (ವಿ. ನಿಘ್ನ)= ಕ್ರೂರ, ಅಧಮ, ಅಲ್ಪ. ಮಾತ್ರಾ (ಸ್ತ್ರೀ)=ಪರಿವಾರ, ಸ್ವಲ್ಪ, ಪರಿಮಾಣ. ಮಾತ್ರ (ನ) (ಇದು ಯಾವುದಾದರೊಂದು ಶಬ್ದದ ಮುಂದೆ ಮಾತ್ರ ಇರುತ್ತದೆ)=ಸಕಲ. ಉದಾ:—ಮನುಷ್ಯಮಾತ್ರಂ ; ಅವಧಾರಣೆ. ಉದಾ:—ವಾಙ್ಮಾತ್ರೇಣ ಉಪಕುರು. ಚಿತ್ರ (ನ)=ಚಿತ್ರ, ಆಶ್ಚರ್ಯ. ಕಲತ್ರ (ನ)=ನಿತಂಬ, ಹೆಂಡತಿ.

೧೩೮೦. ಪಾತ್ರ (ನ)=ಯೋಗ್ಯ, ಪಾತ್ರೆ. ಪತ್ರ (ನ)=ವಾಹನ, ರೆಕ್ಕೆ, ಎಲೆ. ಶಾಸ್ತ್ರ (ನ)=ಆಜ್ಞೆ, ಗ್ರಂಥ. ಶಸ್ತ್ರ (ನ)=ಆಯುಧ, ಕಬ್ಬಿಣ.

---

1 ಚಿನ್ನ ಎಂಬ ಅರ್ಥದಲ್ಲಿ ಇದು ನಪುಸಂಕವೆಂದು ಮೇದಿನೀ ಕೋಶಾದಿಗಳಿಂದ ತಿಳಿದುಬರುತ್ತದೆ.

ಸತ್ರಮಾಚ್ಛಾದನೇ ಯಜ್ಞೇ ಸದಾದಾನೇ ವನೇಽಪಿ ಚ ।
ಅಜಿರಂ ವಿಷಯೇ ಕಾಯೇಽಪ್ಯಂಬರಂ ವ್ಯೋಮ್ನಿ ವಾಸಸಿ ॥ ೧೩೮೨
ಚಕ್ರಂ ರಾಷ್ಟ್ರೇಽಪ್ಯಕ್ಷರಂ ತು ಮೋಕ್ಷೇಽಪಿ ಕ್ಷೀರಮಪ್ಸು ಚ ।
ಸ್ವರ್ಣೇಽಪಿ ಭೂರಿಚಂದ್ರೌ ದ್ವೌ ದ್ವಾರಮಾತ್ರೇಽಪಿ ಗೋಪುರಮ್ ॥ ೧೩೮೩
ಗುಹಾದಂಭೌ ಗಹ್ವರೇ ದ್ವೇ ರಹೋಂऽತಿಕಮುಪಹ್ವರೇ ।
ಪುರೋಽಧಿಕಮುಪರ್ಯಗ್ರಾಣ್ಯಗಾರೇ ನಗರೇ ಪುರಮ್ ॥ ೧೩೮೪
ಮಂದಿರಂ ಚಾಥ ರಾಷ್ಟ್ರೋಽಸ್ತ್ರೀ ವಿಷಯೇ ಸ್ಯಾದುಪದ್ರವೇ ।
ದರೋಽಸ್ತ್ರಿಯಾಂ ಭಯೇ ಶ್ವಭ್ರೇ ವಜ್ರೋಽಸ್ತ್ರೀ ಹೀರಕೇ ಪವೌ ॥ ೧೩೮೫
ತಂತ್ರಂ ಪ್ರಧಾನೇ ಸಿದ್ಧಾಂತೇ ಸೂತ್ರವಾಯೇ ಪರಿಚ್ಛದೇ ।
ಔಶೀರಂ ಚಾಮರೇ ದಂಡೇಽಪ್ಯೌಶೀರಂ ಶಯನಾಸನೇ ॥ ೧೩೮೬
ಪುಷ್ಕರಂ ಕರಿಹಸ್ತಾಗ್ರೇ ವಾದ್ಯಭಾಂಡಮುಖೇ ಜಲೇ ।
ವ್ಯೋಮ್ನಿ ಖಡ್ಗಫಲೇ ಪದ್ಮೇ ತೀರ್ಥೌಷಧಿವಿಶೇಷಯೋಃ ॥ ೧೩೮೭

೧೩೮೧. ನೇತ್ರ (ನ)=ಬಿಳಲು, ಬಟ್ಟೆ, (ಕಣ್ಣು). ಕ್ಷೇತ್ರ (ನ)=ಹೆಂಡತಿ, ಶರೀರ. ಪೋತ್ರ (ನ)=ಹಂದಿಯ ಮೂಗು, ನೇಗಿಲಿನ ಮೂಗು. ಗೋತ್ರ (ನ)=ಹೆಸರು, (ಕುಲ, (ಪು) ಬೆಟ್ಟ).

೧೩೮೨. ಸತ್ರ (ನ)=ಆಚ್ಛಾದನ, ಯಜ್ಞ, ಸದಾ ದಾನಮಾಡುವುದು, ಕಾಡು. ಅಜಿರ (ನ)=ಶಬ್ದಾದಿ ವಿಷಯ, ದೇಹ, (ಗಾಳಿ). ಅಂಬರ (ನ)=ಆಕಾಶ, ವಸ್ತ್ರ.

೧೩೮೩. ಚಕ್ರ (ನ)=ರಾಷ್ಟ್ರ, (ಗಾಲಿ). ಅಕ್ಷರ (ನ)=ಮೋಕ್ಷ, (ಅಕಾರ ಮುಂತಾದ ವರ್ಣ). ಕ್ಷೀರ (ನ)=ನೀರು, (ಹಾಲು). ಭೂರಿ[1] (ಪು)=ಚಿನ್ನ, (ಬ್ರಹ್ಮ, ವಿಷ್ಣು, ಶಿವ). ಭೂರಿ (ವಿ. ನಿಘ್ನ)=ಬಹಳ. ಚಂದ್ರ (ಪು)=ಚಿನ್ನ, (ಚಂದ್ರ, ಕರ್ಪೂರ). ಗೋಪುರ (ನ)=ಬಾಗಿಲು, ನಗರದ ದಿಡ್ಡಿಬಾಗಿಲು.

೧೩೮೪. ಗಹ್ವರ[1] (ನ)=ಗುಹೆ, ದಂಭ. ಉಪಹ್ವರ (ನ)=ಏಕಾಂತ, ಸಮೀಪ. ಅಗ್ರ (ನ)=ಎದುರು, ಅಧಿಕ, ಮೇಲ್ಗಡೆ. ಪುರ (ನ)=ಮನೆ, ಪಟ್ಟಣ.

೧೩೮೫. ಮಂದಿರ (ನ)=ಮನೆ, ಪಟ್ಟಣ. ರಾಷ್ಟ್ರ (ಪು.ನ)=ರಾಜ್ಯ, ಉಪದ್ರವ. ದರ (ಪು.ನ)=ಹೆದರಿಕೆ, ಬಿಲ. ವಜ್ರ (ಪು.ನ)=ವಜ್ರ, ವಜ್ರಾಯುಧ.

---

1 ಇದು ಪುಲ್ಲಿಂಗದಲ್ಲಿಯೂ ಉಂಟು.

ಅಂತರಮವಕಾಶಾವಧಿಪರಿಧಾನಾಂ ತರ್ಧಿಭೇದತಾದರ್ಥ್ಯೇ ।
ಛಿದ್ರಾತ್ಮೀಯವಿನಾಬಹಿರವಸರಮಧ್ಯೇಽನ್ತರಾತ್ಮನಿ ಚ ॥ ೧೩೮೮
ಮುಸ್ತೇಽಪಿ ಪಿಠರಂ ರಾಜಕಶೇರುಣ್ಯಪಿ ನಾಗರಮ್ ।
ಶಾರ್ವರಂತ್ವಂಧತಮಸೇ ಘಾತುಕೇ ಭೇದ್ಯಲಿಂಗಕಮ್ ॥ ೧೩೮೯
ಗೌರೋಽರುಣೇ ಸಿತೇ ಪೀತೇ ವ್ರಣಕಾರ್ಯರ್ಪ್ಯರುಷ್ಕರಃ ।
ಜಠರಃ ಕಠಿನೇಽಪಿ ಸ್ಯಾದಧಸ್ತಾದಪಿ ಚಾಧರಃ ॥ ೧೩೯೦
ಅನಾಕುಲೇಽಪಿ ಚೈಕಾಗ್ರೋ ವ್ಯಗ್ರೋ ವ್ಯಾಸಕ್ತ ಆಕುಲೇ ।
ಉಪರ್ಯುದೀಚ್ಯಶ್ರೇಷ್ಠೇಷ್ವಪ್ಯುತ್ತರಸ್ಸ್ಯಾದನುತ್ತರಃ ॥ ೧೩೯೧

೧೩೮೬. ತಂತ್ರ (ನ)=ಪ್ರಧಾನ, ಸಿದ್ಧಾಂತ, ನೆಯಿಗೆ—ನೇಯುವ ಮಗ್ಗ, ಪರಿವಾರ. ಔಶೀರ (ನ)=ಚಾಮರ, ಕೋಲು. ಔಶೀರ (ನ)=ಮಲಗುವುದು, ಪೀಠ—ಮಂಚ.

೧೩೮೭. ಪುಷ್ಕರ (ನ)=ಆನೆಸೊಂಡಿಲಿನ ತುದಿ, ಬಾರಿಸುವ ವಾದ್ಯಗಳ ಬಾಯಿ, ನೀರು, ಆಕಾಶ, ಕತ್ತಿಯ ಅಲಗು—ಕತ್ತಿಯ ಒರೆ, ಕಮಲ, ತೀರ್ಥ, ಮೂಲಿಕಾವಿಶೇಷ.

೧೩೮೮. ಅಂತರ (ನ)=ಅವಕಾಶ, ಅವಧಿ, ಉಡುವ ಬಟ್ಟೆ, ವ್ಯವಧಾನ, ಭೇದ, ತಾದರ್ಥ್ಯ (on account of) ; (ಉದಾ:— 'ಅವೈಮಿಕಾರ್ಯಾಂತರ ಮಾನುಷ್ಯಸ್ಯ' —ರಘು.) ರಂಧ್ರ, ತನ್ನದು (ಉದಾ:—'ನ ಚೈತದಿಷ್ಟಂ ಮಾತಾ ಮೇ ಯದವೋಚನ್ಮದಂತರಮ್' ರಾಮಾ.), ಹೊರತು (—ಅಂತರೇಣ, ಉದಾ:—ಕೃಷ್ಣಮಂತರೇಣ ನ ಸುಖಮ್), ಹೊರಗಡೆ, ಉದಾ:—ಅಂತರೇ ಗೃಹಾಃ, ಸಮಯ (ಉದಾ : ಅತ್ರಾಂತರೇ), ನಡುವೆ, ಪರಮಾತ್ಮ.

೧೩೮೯. ಪಿಠರ (ನ)=ತುಂಗೆಗೆಡ್ಡೆ, (ಮಡಕೆ). ನಾಗರ (ನ)=ಒಂದು ಜಾತಿಯ ಗೆಡ್ಡೆ, (ಶುಂಠಿ). ಶಾರ್ವರ (ನ)=ಕಗ್ಗತ್ತಲೆ. ಶಾರ್ವರ (ವಿ. ನಿಘ್ನ)=ಘಾತುಕ.

೧೩೯೦. ಗೌರ[1] (ವಿ. ನಿಘ್ನ—ಸ್ತ್ರೀ. ಗೌರೀ)= ಕೆಂಪಾದ, ಬಿಳುಪಾದ, ಹಳದಿಯಾದ. ಆರುಷ್ಕರ (ಪು)=ಗಾಯವನ್ನು ಮಾಡುವ, ಗೇರು (Marking Nut). ಜಠರ (ಪು)=ಕಠಿಣವಾದ, (ಹೊಟ್ಟೆ). ಅಧರ (ಪು)=ಕೆಳಗಿರುವ, (ಕೆಳದುಟಿ).

೧೩೯೧—೧೩೯೨. ಏಕಾಗ್ರ (ಪು)=ಕದಲದಿರುವ, (ಸಾವಧಾನ). ವ್ಯಗ್ರ (ಪು)=ವ್ಯಾಕುಲ,

---

[1] ಮೂಲದಲ್ಲಿ ಪುಲ್ಲಿಂಗವಾಗಿ ಪ್ರಯೋಗಿಸಿದ್ದರೂ ಇದು ವಿ. ನಿಘ್ನವೇ. ಅರುಷ್ಕರ ಎಂಬುದೂ ಹಾಗೆಯೇ :— ಸ್ತ್ರೀ. ಅರುಷ್ಕರೀ. (ಗೇರು ಎಂಬ ಅರ್ಥದಲ್ಲಿ ಪುಲ್ಲಿಂಗ). ಇದೇ ರೀತಿಯಲ್ಲಿ ವಿಶೇಷಣ ರೂಪವಾದ ಶಬ್ದಗಳು ವಿ. ನಿಘ್ನಗಳಾಗಿ ತ್ರಿಲಿಂಗಗಳಾಗುತ್ತವೆ.

ಏಷಾಂ ವಿಪರ್ಯಯೇ ಶ್ರೇಷ್ಠೇ ದೂರಾನಾತ್ಮೋತ್ತಮಾಃ ಪರಾಃ ।
ಸ್ವಾದುಪ್ರಿಯೌ ಚ ಮಧುರೌ ಕ್ರೂರೌ ಕಠಿನನಿರ್ದಯೌ ॥ ೧೩೯೨
ಉದಾರೋ ದಾತೃಮಹತೋರಿತರಸ್ತ್ವನ್ಯನೀಚಯೋಃ ।
ಮಂದಸ್ವಚ್ಛಂದಯೋಃ ಸ್ವೈರಶ್ಶುಭ್ರಮುದ್ದೀಪ್ತಶುಕ್ಲಯೋಃ ॥ ೧೩೯೩

ಇತಿ ರಾಂತಾಃ

ಚೂಡಾ ಕಿರೀಟಂ ಕೇಶಾಶ್ಚ ಸಂಯತಾ ಮೌಲಯಸ್ತ್ರಯಃ ।
ದ್ರುಮಪ್ರಭೇದಮಾತಂಗಕಾಂಡ ಪುಷ್ಪಾಣಿ ಪೀಲವಃ ॥ ೧೩೯೪
ಕೃತಾಂತಾನೇಹಸೋಃ ಕಾಲಶ್ಚತುರ್ಥೇಽಪಿ ಯುಗೇ ಕಲಿಃ ।
ಸ್ಯಾತ್ಕುರಂಗೇಽಪಿ ಕಮಲಃ ಪ್ರಾವಾರೇಽಪಿ ಚ ಕಂಬಲಃ ॥ ೧೩೯೫
ಕರೋಪಹಾರಯೋಃ ಪುಂಸಿ ಬಲಿಃ ಪ್ರಾಣ್ಯಂಗಜೇ ಸ್ತ್ರಿಯಾಮ್ ।
ಸ್ಥೌಲ್ಯಸಾಮರ್ಥ್ಯಸೈನ್ಯೇಷು ಬಲಂ ನಾ ಕಾಕಸೀರಿಣೋಃ ॥ ೧೩೯೬

(ತ್ವರೆಪಡುವ). ಉತ್ತರ (ಪು)=ಮೇಲಿರುವ, ಉತ್ತರದಿಕ್ಕಿನ, ಶ್ರೇಷ್ಠ. ಅನುತ್ತರ (ಪು)=ಕೆಳಗಿರುವ, ಉತ್ತರದಿಕ್ಕಿಗೆ ಸೇರದ, ಶ್ರೇಷ್ಠವಲ್ಲದ. ಪರ (ಪು)=ದೂರ, ಅನ್ಯ, ಉತ್ತಮ. ಮಧುರ (ಪು)=ರುಚಿಕರ, ಪ್ರಿಯ. ಕ್ರೂರ (ಪು)=ಕಠಿನ, ದಯಾಹೀನ.

೧೩೯೩. ಉದಾರ (ಪು)=ದಾನಿ, ದೊಡ್ಡದು. ಇತರ (ಪು)=ಅನ್ಯ, ನೀಚ. ಸ್ವೈರ (ಪು)=ಸೋಮಾರಿ, ಸ್ವೇಚ್ಛೆಯಿಂದ ನಡೆಯುವ. ಶುಭ್ರ (ಪು)=ಬೆಳಗುವ, ಬಿಳುಪಾದ.

ಲಾಂತಗಳು

೧೩೯೪. ಮೌಲಿ (ಪು)=ಜುಟ್ಟು, ಲಾಂತಗಳು ಕಿರೀಟ, ಜಟೆ. ಪೀಲು (ಪು)=ಒಂದು ಜಾತಿಯ ಗಿಡ, ಆನೆ, ಬಾಣ, ಹೂ (ಪರಮಾಣು).

೧೩೯೫. ಕಾಲ (ಪು)=ಯಮ, ಸಮಯ, ಕಲಿ (ಪು)=ನಾಲ್ಕನೆಯ ಯುಗ,(ಜಗಳ) ಕಮಲ, (ಪು)=ಜಿಂಕೆ. (ಕಮಲ (ನ)=ನೀರು, ತಾವರೆ). ಕಂಬಲ (ಪು)=ಕಂಬಳಿ, (ಅಂಗವಸ್ತ್ರ).

೧೩೯೬. ಬಲಿ (ಪು)=ಕಪ್ಪ (ಕಂದಾಯ), ಪೂಜಾಸಾಮಗ್ರಿ. ಬಲಿ (ವಲಿ) (ಸ್ತ್ರೀ)=ಚರ್ಮದ ಸುಕ್ಕು. ಬಲ (ನ)=ದಪ್ಪವಾಗಿರುವಿಕೆ, ಶೌರ್ಯ, ಸೈನ್ಯ. ಬಲ (ಪು)=ಕಾಗೆ, ಬಲರಾಮ.

---

[1] ಇದು ಸ್ತ್ರೀಲಿಂಗದಲ್ಲಿ ವ್ಯಾಲೀ ಎಂದು ಈಕಾರಾಂತವಾಗಿರುತ್ತದೆ.

ವಾತೂಲಃ ಪುಂಸಿ ವಾತ್ಯಾಯಾಮಪಿ ವಾತಾಸಹೇ ತ್ರಿಷು ।
ಭೇದ್ಯಲಿಂಗಶ್ಶಠೇ ವ್ಯಾಲಃ ಪುಂಸಿ ಶ್ವಾಪದಸರ್ಪಯೋಃ ॥ ೧೩೯೭
ಮಲೋಽಸ್ತ್ರೀ ಪಾಪವಿಟ್ಕಿಟ್ಟಾನ್ಯಸ್ತ್ರೀ ಶೂಲಂ ರುಗಾಯುಧಮ್ ।
ಶಂಕಾವಪಿ ದ್ವಯೋಃ ಕೀಲಃ ಪಾಲಿಃ ಸ್ತ್ರ್ಯಶ್ರ್ಯಂಕಪಂಕ್ತಿಷು ॥ ೧೩೯೮
ಕಲಾ ಶಿಲ್ಪೇ ಕಾಲಭೇದೇಽಪ್ಯಾಲೀ ಸಖ್ಯಾವಲೀ ಅಪಿ ।
ಅಬ್ಧ್ಯಂಬುವಿಕೃತೌ ವೇಲಾ ಕಾಲಮರ್ಯಾದಯೋರಪಿ ॥ ೧೩೯೯
ಬಹುಲಾಃ ಕೃತ್ತಿಕಾ ಗಾವೋ ಬಹುಲೋಽಗ್ನೌ ಶಿತೌ ತ್ರಿಷು ।
ಲೀಲಾ ವಿಲಾಸಕ್ರಿಯಯೋರುಪಲಾ ಶರ್ಕರಾಪಿ ಚ ॥ ೧೪೦೦
ಶೋಣಿತೇಂಽಭಸಿ ಕೀಲಾಲಂ ಮೂಲಮಾದ್ಯೇ ಶಿಫಾಭಯೋಃ ।
ಜಾಲಂ ಸಮೂಹ ಆನಾಯೋ ಗವಾಕ್ಷಕ್ಷಾರಕಾವಪಿ ॥ ೧೪೦೧
ಶೀಲಂ ಸ್ವಭಾವೇ ಸದ್ವೃತ್ತೇ ಸಸ್ಯೇ ಹೇತುಕೃತೇ ಫಲಮ್ ।
ಛದಿರ್ನೇತ್ರರುಜೋಃ ಕ್ಲೀಬಂ ಸಮೂಹೇ ಪಟಲಂ ನ ನಾ ॥ ೧೪೦೨

೧೩೯೭. ವಾತೂಲ (ಪು)=ಬಿರುಗಾಳಿ. ವಾತೂಲ (ವಿ. ನಿಘ್ನ)=ಗಾಳಿಯನ್ನು ಸಹಿಸಲಾರದ. ವ್ಯಾಲ (ವಿ. ನಿಘ್ನ)=ದುಷ್ಟ. ವ್ಯಾಲ[1] (ಪು)=ಕ್ರೂರಮೃಗ, ಸರ್ಪ, (ದುಷ್ಟಗಜ).

೧೩೯೮. ಮಲ (ಪು.ನ)=ಪಾಪ, ಅಮೇಧ್ಯ, ಕಿಟ್ಟ (ಗಸಿ). ಶೂಲ (ಪು. ನ)=ಒಂದು ರೋಗ, ಒಂದು ಆಯುಧ. ಕೀಲ (ಪು. ಸ್ತ್ರೀ)=ಗೂಟ, (ಜ್ವಾಲೆ). ಪಾಲಿ (ಸ್ತ್ರೀ)=ಅಂಚು, ಚಿಹ್ನೆ, ಸಾಲು.

೧೩೯೯. ಕಲಾ (ಸ್ತ್ರೀ)=ಶಿಲ್ಪ (ಕೈಗೆಲಸ), ಕಾಲವಿಶೇಷ, (ಒಂದು ವಸ್ತುವಿನ ಹದಿನಾರನೆ ಒಂದು ಭಾಗ.) ಆಲೀ (ಸ್ತ್ರೀ)=ಸಖಿ, ಸಾಲು, (ರೇಖೆ, ಸೇತುವೆ). ವೇಲಾ (ಸ್ತ್ರೀ)=ಸಮುದ್ರದ ನೀರು ಉಕ್ಕುವುದು, ಕಾಲ, ಎಲ್ಲೆ.

೧೪೦೦. ಬಹುಲಾ (ಸ್ತ್ರೀ)=ಕೃತ್ತಿಕಾನಕ್ಷತ್ರ, ಹಸು. ಬಹುಲ (ಪು)=ಅಗ್ನಿ. ಬಹುಲ (ವಿ. ನಿಘ್ನ)=ಕಪ್ಪಾದ. ಲೀಲಾ (ಸ್ತ್ರೀ)=ವಿಲಾಸ, ಕ್ರಿಯೆ. ಉಪಲಾ (ಸ್ತ್ರೀ)=ಕಲ್ಲುಹರಳು, (ಕಲ್ಲುಸಕ್ಕರೆ).

೧೪೦೧. ಕೀಲಾಲ (ನ)=ರಕ್ತ, ನೀರು. ಮೂಲ (ನ)=ಮೊದಲನೆಯದು, ಬಿಳಿಲು, ಒಂದು ನಕ್ಷತ್ರ, (ಬೇರು). ಜಾಲ (ನ)=ಸಮೂಹ, ಬಲೆ, ಕಿಟಕಿ, ಮೊಗ್ಗು.

೧೪೦೨. ಶೀಲ (ನ)=ಸ್ವಭಾವ, ಒಳ್ಳೆಯ ನಡತೆ. ಫಲ (ನ)=ಹಣ್ಣು ಅಥವಾ ಧಾನ್ಯಾದಿ

ಅಧಸ್ಸ್ವರೂಪಯೋರಸ್ತ್ರೀ ತಲಂ ಸ್ಯಾಚ್ಚಾಮಿಷೇ ಪಲಮ್ ।
ಔರ್ವಾನಲೇಽಪಿ ಪಾತಾಲಂ ಚೇಲಂ ವಸ್ತ್ರೇಽಧಮೇ ತ್ರಿಷು ॥ ೧೪೦೩
ಕುಕೂಲಂ ಶಂಕುಭಿಃ ಕೀರ್ಣೇ ಶ್ವಭ್ರೇ ನಾ ತು ತುಷಾನಲೇ ।
ನಿರ್ಣೀತೇ ಕೇವಲಮಿತಿ ತ್ರಿಲಿಂಗಂ ತ್ವೇಕಕೃತ್ಸ್ನಯೋಃ ॥ ೧೪೦೪
ಪರ್ಯಾಪ್ತಿಕ್ಷೇಮಪುಣ್ಯೇಷು ಕುಶಲಂ ಶಿಕ್ಷಿತೇ ತ್ರಿಷು ।
ಪ್ರವಾಲಮಂಕುರೇಽಪ್ಯಸ್ತ್ರೀ ತ್ರಿಷು ಸ್ಥೂಲಂ ಜಡೇಽಪಿ ಚ ॥ ೧೪೦೫
ಕರಾಲೋ ದಂತುರೇ ತುಂಗೇ ಚಾರೌ ದಕ್ಷೇ ಚ ಪೇಶಲಃ ।
ಮೂರ್ಖೇಽರ್ಭಕೇಽಪಿ ಬಾಲಸ್ಸ್ಯಾಲ್ಲೋಲಶ್ಚಲಸತೃಷ್ಣಯೋಃ ॥ ೧೪೦೬

ಇತಿ ಲಾಂತಾಃ

(A Produce), ಕಾರಣದಿಂದ ಜನಿಸಿದ್ದು. ಪಟಲ (ನ)=ಮನೆಹೊದಿಕೆ (ಚಾವಣಿ), ಕಣ್ಣುಪರೆಯೆಂಬ ರೋಗ. ಪಟಲ, (ನ. ಸ್ತ್ರೀ—ಪಟಲೀ)=ಸಮೂಹ.

೧೪೦೩. ತಲ (ನ)=ಕೆಳಭಾಗ, ಸ್ವರೂಪ (ಮೇಲ್ಮೈ). ಉದಾ— 'ಪರಿತಃ ಪರಿಷ್ಕೃತತಲಾಂ ತರುಭಿಃ' ಕಿರಾ. ೬—೧೭. ಪಲ (ನ)=ಮಾಂಸ, (ಒಂದು ತೂಕ). ಪಾತಾಲ (ನ)=ಬಡಬಾಗ್ನಿ, (ಪಾತಾಳ). ಚೇಲ (ನ)=ಬಟ್ಟೆ. ಚೇಲ (ವಿ. ನಿಘ್ನ)=ಕೀಳಾದ.

೧೪೦೪. ಕುಕೂಲ (ನ)=ಸುತ್ತಲೂ ಗೂಟಗಳನ್ನು ನೆಟ್ಟಿರುವ ಗುಳಿ. ಕುಕೂಲ (ಪು)=ಹೊಟ್ಟಿನಲ್ಲಿ ಹಾಕಿದ ಬೆಂಕಿ. ಕೇವಲ (ನ)=ನಿರ್ಣಯ (ಅವಧಾರಣೆ.) ಉದಾ:— 'ಕ್ರಿಯಾ ಕೇವಲಮುತ್ತರಮ್' ಮಾಘ. ೨—೨೨. ಕೇವಲ (ವಿ. ನಿಘ್ನ)=ಒಂದು (ಒಂಟಿ). ಸಮಸ್ತ, ಉದಾ— 'ಕೇನ ಕೇವಲಃ ಪುರಾಣಮೂರ್ತೇರ್ಮಹಿಮಾವಗಮ್ಯತೇ' —ಮಾಘ. ೧—೩೫.

೧೪೦೫. ಕುಶಲ (ನ)=ಸಾಮರ್ಥ್ಯ, ಕ್ಷೇಮ, ಪುಣ್ಯ. ಕುಶಲ (ವಿ. ನಿಘ್ನ)=ಜಾಣ. ಪ್ರವಾಲ (ಪು.ನ)=ಮೊಳಕೆ, (ಚಿಗುರು, ಹವಳ),ಪ್ರವಾಲ (ವಿ. ನಿಘ್ನ)=ದಪ್ಪವಾದ, ಬುದ್ಧಿಯಿಲ್ಲದ.

೧೪೦೬. ಕರಾಲ (ಪು)=ಹಳ್ಳುತಿಟ್ಟಾದ, ಎತ್ತರವಾದ, (ಭೀಕರವಾದ). ಪೇಶಲ (ಪು)= ಸುಂದರ, ದಕ್ಷ. ಬಾಲ (ಪು)=ಮೂರ್ಖ, ಹುಡುಗ. ಲೋಲ (ಪು)=ಚಂಚಲ, ಆಸೆಯುಳ್ಳವ.

ದವದಾವೌ ವನಾರಣ್ಯವಹ್ನೀ ಜನ್ಮಹರೌ ಭವೌ ।
ಮಂತ್ರೀ ಸಹಾಯಸ್ಸಚಿವೌ ಪತಿಶಾಖಿನರಾ ಧವಾಃ ॥ ೧೪೦೭
ಅವಯಶ್ಶೈಲಮೇಷಾರ್ಕಾ ಆಜ್ಞಾಹ್ವಾನಾಧ್ವರಾ ಹವಾಃ ।
ಭಾವಸ್ಸತ್ತಾಸ್ವಭಾವಾಭಿಪ್ರಾಯಚೇಷ್ಟಾತ್ಮಜನ್ಮಸು ॥ ೧೪೦೮
ಸ್ಯಾದುತ್ಪಾದೇ ಫಲೇ ಪುಷ್ಪೇ ಪ್ರಸವೋ ಗರ್ಭಮೋಚನೇ ।
ಅವಿಶ್ವಾಸೇಽಪಹ್ನವೇಽಪಿ ನಿಕೃತಾವಪಿ ನಿಹ್ನವಃ ॥ ೧೪೦೯
ಉತ್ಸೇಕಾಮರ್ಷಯೋರಿಚ್ಛಾಪ್ರಸವೇ ಮಹ ಉತ್ಸವಃ ।
ಅನುಭಾವಃ ಪ್ರಭಾವೇ ಚ ಸತಾಂ ಚ ಮತಿನಿಶ್ಚಯೇ ॥ ೧೪೧೦
ಸ್ಯಾಜ್ಜನ್ಮಹೇತುಃ ಪ್ರಭವಃ ಸ್ಥಾನಂ ಚಾದ್ಯೋಪಲಬ್ಧಯೇ ।
ಶೂದ್ರಾಯಾಂ ವಿಪ್ರತನಯೇ ಶಸ್ತ್ರೇ ಪಾರಶವೋ ಮತಃ ॥ ೧೪೧೧
ಧ್ರುವೋ ಭಭೇದೇ ಕ್ಲೀಬಂ ತು ನಿಶ್ಚಿತೇ ಶಾಶ್ವತೇ ತ್ರಿಷು ।
ಸ್ವೋ ಜ್ಞಾತಾವಾತ್ಮನಿ ಸ್ವಂತ್ರಿಷ್ವಾತ್ಮೀಯೇ ಸ್ವೋಽಸ್ತ್ರಿಯಾಂ ಧನೇ ॥ ೧೪೧೨

ವಾಂತಗಳು

೧೪೦೭. ದವ, ದಾವ (ಪು)=ಅಡವಿ, ಕಾಳ್ಗಿಚ್ಚು. ಭವ (ನ)=ಹುಟ್ಟು, ಶಿವ. ಸಚಿವ (ಪು)=ಮಂತ್ರಿ, ಸಹಾಯಕ, ಧವ (ಪು)=ಗಂಡ, ಒಂದು ಮರ, ಗಂಡಸು.

೧೪೦೮. ಅವಿ (ಪು)=ಬೆಟ್ಟ, ಕುರಿ, ಸೂರ್ಯ. ಹವ (ಪು)=ಆಜ್ಞೆ, ಆಹ್ವಾನ, ಯಾಗ. ಭಾವ (ಪು)=ಇರುವಿಕೆ, ಸ್ವಭಾವ, ಅಭಿಪ್ರಾಯ, ಚೇಷ್ಟೆ, ಆತ್ಮ, ಉತ್ಪತ್ತಿ.

೧೪೦೯. ಪ್ರಸವ (ಪು)=ಉತ್ಪತ್ತಿ, ಹಣ್ಣು, ಹೂ, ಹಡೆಯುವುದು. ನಿಹ್ನವ (ಪು)= ಅವಿಶ್ವಾಸ, ಅಲ್ಲಗಳೆಯುವುದು, ತಿರಸ್ಕಾರ.

೧೪೧೦. ಉತ್ಸವ (ಪು)=ಉದ್ರೇಕ, ಕೋಪ, ಇಚ್ಛೆಯ ಉದಯ, ಹಬ್ಬ. ಅನುಭಾವ (ಪು)=ಪ್ರಭಾವ, ಸಜ್ಜನರ ನಿಶ್ಚಯ.

೧೪೧೧. ಪ್ರಭವ (ಪು)=ಜನನಕಾರಣ, ಮೊದಲು ಉಪಲಬ್ಧವಾಗುವ ಸ್ಥಳ. ಉದಾ:— ಹಿಮವಾನ್ ಗಂಗಾಯಾಃ ಪ್ರಭವಃ. ಪಾರಶವ (ಪು)=ಶೂದ್ರಸ್ತ್ರೀಯಲ್ಲಿ ಬ್ರಾಹ್ಮಣನಿಂದ ಹುಟ್ಟಿದವನು, ಕೊಡಲಿ.

೧೪೧೨. ಧ್ರುವ (ಪು)=ಒಂದು ನಕ್ಷತ್ರ. ಧ್ರುವ (ನ)=ನಿಶ್ಚಯವಾದದ್ದು. ಧ್ರುವ (ವಿ. ನಿಘ್ನ)=ಶಾಶ್ವತ. ಸ್ವ (ಪು)=ಬಂಧು, ತಾನು. ಸ್ವ(ವಿ. ನಿಘ್ನ)=ತನ್ನದು. ಸ್ವ (ಪು.ನ)=ಹಣ.

ಸ್ತ್ರೀಕಟೀವಸ್ತ್ರಬಂಧೇಽಪಿ ನೀವೀ ಪರಿಪಣೇಽಪಿ ಚ ।
ಶಿವಾ ಗೌರೀಫೇರವಯೋರ್ದ್ವಂದ್ವಂ ಕಲಹಯುಗ್ಮಯೋಃ ॥ ೧೪೧೩
ದ್ರವ್ಯಾಸುವ್ಯವಸಾಯೇಷು ಸತ್ತ್ವಮಸ್ತ್ರೀ ತು ಜಂತುಷು ।
ಕ್ಲೀಬಂ ನಪುಂಸಕೇ ಷಂಡೇ ವಾಚ್ಯಲಿಂಗಮವಿಕ್ರಮೇ ॥ ೧೪೧೪

ಇತಿ ವಾಂತಾಃ

ದ್ವೌ ವಿಶೌ ವೈಶ್ಯಮನುಜೌ ದ್ವೌ ಚಾರಾಭಿಮರೌ ಸ್ಪಶೌ ।
ದ್ವೌರಾಶೀ ಪುಂಜಮೇಷಾದ್ಯೌ ದ್ವೌ ವಂಶೌ ಕುಲಮಸ್ಕರೌ ॥ ೧೪೧೫
ರಹಃಪ್ರಕಾಶೌ ವೀಕಾಶೌ ನಿರ್ವೇಶೋ ಭೃತಿಭೋಗಯೋಃ ।
ಕೃತಾಂತೇ ಪುಂಸಿ ಕೀನಾಶಃ ಕ್ಷುದ್ರಕರ್ಷಕಯೋಸ್ತ್ರಿಷು ॥ ೧೪೧೬
ಪದೇ ಲಕ್ಷ್ಯೇ ನಿಮಿತ್ತೇಽಪದೇಶಸ್ಸ್ಯಾತ್ ಕುಶಮಪ್ಸು ಚ ।
ದಶಾವಸ್ಥಾನೇಕವಿಧಾಪ್ಯಾಶಾ ತೃಷ್ಣಾಪಿ ಚಾಯತಾ ॥ ೧೪೧೭

೧೪೧೩. ನೀವೀ (ಸ್ತ್ರೀ)=ಹೆಂಗಸರು ಉಟ್ಟಿರುವ ಸೀರೆಯ ಗಂಟು. ಜೂಜಿನಲ್ಲಿ ಪಂದ್ಯವಾಗಿಟ್ಟಿರುವ ವಸ್ತು. ಶಿವಾ (ಸ್ತ್ರೀ)=ಪಾರ್ವತಿ, ನರಿ. ದ್ವಂದ್ವ (ನ)=ಜಗಳ, ಜೊತೆ.

೧೪೧೪. ಸತ್ತ್ವ (ನ)=ದ್ರವ್ಯ, ಪ್ರಾಣ, ಉದ್ಯೋಗ. ಸತ್ತ್ವ (ಪು.ನ)=ಪ್ರಾಣಿ. ಕ್ಲೀಬ (ಕ್ಲೀವ) (ನ)=ನಪುಂಸಕ, ಕ್ಲೀಬ (ವಿ. ನಿಘ್ನ)=ಹೇಡಿ.

ಶಾಂತಗಳು

೧೪೧೫. ವಿಶ್ (ಪು)=ವೈಶ್ಯ, ಮನುಷ್ಯ. ಸ್ಪಶ (ಪು)=ಗೂಢಚಾರ, ಯುದ್ಧ. ರಾಶಿ (ಪು)=ಸಮೂಹ, ಮೇಷಾದಿ ರಾಶಿ. ವಂಶ (ಪು)=ಕುಲ, ಬಿದಿರು.

೧೪೧೬. ವೀಕಾಶ (ಪು)=ಏಕಾಂತಸ್ಥಳ, ಪ್ರಕಾಶವಾದ. ನಿರ್ವೇಶ (ಪು)=ಸಂಬಳ, ಭೋಗ. ಕೀನಾಶ (ಪು)=ಯಮ. ಕೀನಾಶ (ವಿ. ನಿಘ್ನ)=ನೀಚ, ಕೃಷೀವಲ.

೧೪೧೭. ಅಪದೇಶ (ಪು)=ಸ್ಥಾನ, ಗುರಿ, ನಿಮಿತ್ತ (ನೆವ). ಕುಶ (ನ)=ನೀರು, (ಕುಶ (ಪು)=ದರ್ಭೆ). ದಶಾ (ಸ್ತ್ರೀ)=ನಾನಾಬಗೆಯ ಪರಿಸ್ಥಿತಿ, (ಬತ್ತಿ, ಬಟ್ಟೆಯ ಅಂಚು). ಆಶಾ (ಸ್ತ್ರೀ)=ಆಸೆ, (ದಿಕ್ಕು).

ವಶಾ ಸ್ತ್ರೀ ಕರಿಣೀ ಚ ಸ್ಯಾದ್ದೃಗ್ಜ್ಞಾನೇ ಜ್ಞಾತರಿ ತ್ರಿಷು ।
